ಅಕ್ಷರ ಬಾಗಿನ

ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಗ್ರಂಥ



ಸಂಪಾದಕರು

ಕೆ. ರಾಜಕುಮಾರ್

ಅಕ್ಷರ ಬಾಗಿನ

ಅಕ್ಷರ ಬೆಳಗಿನ

(ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಗ್ರಂಥ)

ಸಂಪಾದಕರು
ಕೆ. ರಾಜಕುಮಾರ್

ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಸಮಿತಿ
84, ಆರನೆಯ ಅಡ್ಡರಸ್ತೆ ನಾಲ್ಕನೆಯ ಮುಖ್ಯರಸ್ತೆ
ಚಾಮರಾಜಪೇಟೆ, ಬೆಂಗಳೂರು-560018

Akshara Baagina: A felicitation volume in Kannada language presented to H. Pampaiah Setty a Social worker and a Kannada activist. Compiled and Edited by K. Rajakumar (1958-   ) 98454 13135, Convenor (Training), Research and Training Centre, Kannada Sahitya Parishat, Bengaluru-560 018. Published by Sri H. Pampaiah Setty Felicitation Committee, # 84, 6th Cross, 4th Main Road, Chamarajpet, Bengaluru-560 018. Karnataka. India.

First Edition : 2016

Pages : 144

Price : Rs. 60/-

Size : Demy 1/8 th

Paper used : 70 GSM, Maplitho

Cover Page Design : Krishna Raichur

Printed at:
Sri Venkateshwara Printing Press
Near Indiragandhi Circle
J.P. Nagar, First Phase
Bengaluru-560 078
Phone: 9845104749

ಪ್ರಕಾಶಕರ ಮಾತು

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳು ನಮ್ಮ ಸಮಾಜದಲ್ಲಿ ನಿರ್ಲಕ್ಷಿತ ಕ್ಷೇತ್ರಗಳು. ಈ ಕ್ಷೇತ್ರಗಳ ಸಾಧಕರನ್ನು ಗೌರವಿಸುವುದು ಕಡಿಮೆ. ಅದರಲ್ಲೂ ಸಂಘಟಕರನ್ನು ನುಡಿಚಾರಕರನ್ನು ಪುರಸ್ಕಾರಕ್ಕೆ ಪರಿಗಣಿಸುವುದು ಅತಿ ವಿರಳ.

ಪಂಪಯ್ಯ ಶೆಟ್ಟರು ರಾಯಚೂರು ಜಿಲ್ಲೆಯಲ್ಲಿ ಸುಮಾರು ನಲವತ್ತು ವರ್ಷಗಳ ಕಾಲ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿ ಮಕ್ಕಳೊಂದಿಗೆ ನೆಲೆಸಲು ಬೆಂಗಳೂರಿಗೆ ಬಂದು ಸಾರಕ್ಕಿಯಲ್ಲಿ ನೆಲೆಸಿದ್ದಾರೆ. ಮೂರು ವರ್ಷದ ಹಿಂದೆ ಒಂದು ದಿನ ಸಾರಕ್ಕಿಯಲ್ಲಿರುವ ನಮ್ಮ ಮುದ್ರಣಾಲಯಕ್ಕೆ ಬಂದು ಪರಿಚಯ ಮಾಡಿಕೊಂಡಾಗ ಸಂತೋಷಪಟ್ಟೆ ಇದು ಸಂಘಟಕರ ಸಹಜಗುಣ. ಆಮೇಲೆ ಅವರ ಹಾಗೂ ನನ್ನ ಪರಿಚಯ ಬೆಳೆಯಿತು. ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಇವುಗಳ ಅಧ್ಯಕ್ಷರಾಗಿ, ರಾಯಚೂರಿನ ಕನ್ನಡ ಬಳಗ, ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಅವರು ಮಾಡಿದ ಕೆಲಸ ಪರಿಗಣಿಸಿ, ಇಂತಹ ವ್ಯಕ್ತಿಗೆ ಅಭಿನಂದಿಸೋಣವೆಂದು ನನ್ನ ಆಪ್ತಗೆಳೆಯ, ಮುದ್ರಣ ಕ್ಷೇತ್ರದಲ್ಲಿ ಖ್ಯಾತಿಗಳಿಸಿರುವ, ಚಾಮರಾಜಪೇಟೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಅದನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಬಿ.ಆರ್. ಅಶೋಕ್ ಕುಮಾರ್ ಅವರನ್ನು ಸಂಪರ್ಕಿಸಿದಾಗ ಅವರೂ ಜೊತೆಗೂಡಿದರು. ಲೇಖಕ-ಚಿಂತಕ ಕೆ. ರಾಜಕುಮಾರ್ ಅವರು ಈ ಅಭಿನಂದನ ಗ್ರಂಥದ ಸಂಪಾದನ ಕಾರ್ಯದ ಹೊಣೆ ಹೊತ್ತು ಕೃತಿಯನ್ನು ಸಂಪಾದಿಸಿ ಕೊಟ್ಟಿದ್ದಾರೆ. ಕೆ.ಎಲ್. ನಟರಾಜ್, ಎಸ್. ಕೃಷ್ಣಮೂರ್ತಿ, ವೈ.ಎ. ರಾಮಸ್ವಾಮಿ ಹಾಗೂ ಸಮಿತಿಯ ಸದಸ್ಯರು ಅಭಿನಂದನ ಸಮಾರಂಭದ ಜವಾಬ್ದಾರಿ ನಿರ್ವಹಿಸಿದ್ದಾರೆ.

ಕಲಾವಿದ ಕೃಷ್ಣ ರಾಯಚೂರ್ ಸುಂದರವಾದ ಮುಖಪುಟ ರಚಿಸಿಕೊಟ್ಟಿದ್ದಾರೆ. ವಸಂತಲಕ್ಷ್ಮಿ ಫ್ರೆಂಡ್ಸ್ ಕಾಮ್-ಟೆಕ್‌ನ ಬಿ.ಎಂ. ಸುರೇಶ್ ಬಾಬು ಅವರು ಡಿ.ಟಿ.ಪಿ. ಕಾರ್ಯನಿರ್ವಹಿಸಿದ್ದಾರೆ. ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್ ಮತ್ತು ಲಕ್ಷ್ಮೀ ಮುದ್ರಣಾಲಯದವರು ಮುದ್ರಣ ಕಾರ್ಯವನ್ನು ಮಾಡಿಕೊಟ್ಟಿದ್ದಾರೆ. ಅಕ್ಷರ ಬಾಗಿನ ಅಭಿನಂದನ ಗ್ರಂಥ ಬರಲು ಕಾರಣಕರ್ತರಾದ ಎಲ್ಲರಿಗೂ ಧನ್ಯವಾದಗಳು.

ಸಿ. ಆರ್. ಜನಾರ್ದನ

ಗೌರವಾಧ್ಯಕ್ಷರು

ಎಚ್. ಪಂಪಯ್ಯಶೆಟ್ಟಿ ಅಭಿನಂದನ ಸಮಿತಿ, ಬೆಂಗಳೂರು

ಅಕ್ಷರ ಬಾಗಿನ: ಸಾಧನೆಗೊಂದು ಸಹಜಗನ್ನಡಿ

ಬಾಗಿನ ಎಂದರೆ ಉಡುಗೊರೆ ಎಂಬ ಅರ್ಥವೂ ಇದೆ. ಆ ನಿಟ್ಟಿನಲ್ಲಿ 'ಅಕ್ಷರ ಬಾಗಿನ' ಎಂಬ ಹೆಸರನ್ನು ಈ ಅಭಿನಂದನ ಗ್ರಂಥಕ್ಕೆ ಬಳಸಲಾಗಿದೆ. ಈ ಕೃತಿಯ ಕುರಿತು ಪ್ರಸ್ತಾಪಿಸುವುದಕ್ಕಿಂತ ಮುನ್ನ ಅಭಿನಂದನ ಗ್ರಂಥಗಳು ಬೆಳೆದು ಬಂದ ಹಾದಿಯನ್ನು ಪರಿಶೀಲಿಸೋಣ.

ಕನ್ನಡದ ಕಣ್ವರೆಂದು ಖ್ಯಾತರಾದ ಹೊಸಗನ್ನಡದ ಆಚಾರ್ಯಪುರುಷ ಬಿ.ಎಂ. ಶ್ರೀಕಂಠಯ್ಯನವರಿಗೆ 1941ರಲ್ಲಿ ಅರ್ಪಿಸಿದ 'ಸಂಭಾವನೆ' ಕನ್ನಡದಲ್ಲಿ ಪ್ರಕಟವಾದ ಮೊಟ್ಟಮೊದಲ ಅಭಿನಂದನ ಗ್ರಂಥ. ಜನರು ತಾಳಿದ ಪ್ರೀತಿ, ಗೌರವಗಳ ಸಂಕೇತವಾಗಿ ಸಂಭಾವನೆ ಅರ್ಪಿತವಾಯಿತು. ಈಗ 2016. ಹಾಗಾಗಿ ಇದು ಅಭಿನಂದನ ಗ್ರಂಥಗಳ ಪಾಲಿಗೆ ಅಮೃತ ಮಹೋತ್ಸವದ ವರ್ಷ !

ಸಾಹಿತಿಗಳು, ಸಮಾಜಸೇವಕರು, ವಿಜ್ಞಾನಿಗಳು, ಸಂಘಟಕರು, ಹೋರಾಟಗಾರರು, ನುಡಿಚಾರಕರು ಸಾರಸ್ವತಲೋಕಕ್ಕೆ ಅಥವಾ ಸಮಾಜಕ್ಕೆ ಸಲ್ಲಿಸಿದ ಅಪೂರ್ವ ಸೇವೆಯನ್ನು ಸ್ಮರಿಸಿ, ಕೃತಜ್ಞತೆಯ ದ್ಯೋತಕವಾಗಿ ಅಂತಹವರಿಗೆ ಇಂತಹ ಗ್ರಂಥಗಳನ್ನು ಅರ್ಪಿಸುವುದುಂಟು. ಅಪರೂಪಕ್ಕೆ ಸಂಘ-ಸಂಸ್ಥೆ, ಗ್ರಂಥಾಲಯ ಮತ್ತು ವಸ್ತುಸಂಗ್ರಹಾಲಯಗಳಿಗೂ ಇವನ್ನು ಸಮರ್ಪಿಸುವುದುಂಟು! ಶ್ರೀ ಅವರಿಗೆ ಅರ್ಪಿತವಾದ ಸಂಭಾವನೆ ಕೃತಿ ಕನ್ನಡದಲ್ಲಿ ಅಭಿನಂದನ ಗ್ರಂಥಗಳಿಗೆ ದಾರಿಯಾಯಿತು, ಮಾದರಿಯಾಯಿತು. ಕನ್ನಡ ವಾಙ್ಮಯಲೋಕದಲ್ಲಿ ಅದೊಂದು ಹೊಸ ಮಾರ್ಗವನ್ನು ಸೃಷ್ಟಿಸಿತು.

ಜಗತ್ತಿನಲ್ಲಿ ಅಭಿನಂದನ ಗ್ರಂಥಗಳಿಗೆ 144 ವರ್ಷಗಳ ಇತಿಹಾಸವಿದೆ. ಜರ್ಮನಿಯಲ್ಲಿ ಪ್ರಾರಂಭವಾದ ಈ ಪರಿಕಲ್ಪನೆ ಇಂದು ಜಗತ್ತಿನಾದ್ಯಂತ ವಿಸ್ತರಿಸಿಕೊಂಡಿದೆ. ಸರಿ ಸುಮಾರು ಅದರ ಅರ್ಧದಷ್ಟು ಇತಿಹಾಸ ಕನ್ನಡದ ಗೌರವ ಗ್ರಂಥಗಳಿಗಿದೆ. ಒಂದು ಅಂದಾಜಿನಂತೆ ಈ 75 ವರ್ಷಗಳಲ್ಲಿ ಕನ್ನಡದಲ್ಲಿ ಸುಮಾರು 400ರಿಂದ 500 ಅಭಿನಂದನ ಗ್ರಂಥಗಳು ಪ್ರಕಟವಾಗಿವೆ. ಜಗತ್ತಿನಲ್ಲಿ ಇದುವರೆಗೂ ಬಂದಿರುವ ಇಂತಹ ಗ್ರಂಥಗಳ ಸಂಖ್ಯೆ ಸುಮಾರು 15000. ಮದರ್ ಕಾದಂಬರಿಯ ಕರ್ತೃ ಮ್ಯಾಗ್ಸಿಂ ಗಾರ್ಕಿ, 400ನೆಯ ವರ್ಧಂತಿಯ ಸಂದರ್ಭದಲ್ಲಿ ನಾಟಕಕಾರ ಷೇಕ್ಸ್‌ಪಿಯರ್, ಕವಿ-ಚಿತ್ರಕಲಾವಿದ-ಸಂಗೀತಗಾರ ರವೀಂದ್ರನಾಥ ಠಾಕೂರರಿಗೂ ಕನ್ನಡದಲ್ಲಿ ಸಂಭಾವನ ಗ್ರಂಥಗಳು ಬಂದಿರುವುದು ಕನ್ನಡಿಗರು ಸಂಭಾವಿತರು, ಗುಣಗ್ರಾಹಿಗಳು ಎಂಬುದನ್ನು ಸಾಬೀತು ಪಡಿಸುತ್ತದೆ.

ಕುವೆಂಪು (ಗಂಗೋತ್ರಿ, ಉಡುಗೊರೆ, ಕವಿಶೈಲ, ಸಹ್ಯಾದ್ರಿ, ಕವಿದರ್ಶನ), ಬೇಂದ್ರೆ

(ನಮ್ಮ ಬೇಂದ್ರೆ), ಮುಳಿಯ ತಿಮ್ಮಪ್ಪಯ್ಯ (ಶ್ರದ್ಧಾಂಜಲಿ), ಎ.ಆರ್. ಕೃಷ್ಣಶಾಸ್ತ್ರಿ (ಅಭಿವಂದನೆ), ಡಿ.ಎಲ್.ಎನ್. (ಹೊಸಬೆಳಕು, ಉಪಾಯನ), ಸೇಡಿಯಾಪು (ಒಸಗೆ), ಎಂ.ಎಂ. ಕಲಬುರ್ಗಿ (ಮಹಾಮಾರ್ಗ), ಎಂ. ಚಿದಾನಂದಮೂರ್ತಿ (ಸಂಶೋಧನ) ಅವರುಗಳಿಗೆ ಅರ್ಪಿತವಾದ ಸಂಭಾವನ ಗ್ರಂಥಗಳು ಕನ್ನಡವನ್ನು ಶ್ರೀಮಂತಗೊಳಿಸಿ ಆಕರ ಗ್ರಂಥಗಳಾಗಿಯೂ ತಮ್ಮ ಪ್ರಕಟಣೆಯನ್ನು ಸಾರ್ಥಕಗೊಳಿಸಿಕೊಂಡಿವೆ. ಗುಣ ಮತ್ತು ಗಾತ್ರದಲ್ಲಿ ಮೌಲಿಕವಾಗಿರುವ ಈ ಕೃತಿಗಳು ಪರಾಮರ್ಶನ ಮೌಲ್ಯವನ್ನೂ ಹೊಂದಿವೆ. ಸಾಮಾನ್ಯವಾಗಿ ವ್ಯಕ್ತಿ ಅಥವಾ ಸಂಸ್ಥೆಗಳಿಗೆ 60, 75, 80 ತುಂಬಿದಾಗ ಇಂತಹ ಕೃತಿಯನ್ನು ಅರ್ಪಿಸಿ ಗೌರವಿಸಲಾಗುತ್ತದೆ.

ಅಖಿಲ ಭಾರತ ಕನ್ನಡದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದಾಗ ವಿ. ಸೀತಾರಾಮಯ್ಯನವರಿಗೆ ಅಭಿನಂದನ ಗ್ರಂಥವನ್ನು ಅರ್ಪಿಸಲಾಯಿತು. ಹಾಗಾಗಿ ಇವುಗಳ ಅರ್ಪಣೆಗೆ ಸಂದರ್ಭ ಅಥವಾ ಕಾರಣ ಹುಡುಕಬೇಕಾಗಿಲ್ಲ. ವ್ಯಕ್ತಿ ಅಥವಾ ಸಂಸ್ಥೆಯ ಸಾಧನೆಯನ್ನು ಗುರುತಿಸುವುದಷ್ಟೇ ಇದರ ಮೂಲ ಉದ್ದೇಶ. ಗಮನಿಸಬೇಕಾದ ವಿಷಯವೊಂದಿದೆ. ಕನ್ನಡದಲ್ಲಿ ಸಂಘ ಸಂಸ್ಥೆಗಳಿಗೆ ಅಭಿನಂದನ ಗ್ರಂಥಗಳನ್ನು ಸಮರ್ಪಿಸುವ ರೂಢಿಯಿಲ್ಲ. ನಾಡು-ನುಡಿಗೆ ಸಾರ್ಥಕಸೇವೆ ಸಲ್ಲಿಸಿ ಶತಮಾನ ಕ್ರಮಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದುವರೆಗೂ ಒಂದು ಸಂಭಾವನ ಗ್ರಂಥವೂ ಹೊರಬಂದಿಲ್ಲ!

ಇದುವರೆಗೆ ಕನ್ನಡದಲ್ಲಿ ಪ್ರಕಟವಾದ ಸಂಭಾವನ ಗ್ರಂಥಗಳನ್ನು ಕುರಿತು ಯಾರೂ ಪ್ರೌಢಪ್ರಬಂಧ ರಚಿಸಿ ಪಿಎಚ್.ಡಿ ಪಡೆದಿಲ್ಲವೆಂಬುದು ವಿಷಾದದ ಸಂಗತಿ. ಸಂಶೋಧನೆಗೆ ಕನ್ನಡ ಕನ್ನೆನೆಲವಾದರೂ ಉತ್ತಿದ್ದನ್ನೇ ಉತ್ತಿ, ಬಿತ್ತಿದ್ದನ್ನೇ ಬಿತ್ತಿ ನಕಲುಮಾಡುವ ಬದಲು ಹೊಸ ಶೋಧಗಳಿಗೆ ತೊಡಗುವಂತಾದರೆ ಚೆನ್ನ. ಒಂದೇ ರೀತಿಯ ವಸ್ತು-ವಿಷಯದ ಸುತ್ತ ಗಿರಕಿ ಹೊಡೆಯುವುದಕ್ಕಿಂತ ಹೊಸ ಹೊಸ ವಿಷಯಗಳನ್ನು ಕುರಿತು ಶೋಧ ನಡೆಯಬೇಕಾಗಿದೆ.

ಕನಿಷ್ಠ ಕನ್ನಡದಲ್ಲಿ ಇದುವರೆಗೆ ಬಂದಿರುವ ಅಭಿನಂದನ ಗ್ರಂಥಗಳ ಸಮಗ್ರಸೂಚಿಯನ್ನು ಹೊರತರುವ ಅಗತ್ಯವಿದೆ. ಈ ಗ್ರಂಥಗಳಲ್ಲಿನ ಲೇಖನ ಸೂಚಿಯನ್ನು ತರಬೇಕಾಗಿದೆ. ಅಭಿನಂದನ ಗ್ರಂಥಗಳೆಲ್ಲ ಪರಾಮರ್ಶನಕ್ಕೆ ಏಕಛತ್ರದಡಿ ಲಭ್ಯವಾಗಬೇಕು. ಆಗ ಮುಂದಿನ ತಲೆಮಾರಿಗೆ, ಸಾಧಕರನ್ನು ಗೌರವಿಸಿ ಪುಲಕಗೊಳ್ಳುವ ಕನ್ನಡಿಗರ ಸ್ವಭಾವದ ಪರಿಚಯವಾಗುತ್ತದೆ. ಅವರು ಈ ಪರಂಪರೆಯನ್ನು ನಿರ್ದಿಷ್ಟ ನಿಟ್ಟಿನಲ್ಲಿ ಮುಂದುವರೆಸಲು ಸಾಧ್ಯವಾಗುತ್ತದೆ. ನಮ್ಮಲ್ಲಿರುವ ಅಸಂಖ್ಯಾತ ಕನ್ನಡಪರ ಸಂಘಟನೆಗಳು ತುರ್ತಾಗಿ ಆಗಬೇಕಾದ ಇಂತಹ ದಾಖಲೀಕರಣ ಕಾರ್ಯಗಳನ್ನು ತಲಾ ಒಂದರಂತೆ ಕೈಗೆತ್ತಿಕೊಂಡು ನಿರ್ವಹಿಸಿದರೆ ಆಗ ಪರದಾಡುವಿಕೆ ಮತ್ತು ಪರಾವಲಂಬನೆ ತಪ್ಪಿ ಸ್ವಂತಿಕೆ ಪಡಿಮೂಡುತ್ತದೆ.

ಅಭಿನಂದನ ಗ್ರಂಥಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಸಾಧನೆಗೈದವರಿಗೆ ತೋರಲಾಗುವ

ಬಹುದೊಡ್ಡ ಗೌರವ. ಕೃತಜ್ಞತೆಯ ಪ್ರತೀಕವೂ ಹೌದು. ಈ ಪ್ರಕಾರಕ್ಕೆ ಮತ್ತೊಂದು ಮುಖವೂ ಇದೆ. ಇವು ಮುಡಿಯೇರದ, ಗುಡಿಸೇರದ ಕಡೆಗಣಿತ ಹೂವುಗಳು. ಇವನ್ನು ಸರ್ಕಾರ ಗ್ರಂಥಾಲಯಗಳಿಗೆ ಖರೀದಿಸುವುದಿಲ್ಲ; ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಸಿಗುವುದಿಲ್ಲ. ಹಾಗಾಗಿ ಅಭಿನಂದನ ಗ್ರಂಥಗಳೆಂದರೆ ಥೇಟ್ ಕುಂತಿ ಮಕ್ಕಳಂತೆ. ಅಂತೂ ಇಂತೂ ಅವಕ್ಕೆ ರಾಜ್ಯವಿಲ್ಲ. ಹೆಸರಿಗೆ ಮಾತ್ರ ಗೌರವ ಗ್ರಂಥ ಎಂಬ ಅಭಿದಾನಕ್ಕೆ ಪಾತ್ರ. ಎಷ್ಟೋ ಸಲ ಇದು ಸ್ವಯಂಕೃತ ಅಪರಾಧವೂ ಹೌದು. ಹಾಡಿದ್ದೇ ಹಾಡುವ ಲೇಖನಗಳಿಂದಾಗಿ, ಪುನರುಕ್ತಿ ಬಾಲಗ್ರಹ ದೋಷದಂತೆ ಮೈಗಂಟಿಬಿಟ್ಟಿರುತ್ತದೆ. ಕೆಲವೊಮ್ಮೆ ಇಲ್ಲಿ ಭ್ರಮೆ ಮತ್ತು ಆತ್ಮರತಿಗಳ ಪರಾಕಾಷ್ಠೆಯನ್ನೂ ಕಾಣಬಹುದು. ಅನೇಕ ಸಲ ಸಣ್ಣಸಣ್ಣ ಸಾಧನೆಗಳನ್ನೂ ನೂರ್ಮಡಿ ಹಿಗ್ಗಿಸಿ ನೋಡುವ ಪ್ರವೃತ್ತಿಯಿಂದಾಗಿ ಇವು ಗುಮಾನಿಗೂ ಕಾರಣವಾಗದಿರದು. ಅದೊಂದು ಅಷ್ಟೋತ್ತರ, ಕೆಲವೊಮ್ಮೆ ಶತನಾಮಾವಳಿ! ಅಭಿನಂದನ ಗ್ರಂಥಗಳಿಂದ ಆಯ್ದ ಗುಣವಾಚಕಗಳ ಶಬ್ದಕೋಶವೊಂದನ್ನು ಸಿದ್ಧಮಾಡುವಷ್ಟು ಪದಗಳು ಇಲ್ಲಿ ಸುಲಭವಾಗಿ ಸಿಗುತ್ತವೆ.

ಎಷ್ಟೋ ಸಂಭಾವನ ಗ್ರಂಥಗಳು ಅತಿಶಯೋಕ್ತಿಯ ಅಧಿಭಾರದಿಂದ, ಉತ್ಪ್ರೇಕ್ಷೆಯ ಹುರುಪಿನಿಂದ ನಲುಗಿಹೋಗಿರುವುದುಂಟು. ವಸ್ತುನಿಷ್ಠೆಗಿಂತ ಭಾವನಿಷ್ಠೆಗೆ ಇಲ್ಲಿ ಪ್ರಾಧಾನ್ಯ. ಅಭಿನಂದಿತರಿಗೆ ಋಣಸಂದಾಯ ಮಾಡಲು ಅವರ ಅಭಿಮಾನಿಗಣ ಕಂಡುಕೊಂಡಿರುವ ಋಜುಮಾರ್ಗವಿದು. ಆರಂಭದ ದಶಕಗಳಲ್ಲಿ ಕಾಳನ್ನಷ್ಟೇ ಕಂಡ ಈ ಪ್ರಕಾರ ಕ್ರಮೇಣ ಕಳಾಹೀನವಾಗಿ ಜೊಳ್ಳನ್ನೂ ಕಾಣುವಂತಾಗಿದೆ. ಸಾಧನೆಗೊಂದು ಸಹಜಗನ್ನಡಿ ಹಿಡಿದಾಗ ಮಾತ್ರ ಇಂತಹ ಹೊತ್ತಿಗೆಗಳನ್ನು ಗಂಭೀರವಾಗಿ ಸ್ವೀಕರಿಸುವಂತಾಗುತ್ತದೆ.

ವಿದ್ವತ್ತನ್ನಷ್ಟೇ ಮಾನ್ಯಮಾಡಿ ಸಲ್ಲಿಕೆಯಾಗಿರುವ ಮೌಲಿಕ ಗ್ರಂಥಗಳು ಕನ್ನಡದಲ್ಲಿ ಕನಿಷ್ಠ ಶತಕ ಬಾರಿಸಿವೆ ಎಂಬುದು ನಮ್ಮ ನಾಡಿನ ಭಾಗ್ಯ. ಅಭಿನಂದಿತರ ಜೀವನ; ಅವರು ಪ್ರತಿನಿಧಿಸಿದ ಮೌಲ್ಯಗಳನ್ನು ಕುರಿತಂತೆ ಅವರ ಆಪ್ತರಿಂದ, ಆಯಾ ಕ್ಷೇತ್ರದ ಪರಿಣತರಿಂದ ಲೇಖನಗಳನ್ನು ಬರೆಯಿಸಿ ಪ್ರಕಟಿಸಲಾಗುತ್ತದೆ. ಜೊತೆಗೆ ಅಭಿನಂದಿತರ ಆಸಕ್ತ ಕ್ಷೇತ್ರ ಮತ್ತು ವಿಷಯಗಳನ್ನು ಕುರಿತಂತೆಯೂ ಲೇಖನಗಳನ್ನು ಪ್ರಕಟಿಸುವುದುಂಟು.

ವ್ಯಂಗ್ಯ-ಕುಟುಕು-ವಿಡಂಬನೆಗಳಿಗೆ ಇಲ್ಲಿ ಅವಕಾಶವಿರುವುದಿಲ್ಲ. ವಿಮರ್ಶೆಯ ನಿಕಷಕ್ಕೆ ಒಡ್ಡುವ ಸಂದರ್ಭವಿದಲ್ಲ. ಎಲ್ಲವನ್ನೂ ಸಕಾರಾತ್ಮಕವಾಗಿ ನೋಡುವ ಲೇಖನಗಳಷ್ಟೇ ಇಲ್ಲಿ ತಾವು ಪಡೆದುಕೊಂಡಿರುತ್ತವೆ. ಕೆಲವೊಮ್ಮೆ ಅಭಿನಂದಿತರ ಅರ್ಹತೆಯನ್ನು ಮೀರಿ ಅವರನ್ನು ಉಪಮೆ-ರೂಪಕಗಳಲ್ಲಿ ಅದ್ದಿತೆಗೆಯುವುದುಂಟು. ರಾಜಕಾರಣ ನುಡಿಕಾರಣ ದತ್ತಲೂ ತನ್ನ ಕಬಂಧ ಬಾಹುಗಳನ್ನು ವಿಸ್ತರಿಸುತ್ತಿರುವುದರಿಂದ ಹೀಗಾಗುತ್ತಿದೆ. ಇಂತಹ ಪುಸ್ತಕ ಸಮರ್ಪಣೆಯಾಗುವುದು ಅಭಿನಂದಿತರಿಗೆ ಸಾಮಾಜಿಕವಾಗಿ ಪ್ರತಿಷ್ಠೆಯ ಸಂಗತಿ. ಸಾಧನೆಗೆ ಸಂದ ಮನ್ನಣೆ ಎಂಬ ಸಾರ್ಥಕಭಾವ. ಒಂದು ರೀತಿ ಕೃತಾರ್ಥಭಾವವೂ ಹೌದು.

ಈ ಹಿನ್ನೆಲೆಯಲ್ಲಿ ಎಚ್. ಪಂಪಯ್ಯ ಶೆಟ್ಟಿ ಅವರಿಗೆ ಅರ್ಪಿತವಾಗುತ್ತಿರುವ ಅಕ್ಷರ

ಬಾಗಿನ ಕೃತಿಯನ್ನು ಗಮನಿಸಬೇಕು. ಪಂಪಯ್ಯ ಶೆಟ್ಟರು ಪ್ರಧಾನವಾಗಿ ಸಂಘಟಕ ಮತ್ತು ನುಡಿಚಾರಕರು. ಕನ್ನಡದ ಕೆಲಸದಲ್ಲಿ 45 ವರ್ಷಗಳಿಂದಲೂ ನಿರತರಾಗಿ ಹಿರಿಹಿರಿ ಹಿಗ್ಗುತ್ತಿರುವವರು. ತಮ್ಮ ಕೈ ಮತ್ತು ಬಾಯಿಯನ್ನು ಸ್ವಚ್ಛವಾಗಿ ಇಟ್ಟುಕೊಂಡಿರುವವರು. ಇದನ್ನೇ ಏಣಿಯಾಗಿಸಿಕೊಂಡು ಅಧಿಕಾರದ ಗದ್ದುಗೆಗಳನ್ನು ಅಲಂಕರಿಸಿ ಪಡೆಯಪ್ಪನ್ ಆದವರಲ್ಲ. ಅವರು ಉದ್ಯಮಿಯಲ್ಲ, ಮಧ್ಯಮಿ. ಅಂದರೆ ಮಧ್ಯಮ ವರ್ಗದ ಪ್ರತಿನಿಧಿ. ಅವರು ನಮ್ಮ ಸಮಕಾಲೀನ ಬದುಕಿನ ಒಂದು ನಿಜ ಅಚ್ಚರಿ. ಕಾರ್ಯಕ್ಷಮತೆಯನ್ನು ಮೆಚ್ಚಿ ಅವರ ಆಪ್ತರು ಅರ್ಪಿಸುತ್ತಿರುವ ಒಲವಿನ ಹೊತ್ತಗೆಯಿದು. ಸಮಿತಿಯ ಸದಸ್ಯರು ನಿಸ್ವಾರ್ಥ ಭಾವದಿಂದ, ಪ್ರಾಂಜಲ ಮನಸ್ಸಿನಿಂದ ಇದನ್ನು ಅವರಿಗೆ ಅರ್ಪಿಸುತ್ತಿದ್ದಾರೆ.

ಇದರಲ್ಲಿ 18 ಲೇಖನ ಮತ್ತು ನಾಲ್ಕು ಪದ್ಯಗಳಿವೆ. ಜತೆಗೆ ಚಿತ್ರಸಂಪುಟ ಮತ್ತು ಅನುಬಂಧವೂ ಉಂಟು. ಈ ಲೇಖನಗಳಲ್ಲಿ ಪಂಪಯ್ಯ ಶೆಟ್ಟಿ ಅವರ ಸಾಧನೆ ಮತ್ತು ಸೇವೆಯನ್ನು ಕೊಂಡಾಡಲಾಗಿದೆ. ಅದಕ್ಕೆ ಅವರು ಅರ್ಹರು. ಪುನರುಕ್ತಿ ದೋಷಗಳಿದ್ದರೂ ಉತ್ಪ್ರೇಕ್ಷೆ ಮತ್ತು ವೈಭವೀಕರಣ ಇಲ್ಲ. ಪಂಪಯ್ಯ ಶೆಟ್ಟರು ಸಾಗಿಬಂದ ದಾರಿಯನ್ನು ಅವರ ಒಡನಾಡಿಗಳು ಮತ್ತು ವಿದ್ವತ್ ಜನರು ಅಕ್ಷರಗಳ ಮೂಲಕ ಕಂಡರಿಸಿದ್ದಾರೆ. ಹಾಗಾಗಿ ಇದು ಅಕ್ಷರಾಭಿನಂದನವೂ ಹೌದು, ಅಕ್ಷರ ನೀರಾಜನವೂ ಹೌದು.

ಶ್ರೀಸಾಮಾನ್ಯನಾಗಿಯೂ ಅಸಾಮಾನ್ಯ ಸಾಧನೆ ತೋರಿದ ಪಂಪಯ್ಯನವರಿಗೆ ಇದೊಂದು ಅರ್ಹ ಉಡುಗೊರೆ. ಸಂಘಟಕರು, ನುಡಿಚಾರಕರು ಮತ್ತು ಹೋರಾಟಗಾರರನ್ನೂ, ಅವರ ಪಾತ್ರ ಮತ್ತು ಸೇವೆಯನ್ನೂ ಅಲಕ್ಷಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಸಂಘಟಕ ಮತ್ತು ನುಡಿಚಾರಕರೊಬ್ಬರಿಗೆ ಅರ್ಪಿತವಾಗುತ್ತಿರುವ 'ಅಕ್ಷರ ಬಾಗಿನ' ಸಮಾಜದ ಸ್ವಾಸ್ಥ್ಯವನ್ನು ಎತ್ತಿ ಹಿಡಿಯುತ್ತದೆ.

ಬೆಂಗಳೂರು — ಕೆ. ರಾಜಕುಮಾರ್

10-05-2016 ಸಂಪಾದಕ

ಒಳಗೇನಿದೆ?

ಬಂಧ

ಅನುಬಂಧ

ಸಾತ್ವಿಕ ಸ್ವಭಾವದ ಸಂಭಾವಿತ

✍ **ಕೆ. ರಾಜಕುಮಾರ್**

ಪಂಪಯ್ಯ ಶೆಟ್ಟರ ಮತ್ತು ನನ್ನ ಪರಿಚಯದ ನಂಟಿಗೆ ಸರಿಯಾಗಿ ಕಾಲು ಶತಮಾನ. ಕನ್ನಡ ಸಾಹಿತ್ಯ ಪರಿಷತ್ತಿನ ಅಮೃತ ಮಹೋತ್ಸವ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದಿತ್ತು. ಡಾ॥ ಹಾ.ಮಾ. ನಾಯಕ ಮತ್ತು ಡಾ॥ ಪಿ.ವಿ. ನಾರಾಯಣ ಅವರು ಭಾಗವಹಿಸಿದ್ದ ನಾಡು-ನುಡಿ ಕುರಿತ ಗೋಷ್ಠಿಯೊಂದರ ನಿರೂಪಣೆ ನನ್ನದಾಗಿತ್ತು. ಅದನ್ನು ಮೆಚ್ಚಿದ ಸುಮಾರು 38-40 ವರ್ಷ ವಯಸ್ಸಿನ ಯುವಕರೊಬ್ಬರು ಗೋಷ್ಠಿಯ ಅನಂತರ ನನ್ನ ಬಳಿಗೆ ಬಂದು ಅದನ್ನು ನಾನು ನಿರ್ವಹಿಸಿದ ರೀತಿ ಮತ್ತು ಅದರ ಬಿಗಿ-ಬಂಧವನ್ನು ಮೆಚ್ಚಿ ಅಭಿನಂದಿಸಿದರು. ಅವರು ತಮ್ಮನ್ನು ಪರಿಚಯಿಸಿಕೊಂಡು, ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ ತಮ್ಮನ್ನು ಪರಿಷತ್ತು ನೇಮಕಗೊಳಿಸುತ್ತಿದೆ ಎಂದು ಅರುಹಿದರು. ಆಗ ಅಭಿನಂದಿಸುವ ಸರದಿ ನನ್ನದಾಯಿತು. ಇದು ನಡೆದಿದ್ದು 17-11-1991ರಂದು. ಈ ಕಾಲು ಶತಮಾನದಲ್ಲಿ ತುಂಗಭದ್ರೆಯಲ್ಲಿ ಸಾಕಷ್ಟು ಗಂಗೆ ಹರಿದಿದೆ. ರಾಯಚೂರಿನ ಪಂಪಯ್ಯನವರು ಇದೀಗ ಬೆಂಗಳೂರಿಗರು. ಈ ಅವಧಿಯಲ್ಲಿ ಅವರು ಹೈದರಾಬಾದ್ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಹತ್ತು ವರ್ಷ ರಾಯಚೂರು ಜಿಲ್ಲಾ ಕಸಾಪದ ಅಧ್ಯಕ್ಷರಾಗಿ ಮಾಡಿದ ಕಾರ್ಯ ಅವರಿಗೆ ಅಸ್ಮಿತೆ ತಂದಿತ್ತಿದೆ. ಮುಂದಿನ ಲೇಖನಗಳಲ್ಲಿ ಇವರ ಕಾರ್ಯಕ್ಷಮತೆ ಕುರಿತು ಪ್ರಸ್ತಾಪವಾಗುವುದರಿಂದ ಅದನ್ನು ಪುನರಾವರ್ತಿಸುವ ಗೊಡವೆಗೆ ಹೋಗದೆ, ಅವರ ವ್ಯಕ್ತಿತ್ವದಲ್ಲಿನ ಕೆಲವು ವಿಶಿಷ್ಟ ಅಂಶಗಳನ್ನು ಇಲ್ಲಿ ದಾಖಲಿಸಲು ಬಯಸುವೆ.

ಅವರು ಒಬ್ಬ ಸಂಘಟಕ ಮತ್ತು ಸಾತ್ತ್ವಿಕ ಸ್ವಭಾವದ ಸಂಭಾವಿತ ವ್ಯಕ್ತಿ. ಅವರ ವ್ಯಕ್ತಿತ್ವದಲ್ಲಿ ಅರೆ-ಕೊರೆ, ಮಿತಿಗಳಿಗಿಂತ ಸಾಧ್ಯತೆಗಳನ್ನು ಗಮನಿಸಿರುವೆ. ಇಲ್ಲಿ ವ್ಯಕ್ತ ಮಾಡಿರುವ ಪ್ರಶಂಸೆಗೆ ಅವರ ತೆರೆದ ಬದುಕು ಸಮರ್ಥನೆ ಮತ್ತು ನಿದರ್ಶನಗಳನ್ನು ಒದಗಿಸಿದೆ. ಅರವತ್ತರ ಆಸುಪಾಸಿನಲ್ಲಿರುವ ಅವರದು ಮಾಗಿದ ವ್ಯಕ್ತಿತ್ವ. ಆಪ್ತತೆ, ಆರ್ದ್ರತೆ ಅವರ ವ್ಯಕ್ತಿತ್ವದಲ್ಲಿನ ಸ್ಥಾಯಿಗುಣಗಳು. ಆದರೆ ಯಾವುದಕ್ಕೂ ಗಾಢವಾಗಿ ಅಂಟಿಕೊಂಡವರಲ್ಲ. ನಂಬಿದ್ದನ್ನು ದಡಸೇರಿಸಿ, ಅದಕ್ಕೆ ಒಂದು ತಾರ್ಕಿಕ ಅಂತ್ಯ ಕಾಣಿಸಿ ಸದ್ದಿಲ್ಲದೆ ತಾವು ಹಿಂದೆಸರಿದು ಹೊಸತರ ಅನ್ವೇಷಣೆಯಲ್ಲಿ ತೊಡಗುವ ಶೋಧಕ ಪ್ರವೃತ್ತಿ ಅವರದು.

ಪಂಪಯ್ಯಶೆಟ್ಟರು ದ್ವೇಷ, ಜಿದ್ದು, ಹಟದಲ್ಲಿ ಸಮಯವನ್ನು ಅಪವ್ಯಯ ಮಾಡುವವರಲ್ಲ. ತನ್ಮೂಲಕ ತಮ್ಮ ನೆಮ್ಮದಿಯನ್ನು ಹಾಳುಮಾಡಿಕೊಳ್ಳುವವರೂ ಅಲ್ಲ. ಅವರದು ಸಕಾರಾತ್ಮಕ ಮನೋಧರ್ಮ. ಸಂತೃಪ್ತ ಮನೋಭಾವ. ವೈಯಕ್ತಿಕ ಮಹತ್ವಾಕಾಂಕ್ಷೆಗಳಿಲ್ಲದ ಬದುಕು. ಸರಳತೆ-ಸಜ್ಜನಿಕೆ ಅವರ ವ್ಯಕ್ತಿತ್ವದಲ್ಲಿ ಹಾಲು-ಸಕ್ಕರೆ ಬೆರೆತ ಹಾಗೆ ಬೆರೆತುಹೋಗಿದೆ. ಸದಾ ಪ್ರಸನ್ನ-ಮಂದಸ್ಮಿತ ಮುಖಭಾವ. ತಮ್ಮ ಸಾಮರ್ಥ್ಯವನ್ನೂ ಅದರ ಜತೆಗೆ ಮಿತಿಯನ್ನೂ ಬಲ್ಲ ವ್ಯಕ್ತಿ. ಆರಕ್ಕೇರದ, ಮೂರಕ್ಕಿಳಿಯದ ಸ್ವಭಾವ. ಸ್ಥಿತಪ್ರಜ್ಞ. ಆಸೆಯನ್ನು ಮುಂದೆಬಿಟ್ಟು ಅದರ ಹಿಂದೆ ಸಾಗಿದವರಲ್ಲ. ವಾದ-ವಿವಾದಗಳಿಂದ ಸದಾ ದೂರ. ಸಂಘರ್ಷಕ್ಕಿಂತ ಅನುಸಂಧಾನದಲ್ಲಿ ನಂಬಿಕೆ. ಅಂತೆಯೇ ನಡೆದವರು. ಈ ಸಮಾಜವತ್ಸಲ; ಸಾರ್ವಜನಿಕ ಬದುಕಿಗೆ ಅಡಿಯಿಟ್ಟು ನಲವತ್ತೈದು ವರ್ಷ ದಾಟಿದೆ. ಅವರ ಉತ್ಸಾಹದ ಒರತೆ ಇನ್ನೂ ಬತ್ತಿಲ್ಲ; ಕ್ರಿಯಾಶೀಲತೆ ಕುಗ್ಗಿಲ್ಲ. ಸರಳಜೀವಿ ಪಂಪಯ್ಯನವರ ಮೇಲೆ ಜಾಗತೀಕರಣ ತನ್ನ ಭೋಗಲೋಲುಪತೆಯ ಮುದ್ರೆಯನ್ನು ಒತ್ತಲು ಸಾಧ್ಯವಾಗದೆ ಸೋತಿದೆಯೆಂಬುದು ಅವರ ಘನತೆಗೊಂದು ನಿಖರವಾದ ಮಾನದಂಡ. ಬೇರೆಯವರು ನಮ್ಮ ಕಾರ್ಯದ ಬಗೆಗೆ ಮಾತನಾಡಬೇಕೆ ಹೊರತು ನಮ್ಮ ಸಾಧನೆಗೆ ನಾವೇ ಚಪ್ಪಾಳೆ ತಟ್ಟಿಕೊಳ್ಳುವುದು ಸೂಕ್ತವಲ್ಲವೆಂಬ ಅಭಿಪ್ರಾಯ ಅವರದು.

ಕಾರ್ಯಚಟ (ವರ್ಕೋಹಾಲಿಕ್). ದೈತ್ಯ ಕೆಲಸಗಾರ. ಶ್ರೇಷ್ಠತೆಯ ವ್ಯಸನಕ್ಕೆ ಗಂಟು ಬಿದ್ದವರಲ್ಲ. ಗುಣಾತ್ಮಕವೆಂಬ ಉರುಳಿಗೆ ಕೊರಳೊಡ್ಡಿದವರೂ ಅಲ್ಲ, ಈ ಗುಣವಂತ. ಏನಾದರೂ ಸರಿ, ಮುಂದೆ ಸಾಗುತ್ತಿರುವ ಸ್ವಭಾವ. ಮುಗಿದ ಕೆಲಸದ ಜಯಾಪಜಯದ ಲೆಕ್ಕಾಚಾರದಲ್ಲಿ ವಿಶ್ವಾಸವಿಡದೆ, ದೀಕ್ಷೆ ತೊಟ್ಟು ಕಂಕಣ ಕಟ್ಟಿ ಮತ್ತೊಂದು ಕೆಲಸಕ್ಕೆ ಮುಂದಡಿಯಿಡುವವರು. ಹಾಗಾಗಿ ಅವರ ತಲೆ ಎಂದೆಂದೂ ಕೂಲ್‌ಕೂಲ್. ಅವರೇ ಪದೇ ಪದೇ ಹೇಳುವಂತೆ ನಾನು ತಲೇನೇ ಬಿಸಿ ಮಾಡಿಕೊಳ್ಳಲ್ಲ!

ನಾನು ಸಂಘಟಕನೇ ಹೊರತು ಸಾಹಿತಿಯಲ್ಲ ಎಂದು ವಾಸ್ತವವನ್ನು ಹೇಳುವ ನೇರವಂತಿಕೆ ಅವರಲ್ಲಿದೆ. ತಾನು ಮಹಾನ್ ಕೆಲಸ ಮಾಡಿದೆನೆಂದು ಸೋಗುಹಾಕುವುದಿಲ್ಲ. ಹೀಗೆ ಕೈ ಮತ್ತು ಬಾಯಿ ಶುದ್ಧವಾಗಿಟ್ಟುಕೊಂಡವರು, ಸಾರ್ವಜನಿಕ ಬದುಕಿನಲ್ಲಿರಬೇಕಾದದ್ದು ಅಪೇಕ್ಷಣೀಯವಷ್ಟೇ ಅಲ್ಲ, ಅಗತ್ಯವೂ ಹೌದು. ಸ್ವಚ್ಛ ಸಮಾಜಕ್ಕೆ ಇದು ಅನಿವಾರ್ಯವೂ ಹೌದು. ಹಾಗಾಗಿ ಪಂಪಯ್ಯ ವಿಶಿಷ್ಟವೆನಿಸುತ್ತಾರೆ. ಅವರ ಬಗೆಗೆ ಒಂದು ಹಿಡಿ ಪ್ರೀತಿ ಮೂಡಲು ಅವರ ನಡೆ-ನುಡಿಯೇ ಕಾರಣ. ಯಾವುದೇ ಪದವಿಧಾರಣೆ ಮಾಡಿದವರಲ್ಲ. ಎಲ್ಲವೂ ಸೇವಾ-ಸಂಬಂಧೀ ಕೆಲಸಗಳೇ. ಸಾರಿಗೆಗೆ ಬಸ್ಸು, ಸಂಸಾರಕ್ಕೆ ವಿಶ್ರಾಂತಿವೇತನವನ್ನು ನೆಚ್ಚಿಕೊಂಡವರು. ಜನಪ್ರೀತಿಯನ್ನೇ ಯಥೇಚ್ಛವಾಗಿ ಗಳಿಸಿಕೊಂಡಿದ್ದು, ಅದರಲ್ಲೇ ನೆಮ್ಮದಿ. ಹಾಗಾಗಿ ಪಂಪಯ್ಯಶೆಟ್ಟರಿಗೆ ಆಯೋಜಿತವಾಗಿರುವ ಅಭಿನಂದನೆಗೆ ಅವರು ಅರ್ಹರು. ಅವರಿಗೆ ರಾಜಕೀಯ ಗೊತ್ತಿಲ್ಲವೆಂಬ ಮಾತಿಗೆ ನನ್ನ ತಕರಾರಿದೆ. ಸಾಂಸ್ಕೃತಿಕ ಕ್ಷೇತ್ರದಲ್ಲಿನ

ರಾಜಕೀಯ ಸೂಕ್ಷ್ಮಗಳನ್ನು ಬಲ್ಲವರು, ಆದರೆ ಅದರ ಸುಳಿಗೆ ಸಿಲುಕಿದವರಲ್ಲ. ರಾಜಕೀಯ ಅವರ ಅಸ್ತ್ರವಲ್ಲ. ಸ್ನೇಹ-ಸಜ್ಜನಿಕೆ ಅವರ ಬತ್ತಳಿಕೆಯಲ್ಲಿರುವ ಆಯುಧಗಳು. ಕತ್ತಿ ಝಳಪಿಸುವವರಲ್ಲ, ಹಲ್ಲು ಮಸೆಯುವವರೂ ಅಲ್ಲ. ಕ್ಷಮಾಗುಣಿ. ಸಿಟ್ಟು-ಸೆಡವು ಅಪರೂಪ. ಕೋಪತಾಪವೆಲ್ಲ ಸಾತ್ತ್ವಿಕ ಮೂಲದ್ದು. ಕೆರಳಿದ್ದನ್ನು ಕಂಡವರಿಲ್ಲ.

ಅವರು ಎಲ್ಲರ ಮಾತಿಗೆ ಕಿವಿಯಾಗುತ್ತಾರೆ. ಒಬ್ಬ ನಾಯಕನಿಗಿರಬೇಕಾದ 'ಕೇಳುವ ತಾಳ್ಮೆ' ಅವರಿಗಿದೆ. ಕಾರ್ಯಕರ್ತನಾಗಿ ದುಡಿದು ಪುಟ್ಟಪುಟ್ಟ ಮೆಟ್ಟಿಲೇರುತ್ತ ನಾಯಕನಾದವರು. ಸಾರ್ವಜನಿಕ ಬದುಕಿನಲ್ಲಿ ಇಂದು ಬಲು ಅಪರೂಪವಾಗಿರುವ ಪಾರದರ್ಶಕತೆ ತುಟಿ ಅಂಚಿನಲ್ಲಿರದೆ ಆಚರಣೆಯಲ್ಲಿದೆ. ವೃತ್ತಿಯಿಂದ ಕಾಲೇಜೊಂದರಲ್ಲಿ ಲೆಕ್ಕಾಧಿಕಾರಿ ಯಾಗಿದ್ದವರು. ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳಿಗಾಗಿ ಬಳಸಿದ ಕಾಸುಕಾಸಿಗೂ ಕರಾರುವಾಕ್ಕು ಲೆಕ್ಕ. ಸಾರ್ವಜನಿಕ ಹಣ ಬೆಂಕಿ ಎಂದು ಅರಿತು ಎಚ್ಚರಿಕೆಯಿಂದ ಅದರ ವಿನಿಯೋಗ. ಖಾಸಗಿ ಬದುಕಿನಲ್ಲಿ ಧಾರಾಳತನ, ಸಾರ್ವಜನಿಕ ಬದುಕಿನಲ್ಲಿ ಮಿತವ್ಯಯ ಅವರ ಜೀವನಮಂತ್ರ. ನಾಯಕನಾಗಲು ಇರಬೇಕಾದ ಕೆಲವು ಗುಣಗಳು ಅವರಲ್ಲಿಲ್ಲ. ಅವರು ವಾಗ್ಮಿಯಲ್ಲ, ಭಾಷಣಕಾರರೂ ಅಲ್ಲ. ಮೂರೂ ಮತ್ತೊಂದು ಮಾತಾಡಿ ಆಯಿತೆಂದು ಕುಳಿತುಬಿಡುತ್ತಾರೆ. ದಾರ್ಷ್ಟ್ಯ ಇಲ್ಲವೇ ಇಲ್ಲ. ಗಟ್ಟಿಯಾಗಿ ತಮ್ಮ ನಿಲುವು ಪ್ರತಿಪಾದಿಸುವುದಿಲ್ಲ. ತಮ್ಮ ಅಭಿಪ್ರಾಯಗಳನ್ನು ಹೇರುವುದಿಲ್ಲ ಆದರೆ ಅವರ ಕಾರ್ಯಕ್ಷಮತೆ ಮತ್ತು ಪ್ರಾಮಾಣಿಕತೆಗಳೇ ಅವರನ್ನು ನಾಯಕನನ್ನಾಗಿಸಿವೆ.

ಪಂಪಯ್ಯಶೆಟ್ಟರ ಬಾಳಿನ ಬೆಳಕಾಗಿ, ಪ್ರೇಮದ ಸಿರಿಯಾಗಿ ಅಡಿಯಿಟ್ಟವರು ಶಾರದಾ. ವಿಶಾರದೆಯಲ್ಲದಿದ್ದರೂ ಸಂಸಾರ ಮತ್ತು ಮಕ್ಕಳ ವಿದ್ಯಾಭ್ಯಾಸದ ನಿರ್ವಹಣೆಯಲ್ಲಿ ಅವರದು ಪ್ರಧಾನಪಾತ್ರ. ಶೆಟ್ಟರು ವೃತ್ತಿ ಮತ್ತು ಪ್ರವೃತ್ತಿಗಳಲ್ಲಿ ನಿರತರಾಗಿದ್ದಾಗ ಇಡೀ ಸಂಸಾರವನ್ನು ತೂಗಿಸಿಕೊಂಡು ಹೋದವರು ಶಾರದಮ್ಮ. ''ಮದುವೆಯಾಗಿ ತಿಂಗಳಿಲ್ಲ, ನೋಡಿರಣ್ಣ ಹೇಗಿದೆ? ನಾನು ಕೂಗಿದಾಗಲೆಲ್ಲ ಬರುವಳೆನ್ನ ಶಾರದೆ'' ಎಂದು ಪಂಪಯ್ಯ ಪುಲಕಗೊಳ್ಳುವಂತೆ ಮಾಡಿದವರು ಅವರು. ಈ ಪುಲಕ ನಲವತ್ತು ವರ್ಷಗಳಾದರೂ ಹಾಗೆಯೇ ಉಳಿದಿದೆ. ನಾನು ಬಡವಿ, ಆತ ಬಡವ ಒಲವೆ ನಮ್ಮ ಬದುಕು ಎಂಬ ಬೇಂದ್ರೆ ಹಾಡಿನಂತೆ ಬಾಳಿದವರು. ಸಾನುರಾಗದಿಂದ ಬೆಸೆದು ದೀಪ ತೇಲಿಬಿಟ್ಟ ದಾಂಪತ್ಯವದು. ಭಾರತದ ಕುಟುಂಬ ವ್ಯವಸ್ಥೆಯನ್ನು ಛಿದ್ರಗೊಳಿಸಲು ಹುನ್ನಾರ ಹೂಡಿರುವ ವಿದೇಶೀ ಶಕ್ತಿಗಳಿಗೆ ಇಂತಹ ಕುಟುಂಬಗಳು ಒಂದು ಪ್ರತ್ಯಸ್ತ್ರ. ಪ್ರತಿಯೊಬ್ಬ ಪುರುಷನ ಸಾಧನೆಯ ಹಿಂದೆ ಮಹಿಳೆಯೊಬ್ಬಳ ಪಾತ್ರವಿರುತ್ತದೆ ಎಂಬ, ಬಳಸಿ ಬಳಸಿ ಸವಕಲಾದ ಮಾತೊಂದಿದೆ. ಈ ರೂಢಿಗತ ಮಾತಿಗೆ ಆಕೆ ಜೀವತುಂಬಿದವರು. ಇಂದಿಗೂ ಅಂತೆಯೇ ಬಾಳುತ್ತಿರುವವರು. ಪತಿ, ವೃತ್ತಿ ಮತ್ತು ನುಡಿಚಾರಿಕೆ-ಸಂಘಟನೆ-ಪತ್ರಿಕೋದ್ಯಮದಂತಹ ಪ್ರವೃತ್ತಿಗಳಲ್ಲೇ ಮುಳುಗಿದ್ದರೂ ಕೈಗೆ ತಂದಿತ್ತ ಸಂಬಳದಲ್ಲೇ ಕುಟುಂಬ ನಿಭಾಯಿಸಿದ ಜಾಣೆ. ಸಂಸಾರದ ಸಾರಥ್ಯವಷ್ಟೇ ಅಲ್ಲ, ಗಾಲಿಯೂ

ಈ ಹೆಣ್ಣುಮಗಳದೇ. ಅವರು ಯಾವುದೇ ಶಿಖಾಯತುಗಳಿಲ್ಲದೆ, ದುಗುಡ, ದುಮ್ಮಾನ ತೋರಗೊಡದೆ ಇಡೀ ಬದುಕಿನಲ್ಲಿ ಪತಿಯ ಮುಖದ ಮಂದಹಾಸ ಮಾಯವಾಗದಂತೆ ಜತನವಾಗಿ ಕಾಪಾಡಿದವರು. ಪಂಪಯ್ಯಶೆಟ್ಟರ ಗೆಳೆಯರ ಗುಂಪು ಮನೆಗೆ ದಾಳಿಯಿಟ್ಟಾಗಲೆಲ್ಲ ಸಿಡುಕದೆ, ಸಿಟ್ಟಾಗದೆ ಅಡುಗೆ ಮನೆಯಲ್ಲಿ ಕೊಳಗ-ಪಾತ್ರೆ-ತಪ್ಪಲೆಯನ್ನು ಕುಕ್ಕದೆ ಬಂದವರನ್ನು ಉಪಚರಿಸುವ ಉದಾರಿ. ಮಕ್ಕಳನ್ನೂ ತನ್ನಂತೆಯೇ ತಿದ್ದಿ-ತೀಡಿ ಬೆಳೆಸಿದಾಕೆ.

ಹಿರಿಮಗ ವೆಂಕಟೇಶ ಚಿಕ್ಕಂದಿನಿಂದಲೂ ದೊಡ್ಡತನವನ್ನೇ ಮೈಗೂಡಿಸಿಕೊಂಡು ಬೆಳೆದವರು. ಸಂಕಷ್ಟದಲ್ಲಿರುವವರ ನೆರವಿಗೆ ಧಾವಿಸುವವರು. ಕಿರಿಮಗ ರಾಘವೇಂದ್ರ ಯಾವ ಪರಿವೆಯೂ ಇಲ್ಲದೆ ಸದಾ ಅಧ್ಯಯನನಿರತನಾಗಿ ಮೇಲೆ ಬಂದವರು. ಮುದ್ದಿನ ಕುವರಿ ಶಿವರಂಜನಿ, ತನ್ನ ಹೆಸರಿನ ರಾಗದಲ್ಲಿರುವ ಶೋಕಛಾಯೆಗೆ ಅಪವಾದವಾಗಿ ಸದಾ ಶೆಟ್ಟರ ಕುಟುಂಬಕ್ಕೆ ಸಂತಸ-ಸಂಭ್ರಮಗಳನ್ನು ಮಾಲ್‌ಕೌಂಸ್ ಮತ್ತು ಭೀಮ್‌ಪಲಾಸ್‌ಗಳಂತೆ ಮೊಗೆಮೊಗೆದು ಕೊಡುತ್ತಿರುವಾಕೆ. ಪಂಪಯ್ಯ ಇಡೀ ಜೀವನದಲ್ಲಿ ಸೆಂಟಿಮೆಂಟನ್ನು ಸೆಂಟಿಮೀಟರಿನಷ್ಟೂ ಹತ್ತಿರಕ್ಕೆ ಬಿಟ್ಟುಕೊಂಡವರಲ್ಲ! ಸಮಾಜಮುಖಿಯಾದ ಈ ಸೌಮ್ಯಮುಖಿಯ ಮೊಗದಲ್ಲಿ ಅನವರತ ಸೆಂಟಿಮೆಂಟನ್ನು ಮಿಂಟಿಸಿದಾಕೆ, ಶಿವರಂಜನಿ. ರಾಜೇಶ್ ಸುರಪುರ ಅವರು ಪುರಾಧೀಶನಾಗದೆ, ಅಳಿಯದೇವರೂ ಆಗದೆ ಮನೆಯ ಮಗನಂತಿದ್ದಾರೆ. ಸೊಸೆಯಂದಿರಾದ ಅರ್ಚನಾ, ಡಾ|| ಸಪ್ನಾ, ಮೊಮ್ಮಕ್ಕಳಾದ ಆಶ್ರಿತ್, ಸಂವಿತ್, ಅಕ್ಷರ, ರಿತ್ವಿಕ್, ರಿಷಿಕ ಇವರೆಲ್ಲ ಪಂಪಯ್ಯಶೆಟ್ಟರ ಬದುಕಿನಲ್ಲಿ ಸಂಭ್ರಮದ ಸುರುಸುರುಬತ್ತಿ ಹಚ್ಚಿದ್ದಾರೆ. ಹಾಗಾಗಿ ಶೆಟ್ಟರ ಸಂಸಾರದಲ್ಲಿ ಸದಾ ಸರಿಗಮದ ಸಿರಿ. ಅವರನ್ನು ಇಡಿಯಾಗಿ ಸಮಾಜಕ್ಕೆ ಅರ್ಪಿಸಿದ ಕೀರ್ತಿ ಇವರೆಲ್ಲರದು. ರಾಯಚೂರಿನಲ್ಲಷ್ಟೇ ಅಲ್ಲ ಮಹಾನಗರಿ ಬೆಂಗಳೂರಿನಲ್ಲೂ ಕಾಲಿಗೆ ಗಾಲಿ ಕಟ್ಟಿಕೊಂಡವರಂತೆ ಸಾಗುವ ಪಂಪಯ್ಯಶೆಟ್ಟರ ಓಡಾಟಕ್ಕೆ ಬ್ರೇಕ್ ಹಾಕದೆ, ರೈಟ್‌ರೈಟ್ ಎನ್ನುತ್ತ ಹುರಿದುಂಬಿಸುತ್ತಲೇ ಇದ್ದಾರೆ. ಪಂಪಯ್ಯಶೆಟ್ಟರು ಸ್ವತಃ ತಮ್ಮ ಕುಟುಂಬಕ್ಕೇ ಒಂದು ಅಚ್ಚರಿ. ಶಾರದಮ್ಮನವರಿಗಂತೂ ''ಎಲ್ಲರಂತವನಲ್ಲ ನನ್ನ ಗಂಡ'' ಎಂಬ ವಿಸ್ಮಯ ಮತ್ತು ಮೆಚ್ಚುಗೆ ಒಟ್ಟೊಟ್ಟಿಗೆ. ಹಾಗಾಗಿ ಅವರ ಪರಿವಾರ, ''ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ'' ಎಂಬ ಮಾತನ್ನು ನೆನಪಿಸುತ್ತದೆ.

ಪಂಪಯ್ಯಶೆಟ್ಟರದು ಸಮತೂಕದ ವ್ಯಕ್ತಿತ್ವ. ಕ್ಷಣಕಾಲ ಚಿತ್ತ ಕ್ಷಣಕಾಲ ಪಿತ್ತ ಎಂಬಂತೆ ಅಲ್ಲ. ವೇದಾಂತಿಯಂತೆ ಹೊನ್ನೆಲ್ಲ ಮಣ್ಣು ಎಂದು ಬದುಕನ್ನು ನೀರಸಗೊಳಿಸಿಕೊಂಡವರಲ್ಲ. ರಮ್ಯಕವಿಯಂತೆ ವಿಜೃಂಭಿಸಿದವರೂ ಅಲ್ಲ. ಆಸೆಬುರುಕನಂತೆ ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿಕೊಂಡವರಲ್ಲ. ಉಳ್ಳವರನ್ನು ಕಂಡು ಕರುಬಿದವರೂ ಅಲ್ಲ. ಪಾರಮಾರ್ಥಿಕವಾದ ವಿಚಾರಗಳನ್ನು ಹೆಚ್ಚು ನೆಚ್ಚಿಕೊಂಡು, ಲೌಕಿಕವನ್ನು ಮರೆತವರೂ ಅಲ್ಲ. ರುಚಿಗೆ ತಕ್ಕಷ್ಟು ಉಪ್ಪು ಎಂಬುದು ಅವರ ಸರಳ ಸಿದ್ಧಾಂತ. ಅವರ ಬದುಕು; ಚುಟುಕು ಮತ್ತು ಮಹಾಕಾವ್ಯದ ಅತಿ-ಮಿತಿಯ ನಡುವಿನ ಸಹಜಕಾವ್ಯ.

ಈ ಸಮಚಿತ್ತ ಹೇಗೆ ಸಾಧ್ಯವಾಯಿತು? ಅವರು ಆಸೆಯೆಂಬ ಬಿಸಿಲುಗುದುರೆ ಏರಲಿಲ್ಲ. ಆಸೆಯು ಮುಂದೆ ಮುಂದೆ, ಎಲ್ಲರು ಅವರ ಹಿಂದೆ ಎಂಬ ಮಂದಿಯ ನಡೆಗೆ ವಿರುದ್ಧವಾದ ದಿಕ್ಕಿನಲ್ಲಿ ಚಲಿಸಿದರು. ಬಸವಣ್ಣನವರು ಹೇಳಿದ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಅಡದೆ ಮಾಡಿತೋರಿಸಿ ರೂಢಿಯೊಳಗೆ ಉತ್ತಮನಾದವರು. ಮಾಡಿದ ಕೆಲಸವನ್ನೂ ಸಹ ಜೋರುದನಿಯಲ್ಲಿ ಬಿತ್ತರಿಸುವ ಕೂಗುಮಾರಿಯಲ್ಲ. ಸೋಗಿನ ವ್ಯಕ್ತಿತ್ವ ಇವರದಲ್ಲ. ಮನುಷ್ಯ ಸಹಜವಾದ 'ಚಿನ್ನ ಚಿನ್ನ ಆಸೈ'ಗಳು ಇವೆ. ಆದರೆ ಆ ಪುಟ್ಟಪುಟ್ಟ ಆಸೆಗಳೆಂದೂ ದೌರ್ಬಲ್ಯ ಗಳಾಗಿಲ್ಲ. ವಿವೇಕದ ಮಾತುಗಳಿಗೆ ಮಣಿವ ಸ್ವಭಾವ. ವಿದ್ಯಾರ್ಥಿ ದೆಸೆಯಿಂದಲೇ ಸೇವೆಯ ಹಾದಿಯಲ್ಲಿ ನಡೆಯುತ್ತಿದ್ದರೂ ಅಹಂ ನೆತ್ತಿಗೇರಿಲ್ಲ. ಹಾಗಾಗಿ ತಲೆಗೆ ಹೆಲ್ಮೆಟ್ಟನ್ನಷ್ಟೇ ಧರಿಸಬೇಕೆಂಬ ವಿವೇಚನಾ ಜ್ಞಾನವುಂಟು! ಆತುರದ ಸ್ವಭಾವದವರೂ ಅಲ್ಲ; ಆಸೆಬುರುಕರೂ ಅಲ್ಲ. ಕಾಯುವ ತಾಳ್ಮೆಯುಂಟು. ವ್ಯವಧಾನ ಅವರ ಟ್ರಂಪ್‌ಕಾರ್ಡ್. ಇವನ್ನೆಲ್ಲ ಪ್ರಜ್ಞಾಪೂರ್ವಕವಾಗಿ ಅಳವಡಿಸಿಕೊಂಡಿಲ್ಲ. ಸಹಜವಾಗಿ ಅವರ ವ್ಯಕ್ತಿತ್ವದಲ್ಲಿ ಹದವರಿತು ಬೆರೆತುಹೋಗಿರುವ ಗುಣಗಳು. ಈ ಸರಳಜೀವಿ ಅಕ್ಷೀಣ ಬಲನಲ್ಲದಿದ್ದರೂ, ಅಳ್ಳೆದೆಯವರಲ್ಲ. ಈ ದಿಟ್ಟತನಕ್ಕೆ ಕಾರಣವಾಗಿರುವುದು ಅವರ ನೇರವಂತಿಕೆ. ಅವರನ್ನು ಬಲ್ಲವರೇ ಹೆಚ್ಚಿರುವುದರಿಂದ ಅರಿಗಳ ಸಂಖ್ಯೆ ಕಡಿಮೆ. ಕನ್ನಡ ಸಾಹಿತ್ಯ ಪರಿಷತ್ತಿನ ಹತ್ತು ವರ್ಷಗಳ ಅಧ್ಯಕ್ಷ ಸ್ಥಾನ, ವೈಶ್ಯವಾರ್ತಾ ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ ದಶಕದ ಅವಧಿ, ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದ ಎಂಟು ವರ್ಷಗಳ ಅವಧಿ ಹೀಗೆ ಎಲ್ಲ ಸಮಾಜಮುಖೀ ಕೆಲಸಗಳನ್ನೂ ಇಷ್ಟಪಟ್ಟು ಮಾಡಿದ್ದೇ; ಕಷ್ಟಪಟ್ಟು ಮಾಡಿದ್ದಲ್ಲ. ಹಾಗಾಗಿ ಅವರಿಗೆ ಈ ದಣಿವರಿಯದ ದುಡಿಮೆ ಎಂದೂ ಭಾರವೆನಿಸಲಿಲ್ಲ.

ಸಾರ್ವಜನಿಕ ಕಾರ್ಯನಿರ್ವಹಣೆಯಲ್ಲಿ ಅವರದು ಎಂದೂ ಕೊರತೆಯ ಬಜೆಟ್ ಅಲ್ಲ. ಅವರ ಅಯವ್ಯಯದಲ್ಲಿ ಮೀರಳತೆ (ಓವರ್‌ಡ್ರ್ಯಾಫ್ಟ್) ಇಲ್ಲವೇ ಇಲ್ಲ. ಖಾಸಗಿ ಬದುಕಿನಂತೆಯೇ ಸಾರ್ವಜನಿಕ ಬದುಕಿನಲ್ಲಿಯೂ ಮಿತವ್ಯಯ ಸಾಧಿಸಿದವರು. ಜಿಲ್ಲಾಕಸಾಪ ಅಧ್ಯಕ್ಷರಾಗಿ ಅವರು ಆಯೋಜಿಸಿದ ಸಭೆ-ಸಮಾರಂಭ-ಸಂಕಿರಣ-ಸಂವಾದ-ಸಮಾವೇಶ-ಸಮ್ಮೇಳನಗಳಿರಬಹುದು ಅಥವಾ ವೈಶ್ಯವಾರ್ತಾ ಪತ್ರಿಕೆಯ ಪ್ರಕಾಶಕರಾಗಿ ಆಯ್ಕೆಮಾಡಿದ ಕಾಗದ-ಮುದ್ರಣ-ಬಣ್ಣದಂತಹ ವಿಚಾರವಿರಬಹುದು ವ್ಯತ್ಯಾಸವಿಲ್ಲ. ಎಂಟು ವರ್ಷದಿಂದ ಅಧ್ಯಕ್ಷರಾಗಿರುವ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲೂ ಕಾಸುಕಾಸಿಗೂ ಉಡದ ಹಿಡಿತ ಸಾಧಿಸಿದವರು. ಸಾಹಿತ್ಯಿಕ ಸಮಾರಂಭಗಳಲ್ಲಿ ಕಾಫಿ-ಬಿಸ್ಕತ್ ಓಕೆ, ತಿಂಡಿ-ಗಿಂಡಿ ಏಕೆ ಎಂಬ ಅವರ ನಿಲುವು ಎಂದೂ ವಿಶ್ವಾಸಮತವನ್ನು ಗೆದ್ದಿಲ್ಲ. ಬೆಂಗಳೂರಿನ ಸಮಾರಂಭಗಳಲ್ಲಿ ತಿಂಡಿಬೇಕು, ತೀರ್ಥ(ಕಾಫಿ)ಬೇಕು, ಎಲ್ಲಬೇಕು ಎಂಬ ಪ್ರಾಸವನ್ನು ಅವರಿಗೆ ಮನದಟ್ಟು ಮಾಡಿಸಲು ಮೂರು ವರ್ಷ ಬೇಕಾಯಿತು. ಸಾರ್ವಜನಿಕ

ಬದುಕಿನಲ್ಲಿ ಹೀಗೆ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡವರು ವಿರಳ. "ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದ 10 ವರ್ಷಗಳ ಅವಧಿಯಲ್ಲಿ ನಾನು ನನ್ನ ಸ್ವಂತ ಹಣವನ್ನು ಎಂದೂ ಪರಿಷತ್ತಿಗೆ ವ್ಯಯಿಸಿಲ್ಲ" ಎಂಬ ಪ್ರಾಮಾಣಿಕ ಮಾತನ್ನಾಡುತ್ತಾರೆ. ಅವರು ಆಷಾಢಭೂತಿಯಲ್ಲ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಸಾರ್ವಜನಿಕ ಬದುಕಿನಲ್ಲಿರುವವರು ಮಾತಿನ ಮಂಟಪ ಕಟ್ಟುತ್ತಲೇ ಮತ್ತೊಂದು ಮನೆಯನ್ನೂ ನಿರ್ಮಿಸಿಕೊಳ್ಳುವವರ ನಡುವೆ ಪಂಪಯ್ಯಶೆಟ್ಟರದು ಅಪ್ಪಟ ಆದರ್ಶ ನಡೆ. ಹಾಲಿಗೊಂದು ಕಾಸು, ಮೊಸರಿಗೊಂದು ಕಾಸು, ಚಿಕ್ಕಪ್ಪ ಕೊಟ್ಟಿದ್ದು ಚಿಕ್ಕಕಾಸು, ದೊಡ್ಡಪ್ಪ ಕೊಟ್ಟಿದ್ದು ದೊಡ್ಡಕಾಸು ಎಂದು ಕಾಸುಕಾಸಿಗೂ ಲೆಕ್ಕ ಬರೆದಿಟ್ಟವರು. ವೃತ್ತಿಯಿಂದ ಲೆಕ್ಕಿಗರಾಗಿದ್ದ ಅವರು ಸಾರ್ವಜನಿಕ ಬದುಕಿನಲ್ಲೂ ಅದನ್ನೇ ಮುಂದುವರೆಸುತ್ತಿದ್ದಾರೆ!

ತಮ್ಮ ಕಾರ್ಯಸಾಧನೆಗೆ ಉದ್ದಕ್ಕೂ ಅವರು ನೆಚ್ಚಿದ್ದು ಸಂಘರ್ಷವನ್ನಲ್ಲ. ಅನುಸಂಧಾನವನ್ನು. ವಾದ-ಸಂವಾದ-ಚರ್ಚೆ-ಮಂಥನದ ಮೂಲಕ ಸಮಸ್ಯೆಯ ಸಿಕ್ಕು ಬಿಡಿಸಿ ಪರಿಹಾರ ಕಂಡುಕೊಳ್ಳುವಲ್ಲೇ ಅವರ ಆಸಕ್ತಿ. ಆದರ್ಶಪ್ರಾಯ ವ್ಯಕ್ತಿಗಳು (ರೋಲ್ ಮಾಡೆಲ್ಸ್) ಯಾರು ಎಂದು ಇಂದಿನ ಯುವ ಜನಾಂಗವನ್ನು ಕೇಳಿದರೆ ಉತ್ತರ ಗಿಣಿವಾಕ್ಕಿನಂತಿರುತ್ತಿದೆ. ಸಿನಿಮಾ-ರಾಜಕಾರಣ-ಕ್ರಿಕೆಟ್ ಅಥವಾ ಯಾವುದಾದರೂ ಉದ್ಯಮ ಕ್ಷೇತ್ರದ ಗಣ್ಯರೊಬ್ಬರ ಹೆಸರನ್ನು ಉಲ್ಲೇಖಿಸುತ್ತಾರೆ. ಇಲ್ಲದಿದ್ದರೆ ಅದೇ ಹಳವಂಡ. ಪಠ್ಯಪುಸ್ತಕಗಳಲ್ಲಿ ಪಾಠವಾಗಿದ್ದ ಮಹಾಪುರುಷರ ಹೆಸರನ್ನು ಉಸುರಿಬಿಡುತ್ತಾರೆ. ನಮ್ಮ ನಡುವೆಯೇ ಇರುವ ನಿಜವಾದ ಆದರ್ಶಪ್ರಾಯರನ್ನು ಹಾಗೆಂದು ಒಪ್ಪಿಕೊಳ್ಳುವಂತಹ ಪರಿಸರ ನಮ್ಮಲ್ಲಿಲ್ಲ. ಯೋಚಿಸುವಂತಹ ಸ್ವಂತಬುದ್ಧಿಯನ್ನು ನಮ್ಮ ಶಿಕ್ಷಣ ಕೊಟ್ಟಿಲ್ಲ. ಪಂಪಯ್ಯ ಶೆಟ್ಟರಂತಹ ಶ್ರೀಸಾಮಾನ್ಯರೂ ವಿಶೇಷ ಸಾಧನೆಯ ಮೂಲಕ ಮಾನ್ಯರಾದವರು ಎಂಬುದನ್ನು ಒಪ್ಪಿಕೊಳ್ಳಲು ಹುಸಿ ಪ್ರತಿಷ್ಠೆ ಅಡ್ಡಿಬರುತ್ತದೆ. ನಿಂತ ನೆಲ, ಹಿಡಿದ ಹುಡಿ ನಿಗಿನಿಗಿ ಕೆಂಡವಾದರೂ ಹೋದೆಡೆಯಲ್ಲೆಲ್ಲ ಸತತವಾಗಿ ನಾಲ್ಕು ದಶಕಗಳ ಕಾಲ ಕನ್ನಡವನ್ನು ಅರಳಿಸಿದವರು. ಅದಕ್ಕಾಗಿ ದಣಿವರಿಯದ ನಿರಂತರ ನಡಿಗೆ. ವೃತ್ತಿ ಮತ್ತು ಪ್ರವೃತ್ತಿಯನ್ನು ಸಮನಾಗಿ ತೂಗಿಸಿಕೊಂಡವರು. ಕುಟುಂಬದ ಹಿತ ಬಲಿಗೊಡದೆ ಸಾರ್ವಜನಿಕ ಬದುಕಿನ ಸ್ವಾಸ್ಥ್ಯವನ್ನೂ ಕಾಪಾಡಿದವರು. ಋಜು ಮಾರ್ಗದಲ್ಲಿ ನಡೆದ ಅವರು ಕನ್ನಡದ ವಿಚಾರದಲ್ಲಿ ಉಗ್ರಪ್ರತಾಪಿಯಲ್ಲ, ನಿಜ. ಆದರೆ ಅವರದು ಸಹಜ ಕನ್ನಡಾಭಿಮಾನ. ಕರ್ನಾಟಕದ ಆರ್ಯವೈಶ್ಯರ ಮಾತೃಭಾಷೆ ಕನ್ನಡವೇ ಹೊರತು ತೆಲುಗಲ್ಲ ಎಂಬ ವಾದದ ಪ್ರತಿಪಾದಕರಲ್ಲಿ ಅವರೂ ಒಬ್ಬರು. ತೆಲುಗನ್ನು ಸರಿಯಾಗಿ ಕಲಿತರೆ ಅವರಲ್ಲಿ ಅನುವರ್ತಿಸಬೇಕಾಗುತ್ತದೆ ಎಂಬ ಕಾರಣದಿಂದಲೇ ಅದನ್ನು ಕಲಿತಿಲ್ಲ ಎಂಬ ಖಂಡ-ತುಂಡ ನಿಲುವು. ವಿದ್ಯಾರ್ಥಿ ದೆಸೆಯಿಂದಲೇ ಕನ್ನಡಪರ ಹೋರಾಟಗಳಲ್ಲಿ ಭಾಗಿಯಾದವರು. ಆದರೆ ಅವರು ಭಾಷಾ ಸಾಮರಸ್ಯಕ್ಕೆ ಎಂದೂ ವ್ಯತಿರಿಕ್ತವಾಗಿ ನಿಂತವರಲ್ಲ. ಭಾಷೆಯನ್ನು ಬೆಳಕಾಗಿ ಪರಿಭಾವಿಸಿದರು, ಬೆಂಕಿಯಂತೆ ಕಂಡವರಲ್ಲ.

ಪಂಪಯ್ಯಶೆಟ್ಟರಿಗೆ 60 ವರ್ಷ ತುಂಬಿದಾಗ 2012ರಲ್ಲಿ ರಾಯಚೂರಿನಲ್ಲಿ ಒಂದು ಅರ್ಥಪೂರ್ಣ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಅಂದು ಅಭಿನಂದನಾ ನುಡಿಗಳನ್ನಾಡುವ ಅವಕಾಶ ನನ್ನ ಪಾಲಿನದಾಗಿತ್ತು. ಸಂಘಟಕ ಮತ್ತು ನುಡಿಚಾರಕ ಪಂಪಯ್ಯಶೆಟ್ಟರು ತಮ್ಮ ಹತ್ತು ವರ್ಷಗಳ ಸಾಹಿತ್ಯಪರಿಷತ್ತಿನ ಅಧ್ಯಕ್ಷಾವಧಿಯಲ್ಲಿ ಹಲವಾರು ಸಮ್ಮೇಳನ ಮತ್ತು ಸಮಾವೇಶಗಳನ್ನು ಆಯೋಜಿಸಿ ಅನೇಕ ಪ್ರತಿಭೆಗಳಿಗೆ ವೇದಿಕೆ ಒದಗಿಸಿದ್ದಾರೆ. ಅಂತಹವರು ಇದೀಗ ಮಕ್ಕಳೊಂದಿಗೆ ನೆಲೆಸಲು ಬೆಂಗಳೂರಿಗೆ ಹೊರಟಿದ್ದಾರೆ ಹಾಗಾಗಿ ಮಾನವಿ ತಾಲ್ಲೂಕಿನಲ್ಲಿ ಸದ್ಯದಲ್ಲೇ ನಡೆಯಲಿರುವ ಆರನೆಯ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಅವರನ್ನು ಆಯ್ಕೆಮಾಡಿ ಗೌರವಿಸಬೇಕೆಂದು ಸೂಚಿಸಿದೆ. ನನ್ನ ಮಾತು ಮತ್ತು ವಿಚಾರ ಅನಂತರ ತೀವ್ರತೆ ಪಡೆದುಕೊಂಡು 2013ರಲ್ಲಿ ಶೆಟ್ಟರು ಸಮ್ಮೇಳನಾಧ್ಯಕ್ಷರಾಗಲು ಕಾರಣವಾದದ್ದು ವೈಯಕ್ತಿಕವಾಗಿ ನನಗೆ ಅತೀವ ಸಂತಸ ನೀಡಿದೆ.

ಅವರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಪರಿಸರವೂ ಪ್ರಮುಖ ಪಾತ್ರವಹಿಸಿದೆ. ಜತೆಗೆ ರಂಗಕರ್ಮಿಯಾದ ಅವರ ತಂದೆಯ ಪರೋಕ್ಷ ಪ್ರೇರಣೆಯೂ ಉಂಟು. ಬರಪೀಡಿತ ರಾಯಚೂರಿನಲ್ಲಿ ಕನ್ನಡದ ಝಲ್ಲು ನಿರಂತರ ಸುರಿಯುವಂತಾಗಲು ಇವರು ಸಹ ಕಾರಣರಾದವರು. ಇಡೀ ಬದುಕಿನಲ್ಲಿ ಕನ್ನಡದ ಸಮ್ಮೋಹವೇ ಹೊರತು, ಯಾವುದೇ ವ್ಯಾಮೋಹಕ್ಕೆ ವಶವಾದದ್ದಿಲ್ಲ. ಒಮ್ಮೆ ಮಾತ್ರ ಕೀರ್ತಿಶನಿಯನ್ನು ಬಯಸಿ ಹಿಂಬಾಲಿಸಿ, ಸ್ವಭಾವತಃ ಶಾಂತವಾಗಿದ್ದ, ನಿರಾಳವಾಗಿದ್ದ ಮನಸ್ಸನ್ನು ಪ್ರಕ್ಷುಬ್ಧಗೊಳಿಸಿಕೊಂಡರು. ಲಘುವಾಗಿದ್ದ, ಗೆಲುವಾಗಿದ್ದ ಮನ ಮುದುಡಿತು, ಬಳಲಿತು, ಸೊರಗಿತು. ಕೀರ್ತಿಶನಿ ತೊಲಗಾಚೆ ದೂರ ಎಂದು ಕುವೆಂಪು ಅವರನ್ನು ಅನುಸರಿಸಿದ್ದರೆ ನಿಂತ ಎದೆಗೊಳದಲ್ಲಿ ಚಿಂತೆ ಬರೆಯುವಂತಾಗುತ್ತಿರಲಿಲ್ಲ. ಆದರೂ 'ಆಲ್ ಈಸ್ ವೆಲ್' ಎಂದು ಮೂರು ಸಾರಿ ಉಸುರಿ ಚೇತರಿಸಿಕೊಂಡು ದೃಢವಾದರು.

ವೃತ್ತಿಯ ಸಂದರ್ಭದಲ್ಲಿ ಮತ್ಸರಕ್ಕೆ ಬಲಿಯಾಗಿ ಅಕಾರಣವಾಗಿ ಅಮಾನತಾಗಿದ್ದ ಪ್ರತಿಕೂಲ ಸಂದರ್ಭದಲ್ಲೂ ಎದೆಗುಂದದೆ ಆರ್ಯವೈಶ್ಯ ಸಮಾಜಕ್ಕೆ ಸಂಬಂಧಿಸಿದ ಮಾಸಪತ್ರಿಕೆಯೊಂದನ್ನು ಪ್ರಕಟಿಸುವ ಸಲುವಾಗಿ ಕರ್ನಾಟಕದಾದ್ಯಂತ ಸಂಚರಿಸಿ ಚಂದಾದಾರರನ್ನು ಸಂಪಾದಿಸಿದರು. ವೈಶ್ಯವಾರ್ತಾ ಬಿತ್ತರಗೊಂಡಿದ್ದು ಅಂತಹ ಸಂಕಷ್ಟದ ಸಂದರ್ಭದಲ್ಲಿ. ಹೊಸ ಕಾರ್ಯವೊಂದರಲ್ಲಿ ತಮ್ಮನ್ನು ತೊಡಗಿಸಿಕೊಂಡು ವ್ಯಾಕುಲತೆಯನ್ನು ಮೆಟ್ಟಿನಿಂತು ಕ್ರಿಯಾಶೀಲತೆ ಮೆರೆದ ಪರಿ ಅನನ್ಯ. ಆಡಳಿತವರ್ಗ ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳಲು ಆಗದೆ ಸೋತು ಶರಣಾಗಿ ಅಮಾನತನ್ನು ಹಿಂದಕ್ಕೆ ಪಡೆಯಿತು.

ಅವರು ಕನ್ನಡವನ್ನು ನೆಟ್ಟವರಷ್ಟೇ ಅಲ್ಲ, ನೀರೆರೆದು ಪೋಷಿಸಿದವರು. ಭಂಜಕ ಪ್ರವೃತ್ತಿಯವರಲ್ಲ, ಕಟ್ಟುವ ಚಾತುರ್ಯವುಳ್ಳವರು. ಅರವತ್ತಾದರೂ ಹದಿನಾರರ ಹುರುಪು. ಹಣವನ್ನು ಕನಿಷ್ಠ ಅಗತ್ಯವೆಂದು ಭಾವಿಸಿದರೇ ಹೊರತು ಅದನ್ನು ಮೌಲ್ಯವೆಂದು ಪರಿಗಣಿಸದೆ

ಜಾಣರಾದರು. ಹಾಗಾಗಿ ಅವರ ಬದುಕು ಬವಣೆಯ ಮೂಟೆಯಲ್ಲ, ಉತ್ಸಾಹದ ಊಟೆ. ಅತಿ ಎನ್ನುವುದಕ್ಕೆ ಅವಕಾಶವೇ ಇಲ್ಲದಂತೆ ತಮಗೆ ತಾವೇ ಆರೋಗ್ಯಕರ ಮಿತಿ ಹೇರಿಕೊಂಡವರು. ಅದು ಆಹಾರ್ಯವಿರಲಿ, ಸಹಚರ್ಯವಿರಲಿ, ಭಕ್ತಿಯಿರಲಿ, ಅನುರಕ್ತಿಯಿರಲಿ; ಒಂದು ಗೆರೆ ಕೊರೆದು ಅದನ್ನು ದಾಟಿದವರಲ್ಲ. ಪಂಪಯ್ಯಶೆಟ್ಟರು ಸಂಯಮದ ಮೂಲಕ ಸಂಬಂಧದ ಹೊಸ ಸೇತು ಕಟ್ಟಿದ ಸಾತ್ತ್ವಿಕ ಸ್ವಭಾವದ ಸಂಭಾವಿತ.

ಕೆ. ರಾಜಕುಮಾರ್
101, ಎರಡನೆಯ ಮಹಡಿ,
ನಾಲ್ಕನೆಯ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು-560 018.
ಸನಿಹವಾಣಿ: 98454 13135. ಭಿತ್ತಿ(ವಾಟ್ಸ್ಆ್ಯಪ್): 90353 13490
ಮಿಂಚಂಚೆ : k.rajakumarkannada@gmail.com

ತತ್ವನಿಷ್ಠ ಸಂಘಟನಾ ಚತುರ : ಪಂಪಯ್ಯಶೆಟ್ಟಿ

✍ ಡಾ. ಅಮರೇಶ ಯತಗಲ್

ಹೈದರಾಬಾದ್ ಕರ್ನಾಟಕದ ಕೃಷ್ಣ ತುಂಗೆಯ ಮಧ್ಯದ ದೋಆಬ್ ಪ್ರದೇಶದ ಸಂಘಟನಾ ಚತುರ, ಸಾಂಸ್ಕೃತಿಕ ವೀರ, ಕನ್ನಡದ ಕಲಿ, ಕನ್ನಡ ಸೇವಾ ಧುರಂಧರ, ಸ್ನೇಹಮಯಿ, ವಿನಯಶೀಲ, ಸಹೃದಯಿ, ಸುಸಂಸ್ಕೃತ, ಸೃಜನಶೀಲ, ಅಜಾತಶತ್ರು, ಸಾಹಿತ್ಯಿಕ ಶಕ್ತಿ ಕನಸುಗಾರ ಎಂದೇ ಪ್ರಖ್ಯಾತರಾದ ಎಚ್. ಪಂಪಯ್ಯಶೆಟ್ಟಿ ಅವರು ಕನ್ನಡ ನಾಡು ಕಂಡ ಕನ್ನಡದ ಹರಿಕಾರ, ಅಪ್ಪಟ ಕನ್ನಡ ಪ್ರೇಮಿ. ಸಾಹಿತಿಯಾಗದಿದ್ದರೂ ಸಾಹಿತಿಗಳನ್ನು, ಬರಹಗಾರರನ್ನು, ವಿದ್ವಾಂಸರನ್ನು, ಸಂಶೋಧಕರನ್ನು, ಕಲಾವಿದರನ್ನು ಗೌರವಿಸಿ ಅವರಿಗೆ ಅನೇಕ ಸದವಕಾಶಗಳನ್ನು, ವೇದಿಕೆಗಳನ್ನು ಕಲ್ಪಿಸಿಕೊಟ್ಟ ಸಮರ್ಥ ಸಂಘಟಕ ಇವರು. ಕನ್ನಡದ ಉಳಿವಿಗಾಗಿ ಸದಾ ಕ್ರಿಯಾಶೀಲರಾಗಿ ಅವಿರತವಾಗಿ ಸೇವೆಯನ್ನು ಸಲ್ಲಿಸಿದವರು.

ಸಮಗ್ರ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಈ ನೆಲಕ್ಕೆ ಕೈಲಾದಷ್ಟು ಮಟ್ಟಿಗೆ ಸೇವೆ ಸಲ್ಲಿಸಿದವರು ; ಸಲ್ಲಿಸುತ್ತಿರುವವರು. ಮೂಲತಃ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಉಮಳಿ ಹೊಸೂರು ಗ್ರಾಮದವರಾದ ಪಂಪಯ್ಯಶೆಟ್ಟಿಯವರ ತಂದೆ ಹೊಸೂರು ರಾಮಸ್ವಾಮಿಯವರು. ಇವರೋರ್ವ ಖ್ಯಾತ ರಂಗಭೂಮಿ ಕಲಾವಿದರು. ರಂಗಭೂಮಿಯ ಸೇವೆಗಾಗಿ ಇಡೀ ಆಸ್ತಿಯನ್ನೆಲ್ಲಾ ಕಳೆದುಕೊಂಡರೂ ಇವರಿಗೆ ರಂಗಭೂಮಿಯ ಹುಚ್ಚು ಬಿಡಲಿಲ್ಲ. ಆದರೆ ನಿಸ್ವಾರ್ಥದಿಂದ ಕೂಡಿದ ಇವರ ಕಲಾ ಸೇವೆ ದಾಖಲಾರ್ಹವಾದುದು. ಇಂಥ ಕಲಾಭಿಮಾನದ ಮನೆತನದಲ್ಲಿ ಜನಿಸಿದ ಪಂಪಯ್ಯಶೆಟ್ಟರಲ್ಲಿ ಸಾಹಿತ್ಯಾಸಕ್ತಿಯ ಸಂಘಟನಾ ಗುಣವು ತನ್ನಿಂದ ತಾನೇ ಮೊಳಕೆಯೊಡೆದಿರಲಿಕ್ಕೆ ಸಾಕು.

ರಾಯಚೂರು ಜಿಲ್ಲೆಯಲ್ಲಿ ಡಾ. ಎಸ್. ರಾಮಕೃಷ್ಣ ವೈದ್ಯರು 1971ರಲ್ಲಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿ, ಕನ್ನಡ ಸಾಹಿತ್ಯದ ಚಟುವಟಿಕೆಗಳಿಗೆ ಬುನಾದಿ ಹಾಕಿದರು. ಆ ಸಂದರ್ಭದಲ್ಲಿ ವಿದ್ಯಾರ್ಥಿಯಾಗಿದ್ದ ಪಂಪಯ್ಯಶೆಟ್ಟಿ ಅವರನ್ನು ರಾಯಚೂರು ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸ್ವಯಂ ಸೇವಕ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದುದನ್ನು ಇಂದಿಗೂ ಇವರು ನೆನೆಯುತ್ತಾರೆ. ಆನಂತರದಲ್ಲಿ ಇವರ ವಿದ್ಯಾಗುರು ಶಾಂತರಸರು. ಅನಂತರ ಆರ್. ಆಂಜನೇಯಲು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ

ಅಧ್ಯಕ್ಷರಾಗಿದ್ದರು. ಆರ್. ಆಂಜನೇಯಲು ಅಧ್ಯಕ್ಷರಾಗಿದ್ದಾಗ ಗೌರವ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದವರು ಪಂಪಯ್ಯಶೆಟ್ಟಿ ಅವರು. ತದನಂತರದಲ್ಲಿ 1991ರಲ್ಲಿ ಅರ್ಧ ಅವಧಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅನುಭವ ಮುಂದೆ 1992ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಲು ಅನುವಾಯಿತು. ಪ್ರಾರಂಭದಲ್ಲಿ ಸುಮಾರು ಎರಡು ದಶಕಗಳ ಕಾಲ ತಮ್ಮ ಆಪ್ತರು ಹಾಗೂ ಸಮಾನಮನಸ್ಕ ಸಾಹಿತ್ಯಿಕ ಹಾಗೂ ಸಂಘಟನಾ ಮನಸುಳ್ಳ ಗೆಳೆಯರೊಂದಿಗೆ ಕೂಡಿ ಕನ್ನಡ ಬಳಗವನ್ನು ಸಂಘಟಿಸುವುದರ ಮೂಲಕ ರಾಯಚೂರಿನಲ್ಲಿ ಒಂಬತ್ತು ದಿನಗಳವರೆಗೆ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇಂಥ ಕಾರ್ಯಗಳಿಗೆಲ್ಲಾ ರಾಯಚೂರು ಜಿಲ್ಲೆಯ ಅಂದು ಕೊಪ್ಪಳವೂ ಸೇರಿದಂತೆ ಅನೇಕ ಹಿರಿಯ ಸಾಹಿತಿಗಳ, ವಿಚಾರವಾದಿಗಳ, ಗೆಳೆಯರ ಅಪಾರ ಬೆಂಬಲವೇ ಕಾರಣವೆಂದು ಇಂದಿಗೂ ಅನೇಕ ಹಿರಿಯರು ಹೇಳುತ್ತಿರುತ್ತಾರೆ. ಇಂದು ಇಡೀ ರಾಯಚೂರು ಭಾಗದಲ್ಲಿ ಅತ್ಯಂತ ಸುವ್ಯವಸ್ಥಿತವಾಗಿ ಸಾಹಿತ್ಯಿಕ ಚಟುವಟಿಕೆಗಳು ನಡೆಯುತ್ತಿರುವುದಕ್ಕೆ ನೀರು, ಆಹಾರ ನೀಡಿ ಬೆಳೆಸಿದವರು; ಪೋಷಿಸಿದವರು ಪಂಪಯ್ಯಶೆಟ್ಟಿ ಅವರು ಎಂದು ಹೇಳಲು ನನಗೆ ಹೆಮ್ಮೆಯೆನ್ನಿಸುತ್ತದೆ. ಯಾವುದೇ ಬೀಜವನ್ನು ನೆಟ್ಟ ತಕ್ಷಣವೇ ಅದರ ಪ್ರತಿಫಲವನ್ನು ಬಯಸಲಾಗದು. ಅದು ಮೊಳಕೆಯೊಡೆದು, ಸಸಿಯಾಗಿ, ಮರವಾಗಿ ಆನಂತರ ಹೆಮ್ಮರವಾಗಿ ಬೆಳೆದಾಗಲೇ ಅದು ಸಾರ್ಥಕ್ಯವನ್ನು ಪಡೆಯುತ್ತದೆ. ಹಾಗೆಯೇ ಶೆಟ್ಟರು ಹಾಕಿದ ಸಾಹಿತ್ಯದ ಗಟ್ಟಿ ಬೀಜ ಇಂದು ಹೆಮ್ಮರವಾಗಿ ರಾಯಚೂರು ಜಿಲ್ಲೆಯ ಅನೇಕರಿಗೆ ನೆರಳನ್ನು, ಹಣ್ಣನ್ನು ನೀಡುತ್ತಿದೆ.

ಇವರು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮೂರು ಅವಧಿಗಳ ಕಾಲ (1992-1995, 1995-1998, 1998-2001) ಅತ್ಯಂತ ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಿದವರು. ಇಂದಿಗೂ ಜನಮಾನಸದಲ್ಲಿ ಉಳಿದವರು. ನನ್ನಂಥ ಅನೇಕರನ್ನು ಬೆಳೆಸಿದವರು; ಆಶೀರ್ವದಿಸಿದವರು. ನನ್ನ ಮತ್ತು ಇವರ ಪರಿಚಯದ ಸಂದರ್ಭವನ್ನು ನಾನು ಇಲ್ಲಿಹೇಳಲೇಬೇಕು. ನಾನು ವಿದ್ಯಾರ್ಥಿದೆಸೆಯಿಂದಲೇ ಸಾಹಿತ್ಯ, ಸಂಗೀತ, ಭಾಷಣ, ಪ್ರಬಂಧ ಹಾಗೂ ಚರ್ಚೆ ಮುಂತಾದ ಸಹಪಠ್ಯ ಚಟುವಟಿಕೆಗಳೆಡೆಗೆ ವಿಶೇಷ ಒಲವನ್ನು ಹೊಂದಿದವನು. ಲಿಂಗಸೂಗೂರಿನ ಒಳಬಳ್ಳಾರಿ ಚನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿ ಬಿ.ಎ ಓದುತ್ತಿದ್ದಾಗ ಈ ಮಹಾವಿದ್ಯಾಲಯದ ಗುರುಗಳೆಲ್ಲಾ ನನ್ನನ್ನು ಪ್ರೋತ್ಸಾಹಿಸಿದವರು; ಬೆನ್ನು ತಟ್ಟಿದವರು. ಆ ಸಂದರ್ಭದಲ್ಲಿ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಪಂಪಯ್ಯ ಶೆಟ್ಟಿಯವರು. ಲಿಂಗಸೂಗೂರು ತಾಲ್ಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದವರು ನಮ್ಮ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ.ಜಿ.ವಿ. ಕೆಂಚನಗುಡ್ಡ ಗುರುಗಳವರು. ಕೋಶಾಧ್ಯಾಕ್ಷರಾಗಿದ್ದವರು ಇನ್ನೋರ್ವ ಗುರುಗಳಾದ ಪ್ರೊ. ಸಿ.

ಶರಣಪ್ಪ ಅವರು. ಗೌರವ ಕಾರ್ಯದರ್ಶಿಗಳಾಗಿದ್ದವರು ವೀರೇಶಸೌದ್ರಿ, ಮಸ್ಕಿ ಹಾಗೂ ಇಂದು ನಮ್ಮ ಮಧ್ಯೆ ಇಲ್ಲದ ಇನ್ನೋರ್ವ ನನ್ನ ಗುರು ದಿ. ಶ್ರೀ ದೇವಪುತ್ರ ಗೌಡೂರು ಅವರು. ಇವರೆಲ್ಲಾ ಪ್ರಾರಂಭದಲ್ಲಿ ಲಿಂಗಸೂಗೂರು ತಾಲ್ಲೂಕಿನಾದ್ಯಂತ ಕನ್ನಡ ಸಾಹಿತ್ಯದ ಪ್ರಸಾರ ಕಾರ್ಯವನ್ನು ಕೈಗೊಂಡವರು.

ಅಂದು ಆಗಾಗ ಸಾಂದರ್ಭಿಕವಾಗಿ ನಮ್ಮ ಕಾಲೇಜಿನಲ್ಲಿ ಅನೇಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ನಾವುಗಳೆಲ್ಲ ಸ್ವಯಂ ಸೇವಕರಾಗಿ ಈ ಕಾರ್ಯಕ್ರಮಗಳಲ್ಲಿ ದುಡಿಯುತ್ತಿದ್ದೆವು. ಆ ಕಾರ್ಯಕ್ರಮಗಳಿಗೆ ಪಂಪಯ್ಯ ಶೆಟ್ಟಿಯವರು ತಪ್ಪದೇ ಬರುತ್ತಿದ್ದರು. ಅಂದು ಇವರಿಂದ ಹೊರಹೊಮ್ಮುತ್ತಿದ್ದ ಕನ್ನಡಪರವಾದ ಮಾತುಗಳು ಇನ್ನೂ ನನ್ನ ಮಳದಾಳದಿಂದ ಮರೆಯಾಗಿಲ್ಲ. ಅಂದು ಇವರು ಮಾತನಾಡಿದ ಮಾತುಗಳು ಇಂತಿವೆ: ''ನಾಡಿನ ಪ್ರತಿಷ್ಠಿತ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನೆಲ, ಜಲ ಮುಂತಾದವುಗಳೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಅಲ್ಲದೆ ಅವುಗಳ ಸಂರಕ್ಷಣೆಯಲ್ಲಿ ತೊಡಗಿಕೊಂಡಿರುವಂತಹದ್ದು. ಇದರ ಮುಖೇನ ಈ ನೆಲದ ಶೋಷಿತರ, ರೈತಾಪಿಗಳ, ಕಾರ್ಮಿಕರ, ಶ್ರಮಜೀವಿಗಳ ಇಂಥ ಅನೇಕರ ಆಗು ಹೋಗುಗಳಿಗೆ ಸ್ಪಂದಿಸುವ ಸಾಹಿತ್ಯ ರಚನೆಯಾಗಬೇಕಾದ ತುರ್ತು ಅಗತ್ಯತೆ ಇದೆ. ಅಲ್ಲದೆ ಅಂಥ ಪರಿಸರ ನಿರ್ಮಾಣವಾಗಬೇಕು'' ಎನ್ನುತ್ತಿದ್ದರು.

ಹೀಗೆ ನಮ್ಮನ್ನೆಲ್ಲ ಅಭಿಪ್ರೇರಿಸುವ ಇವರ ನುಡಿಗಳು ಅಂದು ನನ್ನಂಥ ಅನೇಕ ಯುವಕರು ಸಾಹಿತ್ಯದೆಡೆಗೆ ಆಸಕ್ತಿ ಮೂಡಿಸಿಕೊಳ್ಳಲು ಹಾಗೂ ಸಾಹಿತ್ಯ ಕೃಷಿಮಾಡಲು ಕಾರಣವಾಯಿತು. ಅಂದು ಇವರು ಲಿಂಗಸೂಗೂರು ತಾಲ್ಲೂಕಿಗೆ ಯಾವುದೇ ಕಾರ್ಯಕ್ರಮಕ್ಕೆ ಬರಲಿ, ನಾನು ನನ್ನ ಸ್ನೇಹಿತರೊಂದಿಗೆ ಅಲ್ಲಿ ಹಾಜರಿರುತ್ತಿದ್ದೆನು. ಇವರ ಮಾತುಗಳನ್ನು ಆಲಿಸುತ್ತಿದ್ದೆನು. ಇವರಿಂದ ಪ್ರೇರಣೆಗೊಳ್ಳುತ್ತಿದ್ದೆನು. ಈಗಲೂ ಇವರ ಮಾತುಗಳನ್ನು ಕೇಳಲು ಉತ್ಸುಕನಾದವನು. ಕಾರಣ ಅವು ಇವರ ಅನುಭವದ ಕುಲುಮೆಯಿಂದ ಹೊರಹೊಮ್ಮುವ ನುಡಿಗಳಾಗಿರುತ್ತವೆ. ಆಡಂಬರದ, ಇಲ್ಲವೆ ಯಾರನ್ನಾದರೂ ಒಲಿಸಿಕೊಳ್ಳಬೇಕೆಂಬ, ಅವರಿಂದ ಶಹಬ್ಬಾಸ್‌ಗಿರಿ ಪಡೆದುಕೊಳ್ಳಬೇಕೆಂಬ ಜಾಯಮಾನದವರಲ್ಲ ಇವರು. ನಾನು ನನ್ನ ಜೀವನದಲ್ಲಿ ಮೆಚ್ಚಿಕೊಂಡ, ಅನುಕರಿಸಿದ, ಮಾರ್ಗದರ್ಶಿಗಳೆಂದು ಒಪ್ಪಿಕೊಂಡ ಕೆಲವೇ ಕೆಲವು ವ್ಯಕ್ತಿಗಳಲ್ಲಿ ಇವರೂ ಒಬ್ಬರು ಎಂದು ಹೇಳಲು ನನಗೆ ಎಲ್ಲಿಲ್ಲದ ಹೆಮ್ಮೆಯೆನ್ನಿಸುತ್ತದೆ.

ರಾಯಚೂರಿನ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಕವಿಗೋಷ್ಠಿ ದಸರಾ ಕವಿಗೋಷ್ಠಿ ಕನ್ನಡ ರಾಜ್ಯೋತ್ಸವ ಕವಿಗೋಷ್ಠಿ ಮುಂತಾದವುಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು. ಆಗ ಪಂಪಯ್ಯಶೆಟ್ಟಿ ಅವರು ತಮ್ಮ ಸ್ವಹಸ್ತಾಕ್ಷರದಿಂದಲೇ ನನಗೆ ಪತ್ರವನ್ನು ಬರೆಯುತ್ತಿದ್ದರು. ''ನಿಮ್ಮನ್ನು ಕವಿಗೋಷ್ಠಿಗೆ ಆಯ್ಕೆ ಮಾಡಲಾಗಿದೆ. ಈ ಕವಿಗೋಷ್ಠಿಯಲ್ಲಿ ಭಾಗವಹಿಸಿ ಕವನ ವಾಚಿಸಬೇಕು''

ಎಂದು. ಆಗ ಪತ್ರ ಬಂದಾಗ ನನಗಾಗುತ್ತಿದ್ದ ಆನಂದ ಅಷ್ಟಿಷ್ಟಲ್ಲ. ಅನೇಕರಿಗೆ ತೋರಿಸಿ ಖುಷಿಪಡುತ್ತಿದ್ದೆ. ಆ ಕವಿಗೋಷ್ಠಿಯಲ್ಲಿ ಭಾಗವಹಿಸಿ ಕವನ ವಾಚಿಸಿದ ಮೇಲೆ ಇವರು ನನ್ನ ಕುರಿತು ಅನೇಕ ಸಲ ಪ್ರೋತ್ಸಾಹದ ಮಾತುಗಳನ್ನಾಡಿದ್ದುಂಟು. ಆ ಪ್ರೋತ್ಸಾಹದ ನುಡಿಗಳೇ ಮುಂದೆ ನನ್ನ ಜೀವನಕ್ಕೆ ಮಾರ್ಗದರ್ಶಿಯಾದವು; ಭರವಸೆಯನ್ನು ಮೂಡಿಸಿದವು.

ಇವರು ತಮ್ಮ ಅವಧಿಯಲ್ಲಿ ರಾಯಚೂರು ಜಿಲ್ಲೆಯಾದ್ಯಾಂತ ಕನ್ನಡ ಕಂಪನ್ನು ಹರಡಿದವರು. ಹಳ್ಳಿ ಹಳ್ಳಿಗೂ ಕನ್ನಡ ಸಾಹಿತ್ಯ ಪರಿಷತ್ತನ್ನು ಕೊಂಡೊಯ್ದವರು ಎಂಬ ಕೀರ್ತಿಗೆ ಭಾಜನರಾದವರು. ಗ್ರಾಮೀಣ ಭಾಗದವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರನ್ನಾಗಿ ಮಾಡಿದವರು. ದತ್ತಿದಾನಿಗಳಿಂದ ದತ್ತಿಯನ್ನು ಕೂಡಿಸಿ ಕನ್ನಡ ಸಾಹಿತ್ಯ ಪರಿಷತ್ತನ್ನು ಆರ್ಥಿಕವಾಗಿ ಬಲಪಡಿಸಿದವರು. ಇವರ ಅವಧಿಯಲ್ಲಿ ಸುಮಾರು ಹತ್ತಕ್ಕಿಂತ ಹೆಚ್ಚು ದತ್ತಿಗಳನ್ನು ಸಂಗ್ರಹಿಸಿ, ದತ್ತಿದಾನಿಗಳು ಬಯಸಿದ ಸ್ಥಳಗಳಲ್ಲಿ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಿದವರು. ಶಾಲೆಗೊಂದು ಕನ್ನಡ ಕಾರ್ಯಕ್ರಮ ಮತ್ತು ನವೆಂಬರ್ ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಳ್ಳುತ್ತಿದ್ದ ಕಾರ್ಯಕ್ರಮಗಳನ್ನು ಗ್ರಾಮೀಣ ಭಾಗದಲ್ಲಿ ಆಯೋಜಿಸುತ್ತಿದ್ದರು. ಅನೇಕ ಪ್ರತಿಭಾವಂತ ಬರಹಗಾರರನ್ನೂ ಪ್ರೋತ್ಸಾಹಿಸುತ್ತ ಅವರಿಗಾಗಿ ಕಥಾಕಾವ್ಯ ಕಮ್ಮಟಗಳನ್ನು ಏರ್ಪಡಿಸಿದವರು. ಅವುಗಳಲ್ಲೆಲ್ಲ ನನ್ನ ಸ್ನೇಹಿತರು ಮತ್ತು ನಾನು ಭಾಗವಹಿಸುತ್ತಿದ್ದೆವು. ಹೀಗೆ ಬಿಡುವಿಲ್ಲದೆ ಜಿಲ್ಲೆಯಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಸಾಹಿತ್ಯದ ಎಲ್ಲಾ ಪ್ರಕಾರಗಳ ಕುರಿತು ಚಿಂತನಮಂಥನ ನಡೆಸಿದವರು. ನಾನು ಬಹುತೇಕ ಇವರು ಹಮ್ಮಿಕೊಂಡ ಕೆಲವು ಕಾರ್ಯಕ್ರಮಗಳನ್ನು ಕಣ್ಣಾರೆ ನೋಡಿದವನು.

ಅವಿಭಾಜಿತ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕೊಪ್ಪಳದಲ್ಲಿ ಅರವತ್ತೆರಡನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅದ್ದೂರಿಯಿಂದ ನಡೆಸಿದವರು. ರಾಯಚೂರಿನಲ್ಲಿ ಎರಡನೆಯ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಸಿಂಧನೂರಿನಲ್ಲಿ ರಾಯಚೂರು ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರಿನಲ್ಲಿ ರಾಯಚೂರು ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ (ಆಗಸ್ಟ್ 30 ಮತ್ತು 31, 1997), ಲಿಂಗಸೂಗೂರಿನಲ್ಲಿ ರಾಯಚೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ (ಫೆಬ್ರವರಿ 7 ಮತ್ತು 8, 1999), ರಾಯಚೂರಿನಲ್ಲಿ ಜನವರಿ 1995ರಲ್ಲಿ ಮೊಟ್ಟಮೊದಲ ಬಾರಿಗೆ ರಾಯಚೂರು ಜಿಲ್ಲಾ ಪ್ರಪ್ರಥಮ ಮಹಿಳಾ ಸಾಹಿತ್ಯ ಸಮ್ಮೇಳನ, 1998ರಲ್ಲಿ ರಾಯಚೂರು ಜಿಲ್ಲಾ ಎರಡನೆಯ ಮಹಿಳಾ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿದವರು. ಹೀಗೆ ಇವರ ಅವಧಿಯಲ್ಲಿ ಐದು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿರುವುದು ಒಂದು ದಾಖಲೆ. ಸಂಪರ್ಕ ಮಾಧ್ಯಮಗಳ ಕೊರತೆಯ ಆ ಸಂದರ್ಭದಲ್ಲಿ ಇವರು ಮಾಡಿದ ಕಾರ್ಯ ಸಾಹಸ. ಅಲ್ಲದೇ ಜಿಲ್ಲೆಯ ಎಲ್ಲಾ ತಾಲ್ಲುಕುಗಳಲ್ಲಿ ತಾಲ್ಲೂಕು ಸಾಹಿತ್ಯ

ಸಮ್ಮೇಳನಗಳು ನಡೆಯುವಂತೆ ನೋಡಿಕೊಂಡಿರುವಲ್ಲಿ ಇವರ ಅಪಾರವಾದ ಶ್ರಮವಿದೆ. ಹೀಗಾಗಿ ಆ ಸಂದರ್ಭದಲ್ಲಿ ''ರಾಯಚೂರು ಕನ್ನಡ ಸಾಹಿತ್ಯ ಪರಿಷತ್ತೆಂದರೆ ಪಂಪಯ್ಯ ಶೆಟ್ಟಿ ಪಂಪಯ್ಯ ಶೆಟ್ಟಿಯವರೆಂದರೆ ಕನ್ನಡ ಸಾಹಿತ್ಯ ಪರಿಷತ್ತು'' ಎನ್ನುವಷ್ಟರಮಟ್ಟಿಗೆ ಜನಪ್ರಿಯವಾದ ಮಾತೊಂದಿತ್ತು.

ಸಮಾಜವಾದಿ ಸಿದ್ಧಾಂತದ ಪಂಪಯ್ಯಶೆಟ್ಟಿಯವರು ಸಾದಾ ಪ್ಯಾಂಟು, ಜುಬ್ಬಾ, ಹೆಗಲಿಗೊಂದು ನೇತಾಡುವ ಖಾದಿ ಚೀಲವನ್ನು ಹಾಕಿಕೊಂಡು ಹಳ್ಳಿ, ಹೋಬಳಿ, ನಗರ, ಪಟ್ಟಣಗಳನ್ನು ಹಾಗೂ ಸಂಘಸಂಸ್ಥೆಗಳನ್ನು ಸುತ್ತಿ ಅವರೊಂದಿಗೆ ಬೆರೆತು ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದರು. ಇವರ ಸರಳತೆ ಮತ್ತು ನಿಸ್ವಾರ್ಥ ಸೇವೆಯನ್ನು ಕಂಡು ಕನ್ನಡದ ಮಹಾಜನತೆ ಇವರಿಗೆ ಅಪಾರ ಗೌರವವನ್ನು ನೀಡುತ್ತಿದ್ದರು. ಇಂದಿಗೂ ನೀಡುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಸಾಮಾಜಿಕ, ಶೈಕ್ಷಣಿಕ, ಆಡಳಿತ, ಕಲೆ, ಸಾಹಿತ್ಯ, ವಿಜ್ಞಾನ, ಕೃಷಿ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ; ಎಲೆಮರೆಯ ಕಾಯಿಯಂತೆ ಬದುಕಿದ ಪ್ರತಿಭೆಗಳನ್ನು ಗುರುತಿಸು ತ್ತಿದ್ದರು; ಗೌರವಿಸುತ್ತಿದ್ದರು. ಹಾಗೂ ಕನ್ನಡ ಭಾಷೆಯಲ್ಲಿ ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪ್ರತಿವರ್ಷ ಸನ್ಮಾನಿಸುತ್ತಿದ್ದರು. ಇದು ಶೆಟ್ಟರು ಈ ನೆಲಕ್ಕೆ ಸೇವೆ ಸಲ್ಲಿಸಿದವರನ್ನು ಗೌರವಿಸುವ ಗುಣವುಳ್ಳವರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿದೆ. ಇವರು ಹಮ್ಮಿಕೊಂಡ ಇಂಥ ಕಾರ್ಯಕ್ರಮಗಳಿಗೆ ಲೆಕ್ಕವಿಲ್ಲ.

ಸಣ್ಣವರಿಂದ ಹಿಡಿದು ದೊಡ್ಡವರವರೆಗೂ ಎಲ್ಲರನ್ನು ಸಮಾನದೃಷ್ಟಿಕೋನದಿಂದ ಕಾಣುವವರು. ಸಣ್ಣವರೊಂದಿಗೆ ಸಣ್ಣವರಾಗಿ, ದೊಡ್ಡವರೊಂದಿಗೆ ದೊಡ್ಡವರಾಗಿ ಬೆರೆತು ಎಲ್ಲರೊಳಗೊಂದಾಗುವ ಶುದ್ಧ ಅಂತಃಕರುಣೆ ಇವರು. ಜನತೆಯೊಂದಿಗೆ ಬೆರೆಯುವ, ಮಾತನಾಡುವ ಇವರ ಮಾತುಗಳು ಅವರನ್ನೆಲ್ಲಾ ಆತ್ಮೀಯರನ್ನಾಗಿಸುತ್ತಿದ್ದವು. ಹೀಗಾಗಿ ಜಿಲ್ಲೆಯಾದ್ಯಂತ ಎಲ್ಲರಿಗೂ ಇವರು ಚಿರಪರಿಚಿತರಾದರು. ಇವರದು ಒಂದೇ ಮಾತು. ಮುಖನೋಡಿ ಮೊಳಹಾಕುವ ಜಾಯಮಾನದವರಲ್ಲ. ಅತ್ಯಂತ ನೇರ ನಡೆನುಡಿಯವರು, ಅಷ್ಟೇ ಸರಳತೆಯ ಸಾಕಾರಮೂರ್ತಿ. ಹೀಗಾಗಿ ಇವರ ವರ್ತನೆ ಪ್ರತಿಯೊಬ್ಬರಿಗೂ ಹಿಡಿಸುತ್ತಿತ್ತು.

ಅಂದು ಕರ್ನಾಟಕ ಸರಕಾರದಿಂದ ಹಾಗೂ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಾಹಿತ್ಯದ ಕಾರ್ಯಕ್ರಮಗಳಿಗೆ ಯಾವುದೇ ಆರ್ಥಿಕ ಸಹಾಯ ಇರಲಿಲ್ಲ. ಅಂಥ ಸಂದರ್ಭದಲ್ಲಿ ಜಿಲ್ಲೆಯ ರಾಜಕಾರಣಿಗಳೊಂದಿಗೆ, ಪ್ರಜ್ಞಾವಂತರೊಂದಿಗೆ, ಆರ್ಥಿಕ ಸ್ಥಿತಿವಂತರೊಂದಿಗೆ ಮತ್ತು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಹಾಗೂ ಆಯಾ ತಾಲ್ಲೂಕಾ ಆಡಳಿತದೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿ, ಅವರ ಸಹಾಯ ಹಾಗೂ ನಿರಂತರವಾದ ಪ್ರೋತ್ಸಾಹದಿಂದ ಕನ್ನಡಪರ ಕಾರ್ಯಕ್ರಮಗಳನ್ನು, ಸಾಹಿತ್ಯ ಸಮ್ಮೇಳನಗಳನ್ನು ಅತ್ಯುತ್ತಮ ರೀತಿಯಲ್ಲಿ ಆಯೋಜಿಸುತ್ತಿದ್ದರು. ಇವರು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ಎಂದೂ ಅಶಿಸ್ತು ಕಂಡು

ಬರಲಿಲ್ಲ. ಎಲ್ಲವೂ ಒಂದಕ್ಕಿಂತ ಒಂದು ಮಿಗಿಲು ಎಂಬಂತೆ ಅದ್ದೂರಿಯಿಂದ ನಡೆದವು. ಏಕೆಂದರೆ ಇವರು ಆ ಕಾರ್ಯಕ್ರಮಗಳಿಗಾಗಿ ಮಾಡುತ್ತಿದ್ದ ಪೂರ್ವತಯಾರಿ, ಯೋಜನೆ ಮೆಚ್ಚುವಂಥಹದ್ದು. ಅದು ವಾರಗಟ್ಟಲೇ ನಡೆಯುತ್ತಿತ್ತು. ಇದೇ ಇವರ ಕಾರ್ಯಕ್ರಮಗಳ ಯಶಸ್ಸಿನ ಗುಟ್ಟು.

ರಾಯಚೂರು ಜಿಲ್ಲೆಯಾದ್ಯಂತ ಯಾವುದೇ ಸ್ಥಳದಲ್ಲಿ ಕಾರ್ಯಕ್ರಮಗಳನ್ನು ಕವಿಗೋಷ್ಠಿಗಳನ್ನು, ಸಮ್ಮೇಳನಗಳನ್ನು ಹಮ್ಮಿಕೊಳ್ಳಲಿ ಅಲ್ಲಿಗೆ ಇವರು ಎರಡುಮೂರು ಸಲ ಹೋಗಿ, ಅಲ್ಲಿಯ ಸ್ಥಳ, ಜನರ ಸಹಕಾರ ಮುಂತಾದವುಗಳನ್ನು ಪರೀಶೀಲಿಸುತ್ತಿದ್ದರು. ಆ ಊರಿನ, ಸ್ಥಳದಲ್ಲಿಯ ಪ್ರಮುಖರೊಂದಿಗೆ ಚರ್ಚೆಮಾಡಿ ಅವರ ಇಚ್ಛೆಯಂತೆ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ತಮಗೆ ಬೆನ್ನುತಟ್ಟಿ ಪ್ರೋತ್ಸಾಹಿಸಿದವರನ್ನು ಇವರು ಇಂದಿಗೂ ನೆನೆಯುತ್ತಾರೆ. ಹೀಗಾಗಿ ಇವರ ಪ್ರತಿಯೊಂದು ಕಾರ್ಯಕ್ರಮವೂ ಅತ್ಯಂತ ವ್ಯವಸ್ಥಿತವಾಗಿ ಸಂಘಟಿಸಲ್ಪಡುತ್ತಿತ್ತು. ಒಬ್ಬ ವೈರಿಯೂ ನಾಚಿಕೊಳ್ಳುವ, ತಲೆಬಾಗುವ, ಪ್ರೇರಣೆಗೊಳ್ಳುವ ರೀತಿಯಲ್ಲಿ ಅತ್ಯಂತ ಶಿಸ್ತಿನಿಂದ, ಅಚ್ಚುಕಟ್ಟುತನದಿಂದ ಯಶಸ್ವಿಗೊಳಿಸು ತ್ತಿದ್ದರು. ಇದು ಇವರ ಸಂಘಟನಾ ಶಕ್ತಿಗೆ ಸಾಕ್ಷಿಯಾಗಿದೆ. ಬಹುಮುಖಿ ವ್ಯಕ್ತಿತ್ವದ ದ್ಯೋತಕವಾಗಿದೆ.

ರಾಯಚೂರಿನ ಅಕ್ಕಪಕ್ಕದ ಹಳ್ಳಿಗಳನ್ನು ಅದರಲ್ಲೂ ಆಂಧ್ರದ ಗಡಿಭಾಗದಲ್ಲಿ ಕನ್ನಡದ ಸ್ಥಿತಿಯು ಚಿಂತಾಜನಕ. ಇಂದಿಗೂ ಈ ಸಮಸ್ಯೆ ಇದ್ದೇ ಇದೆ. ಹೀಗಾಗಿ ಆ ಭಾಗದಲ್ಲಿ ಕನ್ನಡವನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಅನೇಕ ಗಡಿನಾಡು ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಗಡಿನಾಡು ಕನ್ನಡಿಗರ ಪ್ರತಿಯೊಂದು ಸಮಸ್ಯೆಗೂ ಸ್ಪಂದಿಸುತ್ತಿದ್ದರು. ಗಡಿನಾಡ ಕನ್ನಡ ಕಾರ್ಯಕ್ರಮಗಳ ಮುಖೇನ ಅವರಲ್ಲಿ ಜಾಗೃತಿಯನ್ನು ಮೂಡಿಸುತ್ತಿದ್ದರು. ಅಲ್ಲದೇ ಅವರು ಎದುರಿಸುತ್ತಿದ್ದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಅವರಲ್ಲಿ ತಿಳುವಳಿಕೆಯನ್ನು ಮೂಡಿಸಲು ಪ್ರಯತ್ನಿಸುತ್ತಿದ್ದರು. ಇದಕ್ಕೆ ಸಂಬಂಧಿಸಿ ದಂತೆ 1995ರಲ್ಲಿ ರಾಯಚೂರಿನ ಗಡಿ ಭಾಗವಾದ ಕೃಷ್ಣಾದಲ್ಲಿ ಗಡಿನಾಡ ಸಮ್ಮೇಳನ, ಜಾನಪದ ಸಮ್ಮೇಳನ ಹಾಗೂ 1997ರಲ್ಲಿ ಮಂತ್ರಾಲಯ ಶ್ರೀಕ್ಷೇತ್ರದಲ್ಲಿ ಎರಡನೆಯ ಗಡಿನಾಡು ಸಮ್ಮೇಳನಗಳನ್ನು ಹಮ್ಮಿಕೊಂಡಿದ್ದರು.

ಇವರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಅನೇಕ ಮೌಲಿಕ ಕೃತಿಗಳು ಆಕರ ಗ್ರಂಥಗಳಾಗಿವೆ. ಇವರ ಗೌರವ ಸಂಪಾದಕತ್ವದಲ್ಲಿ ಲೋಕಾರ್ಪಣೆಗೊಂಡ 'ಬಿಸಿಲ ಹನಿಗಳು' ಹೈದರಾಬಾದ್ ಕರ್ನಾಟಕದ ಪ್ರಾತಿನಿಧಿಕ ಬೃಹತ್ ಕಥಾ ಸಂಕಲನವಾಗಿದೆ. 'ಒರೆಗಲ್ಲು' ಜಿಲ್ಲಾ ಯುವ ಬರಹಗಾರರ ಪ್ರಾತಿನಿಧಿಕ ಕಥಾಸಂಕಲನ. 'ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು', 'ನವರಂಗ', 'ಕಥಾಕವನ' ಹಾಗೂ ಜಿಲ್ಲಾ ಸಾಹಿತ್ಯ ಸಮ್ಮೇಳನ, ತಾಲ್ಲೂಕಾ ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಹೊರತಂದ ಸ್ಮರಣ ಸಂಚಿಕೆಗಳು, ಬೆಳ್ಳಿಹಬ್ಬದ

ಸ್ಮರಣೆಗಾಗಿ ಜಿಲ್ಲೆಯ ಹಿರಿಯ ಸಾಹಿತಿಗಳ ಭಾವಚಿತ್ರಗಳು ಹಾಗೂ ಇಟಗಿ ದೇವಾಲಯವಿರುವ ಕ್ಯಾಲೆಂಡರ್ ಮುಂತಾದ ಪ್ರಕಟಣೆಗಳು ಇವರ ಸಾಹಿತ್ಯಿಕ ಪ್ರಚಾರದ ಹೆಜ್ಜೆ ಗುರುತುಗಳಾಗಿವೆ. ಸಾಹಿತ್ಯ ಯಾತ್ರೆಯಂತಹ ಕಾರ್ಯಕ್ರಮಗಳಲ್ಲಿ ಪುಸ್ತಕಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದರ ಮೂಲಕ ಜನಸಾಮಾನ್ಯರಿಗೆ ಸಾಹಿತ್ಯದ ರಸದೌತಣವನ್ನು ಉಣಬಡಿಸಿದವರು. ರಾಯಚೂರು ಜಿಲ್ಲೆಗೆ ಹೊಸ ಆಯಾಮವನ್ನು ಕಲ್ಪಿಸಿಕೊಟ್ಟವರು.

ಇವರು ಮೂಲತಃ ಮಾನ್ವಿ ತಾಲ್ಲೂಕಿನವರಾಗಿರುವುದರಿಂದ ಜೂನ್, 8, 2013ರಂದು ಮಾನ್ವಿಯಲ್ಲಿ ನಡೆದ ಮಾನ್ವಿ ತಾಲ್ಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಇಡೀ ಜಿಲ್ಲೆಯ ಅಭಿಮಾನಿಗಳು ಇವರನ್ನು ಆಯ್ಕೆಮಾಡಿದ್ದರು. ಆಗ ಇಡೀ ಮಾನ್ವಿಯ ಜನತೆಗೆ ಖುಷಿಯೋ ಖುಷಿ. ಈ ಗೌರವವು ಇವರು ಕನ್ನಡಮ್ಮನ ಸೇವೆಗಾಗಿ ದುಡಿದ ಪ್ರತಿಫಲ. ಆ ಸಂದರ್ಭದಲ್ಲಿ ನನಗೂ ಸಮ್ಮೇಳನದಲ್ಲಿ 'ಮಾನ್ವಿ ತಾಲ್ಲೂಕಿನ ಇತಿಹಾಸ' ಕುರಿತಾಗಿ ಪ್ರಬಂಧವನ್ನು ಮಂಡಿಸಲು ಅವಕಾಶ ನೀಡಿದ್ದರು. ಅಂದು ಇವರು ಸರ್ವಾಧ್ಯಕ್ಷರ ಸ್ಥಾನದಿಂದ ಅನಂತಮುಖಿಯಾಗಿ ಮಾತನಾಡಿದ ಮಾತುಗಳು ಇಂದಿಗೂ ನಾನು ಮರೆತಿಲ್ಲ. ಅವು ಇವರ ಕನ್ನಡದ ಕಳಕಳಿಯನ್ನು ಪ್ರಸ್ತುತಪಡಿಸಿದವು.

ಕನ್ನಡ ಮಾಧ್ಯಮ ಶಾಲೆಗಳ ಕುರಿತಾಗಿ ಮಾತನಾಡುವಾಗ ''ಶಿಕ್ಷಣದ ವ್ಯಾಪಾರೀಕರಣವನ್ನು ಧಿಕ್ಕರಿಸೋಣ, ಕನ್ನಡ ಶಾಲೆಯಲ್ಲಿ ಕಲಿತವರೂ ಜಾಣರೆ. ಅವರನ್ನು ಹಾಗೂ ಅಂಥ ಶಿಕ್ಷಣ ಸಂಸ್ಥೆಗಳನ್ನು ಪ್ರೋತ್ಸಾಹಿಸಲು ಮುಂದಾಗೋಣ'' ಎಂದು ಕರೆ ನೀಡಿದರು. ಅಲ್ಲದೇ ಮುಂದುವರೆದು ''ಹೈದರಾಬಾದ್ ಕರ್ನಾಟಕ ಭಾಗಕ್ಕೆ ಕಲಂ 371ರ ಲಾಭ ದೊರಕಲಿ. ಈ ಭಾಗ ರಾಜಕೀಯವಾಗಿ ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಲಿ. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸರ್ಕಾರ ಗಮನಹರಿಸಲಿ'' ಎಂದು ಮುಂತಾಗಿ ಹೇಳಿದ ಕಿವಿ ಮಾತುಗಳು, ಸರ್ಕಾರಕ್ಕೆ ಸಲಹೆಗಳಂತಿದ್ದವು. ಆಂಧ್ರಪ್ರದೇಶದಲ್ಲಿರುವ ಕನ್ನಡ ಶಾಲೆಗಳ ಪರಿಸ್ಥಿತಿಯ ಕುರಿತಾದ ಇವರ ಮಾತುಗಳು ಮನ ಕಲಕುವಂತಿದ್ದವು. ''ಮಠ ಮಂದಿರಗಳಿಗೆ ಸಾವಿರಾರು ಕೋಟಿ ಖರ್ಚು ಮಾಡುವ ಸರ್ಕಾರ ಆಂಧ್ರಪ್ರದೇಶದಲ್ಲಿರುವ ಕನ್ನಡದ ಮಕ್ಕಳ ಶಿಕ್ಷಣಕ್ಕೆ ಉಚಿತ ಪಠ್ಯಪುಸ್ತಕ ವಿತರಿಸುವಂತಾಗಲಿ'' ಎಂಬ ಇವರ ನೇರ ನುಡಿ, ಅಲ್ಲದೇ ತುಂಗಭದ್ರೆಯ ಜಲಾಶಯದ ನಿರ್ಲಕ್ಷ್ಯ, ಪುಸ್ತಕ ಪ್ರಕಾಶನದಲ್ಲಿನ ಲೋಪ ಮತ್ತು ಮಾರಾಟದ ವ್ಯವಸ್ಥೆ ಮುಂತಾದ ವಿಷಯಗಳ ಕುರಿತಾಗಿ ಇವರಾಡಿದ ಮಾತುಗಳು ನೆರೆದಿದ್ದ ಮಹಾಜನತೆಯ ಗಮನ ಸೆಳೆದವು. ಈ ಭಾಷಣ ಇಡೀ ಸಮ್ಮೇಳನದಲ್ಲಿ ಚರ್ಚಿಸಲ್ಪಡಬೇಕಾದ ಹಾಗೂ ಒಂದು ಸಮ್ಮೇಳನದಲ್ಲಿ ಚರ್ಚಿಸಬೇಕಾದ; ಮಂಡಿತವಾಗಬೇಕಾದ ಅಂಶಗಳಿಗೆ ನಾಂದಿ ಹಾಗೂ ದಿಕ್ಸೂಚಿಯಂತಿತ್ತು. ಇಂತಹ ಪ್ರೇರಣಾತ್ಮಕ ವಿಚಾರ ಪಂಪಯ್ಯಶೆಟ್ಟಿಯವರಿಂದ ಹೊರಬರಲು ಮುಖ್ಯವಾದ ಕಾರಣ ಅವರ ಕನ್ನಡ ಸಾಹಿತ್ಯ ಸಂಘಟನೆಯ ಅನುಭವ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಅಷ್ಟೇ ಅಲ್ಲ ಸೃಜನಶೀಲ ಮನಸ್ಸಿನ ಇವರ ಸೇವೆ 'ಆರ್ಯವೈಶ್ಯ' ಜನಾಂಗಕ್ಕೂ ಸಂದಿದೆ. ಆ ಮೂಲಕ ಹುಟ್ಟಿ ಬೆಳೆದ ತಮ್ಮ ಸಮುದಾಯದ ಋಣವನ್ನು ತೀರಿಸಲು ಪ್ರಯತ್ನಿಸಿದ್ದಾರೆ. ತಮ್ಮ ಜನಾಂಗದ ಒಗ್ಗಟ್ಟಾಗಿ; ಅಭಿವೃದ್ಧಿಗಾಗಿಯೂ ಶ್ರಮಿಸಿದ್ದಾರೆ. ನಾನಂತೂ ಇವರ 'ವೈಶ್ಯವಾರ್ತಾ' ಪತ್ರಿಕೆಯನ್ನು ನೋಡಿ ಖುಷಿಪಟ್ಟವನು. ''ವೈಶ್ಯ ಜನಾಂಗ ತನ್ನದೇ ಚರಿತ್ರೆ, ಸಾಹಿತ್ಯ, ಸಂಸ್ಕೃತಿಯನ್ನು ಹೊಂದಿದೆ ಎಂಬುದನ್ನು ಅರುಹುವ ಹಾಗೂ ಆ ಕುರಿತಾದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡ ಈ ಪತ್ರಿಕೆಯು ಉಳಿದೆಲ್ಲಾ ಸಮುದಾಯಗಳ ಪತ್ರಿಕೆಗಳಿಗೆ ಮಾದರಿ'' ಎಂದು, ನಾನು ಅಂದು ಇವರೊಂದಿಗೆ ಮಾತನಾಡಿದ್ದೆ. ಆಗ ಇವರು ''ಇದೇನೂ ದೊಡ್ಡದಲ್ಲ. ನಮ್ಮ ಸಮುದಾಯಕ್ಕೊಂದು ಅಳಿಲುಸೇವೆ ಅಷ್ಟೇ. ಜೀವನದಲ್ಲಿ ಸಮಾಜದ ಋಣವನ್ನು ಎಷ್ಟು ಜನ್ಮವೆತ್ತಿದರೂ ತೀರಿಸಲಿಕ್ಕಾಗದು'' ಎಂದಿದ್ದರು. ಹೀಗೆ ಇಂಥ ಅನೇಕ ಸೃಜನಾತ್ಮಕವಾದ ಮತ್ತು ದಾಖಲಾತ್ಮಕವಾದ ಕಾರ್ಯಗಳನ್ನು ಇವರು ಜೀವನದುದ್ದಕ್ಕೂ ಮಾಡಿಕೊಂಡೇ ಬಂದಿದ್ದಾರೆ. ಇದು ಇವರ ಕಾರ್ಯಕ್ಷಮತೆಗೆ ಸಾಕ್ಷಿಯಾಗಿದೆ. ಇವರ ಸಂಘಟನಾ ಶಕ್ತಿಯನ್ನು ಮೆಚ್ಚಿ ವಿಶ್ವೇಶ್ವರಯ್ಯ ಪ್ರಶಸ್ತಿಗಳಂತಹ ಅನೇಕ ಪ್ರಶಸ್ತಿ ಗೌರವ ಸನ್ಮಾನಗಳು ಇವರಿಗೆ ಸಂದಿವೆ. ಆದರೆ ಇವರು ಎಂದೂ ಪ್ರಶಸ್ತಿಗೌರವಗಳ ಬೆನ್ನೂ ಹತ್ತಿದವರಲ್ಲ .ಆದರೆ ಅವುಗಳೇ ಇವರನ್ನು ಹುಡುಕಿಕೊಂಡು ಬಂದಿವೆ.

ಪರಿಶುದ್ಧ ಮನಸ್ಸಿನ, ವೈರಿಗೂ ಸದಾ ಒಳ್ಳೆಯದನ್ನೇ ಬಯಸುವ ಪಾರದರ್ಶಕ ವ್ಯಕ್ತಿತ್ವದವರು. ಇಂದಿಗೂ ಸಮಾಜ ಹಾಗೂ ಸಾಹಿತ್ಯಪರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ವಿಶಿಷ್ಟ ವ್ಯಕ್ತಿತ್ವದವರು. ಇಂದು ಬೆಂಗಳೂರಿನಲ್ಲಿ ನೆಲೆಸಿದರೂ, ರಾಯಚೂರನ್ನು ಮರೆತಿಲ್ಲ; ಮರೆಯುವುದಿಲ್ಲ. ರಾಯಚೂರು ಹಾಗೂ ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಳ್ಳುವ ಪ್ರಮುಖ ಕಾರ್ಯಕ್ರಮಗಳಿಗೆ ಬೆಂಗಳೂರಿನಿಂದ ಬಂದು ಹಾಜರಾಗುತ್ತಿರುತ್ತಾರೆ ! ಆತ್ಮೀಯರೊಂದಿಗೆ, ಸ್ನೇಹಿತರೊಂದಿಗೆ ಬೆರೆಯುವ ಸಮಚಿತ್ತ ಭಾವದವರು. ಅಂದಿನಿಂದ ಇಂದಿನವರೆಗೂ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೂ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದಾರೆ. ಇವರ ಅಭಿಮಾನಿಗಳು, ಸ್ನೇಹಿತರು ಹಾಗೂ ಇವರಿಂದ ಸಹಾಯ ಪಡೆದವರು ಇಡೀ ರಾಜ್ಯದ ತುಂಬೆಲ್ಲಾ ಇದ್ದಾರೆ.

ರಾಯಚೂರಿನ ಪ್ರತಿಷ್ಠಿತ ಟ್ಯಾಗೋರ್ ಮಹಾವಿದ್ಯಾಲಯದಲ್ಲಿ ಬೋಧಕೇತರ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸಿದ ಇವರನ್ನು ನಾನು ಓರ್ವ ಚಿಂತಕ, ಮಾನವೀಯ ಕಳಕಳಿಯುಳ್ಳ, ನೆಲ, ಜಲದ ಬಗ್ಗೆ ಅಪಾರ ಅಭಿಮಾನ ಹೊಂದಿದ ಸಂಪೂರ್ಣ ಮಾನವನೆಂದೇ ಪರಿಭಾವಿಸಿಕೊಂಡವನು. ಅಂತಹ ಸರ್ವಗುಣಗಳ ಆಗರ ಇವರ ವ್ಯಕ್ತಿತ್ವ. ಸದಾ ಕನ್ನಡ ಸಾಹಿತ್ಯ, ಸಂಸ್ಕೃತಿಯೆಡೆಗೆ ವಿಶೇಷ ಒಲವನ್ನು ತೋರಿದವರು. ಅಂದುಕೊಂಡಿದ್ದನ್ನು ಮಾಡಿಯೇ ತೀರಬೇಕೆಂಬ ಅಚಲವಾದ ಛಲ ಇವರಲ್ಲಿತ್ತು. ಪ್ರಜ್ಞಾವಂತ ಶಿಕ್ಷಕರು,

ಉಪನ್ಯಾಸಕರು, ಸಾಹಿತಿಗಳು, ಸಂಘಟಕರು, ರಾಜಕಾರಣಿಗಳು, ಅಧಿಕಾರಿ ವರ್ಗದವರ ಸಹಕಾರ ಯಾವತ್ತೂ ಇವರಿಗೆ ಇದ್ದೇ ಇತ್ತು. ಅವರೊಂದಿಗೆ ಸರಳವಾಗಿ ಬೆರೆಯುತ್ತಾ, ಸೌಜನ್ಯದಿಂದ ವರ್ತಿಸುತ್ತ, ಕನ್ನಡ ಸಾಹಿತ್ಯ ಪರಿಷತ್ತಿನ ಧ್ಯೇಯೋದ್ದೇಶಗಳನ್ನು ತಿಳಿಸುತ್ತ ಸರ್ವರನ್ನೂ ಇದರಲ್ಲಿ ಭಾಗಿಯಾಗುವಂತೆ ಮಾಡುತ್ತಿದ್ದರು. ಇವರ ಸಾಹಿತ್ಯಪರವಾದ ಸಂಘಟನೆ, ಕನ್ನಡದ ಕಳಕಳಿ, ಪರಿಶ್ರಮ, ನಿಷ್ಠೆ ದಕ್ಷತೆ, ಸಂಘಟನಾ ಚಾತುರ್ಯ ಮುಂತಾದ ಗುಣಗಳು ಇಂದಿನ ಸಂಘಟಕರಿಗೆ, ಸಮಾಜ ಸೇವಕರಿಗೆ, ಯುವಕರಿಗೆ ಮಾರ್ಗದರ್ಶಿ. ಇವರ ವ್ಯಕ್ತಿತ್ವ ಹಾಗೂ ಮಾಡಿದ ಕಾರ್ಯಗಳನ್ನು ಮುಂದಿನ ಪೀಳಿಗೆ ನೆನೆಯುವುದರಲ್ಲಿ ಎರಡು ಮಾತಿಲ್ಲ.

ಡಾ. ಅಮರೇಶ ಯತಗಲ್, ಸಹಾಯಕ ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ, ತೊರವಿ, ವಿಜಯಪುರ-586108
ಸನಿಹವಾಣಿ : 9448571563 ; ಮಿಂಚಂಚೆ : dryatagal@gmail.com

ನಾನು ಕಂಡಂತೆ ಕನ್ನಡದ ಪರಿಚಾರಕ ಪಂಪಯ್ಯ ಶೆಟ್ಟಿ

✍ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

ರಾಯಚೂರು ಜಿಲ್ಲೆಯಲ್ಲಿ ಎಂಬತ್ತು ಮತ್ತು ತೊಂಬತ್ತರ ದಶಕದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳ ನೂತನ ಸಂಚಲನಕ್ಕೆ ಎಚ್. ಪಂಪಯ್ಯ ಶೆಟ್ಟರ ಆಸಕ್ತಿ ಮತ್ತು ಕಾರ್ಯತತ್ಪರತೆ ಮುಖ್ಯ ಕಾರಣವೆಂದು ಹೇಳಿದರೆ ಅತಿಶಯೋಕ್ತಿಯಲ್ಲ. ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಮೂರು ಬಾರಿ ಅಧ್ಯಕ್ಷರಾಗಿ ಮಾಡಿದ ಸದಭಿರುಚಿಯ ಕಾರ್ಯಗಳು ಜಿಲ್ಲೆಯ ಕನ್ನಡದ ಕಟ್ಟಾಳುವಾಗಿ ಜಿಲ್ಲೆಯ ಕನ್ನಡ ಸಾಹಿತ್ಯ-ಸಂಸ್ಕೃತಿಗೆ ಅವರು ದುಡಿದ ಪರಿ ಒಂದು ಇತಿಹಾಸವನ್ನೇ ನಿರ್ಮಿಸಿದೆ. ಪಂಪಯ್ಯ ಶೆಟ್ಟರು ಬಹು ಕನಸುಗಾರರು. ಜಿಲ್ಲೆಯ ಸಾಹಿತ್ಯ ಪರಂಪರೆಯನ್ನು ವಿವಿಧ ದೃಷ್ಟಿಕೋನದಿಂದ ವಿಚಾರಿಸಿ, ಸದಭಿರುಚಿಯ ರಚನಾತ್ಮಕ ಕಾರ್ಯಗಳ ಮೂಲಕ ಕನ್ನಡಕ್ಕೆ ಪ್ರಾಚೀನತೆಯ ಮರುಜೀವ ತಂದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ.

ಎಚ್. ಪಂಪಯ್ಯ ಶೆಟ್ಟರನ್ನು 80ರ ದಶಕದಿಂದ ನಾನು ಸಮೀಪದಿಂದ ಕಂಡಿದ್ದೇನೆ. ಕಾರ್ಯದರ್ಶಿಗಳಾಗಿ ಹಾಗೂ ಜಿಲ್ಲಾ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ತಮ್ಮದೇ ಆದ ಸೃಜನಶೀಲ ಕಾರ್ಯಗಳಿಂದ ಕರ್ನಾಟಕದ ಉಳಿದ ಜಿಲ್ಲೆಗಳಿಗಿಂತ ರಾಯಚೂರು ಜಿಲ್ಲೆಯ ಕೀರ್ತಿಯ ಬಾವುಟವನ್ನು ಎತ್ತಿಹಿಡಿದ ಕನ್ನಡದ ಕಟ್ಟಾಳು. ಜಿಲ್ಲೆಯಲ್ಲಿ ಕನ್ನಡಕ್ಕೆ ಕುಂದುಬಂದರೆ, ಜಿಲ್ಲೆಯ ಸಾಹಿತಿಗಳಿಗೆ ಅವಮಾನಗಳಾದರೆ ಅವರು ಸಹಿಸಿಕೊಳ್ಳುತ್ತಿರಲಿಲ್ಲ. ಕನ್ನಡ ಸಾಹಿತ್ಯಾಭಿವೃದ್ಧಿಗೆ ಯೋಗ್ಯರಿಂದ ನೆರವು ಪಡೆಯುವ ಪರಿಜ್ಞಾನ ಅವರಿಗಿತ್ತು. ಅಂತಲೆ ಜಿಲ್ಲೆಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಗಳ ಜವಾಬ್ದಾರಿಯನ್ನು ಹೊತ್ತು ತಮ್ಮ ವಿವೇಚನಾ ಶಕ್ತಿಯ ಸಾಮರ್ಥ್ಯದಿಂದ ಕಾರ್ಯಕ್ರಮಗಳನ್ನು ರೂಪಿಸಿ ಬಹು ಯಶಸ್ವಿಯಾಗಿ ಮಾಡಿಮುಗಿಸಿದರು. ನಾಲ್ಕು ಜಿಲ್ಲಾ ಸಾಹಿತ್ಯ ಸಮ್ಮೇಳನ ಅವಿಭಜಿತ ಕೊಪ್ಪಳದಲ್ಲಿ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ವೈಭವದಿಂದ ಪೂರೈಸಿದ ಕೀರ್ತಿಗೆ ಭಾಜನರಾಗಿದ್ದಾರೆ. ಅವರದು ಇನ್ನೊಂದು ಶ್ರೇಷ್ಠ ಗುಣವೆಂದರೆ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವುದು ; ಪ್ರತಿಭೆ, ಯೋಗ್ಯತೆಗಳನ್ನು ಗುರುತಿಸಿ ಅವರಿಗೆ ಸ್ಥಾನಮಾನ ನೀಡಿ ಗೌರವಿಸುವುದು. ಇಂಥ ಗುಣಗ್ರಾಹಿಗಳಾದ ಅವರು ಇಂದಿಗೂ ಅಪಾರ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ. ಕನ್ನಡ ಲೋಕದ ಹಿರಿಯ ಸಾಹಿತಿ, ಲೇಖಕರ

ಸಂಪರ್ಕವಿಟ್ಟುಕೊಂಡು ಪ್ರೀತಿವಿಶ್ವಾಸಗಳನ್ನು ಗಳಿಸಿದ್ದಾರೆ. ಅಂಥ ಹಿರಿಯ ಸಾಹಿತಿ-ಕಲಾವಿದರನ್ನು ಕರೆತಂದು ಜಿಲ್ಲೆಯ ಆಸಕ್ತರಿಗೆ ಪರಿಚಯ ಮಾಡಿಸಿದ್ದಾರೆ. ಜೊತೆಗೆ ಜಿಲ್ಲೆಯ ಹಿರಿಯ ಸಾಹಿತಿಗಳಿಗೆ ಗೌರವ ತರಲು ಶ್ರಮಿಸಿದ್ದಾರೆ.

ಈಗಾಗಲೇ ತಿಳಿಸಿದಂತೆ ನನ್ನ ಮತ್ತು ಎಚ್. ಪಂಪಯ್ಯ ಶೆಟ್ಟರ ವಿಶ್ವಾಸ ಕಳೆದ ನಾಲ್ಕು ದಶಕಗಳಿಂದ ನಡೆದು ಬಂದಿದೆ. ಅವರು ನನ್ನ ಮೇಲಿಟ್ಟ ಅಭಿಮಾನವನ್ನು ನಾನು ಎಂದೂ ಮರೆಯುವುದಿಲ್ಲ. ಅದಕ್ಕೆ ಸಂಬಂಧಿಸಿದ ಒಂದೆರಡು ಘಟನೆಗಳನ್ನು ಇಲ್ಲಿ ಮೆಲುಕು ಹಾಕುತ್ತೇನೆ.

1993ರ ಸಮಯ. ಮೂರನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸಿಂಧನೂರಿನಲ್ಲಿ ಹಮ್ಮಿಕೊಳ್ಳಲಾಯಿತು. ಸ್ಥಳೀಯರ ಅದಮ್ಯ ಉತ್ಸಾಹ ಮತ್ತು ಹುರುಪಿನಿಂದ ಅದು ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ವೈಭವವನ್ನು ಮೀರಿಸಿತ್ತು. ಈ ಸಮ್ಮೇಳನದ ನೆನಪಿಗಾಗಿ ಸ್ಮರಣಸಂಚಿಕೆಯನ್ನು ಹೊರತರಲು ಸೂಕ್ತ ಸಂಪಾದಕರ ಹುಡುಕಾಟ ನಡೆದಿತ್ತು. ಸಂಪಾದಕರಾಗಲು ಹಲವರು ಶೆಟ್ಟರ ಮೇಲೆ ಪ್ರಭಾವ ಬೀರಿದ್ದರು. ಇದರಿಂದ ಸಂಪಾದಕತ್ವದ ನಿರ್ಧಾರ ಕೆಲವು ದಿನ ಮುಂದುವರಿಯಿತು.

ಒಂದು ದಿನ ಮಧ್ಯಾಹ್ನ ಪಂಪಯ್ಯ ಶೆಟ್ಟರು ನಮ್ಮ ಮನೆಗೆ ಬಂದರು. ಅದರೊಂದಿಗೆ ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಆದಯ್ಯ ಸ್ವಾಮಿ ಮತ್ತು ಇಬ್ಬರು ಕಾರ್ಯದರ್ಶಿಗಳಿದ್ದರು. ಅವರು ಬಂದ ಕಾರಣ ನನಗೆ ತಿಳಿಯದೆ ಸ್ವಲ್ಪ ಆತಂಕವಾಯಿತು. ಪಂಪಯ್ಯ ಶೆಟ್ಟರೆ ಪ್ರಸ್ತಾಪ ಮಾಡಿ, ಸ್ಮರಣ ಸಂಚಿಕೆಯ ಸಂಪಾದಕತ್ವವನ್ನು ವಹಿಸುವಂತೆ ಬಿನ್ನವಿಸಿದರು. ಅವರ ಮಾತಿನಲ್ಲಿ ಖಚಿತತೆ ಇತ್ತು, ಅಂತಿಮ ನಿರ್ಣಯಿಸಿದ ಧಾಟಿ ಇತ್ತು. ನನಗಿಂತ ಬೇರೆಯವರಿಗೆ ವಹಿಸಿಕೊಡುವ ನನ್ನ ವಿನಂತಿಯನ್ನು ಸಾರಾಸಗಟು ನಿರಾಕರಿಸಿ, ಸಂಪಾದಕತ್ವದ ಜವಾಬ್ದಾರಿಯನ್ನು ನನ್ನ ಹೆಗಲಿಗೆ ನೀಡಿ ಹೊರಹೊರಟರು. ಅಲ್ಲಿಯವರೆಗೆ ಸ್ಮರಣಸಂಚಿಕೆಯ ವಿಚಾರದ ಕಡೆ ತಲೆ ಹಾಕದ ನಾನು ಪಂಪಯ್ಯ ಶೆಟ್ಟರು ನನ್ನ ಮೇಲಿಟ್ಟ ವಿಶ್ವಾಸಕ್ಕೆ ಗೌರವ ತರಲು ಸ್ಮರಣಸಂಚಿಕೆಯ ಸಂಪಾದನಾ ಕಾರ್ಯಕ್ಕೆ ತೊಡಗಿದೆ. ಸಮಾನ ಮನಸ್ಕರ ಸಂಪಾದಕ ಸಮಿತಿಯನ್ನು ರಚಿಸಿ, ಸಂಚಿಕೆಗೆ 'ಹೊನ್ನಸಿರಿ' ಎಂದು ಸೂಕ್ತ ಹೆಸರನ್ನು ಇಡಲಾಯಿತು. ಸಿಂಧನೂರು ತಾಲ್ಲೂಕು ಬತ್ತದ ಕಣಜವಾಗಿದ್ದರಿಂದ 'ಹೊನ್ನಸಿರಿ' ಸಂಚಿಕೆಗೆ ಅರ್ಥಪೂರ್ಣ ಹೆಸರಾಯಿತು. ಸಮಾರಂಭದ ದಿನ ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರೂ ಹಾಗೂ ಹಿರಿಯ ನಟರೂ ಆದ ಅನಂತನಾಗ್ ಅವರು 'ಹೊನ್ನಸಿರಿ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದುದು ಒಂದು ಅಗ್ಗಳಿಕೆ. 'ಹೊನ್ನಸಿರಿ' ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಒಟ್ಟು ಸಾಹಿತ್ಯಮೌಲ್ಯಗಳಿಂದ ಇದು ಆಕರಗ್ರಂಥವಾದ ಹಿರಿಮೆಯನ್ನು ಸಾಧಿಸಿತು. ಕೊಪ್ಪಳ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ಹೊರತಂದ 'ತಿರುಳುಗನ್ನಡ' ಸ್ಮರಣ ಸಂಚಿಕೆಯ ಸರಿಸಮಕ್ಕೆ ಬಂದಿರುವುದು ಹೆಮ್ಮೆಯನ್ನು ತಂದಿದೆ.

1994ರ ಸುಮಾರು ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪ್ರಥಮ ವರ್ಷದ ಬಿ.ಕಾಂ. ಪಠ್ಯಪುಸ್ತಕಕ್ಕಾಗಿ ನಾನು ಸಂಪಾದಿಸಿಕೊಟ್ಟ 'ಶೃಂಗಾರ ತರಂಗಿಣಿ' ಪುಸ್ತಕ ನಿಗದಿಯಾಯಿತು. ಇದು ಕನಕದಾಸರು ರಚಿಸಿದ 'ಮೋಹನ ತರಂಗಿಣಿ' ಎಂಬ ಶ್ರೇಷ್ಠ ಕಾವ್ಯದಿಂದ ಆಯ್ದ ಸಂಪಾದಿತ ಕೃತಿ. ಮೋಹನ ತರಂಗಿಣಿ' ಹೆಸರೇ ಹೇಳುವಂತೆ ಕನ್ನಡದಲ್ಲಿರುವ ಶೃಂಗಾರ ಕಾವ್ಯಗಳಲ್ಲಿ ಒಂದು. ಶೃಂಗಾರ ರಸವೇ ಪ್ರಧಾನವಾಗಿದ್ದರಿಂದ ನನ್ನ ಸಂಪಾದನೆಯ 'ಶೃಂಗಾರ ತರಂಗಿಣಿ'ಯಲ್ಲೂ ಶೃಂಗಾರ ರಸವೇ ಪ್ರಧಾನವಾಗಿರುವುದು ಸಹಜ ಮತ್ತು ಅನಿವಾರ್ಯ. ಇದಾವುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪೂರ್ವಗ್ರಹಪೀಡಿತನಾದ ಹೊಸಪೇಟೆಯ ಕನ್ನಡ ಉಪನ್ಯಾಸಕರೊಬ್ಬರು 'ಶೃಂಗಾರ ತರಂಗಿಣಿ' ಅಶ್ಲೀಲ ಕಾವ್ಯವೆಂದು ಬಡಬಡಿಸಿ, ತಮಗೆ ಬೇಕಾದವರ ಸಹಾಯದೊಂದಿಗೆ ಚಿತಾವಣೆ ಮಾಡಿದರು. ಶೃಂಗಾರ ಮತ್ತು ಅಶ್ಲೀಲತೆಗಳ ಅಂತರ ತಿಳಿಯದ ಉಪನ್ಯಾಸಕರ ಬಡಬಡಿಕೆ ಮತ್ತು ಸ್ವಹಿತಾಸಕ್ತಿಯ ದುರುದ್ದೇಶವನ್ನು ಅರ್ಥಮಾಡಿಕೊಳ್ಳಲು ಸಾಹಿತ್ಯ ಲೋಕಕ್ಕೆ ಹೆಚ್ಚುದಿನ ಬೇಕಾಗಲಿಲ್ಲ. ಈ ಉಪನ್ಯಾಸಕನ ವಿರುದ್ಧ ಹಾಗೂ ನನ್ನ ಪಠ್ಯದ ಸಂಪಾದಕತ್ವದ ಪರವಾಗಿ ನಾಡಿನಾದ್ಯಂತ ಚಳುವಳಿಗಳು ನಡೆಸುವ ಮೂಲಕ ಜನರು ನನ್ನ ಬೆಂಬಲಕ್ಕೆ ನಿಂತರು.

ರಾಯಚೂರಿನಲ್ಲಿಯೂ ಇಂಥ ಪ್ರತಿಭಟನೆಯ ವೇದಿಕೆಯನ್ನು ಏರ್ಪಡಿಸಿ, ಲೇಖಕರ ಪರವಾಗಿ ನಿಂತವರು ಪಂಪಯ್ಯ ಶೆಟ್ಟರು. ಅವರು ಸಜ್ಜುಗೊಳಿಸಿದ ಸಭೆಯಲ್ಲಿ ಹಿರಿಯ ಸಾಹಿತಿಗಳಾದ (ದಿವಂಗತ) ಡಾ. ಮಂದಾಕಿನಿ ಮೇಡಮ್, ನನ್ನ ಪ್ರೀತಿಯ ವಿದ್ಯಾರ್ಥಿ ಉಪನ್ಯಾಸಕ ಡಾ. ಸಿದ್ಧಲಿಂಗಪ್ಪ ಪಾಟೀಲ್ ಇವರು ವಿಷಯವನ್ನು ಮಂಡಿಸಿ, ಸಂಪಾದನಾ ಕೃತಿಯ ಹಿರಿಮೆಯನ್ನು ಎತ್ತಿಹಿಡಿದು, ಆಪಾದನೆ ಮಾಡಿದ ಉಪನ್ಯಾಸಕರಿಗೆ ತಕ್ಕ ಉತ್ತರ ನೀಡಿದರು. ಹೀಗೆ ಒಂದು ಕೃತಿಗೆ, ಸಾಹಿತಿಗೆ ಆದ ಅವಮಾನ ಯಾರಿಗೆ ಆಗಿರಲಿ ಅದಕ್ಕೆ ಸೂಕ್ತ ವೇದಿಕೆ ನಿರ್ಮಿಸಿ ಪ್ರತಿಭಟಿಸುವ ಮೂಲಕ ಕೃತಿ ಮತ್ತು ಲೇಖಕರಿಗೆ ಗೌರವ ತಂದುಕೊಡುವ ಸಾಹಿತ್ಯ ಸಂಸ್ಕೃತಿಯನ್ನು ಪಂಪಯ್ಯ ಶೆಟ್ಟರು ರೂಢಿಸಿಕೊಂಡಿದ್ದಾರೆ.

ದತ್ತಿ ಉಪನ್ಯಾಸಗಳು ಜಿಲ್ಲೆಯಲ್ಲಿ ಪ್ರಾರಂಭಿಸಿದವರು ಪಂಪಯ್ಯ ಶೆಟ್ಟಿ (ಮುಂದೆ ಎಸ್. ಶರಣೇಗೌಡರು ದತ್ತಿಗಳ ಸಂಖ್ಯೆಯನ್ನು ಹೆಚ್ಚಿಸಿ, ರಾಯಚೂರು ಜಿಲ್ಲೆಯನ್ನು ಪ್ರಥಮಸ್ಥಾನದಲ್ಲಿ ನಿಲ್ಲುವಂತೆ ಮಾಡಿದರು). ಜಿಲ್ಲೆಯ ಪ್ರಾತಿನಿಧಿಕ 'ಬಿಸಿಲ ಹನಿಗಳು' ಕಥಾ ಸಂಗ್ರಹ ಕೃತಿ ಹೊರತಂದರು. ಗಡಿನಾಡು ಸಮ್ಮೇಳನ, ತಾಲ್ಲೂಕು ಸಮ್ಮೇಳನ, ಪುಸ್ತಕ ಮೇಳ, ಸಾಹಿತ್ಯ ಸಮಾವೇಶ, ಕನ್ನಡ ಕಾವ್ಯ, ಕಥೆ, ಕಾದಂಬರಿಗಳು ಕುರಿತ ವಿಚಾರಗೋಷ್ಠಿಗಳನ್ನು ವ್ಯವಸ್ಥಿತವಾಗಿ ನಡೆಸಿ, ಜಿಲ್ಲೆಯ ಸಾರಸ್ವತ ಪರಂಪರೆಯ ತೇರನ್ನು ಎಳೆದು ಕನ್ನಡ ಭಾಷೆ ಸಂಸ್ಕೃತಿಗಳಿಗೆ ಜೀವ ತುಂಬಿದ ಎಚ್. ಪಂಪಯ್ಯ ಶೆಟ್ಟರು ನಿಜವಾಗಿಯೂ ಅವರ ಕನ್ನಡ ನಾಡು-ನುಡಿ-ಜನರ ಮೇಲೆ ಗೈದ ಸೇವೆ ಅನುಪಮ. ಮತ್ತೊಬ್ಬರಿಗೆ ಅನುಕರಣೀಯ.

ಪಂಪಯ್ಯ ಶೆಟ್ಟರು ಕಲಾವಿದ ಮನೆತನದಲ್ಲಿ ಜನಿಸಿದರು. ಇವರ ತಂದೆ ಉಮಳಿ ಹೊಸೂರು ಗ್ರಾಮದ ರಾಮಸ್ವಾಮಿ ಶೆಟ್ಟಿ ಅವರು ರಂಗಭೂಮಿಯ ಕಲಾವಿದರು. 60ರ ದಶಕದಲ್ಲಿ ಇವರು ರಂಗನಾಟಕಗಳನ್ನು ಪ್ರದರ್ಶಿಸಿ, ನಾಟಕಗಳ ಅಭಿರುಚಿಯನ್ನು ಜನರಲ್ಲಿ ಮೂಡಿಸಿದರು. ರಾಮಸ್ವಾಮಿ ಶೆಟ್ಟರು ಸ್ವತಃ ನಟರಾಗಿ ರಂಗಭೂಮಿಯಲ್ಲಿ ಅಭಿನಯಿಸಿ, ನಾಟಕಗಳ ಅಭಿವೃದ್ಧಿಗೆ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಆ ಕಾಲದಲ್ಲಿ ಪ್ರಸಿದ್ಧರಾದ ಆದವಾನಿ ಲಕ್ಷ್ಮಿದೇವಿ, ಬಳ್ಳಾರಿ ಸುಭದ್ರಮ್ಮ ಮನ್ಸೂರು, ಚಿತ್ತರಗಿ ಸುಶೀಲ, ಸರೋಜಮ್ಮ ದುತ್ತರಿಗಿಯಂಥ ಶ್ರೇಷ್ಠ ರಂಗಭೂಮಿಯ ನಟಿಯರನ್ನೂ ಕರೆಯಿಸಿ, ನಾಟಕ ಪ್ರದರ್ಶನ ಮಾಡಿದ ಹಿರಿಯ ಕಲಾವಿದರು. ರಾಯಚೂರು ಜಿಲ್ಲೆಯಲ್ಲಿ ರಂಗಭೂಮಿ ಕಲೆ ಜೀವಂತವಾಗಿರಲೂ ರಾಮಸ್ವಾಮಿ ಶೆಟ್ಟಿಯವರಲ್ಲಿರುವ ಕಲಾಭಿಮಾನ ಮತ್ತು ಪ್ರೋತ್ಸಾಹಗಳನ್ನು ಮರೆಯುವಂತಿಲ್ಲ. ರಾಮಸ್ವಾಮಿಗಳ ರಂಗಭೂಮಿಯ ಹುಚ್ಚು ಎಷ್ಟು ಪರಮಾವಧಿಗೆ ತಲುಪಿತ್ತೆಂದರೆ, ಅವರ ಅಪಾರ ಆಸ್ತಿಪಾಸ್ತಿ ಕರಗಿಹೋಯಿತು. ರಾಮಸ್ವಾಮಿ ಶೆಟ್ಟರು ರಂಗಭೂಮಿ ಕಲೆಗಾಗಿ ಅಕ್ಷರಶಃ ಎಲ್ಲವನ್ನೂ ಕಳೆದುಕೊಂಡ ವಿರಕ್ತರು. ಇಂಥವರ ಮಗನಾಗಿ ಜನಿಸಿದ ಎಚ್. ಪಂಪಯ್ಯ ಶೆಟ್ಟರಿಗೆ ಸಾಹಿತ್ಯಾಸಕ್ತಿ ತಂದೆಯವರಿಂದ ಬಂದ ಬಳುವಳಿ.

ತಂದೆಯವರು ಆಸ್ತಿ ಕಳೆದುಕೊಂಡದ್ದಕ್ಕೆ ಪಂಪಯ್ಯ ಶೆಟ್ಟರಿಗೆ ಲವಲೇಶವೂ ದುಃಖ ವಾಗಲೀ, ಬೇಸರವಾಗಲೀ ಇಲ್ಲ. ಆದರೆ ಒಂದು ಸಲ ಹೇಳಿದ ಈ ಮಾತು ನೆನಪಿನಲ್ಲಿದೆ. ''ತಂದೆಯವರು ಕನ್ನಡ ಕಲೆ ಸಂಸ್ಕೃತಿಗಾಗಿ ಎಲ್ಲವನ್ನೂ ಕಳೆದರೂ ಅದರ ಫಲವಾಗಿ ನಾನು ಸಾಹಿತ್ಯಕ್ಕೆ ಕಿಂಚಿತ್ ದುಡಿಯಲು ಶಕ್ತಿ ಪ್ರಾಪ್ತವಾಗಿರುವುದು ನನ್ನ ಸೌಭಾಗ್ಯ. ಈಗ ನಾನು ಕೌಟುಂಬಿಕವಾಗಿ ಸುಖವಾಗಿದ್ದೇನೆ.''

ನಾಲ್ಕು ದಶಕ ಸಾಹಿತ್ಯ ಸಂಸ್ಕೃತಿಗಾಗಿ ನಡೆದುಬಂದ ಎಚ್. ಪಂಪಯ್ಯ ಶೆಟ್ಟರು ರಾಯಚೂರು ಜಿಲ್ಲೆಯ ಕನ್ನಡದ ಕಟ್ಟಾಳು. ಅವರು ಇರದೆ ಸಾಹಿತ್ಯ ಕಾರ್ಯ ನಡೆಯುವು ದಿಲ್ಲವೆಂಬ ವಾತಾವರಣ ಸೃಷ್ಟಿಯಾಗಿರುವುದು ವ್ಯಕ್ತಿಯ ಸಾಧನೆ. ಪ್ರೀತಿ, ಪ್ರೇಮ, ಸೌಹಾರ್ದ ಗುಣಗಳಿಂದ ಅಪಾರ ಸ್ನೇಹಿತರನ್ನು ಗಳಿಸಿದ ಎಚ್. ಪಂಪಯ್ಯ ಶೆಟ್ಟಿಯವರಿಗೆ ಬೆಂಗಳೂರಿನಲ್ಲಿ ಅಭಿನಂದನಾ ಸಮಾರಂಭ ನಡೆಯುತ್ತಿರುವುದು ಔಚಿತ್ಯಪೂರ್ಣ.

ಶಾಶ್ವತಸ್ವಾಮಿ ಮುಕ್ಕುಂದಿಮಠ
ವಿಶ್ರಾಂತ ಪ್ರಾಂಶುಪಾಲರು
ಪಟೇಲ ವಾಡಿ, ಸಿಂಧನೂರು, ಜಿಲ್ಲಾ ರಾಯಚೂರು
ಸನಿಹವಾಣಿ : 9445028228

ನಾನು ಕಂಡಂತೆ ಪಂಪಯ್ಯ ಶೆಟ್ಟಿ

✍ ಡಾ. ಬಸವರಾಜ ಸಬರದ

ರಾಯಚೂರು ನೆನಪಾದಾಗಲೆಲ್ಲ ನನಗೆ ಎಚ್. ಪಂಪಯ್ಯ ಶೆಟ್ಟಿಯವರ ನೆನಪಾಗುತ್ತದೆ. ನಾನು 1994ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ, ರಾಯಚೂರು ಸ್ನಾತಕೋತ್ತರ ಕೇಂದ್ರಕ್ಕೆ ವರ್ಗವಾಗಿ ಹೋದೆ. 1999ರಲ್ಲಿ ಮತ್ತೆ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ವರ್ಗವಾಗಿ ಬಂದೆ. ಈ ಐದು ವರ್ಷಗಳ ನನ್ನ ರಾಯಚೂರ ಜೀವನದಲ್ಲಿ ಪಂಪಯ್ಯ ಶೆಟ್ಟಿ ಗಟ್ಟಿಯಾಗಿ ನೆಲೆಯೂರಿ ನಿಂತರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಮೂರು ಅವಧಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಅವರು ಅನೇಕ ಸಾಹಿತಿ-ಕಲಾವಿದರ ಪ್ರೀತಿಗೆ ಪಾತ್ರರಾಗಿದ್ದಾರೆ.

ರಾಯಚೂರಿಗೆ ಹೋದನಂತರ ನಾನು ಅನುಭಾವಿ ಕವಿಗಳ ಸಂಶೋಧನಾ ಕಾರ್ಯ ಕೈಗೆತ್ತಿಕೊಂಡೆ. ರಾಯಚೂರು ತತ್ತ್ವಪದಕಾರರ ತವರೂರು. ವಿವಿಧೆಡೆ ಕ್ಷೇತ್ರ ಕಾರ್ಯ ಮಾಡಿದೆ. ಎರಡು ವರ್ಷಗಳಲ್ಲಿ ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳ ಕುರಿತಾದ ನನ್ನ ಸಂಶೋಧನಾ ಕೃತಿ ಸಿದ್ಧವಾಯಿತು. ಆದರೆ ಅದನ್ನು ಪ್ರಕಟಿಸುವುದು ಹೇಗೆ ಎನ್ನುತ್ತಿದ್ದಾಗಲೇ ಪಂಪಯ್ಯಶೆಟ್ಟರು ಮನೆಗೆ ಬಂದರು. ಅವರಿಗೆ ಹಸ್ತಪ್ರತಿ ತೋರಿಸಿದೆ. ಅವರು ಸಂತೋಷಪಟ್ಟರು. ಜಿಲ್ಲಾ ಕ.ಸಾ.ಪದಿಂದಲೇ ಪ್ರಕಟಿಸುತ್ತೇನೆಂದು ಹಸ್ತಪ್ರತಿಯನ್ನು ತೆಗೆದುಕೊಂಡರು. ಆಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ನನ್ನ ಪುಸ್ತಕಗಳನ್ನು ಬೇರೆಯವರು ಪ್ರಕಟಿಸಿದ್ದಾರೆ. ಈ ಕೃತಿಗೂ ಪ್ರಕಾಶಕರು ಸಿಗಬಹುದಿತ್ತು. ಆದರೆ ಆ ಹಸ್ತಪ್ರತಿಯನ್ನು ನೋಡುತ್ತಲೇ, ಇದು ನನ್ನ ಜಿಲ್ಲೆಯ ಸಾಹಿತ್ಯ ಕೃತಿ. ಇದರಲ್ಲಿ ನಮ್ಮ ಜಿಲ್ಲೆಯ ಅನುಭಾವಿ ಕವಿಗಳಿದ್ದಾರೆ. ಇದನ್ನು ಪ್ರಕಟಿಸುವುದು ನನ್ನ ಕರ್ತವ್ಯ ಎಂದು ತಿಳಿದುಕೊಂಡು ಸಂಶೋಧನಾ ಕೃತಿಗಳನ್ನು ಎಷ್ಟು ಜನ ಕ.ಸಾ.ಪ. ಅಧ್ಯಕ್ಷರು ಪ್ರಕಟಿಸಿದ್ದಾರೆ ? ಆದರೆ ಪಂಪಯ್ಯಶೆಟ್ಟಿ ಇಂತಹ ಅನೇಕ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದರು. 'ಬಿಸಿಲ ಹನಿಗಳು' ಕೃತಿಯಂತೂ ತುಂಬ ಚಾರಿತ್ರಿಕವಾದುದು. ಹೀಗೆ ಚಾರಿತ್ರಿಕವಾದ, ಮೌಲಿಕವಾದ ಸಾಹಿತ್ಯಸೇವೆ ಮಾಡುವ ಮನಸ್ಸು ಬಹಳ ಜನರಿಗೆ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಪಂಪಯ್ಯಶೆಟ್ಟರು ನನಗೆ ಹತ್ತಿರವಾದರು. ಅವರ ಬಗಗೆ ನನಗೆ ಗೌರವ ಹೆಚ್ಚಿತು. "ರಾಯಚೂರ ಜಿಲ್ಲೆಯ ಅನುಭಾವಿ ಕವಿಗಳು" ಕೃತಿ ಜಿಲ್ಲಾ ಕ.ಸಾ.ಪ.ದಿಂದ ಪ್ರಕಟಣೆಯಾಗುತ್ತದೆಂಬ ಸುದ್ದಿ ತಿಳಿದ ಹಿರಿಯ ಸಾಹಿತಿಯೊಬ್ಬರು

ಅದಕ್ಕೆ ಆತಂಕವ್ಯೊಡ್ಡಿದ್ದರು. ಆದರೆ ಪಂಪಯ್ಯಶೆಟ್ಟಿ ಹಿಂಜರಿಯಲಿಲ್ಲ. ಕೊಟ್ಟ ಮಾತಿನಂತೆ ನಡೆದುಕೊಂಡರು. ಪುಸ್ತಕ ಪ್ರಕಟವಾಗಿ ಜನಪ್ರಿಯವಾಯಿತು.

ನಾನು ರಾಯಚೂರಲ್ಲಿದ್ದಾಗ ಪಂಪಯ್ಯಶೆಟ್ಟರು ಕರೆದ ಅನೇಕ ಸಾಹಿತ್ಯಕಾರ್ಯಕ್ರಮ ಗಳಿಗೆ ಹಾಜರಾಗಿದ್ದೇನೆ, ಪ್ರಬಂಧ ಮಂಡಿಸಿದ್ದೇನೆ, ಅಧ್ಯಕ್ಷತೆ ವಹಿಸಿದ್ದೇನೆ. ಅಲ್ಲೆಲ್ಲಾ ಅವರ ವಿನಯ, ಸಾಹಿತ್ಯದ ಬಗೆಗಿರುವ ಅವರ ಕಾಳಜಿ, ಸಾಹಿತಿಗಳ ಬಗೆಗೆ ಅವರಿಗಿರುವ ಗೌರವ ಕಂಡು ಸಂತೋಷಪಟ್ಟಿದ್ದೇನೆ. ಪಂಪಯ್ಯಶೆಟ್ಟಿ ತಾವು ಸಾಹಿತಿಗಳಾಗದಿದ್ದರೂ ಅನೇಕ ಸಾಹಿತಿಗಳು ಬೆಳೆಯಲು ಕಾರಣರಾದರು. ಅನೇಕ ಯುವಕರ ಕೃತಿಗಳನ್ನು ಬೆಳಕಿಗೆ ತಂದರು.

ಸಾಹಿತ್ಯ ಪರಿಷತ್ತಿನಿಂದ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳಲಿ ಅಲ್ಲಿ ಶೆಟ್ಟರ ಶಿಸ್ತು ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಇವರೊಂದಿಗೆ ಇವರ ಮಿತ್ರ ಭಗತ್‌ರಾಜ ನಿಜಾಮಕರ್ ಯಾವಾಗಲೂ ಜತೆಗಿರುತ್ತಿದ್ದರು. ನಿಜಾಮಕರ್ ನನ್ನ ಮಿತ್ರರೂ ಹೌದು. ಹೀಗಾಗಿ ಕ.ಸಾ.ಪ.ದಿಂದಲೇ ಅನೇಕ ಬಂಡಾಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೆವು. ನಮ್ಮ ವಿಚಾರಗಳಿಗೆಲ್ಲ ಶೆಟ್ಟರು ರೂಪಕೊಡುತ್ತಿದ್ದರು.

ಪಂಪಯ್ಯಶೆಟ್ಟಿಯವರು ಗೆಳೆಯರ ಗುಂಪೊಂದನ್ನು ಹೊಂದಿದ್ದರು. ಅದರಲ್ಲಿ ಯುವಕರೂ ಇದ್ದರು. ರಾಮಣ್ಣ ಹವಳೆ, ಸುದ್ದಿಮೂಲದ ಬಸವರಾಜ ಸ್ವಾಮಿ, ಶೇಖರಪ್ಪ ಮಾಸ್ತರ ಹುಲಿಗಿರಿ ಮುಂತಾದ ಹಿರಿಯರು ಸದಾ ಅವರಿಗೆ ಮಾರ್ಗದರ್ಶನ ಸಲಹೆ ಕೊಡುತ್ತಿದ್ದರು. ದಸ್ತಗೀರ ಸಾಬ ದಿನ್ನಿ, ಚಿದಾನಂದ ಸಾಲಿ, ವೀರಹನುಮಾನರಂತಹ ಯುವ ಪಡೆ ಅವರೊಂದಿಗಿತ್ತು. ಹೀಗಾಗಿ ಇವರ ಅವಧಿಯಲ್ಲಿ ಅನೇಕ ಜಾಥಾಗಳು, ಸಾಹಿತ್ಯದ ಕಮ್ಮಟಗಳು, ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಮಹಿಳಾ ಸಾಹಿತ್ಯ ಸಮ್ಮೇಳನಗಳು ಹೀಗೆ ಹತ್ತು ಹಲವು ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ಇದೆಲ್ಲವನ್ನೂ ನೋಡಿ ನಾನು ಸಂತೋಷಪಡುತ್ತಿದ್ದೆ. ಪಂಪಯ್ಯ ಶೆಟ್ಟಿಯವರ ಕಾರ್ಯದಕ್ಷತೆ, ಸಾಹಿತ್ಯ ಪ್ರೇಮ, ಪ್ರಾದೇಶಿಕ ಅಭಿಮಾನ, ವಿನಯವಂತಿಕೆ ನನಗೆ ಬಹಳ ಹಿಡಿಸಿದವು. ಹೀಗಾಗಿ ನಾನೆಂದೂ ಶೆಟ್ಟರು ಕರೆದಾಗ ಹೋಗದೆ ಇರುತ್ತಿರಲಿಲ್ಲ.

ರಾಯಚೂರು ಜಿಲ್ಲೆಯ ಸಾಂಸ್ಕೃತಿಕ-ಸಾಹಿತ್ಯಕ ಪರಂಪರೆಗೆ ಪಂಪಯ್ಯಶೆಟ್ಟಿಯವರ ಕೊಡುಗೆ ಗಮನಾರ್ಹವಾದುದಾಗಿದೆ. ಅರವತ್ತು ವಸಂತಗಳನ್ನು ಕಂಡಿರುವ ಇವರಿಂದ ರಾಯಚೂರು ಪರಿಸರದ ಸಾಹಿತ್ಯ-ಸಂಸ್ಕೃತಿ ಕಾರ್ಯಕ್ರಮಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ನಡೆಯಲೆಂದು ಆಶಿಸುತ್ತೇನೆ. ರಾಯಚೂರ ಜಿಲ್ಲಾ ಕ.ಸಾ.ಪ. ಇರುವವರೆಗೆ, ರಾಯಚೂರು ಪರಿಸರದ ಸಾಹಿತ್ಯ-ಸಂಸ್ಕೃತಿ ಇರುವವರೆಗೆ ಪಂಪಯ್ಯಶೆಟ್ಟಿಯವರ ಹೆಸರು ಹಸಿರಾಗಿರುತ್ತದೆ. ಆ ಹಸಿರಿನಲ್ಲಿ ಸದಾ ನಮ್ಮಂತ ಗೆಳೆಯರ ಉಸಿರಿರುತ್ತದೆ.

✿

ಡಾ. ಬಸವರಾಜ ಸಬರದ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ ಕಲಬುರ್ಗಿ ವಿಶ್ವವಿದ್ಯಾಲಯ, ಕಲಬುರ್ಗಿ;
ಸನಿಹವಾಣಿ : 9886619220

ಕ್ರಿಯಾಶೀಲ ವ್ಯಕ್ತಿತ್ವದ ಪಂಪಯ್ಯಶೆಟ್ಟಿ

✍ ಡಾ|| ದಸ್ತಗೀರಸಾಬ್ ದಿನ್ನಿ

ಎಚ್. ಪಂಪಯ್ಯಶೆಟ್ಟಿಯವರು ಅತ್ಯುತ್ತಮ ಸಂಘಟನಾ ಸಾಮರ್ಥ್ಯವನ್ನೂ ; ಪಾದರಸದಂತಹ ಕ್ರಿಯಾಶೀಲ ವ್ಯಕ್ತಿತ್ವವನ್ನೂ ಹೊಂದಿದ್ದರಿಂದಾಗಿಯೇ ಅವರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮೂರು ಅವಧಿಗಳಿಗೆ ಅಧ್ಯಕ್ಷರಾಗಲು ಸಾಧ್ಯವಾದುದು. ಹೊಸ ಬಗೆಯ ಕಾರ್ಯಕ್ರಮಗಳನ್ನು ರೂಪಿಸುವ ತುಡಿತ ; ಸೂಕ್ಷ್ಮಗ್ರಹಿಕೆ ; ಸಾಂಸ್ಕೃತಿಕ ಮನಸ್ಸು ; ಕನ್ನಡ-ನಾಡು-ನುಡಿಯ ಬಗೆಗೆ ಅನನ್ಯವಾದ ಅಭಿಮಾನ, ಬರೆಹಗಾರರ ಬಗೆಗೆ ಪ್ರೀತಿ ತುಂಬಿದ ಕಾಳಜಿ. ಎಲ್ಲರ ಮೇಲೂ ವಿಶ್ವಾಸವಿಟ್ಟು ಒಂದೇ ತೆಕ್ಕೆಯಲ್ಲಿ ಸಂಘಟನೆಯನ್ನು ತೆಗೆದುಕೊಂಡು ಹೋಗುವ ಔದಾರ್ಯ ಗುಣಗಳಿಂದಾಗಿ ಅವರು ಎಲ್ಲರ ಪ್ರೀತಿ-ವಿಶ್ವಾಸ ಗಳಿಸಿದವರು. ಅಜಾತಶತ್ರುಗಳಾಗಿ ನಮ್ಮೊಡನೆ ಲವಲವಿಕೆಯಿಂದ ಓಡಾಡುತ್ತಿದ್ದಾರೆ.

ವಿಚಾರ ಸಂಕಿರಣ, ಕವಿಗೋಷ್ಠಿ ಕಾವ್ಯ-ಕಾವೇರಿ, ಪುಸ್ತಕ ಲೋಕಾರ್ಪಣೆ, ವರ್ತಮಾನದ ತಲ್ಲಣಗಳ ಚರ್ಚೆ, ಸಂಗೀತ, ನಾಟಕ, ಕಾವ್ಯಕಮ್ಮಟ ಚಿತ್ರಕಲಾ ಪ್ರದರ್ಶನ, ಮನೆಗೊಂದು ಸಾಹಿತ್ಯ ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಇವರು ವರ್ಷದುದ್ದಕ್ಕೂ ಕರ್ನಾಟಕ ಸಂಘದಲ್ಲಿ ಏರ್ಪಡಿಸುತ್ತಿದ್ದರು. ಆ ಸಂದರ್ಭದಲ್ಲಿ ಕರ್ನಾಟಕ ಸಂಘವಂತೂ ನಮ್ಮಂತಹ ಬರೆಹಗಾರರ ಪಾಲಿಗೆ ಸಾಂಸ್ಕೃತಿಕ ಕೇಂದ್ರದಂತೆ, ಕರ್ತಾರನ ಕಮ್ಮಟದಂತೆ ಭಾಸವಾಗುತ್ತಿತ್ತು.

ತಾಲೂಕ, ಜಿಲ್ಲಾ, ಮಹಿಳಾ, ಗಡಿನಾಡು ಹಾಗೂ ಹೈದರಾಬಾದ್ ಕರ್ನಾಟಕ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದರ ಮೂಲಕ ಹೊಸ ಬರೆಹಗಾರರಿಗೆ ಅವಕಾಶ ಮಾಡಿಕೊಡುವುದು ; ಈ ಭಾಗದ ಸಾಹಿತ್ಯಿಕ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ವಿದ್ಯಮಾನ, ಕನ್ನಡನಾಡು-ನುಡಿ, ನೆಲ-ಜಲ, ರೈತರ, ಮಹಿಳೆಯರ ಸಮಸ್ಯೆ-ಸವಾಲುಗಳನ್ನು ಕುರಿತು ಚರ್ಚೆಗೊಳಪಡಿಸುವ ಕೆಲಸ ಇಲ್ಲಿ ನಡೆಯುತ್ತಿತ್ತು.

'ಪುಸ್ತಕ ಯಾತ್ರೆ'ಯಂತಹ ವಿನೂತನ ಕಾರ್ಯಕ್ರಮವನ್ನು ಹಾಕಿಕೊಂಡು ಗ್ರಾಮೀಣ ಪ್ರದೇಶದ ಜನರ ಹತ್ತಿರ ಸದಭಿರುಚಿಯ ಪುಸ್ತಕಗಳನ್ನು ತೆಗೆದುಕೊಂಡು ಹೋಗುವುದ ರೊಂದಿಗೆ ಜನರಲ್ಲಿ ಪುಸ್ತಕ ಪ್ರೀತಿಯನ್ನು ಓದುವ ಅಭಿರುಚಿಯನ್ನು ಹುಟ್ಟಿಸುವ ಕೆಲಸವನ್ನು ಮಾಡಿದ್ದುದು ಸದಾ ಸ್ಮರಣೀಯ.

ಪ್ರೇಕ್ಷಣೀಯ-ಐತಿಹಾಸಿಕ ಸ್ಥಳಗಳಾದ ಜಲದುರ್ಗ, ಮಲಿಯಾಬಾದ್ ಕಲ್ಲಾನೆ, ಬೋಳಮಾನದೊಡ್ಡಿ, ಮಾವಿನಕೆರೆ, ಮಕ್ಕಾದರ್ವಾಜಾ, ಕೋಟೆ ಕೊತ್ತಲ ಮುಂತಾದ ಸ್ಥಳಗಳಲ್ಲಿ ಸಾಹಿತ್ಯಿಕ-ವನಭೋಜನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. ಸಾಹಿತ್ಯಾಸಕ್ತರಿಗೆ ಸಾಂಸ್ಕೃತಿಕ ಮತ್ತು ಇತಿಹಾಸದ ದರ್ಶನ ಇದರಿಂದಾಗುತ್ತಿತ್ತು.

'ಬಿಸಿಲಹನಿಗಳು' ಇವರು ಡಾ|| ಅಮರೇಶ ನುಗಡೋಣಿಯವರೊಂದಿಗೆ ಸಂಪಾದಿಸಿ ಪ್ರಕಟಿಸಿದ ಒಂದು ವಿಶಿಷ್ಟ ಮತ್ತು ಮಹತ್ತ್ವದ ಕಥಾಸಂಕಲನ. ಇಲ್ಲಿ ಹೈದರಾಬಾದ್ - ಕರ್ನಾಟಕದ ಪ್ರಮುಖ ಕಥೆಗಾರರ ಒಂದೊಂದು ಕಥೆಯಿದೆ. ಜೊತೆಗೆ ಒಬ್ಬೊಬ್ಬ ಪ್ರಮುಖ ವಿಮರ್ಶಕರಿಂದ ವಿಮರ್ಶೆ ಮಾಡಿಸಲಾಗಿದೆ. ಈ ಭಾಗದ ಕಥನ ಪರಂಪರೆ ಮತ್ತು ಕಥನ ಶಕ್ತಿಯ ಮಹತ್ತ್ವ ; ಇಲ್ಲಿನ ಜನರ ಬಿಸಿಲ ಬದುಕು-ಬವಣೆ, ವಿಶಿಷ್ಟ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕಾದರೆ ಈ ಸಂಕಲನವನ್ನು ಓದಲೇಬೇಕು. ಈ ಪ್ರದೇಶದ ಕಥನ ಪರಂಪರೆಗೆ ಈ ಸಂಕಲನ ಕೈಗನ್ನಡಿಯಂತೆ ; ಆಕರ ಗ್ರಂಥದಂತಿದೆ. ಇದರೊಂದಿಗೆ ಒರೆಗಲ್ಲು, ನವರಂಗ, ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು, ಸೆಲೆ, ಆಕರ, ಹೊನ್ನಸಿರಿ ಮುಂತಾದ ಸಂಕಲನಗಳು ಮತ್ತೆ ಮತ್ತೆ ಮೆಲುಕು ಹಾಕುವಂತಿವೆ.

ಪಂಪಯ್ಯಶೆಟ್ಟಿಯವರು ಪರಿಷತ್ತನ್ನು ಕ್ರಿಯಾಶೀಲ ಚಟುವಟಿಕೆಗಳಿಗಷ್ಟೇ ಸೀಮಿತ ಗೊಳಿಸದೆ ಆರ್ಥಿಕವಾಗಿಯೂ ಗಟ್ಟಿಗೊಳಿಸಿ ಹೊಸ ಆಯಾಮವನ್ನು ನೀಡಿದ್ದರು. ಉಳಿದ ಜಿಲ್ಲೆಗಳಿಗೂ ಪರಿಷತ್ತು ಮಾದರಿಯಾಗುವಂತೆ ಕಟ್ಟಿಬೆಳೆಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಇಂತಹ ಅಪರೂಪದ ಸಂಘಟನಾ ಚತುರ, ಕ್ರಿಯಾಶೀಲ ಮನಸ್ಸಿನ ಚಿಂತಕ, ಸ್ನೇಹಜೀವಿಗೆ ಅಭಿನಂದನಾ ಗ್ರಂಥವನ್ನು ಸಮರ್ಪಿಸುತ್ತಿರುವುದು ಅತ್ಯಂತ ಉಚಿತವಾದುದಾಗಿದೆ.

ಡಾ|| ದಸ್ತಗೀರ್ ಸಾಬ ದಿನ್ನಿ
ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ರಾಯಚೂರು
ಸನಿಹವಾಣಿ : 9448220710

ಪಂಪಯ್ಯ ಶೆಟ್ಟಿಯವರೊಂದಿಗೆ ಕಳೆದ 45 ವರ್ಷಗಳನ್ನು ನೆನೆಯುತ್ತಾ.....

✍ ಭಗತರಾಜ ನಿಜಾಮಕಾರಿ

ಭಾಗ-1

ದೇಶಕ್ಕೆ ಸ್ವಾತಂತ್ರ್ಯ ಬಂದರೂ ರಾಯಚೂರು ನಗರ ಹೈದರಾಬಾದ್ ನವಾಬರ ಕರಾಳ ಆಡಳಿತದಲ್ಲಿ 13 ತಿಂಗಳವರೆಗೆ ಬಲಾತ್ಕಾರ, ಕೊಲೆ, ಸುಲಿಗೆ ಮುಂತಾದ ದೌರ್ಜನ್ಯಕ್ಕೊಳಪಟ್ಟಿತ್ತು. ಸರ್ದಾರ ವಲ್ಲಭಭಾಯ್ ಪಟೇಲರ ಧೀರ ಕ್ರಮದಿಂದಾಗಿ 17-9-1948ರಲ್ಲಿ ವಿಮೋಚನೆಗೊಂಡಿತು. ರಾಯಚೂರು ಪ್ರದೇಶದ ಪರಿಸರ ಭಾಗಶಃ ಉರ್ದು ಮತ್ತು ಭಾಗಶಃ ತೆಲುಗುಮಯವಾಗಿತ್ತು. ಕನ್ನಡವು ಮೇಲ್ವರ್ಗ ಜಾತಿಯವರಿಗೆ ಮಾತನಾಡಲು ಸೀಮಿತವಾಗಿ, ಜನಸಾಮಾನ್ಯರಿಂದ ದೂರವಾಗಿ ಉಳಿದಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಅಚ್ಚ ಕನ್ನಡದ ನೆಲೆಯಾಗಿರುವ ಈ ದೋ-ಆಬ್ ಪ್ರದೇಶವು ನವೆಂಬರ್ 1, 1956 ರಂದು ಕರ್ನಾಟಕ ರಾಜ್ಯಕ್ಕೆ ಸೇರಿತು. ಕನ್ನಡ ಜಾಯಮಾನ, ಜನರ ಒಳದನಿ, ಜನನಾಡಿಯ ಬಡಿತ ಕೇಳಿಸದಂತಾಗಿತ್ತು. ಈ ಕಿಚ್ಚನ್ನು ಹೊರಗೆಡಹಲು ಕನ್ನಡ ಸಂಘಟನೆಗಳ ಹುಟ್ಟು ಅವಶ್ಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ನಾಡು-ನುಡಿ-ಇತಿಹಾಸ-ಪ್ರಜ್ಞೆಯನ್ನು ಎಚ್ಚರಿಸಲು ಕನ್ನಡದಲ್ಲಿಯೇ ಕಾರ್ಯಕ್ರಮಗಳು ನಡೆಯಬೇಕಾಗಿದ್ದವು. ಸ್ಥಳೀಯ ಕರ್ನಾಟಕ ಸಂಘದಲ್ಲಿ ನಾಡಹಬ್ಬ 15ನೆಯ ಆಗಸ್ಟ್‌ನ ಸ್ವಾತಂತ್ರ್ಯೋತ್ಸವ, 26 ಜನವರಿಯ ಗಣರಾಜ್ಯೋತ್ಸವ ಆಚರಿಸಿದರೂ ಗಟ್ಟಿಯಾಗಿ ದೊಡ್ಡ ಪ್ರಮಾಣದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ, ಕಲೆಯ ಕಾರ್ಯಕ್ರಮಗಳು ಮರೀಚಿಕೆಯಾಗಿದ್ದವು. ಪ್ರಥಮ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ರೂಪದಲ್ಲಿ ಈ ಅವಕಾಶ ಒದಗಿಬಂದಿತು.

4 ಮತ್ತು 5 ಡಿಸೆಂಬರ್ 1971 ರಂದು ನಗರದ ಕರ್ನಾಟಕ ಸಂಘದಲ್ಲಿ ಪ್ರಥಮ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ ಜಿಲ್ಲಾಧಿಕಾರಿಗಳಾಗಿದ್ದ ಸಿದ್ಧಯ್ಯ ಪುರಾಣಿಕರು ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ದೇ. ಜವರೇಗೌಡ, ಜಿ. ನಾರಾಯಣ, ಜಯತೀರ್ಥ ರಾಜಪುರಾಹಿತ, ಡಾ. ಪಿ.ಬಿ. ದೇಸಾಯಿ ಮತ್ತು ಪಂಚಾಕ್ಷರಿ ಹಿರೇಮಠರನ್ನು ಅತಿಥಿಗಳನ್ನಾಗಿ ಆಹ್ವಾನಿಸಲಾಗಿತ್ತು. ಕರ್ನಾಟಕ ಸಂಘ ರಾಯಚೂರು ನಗರದ ಸಾಹಿತ್ಯ ಮತ್ತು ಸಾಂಸ್ಕೃತಿಕ

ಕಾರ್ಯಕ್ರಗಳ ಕೇಂದ್ರ ಸ್ಥಳ, ಇದಕ್ಕೆ ತನ್ನದೇ ಆದ ಇತಿಹಾಸವಿದೆ. ಹೈದರಾಬಾದ್ ಕರ್ನಾಟಕದ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಇವುಗಳಕ್ಕಿಂತ ನಿಜಾಮ್ ಸರ್ಕಾರ ಭಾರತದ ಒಕ್ಕೂಟದಲ್ಲಿ ಸೇರದೇ ಮುಸ್ಲಿಮೇತರರಿಗೆ ಭೀಕರವಾಗಿ ಹಿಂಸೆ ಕೊಡುತ್ತಿರುವಾಗ ಅದರ ವಿರುದ್ಧ ಹೋರಾಡುತ್ತಿದ್ದ ಚಳವಳಿಗಾರರ ವೇದಿಕೆಯಾಗಿತ್ತು. ಎರಡು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಕಂಡ ಸಂಸ್ಥೆಯಾಗಿದೆ. ಕಾಡ್ಲೂರು ದೇಸಾಯಿರವರು ಕೊಟ್ಟಿರುವ ಸ್ಥಳದಲ್ಲಿ ಬೃಹದಾಕಾರವಾಗಿ ನಿಂತಿರುವ ಈ ಕಟ್ಟಡದಲ್ಲಿ ಸ್ವಾತಂತ್ರ್ಯಾನಂತರದ ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವಾಗ ಸಹಜವಾಗಿ ರಾಯಚೂರಿನ ಕನ್ನಡ ಅಭಿಮಾನಿಗಳು ಸಂತೋಷಪಟ್ಟಿದ್ದರು. ಕರ್ನಾಟಕ ಸಂಘದ ಹಿಂಬದಿಯ ವಿಶಾಲವಾದ ಬಯಲಲ್ಲಿ ರಂಗಮಂದಿರ. ಅದರ ಎದುರು ಬೃಹತ್ ಮಂಟಪ ನಿರ್ಮಾಣವಾಗುತ್ತಿದ್ದದ್ದನ್ನು ನೋಡುತ್ತಿದ್ದರೆ, ಕನ್ನಡ ದೇವಿಯ ದೇವಾಲಯ ಕಟ್ಟುತ್ತಿದ್ದಂತೆ ಭಾಸವಾಗುತ್ತಿತ್ತು.

ಸ್ಥಳೀಯ ಎಲ್.ವಿ.ಡಿ. ಮತ್ತು ಬಿ.ಆರ್.ಬಿ. ಕಾಲೇಜಿನಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳನ್ನು ಕೂಡಿಸಿ, ವಿದ್ಯಾರ್ಥಿಗಳ ಸ್ವಯಂ ಸೇವಕರ ಒಂದು ದಳ ರಚನೆಯಾಯಿತು. ನಾವು ಈ ಸಮ್ಮೇಳನದ ಸ್ವಯಂ ಸೇವಕರಾಗಿ ಸೇರಿಕೊಂಡು ಕಾರ್ಯನಿರತರಾಗಿದ್ದೆವು. ಈ ವಿದ್ಯಾರ್ಥಿಗಳ ಸ್ವಯಂ ಸೇವಕರಿಗೆ ಒಬ್ಬ ನಾಯಕನನ್ನು ನೇಮಿಸಲಾಗಿತ್ತು. ಆ ನಾಯಕ ಪಾದರಸದಂತೆ ಎಲ್ಲಾ ವಿದ್ಯಾರ್ಥಿ ಸ್ವಯಂಸೇವಕರೊಂದಿಗೆ ಬೆರೆತು ಸಮ್ಮೇಳನದ ಕೆಲಸಗಳು ಸ್ವಂತ ಮನೆಯ ಕೆಲಸಗಳಂತೆ ಮಾಡಲು ಪ್ರೇರಕನಾಗಿದ್ದ. ಆ ನಾಯಕನೇ ನನ್ನ ಗೆಳೆಯ ಹೊಸೂರು ರಾಮಸ್ವಾಮಿಯವರ ಮಗ ಎಚ್. ಪಂಪಯ್ಯಶೆಟ್ಟಿ.

ಸಮ್ಮೇಳನದ ವೇದಿಕೆ ಹತ್ತಿರ ಇರುವ ನನ್ನ ಇಚ್ಛೆಗೆ ಪಂಪಯ್ಯಶೆಟ್ಟಿ ಎಂದೂ ಎದುರಾಡಲಿಲ್ಲ. ಅದಾಗಲೇ ನಾನು ರಾಯಚೂರು ಜಿಲ್ಲಾ ತರುಣ ಬರಹಗಾರ ಮತ್ತು ಕಲಾವಿದರ ಸಂಘ (ರಾ.ತ.ಬ.ಕ. ಸಂಘ)ದ ಕಾರ್ಯದರ್ಶಿಯಾಗಿ ಗುರುತಿಸಿಕೊಂಡಿದ್ದೆ. ಸಮ್ಮೇಳನಕ್ಕೆ ಬರುವ ಅತಿಥಿಗಳನ್ನು, ಸಾಹಿತಿಗಳನ್ನು ಹತ್ತಿರದಿಂದ ನೋಡುವುದು, ಅವರೊಂದಿಗೆ ಆಗಾಗ ಕ್ಲಿಕ್ಕಿಸುವ ಕ್ಯಾಮರಾ ಕಣ್ಣಿಗೆ ಬೀಳುವುದು ನನ್ನ ಬಯಕೆಯಾಗಿತ್ತು. ವೇದಿಕೆಯಲ್ಲಿ ನನ್ನೊಂದಿಗೆ ಹೆಚ್ಚಾಗಿರುತ್ತಿದ್ದವರು ಪಂಪಯ್ಯ ಶೆಟ್ಟಿ, ಕೊಂಡ ಗೋಪಾಲಕೃಷ್ಣ ಮತ್ತು ಕಲ್ಲೂರು ಬಷೀರ್. ವೇದಿಕೆ ಮತ್ತು ಸಮ್ಮೇಳನದ ಗೋಷ್ಠಿಗಳಲ್ಲಿ ವ್ಯವಸ್ಥೆ ಮಾಡಲು ಪಂಪಯ್ಯಶೆಟ್ಟಿ ಮತ್ತು ನಾನು ಇರಲೇಬೇಕಾಗಿತ್ತು. ತೆಲುಗು-ಉರ್ದು ಭಾಷಿಕರೇ ಹೆಚ್ಚಾಗಿದ್ದ ರಾಯಚೂರು ಪರಿಸರದಲ್ಲಿ ಕನ್ನಡ ಕಟ್ಟುವ ಕೆಲಸ ಎಚ್. ಪಂಪಯ್ಯಶೆಟ್ಟರ ನಾಯಕತ್ವದಲ್ಲಿ ಸಾಧ್ಯವೆಂಬುದು ಮನವರಿಕೆಯಾಗಿತ್ತು. ಸಮ್ಮೇಳನದ ನಂತರ ಕನ್ನಡ ಕಟ್ಟುವ ಕೆಲಸ ಮಾಡುವ ಬಗ್ಗೆ ಪಂಪಯ್ಯ ಶೆಟ್ಟಿ ಕೊಂಡ ಗೋಪಾಲಕೃಷ್ಣರು ಸೇರಿ ಚರ್ಚಿಸುತ್ತಿದ್ದೆವು. ದಿನಾಂಕ 4-12-1971ರ ಬೆಳಗ್ಗೆ ನಗರೇಶ್ವರ ದೇವಾಲಯದಿಂದ ಸಿದ್ಧಯ್ಯ ಪುರಾಣಿಕರ ಮೆರವಣಿಗೆ ಪ್ರಾರಂಭವಾಯಿತು. ಇದು ಈ ಭಾಗದ ಜನ ಎಂದೂ ಮರೆಯದ ಮೆರವಣಿಗೆ ಯಾಗಿತ್ತು.

ರಾಯಚೂರು ನಗರವು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸಡಗರದಲ್ಲಿ ತೇಲುತ್ತಿರುವಾಗ ಸಮ್ಮೇಳನದ ಹಿಂದಿನ ದಿನ 3-12-71ರಂದು ಪಾಕಿಸ್ತಾನ ಸೈನಿಕರು ಭಾರತದ ಮೇಲೆ ಆಕ್ರಮಣ ಮಾಡಿದ್ದರು. ಸಮ್ಮೇಳನಾಧ್ಯಕ್ಷರು ಬೆಳಗಾವಿ ಜಿಲ್ಲಾಧಿಕಾರಿಗಳಾಗಿದ್ದರಿಂದ ಅಂದೇ ಬೆಳಗಾವಿಗೆ ಹೋಗಬೇಕಾಯಿತು.

ಸಮ್ಮೇಳನದ ಎರಡನೆಯ ದಿನ ಕವಿಗೋಷ್ಠಿಯ ಈ ಗೋಷ್ಠಿಯಲ್ಲಿ ಹಿರಿಯ ಕವಿಗಳಿಗೆ ಮಾತ್ರ ತಮ್ಮ ಕವನಗಳು ಓದುವ ಅವಕಾಶ ಕೊಡಲಾಗಿತ್ತು. ಆದರೆ ಯುವ ಕವಿಗಳಿಗೆ ಅವರ ಕವನಗಳನ್ನು ಓದಲು ಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಿಲ್ಲ. ಇದನ್ನು ರಾ.ತ.ಬ.ಕ. ಸಂಘದ ವತಿಯಿಂದ ಅಲ್ಲಾಬಕ್ಷ ಲಾಡ್‌ಸಾಬ್ (ಅಲಾಪಿ) ನಾನು, ಮಧುಸೂದನ ಮೊದಲಾದವರು ಅನಿವಾರ್ಯವಾಗಿ ಪ್ರತಿಭಟನೆ ಮಾಡಬೇಕಾಯಿತು. ಕವಿಗೋಷ್ಠಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಚೆನ್ನಣ್ಣ ವಾಲೀಕಾರ್ ತಮ್ಮ ಅಸಹಾಯಕತೆ ಹೇಳಿ ಶಾಂತರಸರತ್ತ ಬೆರಳು ತೋರಿಸಿದರು. ಶಾಂತರಸರೊಂದಿಗೆ ವಾದಿಸಿ ಅದೇ ವೇದಿಕೆಯಲ್ಲಿ ನಾವು ನಮ್ಮ ಕವನವನ್ನು ಓದಿದ್ದು ನೆನಪಾಗುತ್ತಿದೆ. ಅಂದಿನ ನನ್ನ ಈ ಪ್ರತಿಭಟನೆಗೆ ಬೆಂಬಲ ಕೊಡುತ್ತ ಪಂಪಯ್ಯ ಶೆಟ್ಟರವರು ಪ್ರೋತ್ಸಾಹ ನೀಡಿದ್ದು ಮರೆಯಲು ಸಾಧ್ಯವಿಲ್ಲ. ತಮ್ಮ ಹಕ್ಕೊತ್ತಾಯಕ್ಕಾಗಿ ಪಂಪಯ್ಯ ಶೆಟ್ಟರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಈ ಭಾಗದ ಯುವ ಪ್ರತಿಭೆಗಳಿಗೆ ಅವಕಾಶ ಸಿಗದಿದ್ದಾಗ ಸಮ್ಮೇಳನಗಳ ಮುಖ್ಯ ವೇದಿಕೆಯಲ್ಲಿಯೇ ಪ್ರತಿಭಟನೆಯನ್ನು ಮಾಡುತ್ತಿದ್ದುದನ್ನು ನಾವು ನೋಡಿದ್ದೇವೆ.

ಛಲದಂಕ ಮಲ್ಲನಂತೆ ಉಡದ ಹಿಡಿತದಂತೆ ಪಂಪಯ್ಯ ಶೆಟ್ಟಿ ಕನ್ನಡ ಭಾಷೆ, ಸಂಸ್ಕೃತಿ, ಕಲೆಯ ಉಳಿವಿಗಾಗಿ ಸಂಘಟನೆಯೊಂದನ್ನು ಹುಟ್ಟು ಹಾಕಲು ತನ್ನ ಗೆಳೆಯರನ್ನು ಭೇಟಿಯಾಗ ಹತ್ತಿದರು. ಪಂಪಯ್ಯಶೆಟ್ಟಿಯವರ ಕರೆಗೆ ಓಗೊಟ್ಟು ಕರೆದ ಕಡೆಗಳಿಗೆ ನಾನೂ ಹೋಗುತ್ತಿದ್ದೆ. ಉಪ್ಪಾರಪೇಟೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದ ಕೊಠಡಿಯೊಂದರಲ್ಲಿ ಎಲ್.ವಿ.ಡಿ. ಕಾಲೇಜಿನಲ್ಲಿ ಸಭೆ ಸೇರಿಸ ಹತ್ತಿದೆವು. ನಾರದಗಡ್ಡೆ ಮಠದ ಮಠಾಧೀಶರಾಗಿದ್ದ ಶ್ರೀ ಚೆನ್ನಬಸವ ಸ್ವಾಮಿಗಳ (ಶ್ರೀನಾಚೆ) ಸಮ್ಮುಖದಲ್ಲಿ ಹೊಸ ಸಂಘಟನೆಯ ಬಗ್ಗೆ ಚರ್ಚಿಸಿ, ಕನ್ನಡ ಬಳಗವನ್ನು ಅಸ್ತಿತ್ವಕ್ಕೆ ತರಲಾಯಿತು. ಕನ್ನಡ ಬಳಗವು ಅಸ್ತಿತ್ವಕ್ಕೆ ಬರಲು ಪಂಪಯ್ಯಶೆಟ್ಟರ ಪ್ರಯತ್ನ ಮುಖ್ಯವಾಗಿತ್ತು.

ಕನ್ನಡ ಬಳಗಕ್ಕೆ ಸೇರಿದ ಗೆಳೆಯರೆಲ್ಲ ಆಗಿನ್ನು ಕಾಲೇಜಿನ ವಿದ್ಯಾರ್ಥಿಗಳು, ಕುಡಿಮೀಸೆ ಕನ್ನಡ ಸೇನಾನಿಗಳು, ಅವರಿಗೆ ಜಾತಿ, ಮತಗಳ ಬಗ್ಗೆ ತಿಳಿದೇ ಇರಲಿಲ್ಲ. ನಾವೆಲ್ಲ ಕನ್ನಡಮ್ಮನ ಮಕ್ಕಳು. ನಮಗೆ ಕನ್ನಡವೊಂದೇ ಕನಸು. ನಮ್ಮ ಮನಸ್ಸಿನ ತುಂಬೆಲ್ಲ ಕನ್ನಡದ ಕನವರಿಕೆ ತುಂಬಿ ಹೋಗಿದ್ದವು.

ಹಮದರ್ದ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಡಾ॥ ಎಸ್. ಎಂ. ಹುಣಶ್ಯಾಳ ಕನ್ನಡ ಬಳಗದ ಪ್ರಥಮ ಅಧ್ಯಕ್ಷರು, ಕೊಂಡ ಗೋಪಾಲಕೃಷ್ಣ ಉಪಾಧ್ಯಕ್ಷರು,

ಎಚ್. ಪಂಪಯ್ಯಶೆಟ್ಟಿ ಕಾರ್ಯದರ್ಶಿ ಮತ್ತು ನಾನು ಸಂಚಾಲಕನಾಗಿ, ಕಲ್ಲೂರು ಬಷೀರ್ ಅವರನ್ನು ಸಹಕಾರ್ಯದರ್ಶಿಯಾಗಿ ನೇಮಿಸಲಾಗಿತ್ತು. ಸಿದ್ಧಲಿಂಗ ಬೋಳಬಚ್ಚಿ ಬಿ.ಎಸ್. ಹಿರೇಮಠ, ಅಮರೇಶ ಆದವಾನಿ, ಕೊಂಡ ಗೋಪಾಲ, ಗದ್ವಾಲ್ ನರಸಣ್ಣ ಗುರುರಾಜ ಕುಲಕರ್ಣಿ, ಚೂಡಿ ಶ್ರೀನಿವಾಸ, ತ. ರಾಮಕೃಷ್ಣ , ಜಯಪ್ರಕಾಶ, ಭೂಪಾಳ ಶ್ರೀನಿವಾಸ, ಆದೆಪ್ಪ , ಹಲವು ಎಳೆಯ ಗೆಳೆಯರು ಸೇರಿಕೊಂಡು ಅಭಿಮಾನದ ಕನ್ನಡ ಬಳಗವನ್ನು 23-01-1972ರಂದು ಕರ್ನಾಟಕ ಸಂಘದ ಬಯಲು ರಂಗಮಂದಿರದಲ್ಲಿ ಅಸ್ತಿತ್ವಕ್ಕೆ ತರಲಾಯಿತು. ನಾಡಿನ ಹಿರಿಯರು ಕಳುಹಿಸಿದ ಶುಭ ಸಂದೇಶಗಳನ್ನು ನಾನು ಓದುವಾಗ ನಮಗೆ ಇದೇ ದಿನ ಸುಭಾಷಚಂದ್ರ ಬೋಸರ ಜನ್ಮದಿನವೆಂದು ತಿಳಿದು ಬಂತು. ನಮ್ಮೆಲ್ಲರ ಮನಸಸ್ಸುಗಳು ಪ್ರಫುಲ್ಲವಾದವು. ಆದಾಗಲೇ ಪಾಕಿಸ್ತಾನ ಭಾರತದ ಮೇಲೆ ಯುದ್ಧ ಮಾಡಿದ್ದು ಯುದ್ಧದ ತಲ್ಲಣಗಳಲ್ಲಿ ನಮ್ಮ ಕನಸಿನ ಕನ್ನಡ ಬಳಗ ಅಸ್ತಿತ್ವಕ್ಕೆ ಬಂದಿದ್ದು ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ಕನ್ನಡ ಬಳಗವು ಸಾತ್ವಿಕ ಪ್ರತಿಭಟನೆಯ ಪ್ರತೀಕದ ಧ್ವನಿಯಾಗಿ ನಗರದಲ್ಲಿ ಜನಪರ ಕಾರ್ಯನಿರ್ವಹಿಸುತ್ತ ಬಂದಿದ್ದು ನೆನೆದರೆ, ಪಂಪಯ್ಯ ಶೆಟ್ಟಿ ಅವರ ಸಂಘಟನಾ ಧೀಶಕ್ತಿ ಪರಿಚಯವಾಗುತ್ತದೆ.

ಭಾಗ-2

ಮಾನ್ವಿ ತಾಲ್ಲೂಕಿನ ಉಮಳಿ ಹೊಸೂರು ರಾಮಸ್ವಾಮಿ ತಮ್ಮ ಜೀವಮಾನವೆಲ್ಲಾ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಲು ಕಳೆದವರು. ಅಂದಿನ ಪ್ರಸಿದ್ಧ ನಟ, ನಟಿಯರನ್ನು ಕರೆಯಿಸಿ ಅವರೊಂದಿಗೆ ನಟಿಸುವುದು ಪ್ರತಿಷ್ಠೆಯಾಗಿ ತೆಗೆದುಕೊಂಡು ರಾಯಚೂರು, ಮಾನ್ವಿ, ಸಿರಿವಾರ, ಸಿಂಧನೂರು ಮತ್ತು ತುಂಗಭದ್ರಾ ನದಿ ದಡದಾಚೆಗೆ ಆಂಧ್ರದ ನದಿಚ್ಯಾಗಿ, ಆದೋನಿ, ಪೆದ್ದತುಮಲ, ಚಿನ್ನತುಮಲ ಮತ್ತಿತರ ಗಡಿನಾಡು ಕನ್ನಡ ಪ್ರದೇಶದಲ್ಲಿ ನಡೆಯುವ ಕನ್ನಡ ನಾಟಕಗಳಲ್ಲಿ ಪಾತ್ರಧಾರಿಯಾಗಿಯೂ ಪ್ರೇಕ್ಷಕನಾಗಿಯೂ, ರಾಮಸ್ವಾಮಿ ತಪ್ಪದೇ ಹಾಜರಾಗುತ್ತಿದ್ದರು. ನಾಟಕದ ಹುಚ್ಚಿನಿಂದಾಗಿ ಮನೆಯ ಆಸ್ತಿಯೆಲ್ಲಾ ಮಾರಿದ ರಾಮಸ್ವಾಮಿಯವರು ಪ್ರಸಿದ್ಧ ಚಿತ್ರನಟಿ ಆದೋನಿ ಲಕ್ಷ್ಮೀದೇವಿ, ಪ್ರಸಿದ್ಧ ರಂಗನಟಿ ಸುಭದ್ರಮ್ಮ ಮನ್ಸೂರು ಮತ್ತು ಚಿತ್ರ ಮತ್ತು ರಂಗಭೂಮಿಯ ನಟರಾಗಿದ್ದ ದುರ್ಗಾದಾಸ, ಎಲೆವಾಳ ಸಿದ್ಧಯ್ಯ ಸ್ವಾಮಿ ಅವರೊಂದಿಗೆ ರಕ್ತರಾತ್ರಿ. ಚಿತ್ರಾಂಗದ (ಬಬ್ರುವಾಹನ ಚಲನಚಿತ್ರ) ನಾಟಕದಲ್ಲಿ ಆದೋನಿ ಲಕ್ಷ್ಮೀದೇವಿ ಚಿತ್ರಾಂಗದೆ ಪಾತ್ರ ಮತ್ತು ರಾಮಸ್ವಾಮಿ ಅವರ ಅರ್ಜುನನ ಪಾತ್ರ ಸಖತ್ತಾಗಿ ಜನಮೆಚ್ಚುಗೆ ಗಳಿಸಿತ್ತು. ಇದೇ ನಾಟಕದಲ್ಲಿ ಪಂಪಯ್ಯಶೆಟ್ಟಿ ಬಾಲನಟನಾಗಿ ನಟಿಸಿದ ಬಗ್ಗೆ ಕೇಳಿ ಬರುತ್ತದೆ. ಜನರು ಇವರ ನಟನೆ ಹೊಗಳುತ್ತಿದ್ದರೆ ರಾಮಸ್ವಾಮಿಯವರು ಮೈಮರೆತು ಮನೆ-ಮಠ-ಹೊಲ-ವ್ಯಾಪಾರ- ಸಂಬಂಧಗಳನ್ನು ನೆನೆಯದೇ ಯಾವಾಗಲೂ ನಾಟಕ, ನಾಟಕದಲ್ಲಿನ ಪಾತ್ರಗಳಲ್ಲಿ ತಲ್ಲೀನರಾಗುತ್ತಿದ್ದರು. ಇವರ ಈ ಹುಚ್ಚುತನಕ್ಕೆ ಇದ್ದ ಹೊಲಗಳೆಲ್ಲ ಒಂದೊಂದಾಗಿ ಮಾರಾಟವಾಗಹತ್ತಿದ್ದವು.

ಮನೆಯಲ್ಲಿಯ ಬಂಗಾರ, ಬೆಳ್ಳಿ, ಹಣ ನಿಧಾನವಾಗಿ ಕರಗ ಹತ್ತಿದಾಗ ಬಡತನ ಮನೆಮಂದಿಗೆಲ್ಲ ಜರ್ಜರಿತಗೊಳಿಸಹತ್ತಿತು. ಹಿರಿಯ ಮಗ ಪಂಪಯ್ಯಶೆಟ್ಟಿ ಅಜ್ಜಿಯ ಊರಾದ ನದಿಬ್ಯಾಗಿಯಲ್ಲಿ ಓದಬೇಕಾಯಿತು. ತಾವು ಹೊಟ್ಟೆತುಂಬ ಉಂಡು, ಊರಿನವರಿಗೂ ಉಣಬಡಿಸುತ್ತಿದ್ದ ಶೆಟ್ಟರ ಕುಟುಂಬ ಒಂದೊಪ್ಪತ್ತಿನ ಊಟಕ್ಕಾಗಿ ಕಂಗಾಲಾಗಬೇಕಾಯಿತು. ಶೆಟ್ಟಿ ಕೆಟ್ಟಾಗ ಊರು ಬಿಡುತ್ತಾನೆಂಬ ಮಾತು ನಿಜವಾಯಿತು. ಗೂಡು, ಕಪಾಟು ಅಲ್ಲಿ - ಇಲ್ಲಿ ಜಾಡಿಸಿದಾಗ - ಅಲ್ಲಿಯೇ ಬಿದ್ದುಹೋಗಿದ್ದ ಬಂಗಾರದ ಚೂರುಗಳು ಒಟ್ಟುಗೂಡಿಸಿದರೆ ಅದೇ ಸುಮಾರು ನಾಲ್ಕಾರು ತೊಲೆಯಾಗಿತ್ತು. ಅದನ್ನೇ ಬಂಡವಾಳ ಮಾಡಿಕೊಂಡ ಸಿಂಧನೂರು ತಾಲ್ಲೂಕಿನ ಗೋನವಾರ ಬಂದು ಸೇರಿದರು ಹೊಸೂರು ರಾಮಸ್ವಾಮಿ ಮತ್ತು ಅವರ ಕುಟುಂಬ.

ರಾಯಚೂರು ನಗರಕ್ಕೆ ಬರುವ ನಾಟಕ ಕಂಪನಿಗಳು ಬೇಸ್ತವಾರಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ತಮ್ಮ ಡೇರೆಗಳನ್ನು ಹಾಕುತ್ತಿದ್ದವು. ಕರ್ನಾಟಕದ ಪ್ರಸಿದ್ಧ ನಾಟಕ ಕಂಪನಿಗಳು ಮತ್ತು ಹವ್ಯಾಸಿ ನಾಟಕಗಳು ಈ ಬಯಲು ಸ್ಥಳದಲ್ಲಿ ತಿಂಗಳಾನುಗಟ್ಟಲೇ ನಡೆಯುತ್ತಿದ್ದವು. ಈ ಸ್ಥಳದ ಹತ್ತಿರದಲ್ಲಿಯೇ ಹೊಸೂರು ರಾಮಸ್ವಾಮಿ ಪುಟ್ಟದೊಂದು ಕಿರಾಣಿ ಅಂಗಡಿ ನಡೆಸುತ್ತಿದ್ದರು. ಮತ್ತೆ ರಾಮಸ್ವಾಮಿಗಳ ನಾಟಕಪ್ರೇಮ ಚಿಗುರಹತ್ತಿತ್ತು. ನಾಟಕ ಕಂಪನಿಯವರಿಗೆ ರಾಮಸ್ವಾಮಿ ಅಂಗಡಿಯಿಂದಲೇ ದಿನಸಿ ಸರಬರಾಜಾಗುತ್ತಿತ್ತು. ಮೊದಲು ನಗದು ವ್ಯಾಪಾರ, ಅನಂತರ ಅದು ಉದ್ರಿಗೆ ತಿರುಗಿತು. ನಾಟಕಗಳ ಕಲೆಕ್ಷನ್ ಮೇಲೆ ರಾಮಸ್ವಾಮಿಯವರ ಬಾಕಿ ಹಣ ವಸೂಲಿಯಾಗುತ್ತಿತ್ತು.ನಾಟಕ ಕಂಪನಿಗಳು ದಿವಾಳಿಯಾದರೆ ಮುಗಿಯಿತು. ಬಾಕಿ ಇದ್ದರೂ ಮತ್ತೆ ರಾಮಸ್ವಾಮಿ ದಿನಸಿಗಳನ್ನು ಉದ್ರಿಯಾಗಿ ಪೂರೈಸುತ್ತಿದ್ದರು. ಹೀಗಾಗಿ ರಾಮಸ್ವಾಮಿಯವರ ವ್ಯವಹಾರ ತೂತುಬಿದ್ದ ಹಡಗಿನಂತಾಗಿತ್ತು. ಇದ್ದ ಬಂಡವಾಳ ಕರಗಿ ಅಂಗಡಿಯಲ್ಲಿನ ದಿನಸಿ ಸಾಮಗ್ರಿ ಖಾಲಿಯಾಗ ಹತ್ತಿತು. ಅಂಗಡಿ ಮುಚ್ಚಿಕೊಂಡು ರಾಮಸ್ವಾಮಿಯವರು ಮನೆ ಸೇರಿದರು. ಹಿರೇಮಗ ಪಂಪಯ್ಯನವರ ಹೆಗಲಿಗೆ ಹೆಚ್ಚುಕಡಿಮೆ ಮನೆ ಜವಾಬ್ದಾರಿ ಬಂದುಬಿಟ್ಟಿತು.

ಮೂರು ವರ್ಷಗಳ ಕಾಲ ಶ್ರೀ ಕನ್ಯಕಾಪರಮೇಶ್ವರಿ ಪ್ರಾಥಮಿಕ ಶಾಲಾ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಸಹಜವಾಗಿ ಪಂಪಯ್ಯಶೆಟ್ಟರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಡಾ|| ರಾಮಕೃಷ್ಣರವರ ಆತ್ಮೀಯ ವಲಯಕ್ಕೆ ಬರಬೇಕಾಯಿತು. ಕನ್ನಡ ಭಾಷೆ, ಪರಿಸರ ದಟ್ಟವಾಗಿ ಪಸರಿಸಿಕೊಂಡಿತು. ಒಂದು ಕಡೆ ಕಡು ಬಡತನ, ಒಂದುಕಡೆ ಕನ್ನಡಕ್ಕೆ ಕೈಯೆತ್ತುವ ಕೆಲಸ, ಅನಿವಾರ್ಯವಾಗಿ ಪಂಪಯ್ಯ ಶೆಟ್ಟರು ಅಂಗಡಿಗಳಲ್ಲಿ ಹೊಟೆಲುಗಳಲ್ಲಿ ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು. ಗೆಳೆಯರೊಂದಿಗೆ ಸೇರಿ ಫೈನಾನ್ಸ್ ನಡೆಸಹತ್ತಿದರು. ಆದರೆ ಇವು ಅವರಿಗೆ ಒಗ್ಗಲಿಲ್ಲ. ಕಾಮರ್ಸ್ ಪದವಿ ಪಡೆದು ಟೈಪಿಂಗ್ ಬಲ್ಲವರಾಗಿದ್ದರಿಂದ ಸ್ಥಳೀಯ ಟ್ಯಾಗೋರ್ ಮೆಮೋರಿಯಲ್ ಪದವಿಪೂರ್ವ ಕಾಲೇಜಿನಲ್ಲಿ

ಕ್ಲರ್ಕ್-ಕಂ- ಟೈಪಿಸ್ಟ್‌ರಾಗಿ ಹುದ್ದೆಗೆ ಸೇರಿಕೊಂಡರು. ಆಗ ಇವರ ಮನೆಯ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತೆನ್ನಬಹುದು.

ಪ್ರಥಮ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಾದರಸದಂತೆ ವಿದ್ಯಾರ್ಥಿ ಸ್ವಯಂ ಸೇವಕರ ನಾಯಕನಾಗಿ ; ಕನ್ನಡ ಬಳಗದ ಕೆಲಸಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಂಡ ಪಂಪಯ್ಯ ಶೆಟ್ಟಿ ರಾಯಚೂರಿನ ಸಾಹಿತಿಗಳ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೆ ಬಹಳ ಹತ್ತಿರವಾಗಹತ್ತಿದರು. ಆರ್. ಆಂಜನೇಯಲು ಅಧ್ಯಕ್ಷರಾಗಿದ್ದಾಗ ಪಂಪಯ್ಯ ಶೆಟ್ಟಿ ಪರಿಷತ್ತಿನ ಕಾರ್ಯದರ್ಶಿಯಾಗಿ, ಕೋಶಾಧ್ಯಕ್ಷರಾಗಿ ಸಲ್ಲಿಸಿದ ಸೇವೆಯ ಪರಿಣಾಮ 1991ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನೇಮಕಗೊಂಡರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗ ಪರಿಷತ್ತಿನ ರೂಪು-ರೇಷೆಗಳೇ ಬದಲಾದವು. ಒಡೆದುಹೋಗಿದ್ದ ಮನಸ್ಸುಗಳನ್ನೆಲ್ಲ ಒಗ್ಗೂಡಿಸಿ, ಕನ್ನಡ ಕೆಲಸಕ್ಕೆ ಆಹ್ವಾನ ನೀಡುತ್ತಿದ್ದ ಪರಿ ಅನನ್ಯ. ಪರಿಷತ್ತಿನ ಬಗ್ಗೆ ಜನರಲ್ಲಿ ಒಲವು ಮೂಡಹತ್ತಿತ್ತು. ನಗರದಲ್ಲಿ ಎರಡನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಾಡಲು ತೀರ್ಮಾನಿಸಿದರು. ಆದರೆ ಆರ್ಥಿಕವಾಗಿ ಬಲಿಷ್ಠವಾಗಿರದ ಪರಿಷತ್ತಿನ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ಈಗಿನಂತೆ ಅಂದು ಸಮ್ಮೇಳನ ನಡೆಸಲು ಸರ್ಕಾರದಿಂದ ಅನುದಾನ ಪಡೆಯುವ ಅವಕಾಶ ಇರಲಿಲ್ಲ. ಸ್ಥಳೀಯ ದಾನಿಗಳಿಂದ ಸಂಗ್ರಹವಾಗುವ ಹಣದಿಂದ ಸಮ್ಮೇಳನ ಏರ್ಪಾಡು ಮಾಡಬೇಕಾಗಿತ್ತು. ಸಮ್ಮೇಳನ ಮಾಡಲೇಬೇಕೆಂಬ ದೃಢನಿರ್ಧಾರದ ಪ್ರಯುಕ್ತ ಹಣ ಸಂಗ್ರಹವಾಗದ ಪರಿಸ್ಥಿತಿಯಲ್ಲಿಯೂ ಸಮ್ಮೇಳನ ನಡೆಯುವ ಬಗ್ಗೆ ಪ್ರಕಟಿಸಿದರು. ಎ. ಪಾಪರೆಡ್ಡಿ ಅವರನ್ನು ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಆರಿಸಿಕೊಂಡರು. ಸಮ್ಮೇಳನದ ಸರ್ವಾಧ್ಯಕ್ಷರಾಗಿ ಹಿರಿಯ ಸಾಹಿತಿಗಳಾದ ಶಾಂತರಸರ ಹೆಸರನ್ನು ಪ್ರಕಟಿಸಿದರು. ಆಗ ಜಿಲ್ಲೆಯಲ್ಲಿ ಸಮ್ಮೇಳನದ ಬಗ್ಗೆ ವಿದ್ಯುತ್ ಸಂಚಲನ ಮೂಡಿತು. ಸಮ್ಮೇಳನದ ದಿನಗಳು ಸಮೀಪಿಸಿದಂತೆಲ್ಲಾ ಹಣ ಸಂಗ್ರಹವಾಗದ ಚಿಂತೆ ಕಾಡುತ್ತಿದ್ದರೂ ಪಂಪಯ್ಯಶೆಟ್ಟರು ಯಾವುದಕ್ಕೂ ಹೆದರದೇ ಆತ್ಮವಿಶ್ವಾಸ ಬೆಳೆಸಿಕೊಂಡು ಎರಡನೆಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ 1992ರಲ್ಲಿ ನಡೆಸಿಯೇ ಬಿಟ್ಟರು. ದೂರ-ದೂರದಲ್ಲಿದ್ದ ಸಾಹಿತಿಗಳು ಕೂಡಿ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಸಮ್ಮೇಳನ ಯಶಸ್ವಿಯಾಗಲು ರಾಮಣ್ಣ ಹವಳೆ, ಶೇಖರಪ್ಪ ಹುಲಿಗೇರಿ ಇವರ ಸಹಕಾರವನ್ನು ಪಂಪಯ್ಯಶೆಟ್ಟರು ಸ್ಮರಿಸಿಕೊಳ್ಳುತ್ತಿದ್ದರು. ಸಮ್ಮೇಳನದ ಪ್ರಾರಂಭದಲ್ಲಿ ಹಣ ಸಂಗ್ರಹವಾಗದೇ ಇರುವಾಗ ತಮ್ಮ ಹೊಲದ ಮಾರಾಟದಿಂದ ಬಂದಿದ್ದ ರೂ. 43,000/- ಗಳನ್ನು ಬಳಸಲು ಮುಂದಾಗಿದ್ದರು. ಆದರೆ ಹಣ ಸಂಗ್ರಹವಾಗಿದ್ದರಿಂದ ಸಮ್ಮೇಳನ ಸಾಂಗವಾಗಿ ನಡೆಯಿತು. ಪಂಪಯ್ಯ ಶೆಟ್ಟಿ ಸಮ್ಮೇಳನ ಮುಗಿದ ನಂತರ ಹೊಸ ಚೈತನ್ಯ ಪಡೆದರೆಂದು ಹೇಳಬಹುದು. ಸಮ್ಮೇಳನದ ಯಶಸ್ಸಿನಿಂದಾಗಿ ಸಂತೋಷವಾಗಿದ್ದ ಪಂಪಯ್ಯ ಶೆಟ್ಟಿ 1993ರಲ್ಲಿ 62ನೇ ಅಖಿಲ ಭಾರತ ಕನ್ನಡ

ಸಾಹಿತ್ಯ ಸಮ್ಮೇಳನ ಕೊಪ್ಪಳದಲ್ಲಿ ಜರುಗಲು ಕಾರಣರಾದರು. ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಮಾಡಿರುವ ಕೆಲಸಗಳು ಇವರ ಸಂಘಟನಾ ಶಕ್ತಿ ಮತ್ತು ಯೋಜನಾ ಬದ್ಧವಾದ ಕಾರ್ಯಗಳು ಇವರ ಕ್ರಿಯಾಶೀಲತೆಗೆ ರುಜುವಾತು ನೀಡಿದವು. ಇದರ ಫಲವಾಗಿ ಇವರನ್ನು ರಾಯಚೂರು ಜಿಲ್ಲೆಯ ಅಧ್ಯಕ್ಷರನ್ನಾಗಿ ಅನಂತರದ 1995 ಮತ್ತು 1998ರ ಅವಧಿಗೆ ಪುನಃ ಚುನಾಯಿಸಲಾಯಿತು. ಸತತವಾಗಿ 10 ವರ್ಷಗಳ ಅವಧಿಗೆ ಇವರು ರಾಯಚೂರು (ಅವಿಭಜಿತ) ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಮಾಡಿದ ಕನ್ನಡದ ಕೆಲಸಗಳು ಅವಿಸ್ಮರಣೀಯ.

ಪಂಪಯ್ಯ ಶೆಟ್ಟಿಯವರು ತಮ್ಮ ಅವಧಿಯಲ್ಲಿಯೇ ಹೈದರಾಬಾದ್ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಬಯಕೆ ಹೊಂದಿದ್ದರು. ಅದಕ್ಕಾಗಿ ಎಲ್ಲಾ ಏರ್ಪಾಟು ಮಾಡಿಕೊಂಡಿದ್ದರು. ಅಧ್ಯಕ್ಷರ ಅವಧಿ ಮುಗಿಯುತ್ತಿದ್ದಂತೆ ಅವಸರವಾಗಿ ಯಾವುದೇ ಕಾರ್ಯಕ್ರಮ ಮಾಡಬಾರದೆಂದು ತೀರ್ಮಾನಿಸಿ ಮುಂದಿನ ಅವಧಿಗೆ ಅಧ್ಯಕ್ಷರಾಗಿ ಚುನಾಯಿತರಾದ ಎಸ್. ಶರಣೇಗೌಡ ಅವರಿಗೆ ಪರಿಷತ್ತಿನ ಅಧಿಕಾರ ಹಾಗೂ ನಿಧಿಯಲ್ಲಿದ್ದ 72,000/-ಗಳನ್ನು ಹಸ್ತಾಂತರಿಸಿ ಹೈದರಾಬಾದ್ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಕನ್ನಡ ಪುಸ್ತಕಗಳ ಪ್ರಕಟಣೆಗಾಗಿ ಅನುವು ಮಾಡಿಕೊಟ್ಟರು. ಪರಿಷತ್ತಿಗೆ ಅಧ್ಯಕ್ಷರಾಗಿ ಖಾಲಿ ನಿಧಿ ಯೊಂದಿಗೆ ಅಧಿಕಾರ ಪಡೆದು ಅನಂತರ ತಮ್ಮ ಅಧಿಕಾರ ಹಸ್ತಾಂತರಿಸುವಾಗ ಕನ್ನಡ ಸಾಹಿತ್ಯ ಪರಿಷತ್ತನ್ನು ಆರ್ಥಿಕವಾಗಿ ಸದೃಢವಾಗಿರಿಸಿದ್ದನ್ನು ಪಂಪಯ್ಯ ಶೆಟ್ಟಿಯವರ ಶಿಸ್ತು ಮತ್ತು ಸನ್ನಡತೆಯ ಹೆಗ್ಗಳಿಕೆಗೆ ಸಾಕ್ಷಿಯಾಗುತ್ತದೆ.

ಭಾಗ-3

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರದಿಂದ ದೂರಾದ ಪಂಪಯ್ಯ ಶೆಟ್ಟಿಯವರ ಮನಸ್ಸು ಕನ್ನಡ ಸಾರಸ್ವತದಿಂದಾಗಲಿ, ಕನ್ನಡದ ಕೆಲಸದಿಂದಾಗಲಿ ದೂರವಾಗಲು ಸಾಧ್ಯವಾಗಲಿಲ್ಲ. ರಾಯಚೂರು ವಾಣಿ ದಿನಪತ್ರಿಕೆ ಸಂಪಾದಕರಾಗಿದ್ದ ಎನ್.ಕೆ. ಕುಲಕರ್ಣಿ ಸುದ್ದಿಮೂಲ ದಿನಪತ್ರಿಕೆ ಸಂಪಾದಕರಾದ ಬಸವರಾಜ ಸ್ವಾಮಿ, ಇಂಡಿಯನ್ ಎಕ್ಸ್‌ಪ್ರೆಸ್ ಹಿರಿಯ ಪತ್ರಕರ್ತರಾದ ಕೆ. ರಾಮಕೃಷ್ಣ ಹಿಂದೂ ದಿನಪತ್ರಿಕೆಯ ಹಿರಿಯ ವರದಿಗಾರರಾಗಿದ್ದ ಎ. ಮದ್ದುರಾವ್, ಪ್ರಜಾವಾಣಿ ಪತ್ರಿಕೆಯ ಹಿರಿಯ ವರದಿಗಾರರಾದ ಭಾಸ್ಕರ ರಾವ್ ಮತ್ತು ಪತ್ರಿಕೆಗಳ ಸ್ನೇಹಿತರ ಒಡನಾಟ ಹೊಂದಿದ ಇವರಿಗೆ ತಮ್ಮ ಜಾತಿಯ ಬಂಧುಗಳ ಕಷ್ಟಸುಖ, ಸಂತೋಷಗಳನ್ನು ದಾಖಲಿಸಲು ಸಮಾಜದ ಪತ್ರಿಕೆಯ ಅವಶ್ಯಕತೆ ಮತ್ತು ಅನಿವಾರ್ಯತೆ ಮನಗಂಡಿದ್ದರು. ಇವರು ತಮ್ಮ ಜನಾಂಗದ ಬರಹಗಾರರನ್ನು, ದಾನಿಗಳನ್ನು, ಮಹಾನುಭಾವರನ್ನು, ಪರಿಚಯ ಮಾಡಲು ರಾಜ್ಯದ ಮೂಲೆ ಮೂಲೆಗೆ ತಾವೊಬ್ಬರೇ ಪ್ರವಾಸ ಮಾಡಿ, ಸಮಾಜದ ಬಂಧುಗಳನ್ನು ಭೇಟಿಯಾಗಿ ಪತ್ರಿಕೆ ಪ್ರಚಾರ ಮಾಡಿದರು. 2001ರಲ್ಲಿ ರಾಜ್ಯಮಟ್ಟದ ಪ್ರಸಾರವುಳ್ಳ ವೈಶ್ಯವಾರ್ತಾ ಮಾಸ ಪತ್ರಿಕೆ ಹುಟ್ಟು ಹಾಕಿದರು.

ಶಾರದಾ ಪಂಪಯ್ಯಶೆಟ್ಟರವರು ಪತ್ರಿಕೆಯ ಸಂಪಾದಕರಾಗಿದ್ದರೂ ಪತ್ರಿಕೆಯ ಪೂರ್ಣ ಪ್ರಮಾಣದ ಸಂಪಾದನೆಯನ್ನು ಪಂಪಯ್ಯಶೆಟ್ಟರೇ ನಿರ್ವಹಿಸುತ್ತಿದ್ದರು. ಆರ್ಯವೈಶ್ಯ ಸಮಾಜದ ಸುದ್ದಿಗಳನ್ನು ರಾಜ್ಯದ ಮೂಲೆ ಮೂಲೆಗೆ ಮುಟ್ಟಿಸುವ ಕೆಲಸ ಮಾಡಿದರು. ದೈವಭಕ್ತಿಯುಳ್ಳ ಆರ್ಯವೈಶ್ಯರು ವ್ಯಾಪಾರಿ ಮನೋಭಾವ ಹೊಂದಿದ್ದರೂ ವೈಶ್ಯವಾರ್ತಾ ಪತ್ರಿಕೆಯನ್ನು ಆನಂದದಿಂದ ಸ್ವೀಕರಿಸಿದರು. ವೈಶ್ಯವಾರ್ತಾ ಇಂದಿಗೂ ಸತತವಾಗಿ ಪ್ರಕಟವಾಗುತ್ತಿರುವ ವೈಶ್ಯ ಜನಾಂಗದ ಮಾಸಪತ್ರಿಕೆ ತನ್ನ ದಶಮಾನೋತ್ಸವ ಸಮಾರಂಭವನ್ನು ಬಹಳ ಅಚ್ಚುಕಟ್ಟಾಗಿ ಆಚರಿಸಿ, ಪತ್ರಿಕೆಗಾಗಿ ದುಡಿದ ಸಮಾಜದವರನ್ನು ಆಹ್ವಾನಿಸಿ ಸತ್ಕರಿಸಿತು.

ಹೈದರಾಬಾದ್ ಕರ್ನಾಟಕ ಪ್ರದೇಶದ ಪಂಪಯ್ಯ ಶೆಟ್ಟರವರು ಹಳೆಯ ಮೈಸೂರು, ಮದ್ರಾಸ್ ಪ್ರಾಂತ, ಮುಂಬೈ ಕರ್ನಾಟಕದ ಆರ್ಯವೈಶ್ಯರ ಮನೋಧರ್ಮ ಹಾಗೂ ನಾಡಿಮಿಡಿತ ಅರಿತು ಅವರಿಗೆ ಬಹಳ ನಿಕಟವಾಗಿ ವೈಶ್ಯ ಸಮಾಜದಲ್ಲಿರುವ ಲೇಖಕರು, ಕವಿಗಳು, ಕಥೆಗಾರರು, ಕಲಾವಿದರುಗಳನ್ನು ಹೆಕ್ಕಿ ಬೆಳಕಿಗೆ ತಂದರು. ಪಂಪಯ್ಯ ಶೆಟ್ಟರು ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಿದರು. ಪಂಪಯ್ಯ ಶೆಟ್ಟರನ್ನೇ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಪ್ರಥಮ ರಾಜ್ಯಾಧ್ಯಕ್ಷರನ್ನಾಗಿ ಸಮಾಜದ ಸಾಹಿತ್ಯ ಸಂಕುಲವು ಚುನಾಯಿಸಿತು. ಈವರೆಗೆ ಆರು ರಾಜ್ಯ ಆರ್ಯವೈಶ್ಯ ಸಾಹಿತ್ಯ ಸಮ್ಮೇಳನಗಳು ಜರುಗಿದವು. ಮೂರನೆಯ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಸಮ್ಮೇಳನ ರಾಯಚೂರಿನಲ್ಲಿ ಬಹು ಶಿಸ್ತುಬದ್ಧವಾಗಿ ಯಶಸ್ವಿಯಾಗಿ ನಡೆಯಲು ಅವರ ಯೋಜನಾಬದ್ಧ ವ್ಯವಸ್ಥೆ ನೋಡಿದ ನನಗೆ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ನೆನಪಿಗೆ ಬಂದವು.

ಈಗಲೂ ಪಂಪಯ್ಯಶೆಟ್ಟರು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸಂಪರ್ಕದಲ್ಲಿರುವುದರಿಂದ ಅವರು ಏರ್ಪಡಿಸಿರುವ ಆರ್ಯವೈಶ್ಯ ಕನ್ನಡ ಸಾಹಿತ್ಯ ಸಮ್ಮೇಳನಗಳು, ಸಮಾವೇಶಗಳು, ಸಾಹಿತ್ಯ ಗೋಷ್ಠಿಗಳು ಅದರ ಗಮನಕ್ಕೂ ಬಂದಿದೆ. ಒಂದು ಸಮಾಜಕ್ಕೆ ಸೀಮಿತವಾಗಿರುವ ಈ ಪರಿಷತ್ತಿನ ಲೇಖಕರು ನಾಡಿನ ಪ್ರಸಿದ್ಧ ಲೇಖಕರ, ಬರೆಹಗಾರರ ಗಮನ ಸೆಳೆಯುತ್ತಿದ್ದಾರೆ. ಇದರ ಶ್ರೇಯಸ್ಸು ಪಂಪಯ್ಯ ಶೆಟ್ಟರಿಗೆ ಸಲ್ಲಬೇಕು.

ಪಂಪಯ್ಯಶೆಟ್ಟರಿಗೆ ಈಗಲೂ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರ ವಲಯದಲ್ಲಿ ವಿಶಿಷ್ಟ ಗೌರವವಿದೆ. ಪರಿಷತ್ತಿಗಾಗಿ ಮಾಡಿರುವ ಕನ್ನಡ ಸೇವೆ ಅಪಾರವಾದುದು. ಈ ಕೊಡುಗೆಯನ್ನು ಗಮನಿಸುತ್ತ ಬಂದ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಚಿತ್ರದುರ್ಗದಲ್ಲಿ ನಡೆದ 75ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಿತು.

ಬೆಂಗಳೂರಿನಲ್ಲಿ ನಡೆದ ಎರಡನೆಯ ಆರ್ಯವೈಶ್ಯ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರು ಜಿಲ್ಲೆ ಮತ್ತು ಕೊಪ್ಪಳ ಜಿಲ್ಲೆಗಳ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಇವರ ಕನ್ನಡ ಸೇವೆಯನ್ನು ಮುಕ್ತಕಂಠದಿಂದ ಹೊಗಳಿ ಆತ್ಮೀಯವಾಗಿ ಸನ್ಮಾನಿಸಿದ್ದು ಮರೆಯಲು ಸಾಧ್ಯವಿಲ್ಲ.

ರಾಯಚೂರು ಜಿಲ್ಲಾಡಳಿತ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು ನೆನಪಿನಲ್ಲಿಡುವಂತಹ ಸಂಗತಿ.

ಮಾನ್ವಿ ತಾಲ್ಲೂಕಿನ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನ

5-6-2013 ರಂದು ಪಂಪಯ್ಯಶೆಟ್ಟಿಯವರು ಎಂದೂ ಮರೆಯದ ಸುದಿನ. ಮಾನ್ವಿ ತಾಲ್ಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಕನ್ನಡದ ಕಟ್ಟಾಳು, ಕನ್ನಡ ಭಾಷೆ, ಸಂಸ್ಕೃತಿ ಮತ್ತು ಕಲೆಗಾಗಿ ಹಗಲಿರುಳೆನ್ನದೆ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಪಂಪಯ್ಯಶೆಟ್ಟರನ್ನು ಸರ್ವಾನುಮತದಿಂದ ಆಯ್ಕೆಮಾಡಿದರು. ಎನ್.ಎಸ್. ಬೋಸರಾಜು ಶಾಸಕರವರ ನೇತೃತ್ವದಲ್ಲಿ ಏರ್ಪಡಿಸಿರುವ ಸಮ್ಮೇಳನದ ದಿನ ತರಿಸಿದ ಬೆಳ್ಳಿಯಂತಿರುವ ಸಾರೋಟಿನಲ್ಲಿ ಪಂಪಯ್ಯಶೆಟ್ಟಿ ಅವರನ್ನು ನಗರದಲ್ಲಿ ಮೆರವಣಿಗೆ ಮೂಲಕ ನಗರ ದೇವಸ್ಥಾನದ ಸಭಾಂಗಣಕ್ಕೆ ಕರೆತರಲಾಯಿತು. ಈ ಮೆರವಣಿಗೆಯಲ್ಲಿ ಡೋಲು, ಬಾಜಾ, ಭಜಂತ್ರಿ, ಕೋಲಾಟ, ಸಾಂಸ್ಕೃತಿಕ ಕಲಾವಿದರೊಂದಿಗೆ ನಗರದ ಗಣ್ಯರು ಪಾಲ್ಗೊಂಡಿದ್ದು ನೋಡಲು ಆನಂದವಾಗಿತ್ತು. ಆರ್ಯವೈಶ್ಯ ಸಮಾಜದ ಬಂಧುಗಳು, ಸ್ನೇಹಿತರು, ಅಭಿಮಾನಿಗಳು ಮತ್ತು ಕುಟುಂಬದ ಸದಸ್ಯರ ಮುಖಗಳಲ್ಲಿ ಧನ್ಯತಾ ಭಾವನೆ ಎದ್ದು ಕಾಣುತ್ತಿತ್ತು.

ರಾಯಚೂರಿನ ಜಿಲ್ಲಾಧಿಕಾರಿಗಳಾಗಿದ್ದ ಜಿ. ಕುಮಾರ ನಾಯಕ ಅವರೊಂದಿಗೆ ನಾವು ಆತ್ಮೀಯರಾಗಿ ಮತ್ತು ಆಪ್ತವಾಗಿದ್ದ ಸಮಯದ ಎರಡು ಪ್ರಸಂಗಗಳು ನೆನಪಿಗೆ ಬರುತ್ತಿವೆ.

1) ರಾಜ್ಯೋತ್ಸವ ಮತ್ತು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ ಕಾರ್ಯಕ್ರಮಗಳಿಗೆ ನಡೆಯುವ ಪೂರ್ವಭಾವಿ ಸಿದ್ಧತೆ ಸಭೆಗಳಿಗೆ ಪಂಪಯ್ಯಶೆಟ್ಟಿ ನಾನು ಜಿಲ್ಲಾಧಿಕಾರಿಗಳು ಕರೆದ ಸಭೆಗೆ ಹಾಜರಾಗುತ್ತಿದ್ದೆವು. ಕರ್ನಾಟಕ ಸಂಘದ ಇತಿಹಾಸವನ್ನು, ಸ್ವಾತಂತ್ರ್ಯದ ಹೋರಾಟಕ್ಕೆ ಈ ಸಂಘವು ನೀಡಿದ ಕೊಡುಗೆಯನ್ನು ವಿವರಿಸಿ, ಕನ್ನಡ ಕಾರ್ಯಕ್ರಮಗಳು ಅಲ್ಲಿಯೇ ನಡೆಯಬೇಕೆಂದು ಪಟ್ಟು ಹಿಡಿಯುತ್ತಿದ್ದೆವು. ಇದರ ಫಲವಾಗಿ ರಾಜ್ಯೋತ್ಸವ ಮತ್ತು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯಂತಹ ಸರ್ಕಾರದ ಕಾರ್ಯಕ್ರಮಗಳು ಅಲ್ಲೇ ನಡೆಯುವಂತಾದವು. ಪರಿಷತ್ತಿನ ಅಧ್ಯಕ್ಷರನ್ನು ಕಾರ್ಯಕ್ರಮಗಳ ಅಧ್ಯಕ್ಷರನ್ನಾಗಿ ಆಹ್ವಾನಿಸುವ ಪರಿಪಾಠ ಪ್ರಾರಂಭವಾಗಲು ಕಾರಣವಾದೆವು. ಮಾಜಿ ಮುಖ್ಯಮಂತ್ರಿ ಎನ್. ಧರ್ಮಸಿಂಗ್ ರವರು ಪಾಲ್ಗೊಂಡ ಕಾರ್ಯಕ್ರಮವೊಂದರಲ್ಲಿ ಪಂಪಯ್ಯ ಶೆಟ್ಟರು ಅಧ್ಯಕ್ಷ ಸ್ಥಾನದಿಂದ ರಾಯಚೂರು ಜಿಲ್ಲೆಗೆ ಆಗುತ್ತಿರುವ ಅನ್ಯಾಯ ಮತ್ತು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ರಂಗದಲ್ಲಿ ಸರ್ಕಾರ ಅನುಸರಿಸುತ್ತಿರುವ ಮಲತಾಯಿ ಧೋರಣೆಯನ್ನು ಎತ್ತಿ ತೋರಿಸಿ, ಈ ಭಾಗಕ್ಕೆ ಸಿಗಬೇಕಾದ ಪ್ರಶಸ್ತಿಗಳ ಬಗ್ಗೆ ಧ್ವನಿ ಎತ್ತಿದ್ದರು.

ಡಾ|| ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಕನ್ನಡ ಕ್ರಿಯಾ ಸಮಿತಿ ಮತ್ತಿತರ ಕನ್ನಡ ಸಂಘಟನೆಗಳು ಕೂಡಿಕೊಂಡು ಈಗಿರುವ ಅಂಬೇಡ್ಕರ್ ವೃತ್ತದ ಮಧ್ಯದಲ್ಲಿ ಧ್ವಜಸ್ತಂಭ

ಸ್ಥಾಪನೆಗಾಗಿ ಧರಣಿ ಮಾಡುತ್ತಿದ್ದರು. ಈ ಧರಣಿ ಸತ್ಯಾಗ್ರಹಕ್ಕೆ ನಾವಿಬ್ಬರೂ ಬೆಂಬಲ ಸೂಚಿಸಿದ್ದೆವು. ಈ ಧರಣಿಗೆ ಹೊಸ ಅರ್ಥ ಬಂದು ಧರಣಿ ಕುಳಿತವರಲ್ಲಿ ಹೊಸ ಚೈತನ್ಯ ಬಂದಂತಾಗಿ, ಅದು ರಾಜಕೀಯ ಸ್ವರೂಪ ಪಡೆದುಕೊಂಡಿತು. ನಗರಸಭೆಯ ಅಧ್ಯಕ್ಷರಾಗಿದ್ದ ಎಂ. ಈರಣ್ಣನವರು ನಮ್ಮಿಬ್ಬರ ಬಗ್ಗೆ ಅಸಮಾಧಾನಗೊಂಡು, ಸಿಟ್ಟಾಗಿದ್ದರು. ಧರಣಿ ನಿರತರಾದ ಅಭಿಮಾನಿಗಳ ಸಂಘದ ಸದಸ್ಯರೊಂದಿಗೆ, ನಮ್ಮನ್ನು ಜಿಲ್ಲಾಧಿಕಾರಿಗಳು ಸಭೆಗೆ ಕರೆದಿದ್ದರು. ಸಭೆಗೆ ಬಂದಿದ್ದ ನಗರಸಭಾಧ್ಯಕ್ಷರು ಜಿಲ್ಲಾಧಿಕಾರಿಗಳ ಎದುರೇ ನಮ್ಮನ್ನು ತರಾಟೆಗೆ ತೆಗೆದುಕೊಂಡರು. ನಮ್ಮ ಹೋರಾಟಕ್ಕೆ ಆಕ್ಷೇಪ ವ್ಯಕ್ತಪಡಿಸುವಾಗ ನಾವು ಹೋರಾಟದ ಧೋರಣೆಗಳ ಬಗ್ಗೆ ತಿಳಿಸಿದೆವು. ನಮ್ಮ ಬೇಡಿಕೆಗೆ ಜಿಲ್ಲಾಧಿಕಾರಿ ಜಿ. ಕುಮಾರ ನಾಯಕರು ಒಪ್ಪಿಗೆ ಸೂಚಿಸಿ ಅಲ್ಪ ಬದಲಾವಣೆಯೊಂದಿಗೆ ನಮ್ಮ ಪರವಾಗಿ ಅಂತಿಮ ತೀರ್ಮಾನಕ್ಕೆ ಬಂದಿದ್ದರಿಂದ ನಗರಸಭೆ ಅಧ್ಯಕ್ಷರಾದ ಎಂ. ಈರಣ್ಣನವರು ಶಾಂತರಾಗ ಬೇಕಾಯಿತು.

ಕನ್ನಡ ಧ್ವಜವು ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪುತ್ಥಳಿಯ ಹತ್ತಿರದಿಂದ, ಅನತಿ ದೂರದಲ್ಲಿರುವ ಮಕ್ಕಾ ದರವಾಜ ಎತ್ತರದ ಆವರಣದಲ್ಲಿ ಹಾದು-ಹೋಗುವವರಿಗೆ ಕಾಣುವಂತೆ ಶಾಶ್ವತವಾಗಿ ಹಾರಿಸಲು ಕಟ್ಟೆ ಕಟ್ಟುವ ತೀರ್ಮಾನಕ್ಕೆ ಬರಲಾಯಿತು. ರಾಯಚೂರು ನಗರಕ್ಕೆ ಬೇರೆ ಕಡೆಯಿಂದ ಬರುವವರಿಗೆ ತಕ್ಷಣವೇ ಎದ್ದು ಕಾಣುವಂತೆ ಕನ್ನಡ ಧ್ವಜ ಸ್ತಂಭ ಸ್ಥಾಪಿಸಲಾಯಿತು. ನಾಲ್ಕು ದಿಕ್ಕುಗಳಿಂದ ಬಂದು ಕೂಡುವ ವಿಸ್ತಾರವಾಗಿರುವ ರಸ್ತೆಗಳು, ವಿಶಾಲವಾದ ಅಂಬೇಡ್ಕರ್ ವೃತ್ತ (ಈ ವೃತ್ತದಿಂದಲೇ ಸಾಂಸ್ಕೃತಿಕ, ರಾಜಕೀಯ ಪ್ರತಿಭಟನೆ, ಮೆರವಣಿಗೆಗಳು, ಜಾಥಾಗಳು ಪ್ರಾರಂಭವಾಗುತ್ತವೆ).

ಈ ದಾರಿಯಲ್ಲಿ ಹೋಗುವಾಗಲೆಲ್ಲಾ ನನಗೆ ಪಂಪಯ್ಯಶೆಟ್ಟಿಯವರ ನಿರ್ಧಾರಗಳು, ರಾಜ್‌ಕುಮಾರ ಅಭಿಮಾನಿಗಳ ಸಂಘದ ಕನ್ನಡಾಭಿಮಾನ ಮತ್ತು ಜಿಲ್ಲಾಧಿಕಾರಿಗಳಾಗಿದ್ದ ಜಿ. ಕುಮಾರನಾಯಕರವರ ಪ್ರೀತಿ, ಸಹಕಾರ ನೆನಪಾಗುತ್ತದೆ.

ಕರ್ನಾಟಕ ಸರ್ಕಾರ ತನ್ನ ಗಡಿ ಪ್ರದೇಶಗಳಲ್ಲಿ ಗಡಿನಾಡು ಕಾರ್ಯಕ್ರಮಗಳಿಗಾಗಿ ಅನುದಾನ ಬಿಡುಗಡೆ ಮಾಡುತ್ತಿದ್ದರೂ ಯಾವುದೇ ಕಾರ್ಯಕ್ರಮಗಳಾಗದೇ, ಬಂದಂತಹ ಅನುದಾನ ಉಳಿದಿರುವುದನ್ನು ಪಂಪಯ್ಯ ಶೆಟ್ಟರು ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಅಶೋಕ ದಳವಾಯಿರವರ ಗಮನಕ್ಕೆ ತರಬೇಕಾಯಿತು. ತಕ್ಷಣವೇ ಕಾರ್ಯಪ್ರವೃತ್ತರಾದ ಜಿಲ್ಲಾಧಿಕಾರಿಗಳು ಕಾರ್ಯಕ್ರಮ ನಡೆಸುವ ಸ್ಥಳ, ಕಾರ್ಯಕ್ರಮದ ರೂಪುರೇಷೆಗಳು, ಆಹ್ವಾನಿಸ ಬೇಕಾದ ಅತಿಥಿಗಳ ಬಗ್ಗೆ ನಮ್ಮೊಂದಿಗೆ ಚರ್ಚಿಸುತ್ತಿದ್ದರು. ಪಂಪಯ್ಯ ಶೆಟ್ಟಿ ಭಗತ್‌ರಾಜ ನಿಜಾಮಕಾರಿ, ಕೆ. ಸತ್ಯನಾರಾಯಣ ಮತ್ತು ಕುಮುದಾ ನಾಯಕ ಅವರನ್ನೊಳ ಗೊಂಡ ಸಮಿತಿಯೊಂದನ್ನು ರಚಿಸಿದರು. ಜಿಲ್ಲೆಯ ಆದೋನಿ ನಗರದಲ್ಲಿ ಗಡಿನಾಡ ಉತ್ಸವ ನಡೆಸಲು ತೀರ್ಮಾನಿಸಲಾಯಿತು. ಸಮಿತಿಯ ಸದಸ್ಯರು ನೀಡುವ ಸಲಹೆ - ಸೂಚನೆ ಗಳನ್ವಯ ಆದೋನಿಯಲ್ಲಿ ನಡೆಯಬೇಕಾದ ಕಾರ್ಯಕ್ರಮಗಳು ಪ್ರಾರಂಭವಾದವು.

ಈ ಗಡಿನಾಡೋತ್ಸವ ನಮ್ಮ ನಿರೀಕ್ಷೆಗೂ ಮೀರಿ ಯಶಸ್ಸು ಪಡೆದಿದ್ದಕ್ಕೆ ಸಮಿತಿಯಲ್ಲಿದ್ದ ನಾಲ್ಕು ಜನರನ್ನು ಜಿಲ್ಲಾಧಿಕಾರಿಗಳಾಗಿದ್ದ ಅಶೋಕ ದಳವಾಯಿಯವರು ಹೃತ್ಪೂರ್ವಕವಾಗಿ ಅಭಿನಂದಿಸಿದ್ದನ್ನು ಸ್ಮರಿಸಬಹುದು.

ಆಶ್ಚರ್ಯದ ಸಂಗತಿ ಏನೆಂದರೆ, ಒಂದು ದಶಕದವರೆಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪಂಪಯ್ಯ ಶೆಟ್ಟರು ಬಂಡಾಯ ಸಾಹಿತ್ಯ ಸಂಘಟನೆಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಕ.ಸಾ.ಪ.ವನ್ನು ನಿಕೃಷ್ಟವಾಗಿ ಕಾಣುತ್ತಿದ್ದ ಬಂಡಾಯದ ಗೆಳೆಯರಿಗೆ ಪಂಪಯ್ಯಶೆಟ್ಟವರ ಈ ಮನೋಧರ್ಮ ಇರಿಸು ಮುರಿಸು ಉಂಟು ಮಾಡುತ್ತಿತ್ತು. ಈ ಸಮಯದಲ್ಲಿ ನಾನು ರಾಯಚೂರು ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕನಾಗಿ ನಂತರ ಬಂಡಾಯ ಸಾಹಿತ್ಯ ಸಂಘಟನೆಯ ರಾಜ್ಯ ಸಂಚಾಲಕನಾಗಿಯೂ ಕಾರ್ಯನಿರ್ವಹಿಸುತ್ತಿದ್ದಾಗ ನಮ್ಮೊಂದಿಗೆ ಪ್ರತಿ ಹೆಜ್ಜೆಗೂ ಬಂಡಾಯದ ಗೆಳೆಯರಿಗಿಂತ ಪಂಪಯ್ಯ ಶೆಟ್ಟರು ಇದ್ದು ಸಹಕಾರ ನೀಡುತ್ತಿದ್ದರು.

ಮೂಲತಃ ಪಂಪಯ್ಯಶೆಟ್ಟಿಯವರು ಬಂಡಾಯ ಮನೋಧರ್ಮದ ಬಲಪಂಥೀಯ ಕನ್ನಡ ಸಾಹಿತ್ಯ ಪರಿಷತ್ತಿನ ಸಂಘಟಕರು. ಅವರು ಹಮ್ಮಿಕೊಳ್ಳುವ ಯಾವುದೇ ಕಾರ್ಯಕ್ರಮಗಳಿಗೆ ನಾನು ಕೂಡಿಕೊಂಡು ಇರುವಂತೆ ಬಂಡಾಯ ಕಾರ್ಯಕ್ರಮಗಳಿಗೆ ಪಂಪಯ್ಯ ಶೆಟ್ಟರು ಸೇರಿಕೊಳ್ಳುತ್ತಿದ್ದರು. ನಮ್ಮ ಬಂಡಾಯದ ಗೆಳೆಯ ದಿ॥ ಬಿ.ಡಿ. ನಾಗಮೋತಿ ಆಗಾಗ ನಮ್ಮಿಬ್ಬರ ಬಗ್ಗೆ ಹಾಸ್ಯವಾಗಿ ಮಾತನಾಡುತ್ತಿದ್ದರು. ನಮ್ಮ ಪತ್ರಿಕೆಗಳ ವರದಿಗಾರರು ಪಂಪಯ್ಯ ಶೆಟ್ಟಿ ಇರುವ ಸಭೆ - ಕಾರ್ಯಕ್ರಮಗಳಲ್ಲಿ ನೀನು ಇರದಿದ್ದರೂ ಭಗತರಾಜ್ ಉಪಸ್ಥಿತರಿದ್ದರೆಂದು ವರದಿ ಮಾಡುತ್ತಾರೆ ಎಂದು ನಗುತ್ತಿದ್ದರು.

❁

ಭಗತರಾಜ ನಿಜಾಮಕಾರಿ
ಸ್ನೇಹಕುಟೀರ, 8-11, 181/805
ವಿದ್ಯಾನಗರ, ರಾಯಚೂರು-584 103
ಸನಿಹವಾಣಿ : 9980043207

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ದಶಕದ ನೆನಪು

✍ ಪ್ರಭುದೇವ ಹಾದಿಮನಿ

ಎಚ್. ಪಂಪಯ್ಯಶೆಟ್ಟಿ ಎಂದರೆ ಯಾರಾದರೂ ಗುರುತಿಸಬಹುದಾದದ್ದು ಅವರ ಸರಳ ಹಾಗೂ ಸಜ್ಜನಿಕೆಯ ವ್ಯಕ್ತಿತ್ವದಿಂದ. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾಗಿ ನಿರ್ವಹಿಸಿದ ಕಾರ್ಯದಿಂದ, ರಾಜ್ಯಾದ್ಯಂತ ತಮ್ಮ ಸೇವಾ ವೈಖರಿಯಿಂದ ಜನಮೆಚ್ಚುಗೆ ಪಡೆದು ಕನ್ನಡದ ಹಿರಿಯ ಸಾಹಿತಿಗಳಿಂದ ಭೇಷ್ ಎನಿಸಿಕೊಂಡು ಸತತ ಒಂಬತ್ತು ವರ್ಷಗಳ ಕಾಲ ಅಂದರೆ ಮೂರು ಅವಧಿಯವರೆಗೆ ಚುನಾಯಿತ ಅಧ್ಯಕ್ಷರಾಗಿ ಕೆಲಸ ಮಾಡಿ ಜನಮಾನಸದಲ್ಲಿ ಉಳಿದಿದ್ದಾರೆ ಎಂದು ನಿಸ್ಸಂಶಯವಾಗಿ ಹೇಳಬಹುದು.

ನಾಡಿನ ಹಿರಿಯ ಸಾಹಿತಿಗಳಾದ ಶಾಂತರಸರ ಮಾರ್ಗದರ್ಶನ, ಜಂಬಣ್ಣ ಅಮರಚಿಂತರ ಒಡನಾಟಗಳಿಂದ ಸಾಹಿತ್ಯ ಸಂಘಟನೆಯ ಕಡೆ ಆಕಸ್ಮಿಕವಾಗಿ ಆಕರ್ಷಣೆಗೊಂಡು ಕನ್ನಡ ಸಾಹಿತ್ಯ ಪರಿಷತ್ತು ರಾಯಚೂರಿನಲ್ಲಿ ಬಲವಾಗಿ ಬೇರೂರುವಂತೆ ಮಾಡಿದ್ದು ಪಂಪಯ್ಯಶೆಟ್ಟಿ ಹಾಗೆ ನೋಡಿದರೆ ಅವರು ಸ್ವತಃ ಬರಹಗಾರರಲ್ಲ, ಕವಿಗಳಲ್ಲ, ಲೇಖಕರಲ್ಲ ಸಾಹಿತಿಯಾಗಿಯೂ ಗುರುತಿಸಿಕೊಂಡಿಲ್ಲ. ಕೇವಲ ರಾಯಚೂರಿನ ಪ್ರತಿಷ್ಠಿತ ಟ್ಯಾಗೋರ್ ಕಾಲೇಜಿನಲ್ಲಿ ಪ್ರಥಮ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿದ್ದ ಪಂಪಯ್ಯ ಶೆಟ್ಟಿಯವರಿಗೆ ಸಾಹಿತ್ಯ ಸಂಘಟನೆಯ ಮೇಲೆ ಆಸಕ್ತಿ ಬಂದುದೇ ಆಶ್ಚರ್ಯ. ತಮ್ಮ ತಂದೆಯವರ ನಾಟಕದ ಗೀಳು ರಕ್ತಗತವಾಗಿ ಬಂದು ಅವರು ಸಾಹಿತ್ಯ ಪ್ರೀತಿ ಬೆಳೆಸಿಕೊಂಡರೆಂದು ನನಗೆ ಹೇಳಿದ ನೆನಪು. ಟ್ಯಾಗೋರ್ ಕಾಲೇಜಿನಲ್ಲಿ ಉಪನ್ಯಾಸಕರಾದ ಕೆ.ಎಂ.ಪುರದ, ಅಯ್ಯಪ್ಪ ತುಕ್ಕಾಯಿ ಹಾಗೂ ಸಾಹಿತ್ಯ ಮಿತ್ರರಾದ ರಾಮಣ್ಣ ಹವಳೆ, ಬಿ. ಶೇಖರಪ್ಪ ಹಾಗೂ ಭಗತ್‌ರಾಜ್ ನಿಜಾಮಕರ್ ಇವರ ಸಹಾಯ ಸಹಕಾರದೊಂದಿಗೆ ಸಂಘಟನೆ ಬಲವರ್ಧನೆಗೆ ತೊಡಗಿದ್ದನ್ನು ಕೂಡ ಅವರು ಸಹೃದಯತೆಯಿಂದ ನೆನೆಯುತ್ತಾರೆ.

ಎಂಬತ್ತರ ದಶಕದಲ್ಲಿ ಸಾಹಿತ್ಯ ಪರಿಷತ್ತಿನ ಅಂಗಳಕ್ಕೆ ಕಾಲಿರಿಸಿದ ಪಂಪಯ್ಯ ಶೆಟ್ಟಿಯವರು ಕರ್ನಾಟಕ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದುಕೊಂಡು ರಾಮಣ್ಣ ಹವಳೆ ಹಾಗೂ ಬಿ. ಶೇಖರಪ್ಪ ಇವರ ಸಹಕಾರದೊಂದಿಗೆ ಕನ್ನಡ ಸಾಹಿತ್ಯ ಪರಿಷತ್ತನ್ನು ಮೊದಲ

ಬಾರಿಗೆ ನಿರ್ವಹಿಸಿಕೊಂಡು ಸಾಹಿತ್ಯ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಆಗ ಅಖಂಡ ರಾಯಚೂರು ಜಿಲ್ಲೆಯಲ್ಲಿ ಈಗಿನ ಕೊಪ್ಪಳ ಜಿಲ್ಲೆಯೂ ಸೇರಿದ್ದರಿಂದ ಈ ಎರಡು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿ ಕಾರ್ಯನಿರ್ವಹಿಸಿದರು.

ಅಖಂಡ ರಾಯಚೂರು ಜಿಲ್ಲೆಯ ಎಲ್ಲಾ ಒಂಬತ್ತು ತಾಲ್ಲೂಕುಗಳನ್ನು ಸಂಪರ್ಕಿಸಿ ಅಲ್ಲಲ್ಲಿಯ ಸಾಹಿತಿಗಳನ್ನು ಗುರುತಿಸಿ ಅವರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿ ನಿರಂತರ ಸಾಹಿತ್ಯ ಸೇವೆಯಲ್ಲಿ ತೊಡಗುವಂತೆ ಮಾಡಿದ್ದು ಪಂಪಯ್ಯಶೆಟ್ಟಿಯವರ ಸೃಜನಶೀಲತೆಗೆ ಮತ್ತು ದೂರದೃಷ್ಟಿಗೆ ಹಿಡಿದ ಕನ್ನಡಿಯಾಗಿದೆ. ಅವರು ಮಾನ್ವಿಯ ರಾಮಚಂದ್ರ, ದೇವದುರ್ಗದ ದಂಡಪ್ಪ ಕೊಪ್ಪಳದ ಮಹಾಂತೇಶ ಮಲ್ಲನಗೌಡರ, ಕುಪ್ಪಗಿಯ ಶರಣಪ್ಪ ವಡಗೇರಿ, ಸಿಂಧನೂರಿನ ಶರಣೇಗೌಡ, ಆದಯ್ಯಸ್ವಾಮಿ ತಿಮ್ಮಾಪುರ, ಲಿಂಗಸೂಗೂರಿನ ಕೆಂಚನಗುಡ್ಡ, ಗಿರಿರಾಜಹೊಸಮನಿ ಇವರುಗಳನ್ನು ಪರಿಷತ್ತಿನ ತಾಲ್ಲೂಕು ಅಧ್ಯಕ್ಷರನ್ನಾಗಿ ಮಾಡಿ ಜಿಲ್ಲೆಯ ಎಲ್ಲಾ ಕಡೆಗೂ ಸಾಹಿತ್ಯದ ಸುಗಂಧ ಬೀರುವಂತಹ ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ಅವರ ಅಧಿಕಾರದ ಅಧಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಸಾಹಿತ್ಯ ಸಮ್ಮೇಳನಗಳು ವಿಜೃಂಭಣೆಯಿಂದ ನಡೆದಿವೆ. ಎಲ್ಲಡೆ ಅವರದೃಷ್ಟಿ ಹೊಸ ಬರೆಹಗಾರರ ಮೇಲೆ ಕೇಂದ್ರೀಕೃತವಾಗಿ ಅವರನ್ನೆಲ್ಲ ಒಂದು ವೇದಿಕೆಯ ಮೇಲೆ ತಂದು ಪರಿಚಯಿಸಿ ನಾಡಿಗೆ ಸಮರ್ಪಿಸಿದ ಕೀರ್ತಿ ಪಂಪಯ್ಯಶೆಟ್ಟಿಯವರಿಗೆ ಸಲ್ಲುತ್ತದೆ. ಅವರಿಂದ ಪರಿಚಯಿಸಲ್ಪಟ್ಟ ಯುವ ಬರೆಹಗಾರರು ಚಿದಾನಂದ ಸಾಲಿ, ದಸ್ತಗಿರಿ ಸಾಬ್ ದಿನ್ನಿ ಜೆ.ಎಲ್. ಈರಣ್ಣ, ಈರಣ್ಣ ಕೋಸಗಿ, ಆಂಜನೇಯ ಜಾಲಿಬೆಂಚಿ, ವೀರಹನುಮಾನ್, ಪ್ರವೀಣ್ ಗುಂಜಳ್ಳಿ, ಪದ್ಮನಾಭ ನಾ.ಕೃ, ಅಬ್ದುಲ್ ರಹೀಮ್ ಗೋನಾಳ್ ಮುಂತಾದ ಯುವಪಡೆಯೆ ಇದೆ. ಈಗ ಇವರೆಲ್ಲ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದ ಕವಿಗಳಾಗಿದ್ದಾರೆ. ಬಂಡಾಯದ ಗಾಳಿಯಲ್ಲೂ ಬಂಡಾಯದ ಗೆಳೆಯರನ್ನು ಕೂಡಿಸಿಕೊಂಡು ಸಾಮರಸ್ಯ ಮೆರೆದದ್ದು ಇದೇ ಪಂಪಯ್ಯಶೆಟ್ಟಿ. ರಾಯಚೂರಿನ ಭಗತರಾಜ್ ನಿಜಾಮಕಾರ್, ಕೊಪ್ಪಳದ ಅಲ್ಲಮಪ್ರಭು ಬೆಟ್ಟದೂರು, ವಿಠ್ಠಪ್ಪ ಗೋರಂಟ್ಲಿ, ಗವಿಸಿದ್ಧ ಬಳ್ಳಾರಿ ಹಾಗೂ ನಾನು ಬಂಡಾಯ ಸಾಹಿತ್ಯದ ಕಾರ್ಯಕರ್ತರಾಗಿದ್ದರೂ ನಮ್ಮೆಲ್ಲರೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡು ಸಾಹಿತ್ಯಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದದ್ದು ಇವರೇ. ನಾನು ಕೊಪ್ಪಳದಿಂದ ರಾಯಚೂರಿಗೆ ವರ್ಗವಾಗಿ ಬಂದ ಹೊಸದರಲ್ಲಿ ನನ್ನನ್ನು ಗುರುತಿಸಿ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಕಾರ್ಯದರ್ಶಿಯಾಗಿ ಮಾಡಿ ಸತತ ಎರಡು ಅವಧಿಗೆ ಮುಂದುವರೆಸಿ ಕನ್ನಡ ನುಡಿ ಸೇವೆಗೆ ಹಚ್ಚಿದ್ದೂ ಇವರೇ. ಇವರು ಮಾಡಿದ ಅಸಂಖ್ಯ ಕಾರ್ಯಕ್ರಮಗಳ ನಡುವೆಯೂ ಅತ್ಯಂತ ಪ್ರಮುಖವಾದ ಒಂದೆರಡು ಕಾರ್ಯಕ್ರಮಗಳನ್ನು ನೆನಪಿಸಿಕೊಂಡು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ.

ಜಿಲ್ಲಾ ಸಾಹಿತ್ಯ ಯಾತ್ರೆ : ಪಂಪಯ್ಯ ಶೆಟ್ಟಿಯವರ ಅನೇಕ ಯೋಜನೆಗಳಲ್ಲಿ ಜಿಲ್ಲಾ ಸಾಹಿತ್ಯ ಯಾತ್ರೆಯೂ ಒಂದು. ಈ ಕಾರ್ಯಕ್ರಮದ ಮೂಲಕ ಅವರು ಜಿಲ್ಲೆಯ ಜನರ ಮನೆ ಬಾಗಿಲಿಗೆ ಪುಸ್ತಕಗಳನ್ನು ಕೊಂಡೊಯ್ದು ಓದುವ ಅಭಿರುಚಿ ಬೆಳೆಸಲು ಪ್ರಯತ್ನಿಸಿದರು. ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ಪ್ರಯುಕ್ತ ಇಂಥದೊಂದು ಹೊಸ ಪ್ರಯತ್ನ ಮಾಡಿದರು. ಬೇರೆ ಬೇರೆ ಪುಸ್ತಕ ಪ್ರಕಾಶನಗಳಿಂದ ಮುಂಚಿತವಾಗಿ ಪುಸ್ತಕಗಳನ್ನು ಖರೀದಿಸಿ ರಿಯಾಯಿತಿ ದರದಲ್ಲಿ ಒಂದು ವಾರದವರೆಗೆ ಜಿಲ್ಲೆಯ ಪ್ರಮುಖ ಸ್ಥಳಗಳಾದ ಮಾನ್ವಿ, ಲಿಂಗಸೂಗೂರು, ಸಿಂಧನೂರು, ಗಂಗಾವತಿ, ಕುಷ್ಟಗಿ, ಕೊಪ್ಪಳ, ದೇವದುರ್ಗ, ಯಲಬುರ್ಗ ಮತ್ತು ಪ್ರತಿ ತಾಲ್ಲೂಕಿನ ಆಯ್ದ ಗ್ರಾಮೀಣ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿ, ಉಪನ್ಯಾಸಗಳನ್ನು ಏರ್ಪಡಿಸಿ ಪುಸ್ತಕಗಳನ್ನು ಮಾರಾಟಮಾಡಿ ಮತ್ತೆ ಮುಂದಿನ ಊರಿಗೆ ಈ ಸಾಹಿತ್ಯಯಾತ್ರೆ ಮುಂದುವರಿಯುತ್ತಿತ್ತು. ಇದರ ಸಂಪೂರ್ಣ ಜವಾಬ್ದಾರಿಯನ್ನು ನನಗೆ ವಹಿಸಿದ್ದರು. ನನ್ನೊಂದಿಗೆ ರಾಯಚೂರಿನ ಕೆಲವು ಮಿತ್ರರು ಈ ಕಾರ್ಯದಲ್ಲಿ ಕೈಗೂಡಿಸಿದ್ದರು. ಹೋದ ಕಡೆ ಎಲ್ಲಾ ಅದ್ದೂರಿ ಸ್ವಾಗತ, ದೊಡ್ಡ ವೇದಿಕೆಗಳಲ್ಲಿ ಕಾರ್ಯಕ್ರಮಗಳು, ಪುಸ್ತಕ ಖರೀದಿಗಾಗಿ ಮಕ್ಕಳ ಸಾಲು-ಸಾಲು, ಶಾಲಾ-ಕಾಲೇಜುಗಳಿಂದ ದೊಡ್ಡ ಪ್ರಮಾಣದ ಖರೀದಿ ಜೊತೆಗೆ ಆಸಕ್ತರ ಆಹ್ವಾನ ಇತ್ಯಾದಿಗಳಿಂದ ನಮ್ಮ ಮನಸ್ಸು ತುಂಬಿ ಬರುತ್ತಿತ್ತು. ಸುಮಾರು 60 ರಿಂದ 70 ಸಾವಿರದವರೆಗಿನ ಮೌಲ್ಯದ ಪುಸ್ತಕ ಮಾರಾಟವಾಗಿತ್ತು ಎಂದರೆ ಅಚ್ಚರಿಯೇ ಸರಿ.

ಸಾಹಿತ್ಯ ಯಾತ್ರೆಯ ನಮ್ಮ ರಥಯಾತ್ರೆ ಸಂಪೂರ್ಣಗೊಳಿಸಿ ಮರಳಿ ರಾಯಚೂರಿಗೆ ಆಗಮಿಸಿದಾಗ ಸಚಿವರಾಗಿದ್ದ ಎಂ.ಎಸ್. ಪಾಟೀಲ್ ಅವರೇ ಖುದ್ದು ಸ್ವಾಗತಿಸಿದರು. ಅನಂತರ ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ರಾಜ್ಯದ ಶ್ರೇಷ್ಠ ಸಾಹಿತಿಗಳಾದ ದೇವೇಂದ್ರ ಕುಮಾರ್ ಹಕಾರಿ, ಪರಿಷತ್ತಿನ ಅಧ್ಯಕ್ಷರಾದ ಸಾ.ಶಿ. ಮರಳಯ್ಯ ಅವರಿಂದ ಈ ಕಾರ್ಯದ ಶ್ಲಾಘನೆಯ ಸುರಿಮಳೆ. ಹೀಗೆ ಸಾಹಿತ್ಯಯಾತ್ರೆ ಒಂದು ಅಪರೂಪದ, ಯಾವಾಗಲೂ ನೆನಪುಳಿಯುವಂತಹ ಕಾರ್ಯಕ್ರಮ.

ಮನೆಗೊಂದು ಸಾಹಿತ್ಯ ಕಾರ್ಯಕ್ರಮ : ಪಂಪಯ್ಯ ಶೆಟ್ಟಿಯವರ ಇನ್ನೊಂದು ನೆನಪಿನಲ್ಲಿ ಉಳಿಯುವ ಕಾರ್ಯಕ್ರಮ ಮನೆಗೊಂದು ಸಾಹಿತ್ಯ ಕಾರ್ಯಕ್ರಮ. ಇದರಲ್ಲಿ ಪ್ರತಿ ತಿಂಗಳು ಒಬ್ಬ ಆಸಕ್ತ ಸಾಹಿತಿಯ ಮನೆಯಲ್ಲಿ ಒಂದು ಸಾಹಿತ್ಯಿಕ ಕಾರ್ಯಕ್ರಮ. ಯಾವುದಾದರೂ ಒಂದು ಅಥವಾ ಸಾಹಿತ್ಯ ಪ್ರಕಾರದ ವಿಷಯ ಆಯ್ಕೆ ಮಾಡಿ ಒಬ್ಬರಿಂದ ಉಪನ್ಯಾಸ ಮಾಡಿಸುವುದು. ಆಗಮಿಸಿದ ಶ್ರೋತೃಗಳಿಂದ ಮುಕ್ತ ಚರ್ಚೆ, ಆತಿಥ್ಯವಹಿಸಿದ ಮನೆಯವರಿಂದ ಆತ್ಮೀಯ ಭೋಜನ ಅಥವಾ ಉಪಾಹಾರ ; ಇದಿಷ್ಟು ಕಾರ್ಯಕ್ರಮದ ಪದ್ಧತಿ. ಹೆಚ್ಚಿನ ಖರ್ಚಿಲ್ಲ, ಮೈಕು-ವೇದಿಕೆ ಇಲ್ಲ. ಇವುಗಳನ್ನು ಕೂಡ ರಾಯಚೂರಿನ ಜನತೆ ಬಿಚ್ಚು ಮನಸ್ಸಿಂದ ಸ್ವೀಕರಿಸಿದ್ದು, ಆತಿಥ್ಯ ವಹಿಸಿಕೊಳ್ಳುವುದಕ್ಕೆ ನಾಮುಂದು, ತಾಮುಂದು

ಎಂದು ಬರುತ್ತಿದ್ದರು. ಈ ಕಾರ್ಯಕ್ರಮ ಒಂದು ವರ್ಷಕ್ಕಿಂತಲೂ ಹೆಚ್ಚು ನಡೆದುಬಂದು ಎಲ್ಲರಿಗೂ ಮೆಚ್ಚುಗೆಯಾಗಿತ್ತು.

ಗುಬ್ಬೇರ ಬೆಟ್ಟದ ಮೇಲೆ ಕವಿಗೋಷ್ಠಿ ಮಾವಿನಕೆರೆಯಲ್ಲಿ ಕವಿಗೋಷ್ಠಿ ಬೋಳಮಾನದೊಡ್ಡಿ ದೇವಸ್ಥಾನದಲ್ಲಿ ಸಾಹಿತ್ಯ ಶಿಬಿರ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸಿದ್ದು ಕೂಡ ಅಚ್ಚಹಸಿರಾಗಿ ನೆನಪಿನಲ್ಲಿ ಉಳಿಯುವಂತಾಗಿವೆ.

''ಆಡು ಮುಟ್ಟದ ಸೊಪ್ಪಿಲ್ಲ'' ಎಂಬ ಗಾದೆಯಂತೆ ಪಂಪಯ್ಯಶೆಟ್ಟಿಯವರು ಮಾಡದ ಕಾರ್ಯಕ್ರಮಗಳಿಲ್ಲ. ಮಹಿಳಾ ಸಮ್ಮೇಳನಗಳು, ಗಡಿನಾಡ ಸಮ್ಮೇಳನಗಳು, ತಾಲ್ಲೂಕು- ಜಿಲ್ಲಾ ಸಮ್ಮೇಳನಗಳು, ಬರೆಹಗಾರರ ಸಮಾವೇಶ, ಕವಿಗೋಷ್ಠಿಗಳು, ವಿಚಾರ- ಸಂಕಿರಣಗಳು, ಗೀತ-ಸಂಗೀತ, ಜಿಲ್ಲಾ ಉತ್ಸವಗಳು, ಪುಸ್ತಕ ಪ್ರಕಾಶನ, ಪುಸ್ತಕ ಮಾರಾಟ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ (ಕೊಪ್ಪಳ), ಸಾಹಿತ್ಯ ಪರಿಷತ್ತಿನ ರಾಯಚೂರು ಘಟಕದ 25 ವರ್ಷಗಳ ನೆನಪಿನ ಸಾಹಿತ್ಯ ಯಾತ್ರೆಯಂತಹ ಅದ್ಭುತ ಕಾರ್ಯಕ್ರಮ, ಕನ್ನಡ ಕಾರ್ಯಕರ್ತರ ಕಮ್ಮಟ ಕ್ವಿಜ್ ಕರ್ನಾಟಕ ರಸಪ್ರಶ್ನೆ ಸ್ಪರ್ಧೆ ಹೈದರಾಬಾದ್-ಕರ್ನಾಟಕದ ಎಲ್ಲಾ ಜಿಲ್ಲೆಗಳನ್ನು ಒಳಗೊಂಡ ಸಾಹಿತ್ಯ ಸಮಾವೇಶ, ಶಾಲಾ ಮಕ್ಕಳಿಗಾಗಿ, ಶಾಲೆಯ ಕನ್ನಡ ಶಿಕ್ಷಕರಿಗಾಗಿ ಕಾರ್ಯಾಗಾರಗಳು. ಗಡಿಭಾಗದಲ್ಲಿ ಜನರ ಸಮಸ್ಯೆಗಳ ಮೇಲೆ ಬೆಳಕು ಬೀರುವ ಕಾರ್ಯಗಳು ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ನಿರಂತರವಾಗಿ ಮಾಡುತ್ತಲೇ ಬಂದಿದ್ದಾರೆ. ಶಾಂತರಸರ ಅಧ್ಯಕ್ಷತೆಯಲ್ಲಿ ಎರಡನೆಯ ಜಿಲ್ಲಾ ಸಮ್ಮೇಳನವನ್ನೂ ಜಂಬಣ್ಣ ಅಮರಚಿಂತ, ಲಕ್ಷ್ಮೀದೇವಿ ಶಾಸ್ತ್ರಿ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ಗೊ.ರು. ಚೆನ್ನಬಸಪ್ಪ, ಡಾ|| ಸಾ.ಸಿ. ಮರುಳಯ್ಯ, ಡಾ|| ಸಿದ್ಧಲಿಂಗಯ್ಯ, ಹಂಪನಾ, ಶಾಂತರಸ, ಚಂಪಾ, ಹರಿಕೃಷ್ಣ ಪುನರೂರು ಮೊದಲಾದವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಪಂಪಯ್ಯ ಶೆಟ್ಟಿ ಅವರೆಲ್ಲರನ್ನು ರಾಯಚೂರಿಗೆ ಕರೆಸಿ ಕಾರ್ಯಕ್ರಮ ಮಾಡಿದ್ದಾರೆ. ಡಾ|| ಎಚ್. ನರಸಿಂಹಯ್ಯ, ಬರಗೂರು ರಾಮಚಂದ್ರಪ್ಪ, ಡಾ|| ಪುರಷೋತ್ತಮ್ ಬಿಳಿಮಲೆ, ಡಾ|| ರಹಮತ್ ತರೀಕೆರೆ, ರಂಜಾನ್ ದರ್ಗಾ ಮೊದಲಾದ ಹಿರಿಕಿರಿಯರನ್ನು ಪರಿಚಯಿಸಿದ್ದಾರೆ. ಅಲ್ಲದೆ ಜಿಲ್ಲೆಯ ಅನೇಕ ಯುವಕವಿಗಳಿಗೆ ಅಖಿಲ ಭಾರತ ಸಮ್ಮೇಳನಗಳಲ್ಲಿ ಕಾವ್ಯವಾಚನಕ್ಕೆ ಅವಕಾಶ ಕೊಡಿಸಿದ್ದಾರೆ.

ಪಂಪಯ್ಯ ಶೆಟ್ಟಿಯವರು ಯಾವುದೇ ಕಾರ್ಯಕ್ರಮಗಳನ್ನು ಮಾಡಿದರೂ ಎಲ್ಲರನ್ನು ಜೊತೆಗೂಡಿಸಿಕೊಂಡು ಹಿರಿಕಿರಿಯರೆಂಬ ಭೇದವಿಲ್ಲದೆ ಒಂದಾಗಿ ಬೆರೆತು ಆತ್ಮೀಯತೆ ಯಿಂದ ನಡೆದುಕೊಳ್ಳುತ್ತಿದ್ದರು. ಸಮಸ್ಯೆಗಳು ಬಂದಾಗ ಎಲ್ಲರೊಂದಿಗೆ ಚರ್ಚಿಸಿ ಯೋಗ್ಯ ನಿರ್ಣಯ ಕೈಗೊಳ್ಳುವುದು ಅವರ ವಿಶೇಷ ಸ್ವಭಾವ. ಯಾರ ಮೇಲೂ ಒತ್ತಡ ಹಾಕುತ್ತಿರಲಿಲ್ಲ. ಪ್ರತಿಯೊಬ್ಬರ ವಿಚಾರಗಳನ್ನು ಗೌರವಿಸುವ ಗುಣ ಅವರದಾಗಿದೆ. ಕನ್ನಡ ನಾಡು ನುಡಿಗೆ ಸಂಬಂಧಿಸಿದ ಹಲವಾರು ವಿಚಾರಗಳನ್ನು ಕಿರಿಯನಾದರೂ ನನ್ನೊಂದಿಗೆ ಅವರು ಮುಕ್ತವಾಗಿ

ಚರ್ಚಿಸಿ ತಿಳಿದುಕೊಳ್ಳುತ್ತಿದ್ದರು. ಸಾಹಿತ್ಯ ಕಾರ್ಯಕ್ರಮಗಳ ರೂಪುರೇಷೆಗಳನ್ನು ಸಹಿತ ಏಕಮುಖವಾಗಿ ಮಾಡುತ್ತಿರಲಿಲ್ಲ. ಅವರಿಗೆ ಕೋಪವೆಂಬುದೇ ಬರುತ್ತಿರಲಿಲ್ಲವೇನೊ ? ಚುನಾವಣೆ ಸಂದರ್ಭಗಳಲ್ಲಿ ಅವರ ಎದುರಾಳಿಗಳ ಬಗ್ಗೆಯೂ ಅವರದು ಉದಾರ ಮನೋಭಾವ. ನಿಷ್ಪಕ್ಷಪಾತವಾಗಿ ಪ್ರಾಮಾಣಿಕತೆಯಿಂದ ಎಲ್ಲರಿಗೂ ಮೆಚ್ಚುಗೆಯಾಗುವ ರೀತಿಯಲ್ಲಿನಡೆದುಕೊಂಡಿದ್ದರಿಂದ ಅವರು ಜನಮನ ಗೆಲ್ಲಲು ಸಾಧ್ಯವಾಗಿದೆ.

ಇಂದಿಗೂ ಪಂಪಯ್ಯಶೆಟ್ಟಿಯವರು ಮಾಡಿದ ಸಾಹಿತ್ಯಪರ ಕೆಲಸಗಳು ಜಿಲ್ಲೆಯ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಅಂತಹ ನೆನಪುಗಳನ್ನು ಉಳಿಸಿದ ಪಂಪಯ್ಯಶೆಟ್ಟಿ ಅವರ ಜೀವನವೇ ಒಂದು ಆದರ್ಶ. ಅವರ ಬದುಕೇ ಒಂದು ಪಾಠ.

ಇತ್ತೀಚೆಗೆ ಪತ್ರಿಕೋದ್ಯಮಕ್ಕೂ ಕೈ ಹಾಕಿ ವೈಶ್ಯ ಜನಾಂಗದ ಪ್ರೀತಿಗಳಿಸಿದ್ದಾರೆ. ಮಕ್ಕಳು ಉನ್ನತ ಹುದ್ದೆಯಲ್ಲಿದ್ದಾರೆ. ಪಂಪಯ್ಯ ಶೆಟ್ಟಿ ಕೈ ಹಿಡಿದ ಅವರ ಶ್ರೀಮತಿಯವರ ಸಹಕಾರವಂತೂ ಎಂದಿಗೂ ಮರೆಯಲಾರೆ. ಆ ತಾಯಿಯ ಆತಿಥ್ಯವಂತೂ ಅತ್ಯದ್ಭುತ, ಚಿರಸ್ಮರಣೀಯ. ಇತ್ತೀಚೆಗೆ ದಂಪತಿಗಳು ಮಕ್ಕಳ ಕಾರಣದಿಂದ ವಿದೇಶಕ್ಕೆ ಹೋಗಿ ಬಂದಿದ್ದಾರೆ. ಒಂದು ರೀತಿಯ ಸಂತೃಪ್ತ ಜೀವನ ಪಂಪಯ್ಯಶೆಟ್ಟಿ ಅವರದು.

ಪಂಪಯ್ಯಶೆಟ್ಟಿಯವರ ಮುಂದಿನ ದಿನಗಳು ಸುಖಮಯವಾಗಿರಲಿ, ಆಯುರಾರೋಗ್ಯ ಸಮೃದ್ಧಿ, ನೆಮ್ಮದಿ ದೊರಕಲಿ, ಇನ್ನೂ ಹೆಚ್ಚಿನ ಆಸಕ್ತಿಯಿಂದ ತಮ್ಮ ಕಾರ್ಯಚಟುವಟಿಕೆ ಗಳಿಂದ ಪ್ರಸಿದ್ಧಿ ಪಡೆಯಲಿ ಬದುಕಿನ ಜಟಕಾಬಂಡಿಯಲ್ಲಿ ಕುಳಿತು, ಅದ್ಭುತ ಪ್ರಯಾಣ ಮಾಡಿದ ಅದಮ್ಯ ಚೇತನ ಪಂಪಯ್ಯಶೆಟ್ಟಿ ಅವರ ಮುಂದಿನ ಜೀವನ ಕೂಡಾ ಅನಂತ ಆನಂದವನ್ನು ಅನುಭವಿಸಲಿ ಎಂದು ಹೃದಯ ತುಂಬಿ ಹಾರೈಸಿ ನನ್ನ ಈ ಲೇಖನಕ್ಕೆ ವಿರಾಮವೀಯುವೆ.

ಪ್ರಭುದೇವ ಹಾದಿಮನಿ
ಮನೆ ನಂ. 219/1, ಕೆಸಿಸಿ ಬ್ಯಾಂಕ್ ಕಾಲೋನಿ
ನವನಗರ, ಹುಬ್ಬಳ್ಳಿ-580 025;
ಸನಿಹವಾಣಿ : 9886008267

ಸಂಘಟನಾ ಸ್ನೇಹಜೀವಿ : ಪಂಪಯ್ಯಶೆಟ್ಟಿ

ಡಾ|| ಗವಿಸಿದ್ದಪ್ಪ ಎಚ್. ಪಾಟೀಲ

ಪಂಪಯ್ಯಶೆಟ್ಟಿ ಎಂಬ ಹೆಸರು ರಾಯಚೂರು ಜಿಲ್ಲೆಯಲ್ಲಿ ಮನೆಮಾತಾದುದು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ದುಡಿದವರು. ಜಿಲ್ಲೆಯ ಸಾಹಿತ್ಯ ಸಂಘಟನೆ ಸಾಂಸ್ಕೃತಿಕವಾಗಿ ಜೀವಂತವಿಟ್ಟ ವ್ಯಕ್ತಿ. ಕನ್ನಡ ಕಟ್ಟಿದ ಪ್ರಮುಖರ ಸಾಲಿನಲ್ಲಿ ಇವರ ಹೆಸರು ಸೇರ್ಪಡೆಗೊಳ್ಳಲೇಬೇಕು. ನಾನಿನ್ನೂ ಪಿಯುಸಿ ಓದುವಾಗಲೇ ಪಂಪಯ್ಯ ಶೆಟ್ಟರ ಪರಿಚಯ. 62ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳದಲ್ಲಿ ಜರುಗಿದಾಗ ಪ್ರಧಾನ ಕಾರ್ಯದರ್ಶಿಯಾದವರು. ಆ ಮುಂಚೆ ರಾಯಚೂರು ಅವಿಭಜಿತ ಜಿಲ್ಲೆಯ ತುಂಬಾ ಓಡಾಡಿದವರು. ಯುವಕರ ಸಂಘಟನೆಯನ್ನು ಮಾಡಿ ಸಾಹಿತ್ಯ ಯಾತ್ರೆ ಕೈಗೊಂಡ ವರು. ಹಿರಿಯರು-ಕಿರಿಯರು-ಸಮವಯಸ್ಕರು ಎಲ್ಲರನ್ನು ಒಂದೆಂದು ಭಾವಿಸಿದವರು. ಅವರ ಸಮಾನತೆಯ ದೃಷ್ಟಿ ಸೌಜನ್ಯ ನಾವಿಲ್ಲಿ ಕಾಣಬಹುದಾಗಿದೆ. ನಮ್ಮಂತಹ ಯುವ ಲೇಖಕರಿಗೆ ವೇದಿಕೆಯನ್ನು ಕೊಟ್ಟವರು. ಜಿಲ್ಲೆಯ ತುಂಬಾ ಕನ್ನಡ ಸಾಹಿತ್ಯ ಪರಿಷತ್ತನ್ನು ಜೀವಂತವಿಟ್ಟವರು. ಪ್ರತಿ ತಿಂಗಳು ಸಾಹಿತ್ಯದ ಹಬ್ಬ ನಡೆಯುತ್ತಿತ್ತು. ಅಷ್ಟೊಂದು ಸಂಘಟನೆ ಅವರಿಗೆ ಕರಗತವಾಗಿತ್ತು. ಪ್ರತಿ ದಿವಸ ಏನಾದರೊಂದು ಹೊಸ ಕೆಲಸ ಮಾಡಬೇಕೆಂಬ ಹುಮ್ಮಸ್ಸು ಅವರದ್ದು. ಅವರು ಅಧ್ಯಕ್ಷರಾದಾಗ ಸಾಹಿತಿಗಳಲ್ಲ - ಉಪನ್ಯಾಸಕರಲ್ಲ ಎಂಬ ಮೂದಲಿಕೆ ಮಾತು ಕೇಳಿದಾಗ ವೈರಿಗಳೂ ಮೆಚ್ಚುವ ಕೆಲಸ ಮಾಡಿದ್ದಾರೆ. ಇದು ಅವರಲ್ಲಿರುವ ಇಚ್ಛಾಶಕ್ತಿ, ದೃಢ ಸಂಕಲ್ಪ ಮಾಡಿಯೇ ತೋರಿಸುತ್ತಾರೆ.

ನಾನು ಗಮನಿಸಿದಂತೆ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಎಲ್ಲರಿಗೂ ಗುರುತಾಗುವ ಹಾಗೆ ಪರಿಚಯಿಸಿದರು. ಪ್ರಥಮ ದರ್ಜೆ ಸಹಾಯಕರಾಗಿ ಲೆಖ್ಖ-ಪತ್ರ ಬರೆದ ಕೈ ಸಾಹಿತ್ಯ-ಸಂಸ್ಕೃತಿ-ಕನ್ನಡತನಕ್ಕೆ ಲೆಕ್ಕಾಚಾರ ಹಾಕಿದವರು. ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನ, ತಾಲ್ಲೂಕು ಮಟ್ಟದ ಸಮ್ಮೇಳನ, ಎರಡು ಜಿಲ್ಲಾ ಮಹಿಳಾ ಸಮ್ಮೇಳನಗಳು ಅವರು ಅಷ್ಟೆ ವೈಚಾರಿಕವಾಗಿ ಅದ್ಭುತವಾಗಿ ಮಾಡಿ ತೋರಿಸಿದ್ದಾರೆ. ಇವುಗಳೊಂದಿಗೆ ಅವರು ಪುಸ್ತಕ ಪ್ರಕಟಣೆಗೆ ಹೆಚ್ಚು ಒತ್ತನ್ನು ನೀಡಿದರು. 'ಒರೆಗಲ್ಲು' ಜಿಲ್ಲೆಯ ಯುವ ಕಥೆಗಾರರ ಪ್ರಾತಿನಿಧಿಕ ಸಂಕಲನ ನವಲಕಲ್ ಮತ್ತು ರಾಮಕೃಷ್ಣರ ಸಂಪಾದಕತ್ವದಲ್ಲಿ ಹೊರಬಂದಿತು.

'ಬಿಸಿಲಹನಿಗಳು' ಹೈದರಾಬಾದ್-ಕರ್ನಾಟಕದ ಪ್ರಾತಿನಿಧಿಕ ಕಥಾಸಂಕಲನ ಮತ್ತು ವಿಮರ್ಶಾ ಟಿಪ್ಪಣಿಗಳ ಕೃತಿ ಡಾ|| ಅಮರೇಶ್ ನಗಡೋಣಿ ಅವರು ಸಂಪಾದಿಸಿಕೊಟ್ಟರು. ''ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು'' ಡಾ. ಸಬರದ ಅವರು ಬರೆದ ಕೃತಿಯನ್ನು ಪ್ರಕಟಿಸಿ ಮೈಲುಗಲ್ಲು ಸ್ಥಾಪಿಸಿದ್ದಾರೆ. ನವರಂಗ, ಹೊನ್ನಸಿರಿ ಸ್ಮರಣ ಸಂಚಿಕೆಗಳು ಗಮನಸೆಳೆದಿವೆ.

ಪಂಪಯ್ಯ ಶೆಟ್ಟರು ಯಾವುದೇ ಕೆಲಸ ಹಿಡಿದರೂ ಅಚಲ ವಿಶ್ವಾಸ ನಿರ್ಧಾರದಿಂದಲೇ ತೆಗೆದುಕೊಳ್ಳುವವರು. ಜಿಲ್ಲೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನಗುಮುಖದ ಗಂಭೀರದ ಕೆಲಸಗಾರ. ಕಸಾಪಕ್ಕೆ ಒಂಟಿ ಸಲಗದಂತೆ ದುಡಿದಿದ್ದಾರೆ. ಹತ್ತಾರು ಜನ ಇವರ ಹೆಗಲಿಗೆ ಹೆಗಲು ಕೊಟ್ಟಿದ್ದಾರೆ ನಿಜ. ಅದನ್ನು ಕಾರ್ಯರೂಪಕ್ಕೆ ತರುವ ಯಶಸ್ವಿಗೊಳಿಸುವಲ್ಲಿ ಪರಿಣಾಮಕಾರಿ ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಹರಿಕೃಷ್ಣ ಪುನರೂರು, ಪುಂಡಲೀಕ ಹಾಲಂಬಿ, ಜಿ. ನಾರಾಯಣ, ಗೋರುಚ ಅವರಂತವರು ಹೀಗೆ ಅಂದರೆ ವೃತ್ತಿ ಬೇರೆಯಾದರು ಕಣಜ ಕಟ್ಟಿದಂತೆ ಪರಿಷತ್ತು ಕಟ್ಟಿ ಬೆಳೆಸಿದವರ ಸಾಲಿಗೆ ಪಂಪಯ್ಯ ಶೆಟ್ಟರು ಸೇರುತ್ತಾರೆ. ಜಿಲ್ಲೆಯ ತುಂಬ ಕೆಲಸ ಮಾಡಿ ರಾಜ್ಯಮಟ್ಟದಲ್ಲಿ ಚಿರಪರಿಚಿತರಾಗುವಂತೆ ಮಾಡುತ್ತಿದ್ದರು. ಸಾಹಿತ್ಯ ಪರಿಚಾರಕರಾಗಿ ನಮಗೆ ಕಂಡುಬರುತ್ತಾರೆ. ಗಡಿಭಾಗದಲ್ಲೂ ಕನ್ನಡದ ಕಹಳೆ ಊದಿದ ಸಂತರಿವರು.

ಇದರೊಂದಿಗೆ ಆರ್ಯವೈಶ್ಯ ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಇವುಗಳನ್ನು ಮಾಡುತ್ತಲೇ ಉಳಿದೆಲ್ಲ ಕೆಲಸ ನಿರ್ವಹಿಸಿದ್ದು ಕಂಡುಬರುತ್ತದೆ. ತನ್ನ ವೃತ್ತಿಯ ಗೌರವ ಕಾಪಾಡುತ್ತ ಕನ್ನಡ ಸೇವೆಯಲ್ಲಿ ನಿರತರಾಗಿ, ತಮ್ಮ ಆರ್ಯವೈಶ್ಯ ಸಮುದಾಯದ ಚಿಂತನೆ ಮಾಡಿದವರು. ಸಮಾಜದ ಸಮಸ್ಯೆ-ತವಕ ತಲ್ಲಣಗಳನ್ನು ಅರಿತವರು. ಸಮುದಾಯ ಚಿಕ್ಕದಾದರೂ ಇಡೀ ಕರ್ನಾಟಕ ತುಂಬೆಲ್ಲಾ ಆರ್ಯವೈಶ್ಯ ಸಮಾಜ ಸಂಘಟಿಸಿದವರು. ಆರ್ಯವೈಶ್ಯ ಪತ್ರಿಕೆಯನ್ನು ಪ್ರಾರಂಭಿಸಿ ಸಂಪಾದಕ, ಪರ್ತಕರ್ತರಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮ ಸಮುದಾಯದ ಸಾಂಸ್ಕೃತಿಕ ಅನನ್ಯತೆ ಎತ್ತಿ ಹಿಡಿದವರು. ಕರ್ನಾಟಕದಲ್ಲಿರುವ ವೈಶ್ಯರನ್ನು ಒಂದೆಡೆ ಸೇರಿಸುವಲ್ಲಿ ಪಂಪಯ್ಯ ಶೆಟ್ಟರು ಗಣನೀಯ ಪಾತ್ರವಹಿಸಿದ್ದಾರೆ.

ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಕೊಪ್ಪಳದಲ್ಲಿ ನಡೆದಾಗ ಆಗಾಗ ಅವರು ಬಂದು ಸಭೆಯಲ್ಲಿ ಹಾಗೂ ಪೂರ್ವ ಸಿದ್ಧತೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಆಗ ಗವಿಸಿದ್ಧ ಬಳ್ಳಾರಿ, ಪಂಪಯ್ಯ ಶೆಟ್ಟಿ ಸೇರಿ ಊಟ ಮಾಡುತ್ತಿದ್ದೆವು. 'ನವರಂಗ' ಸ್ಮರಣ ಸಂಚಿಕೆಗಾಗಿ ನನ್ನಿಂದ ರಾಯಚೂರು ಜಿಲ್ಲೆಯ ಜಾನಪದ ಲೇಖನ ಬರೆಯಿಸಿ ಪ್ರಕಟಿಸಿದ್ದರು. ರಾಯಚೂರಿಗೆ ನಾನು ಹೋದಾಗಲೆಲ್ಲ ಅವರನ್ನು ಭೇಟಿಯಾಗುತ್ತಿದ್ದೆ. ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಅನಂತರ ಅವರು ಸಮುದಾಯದ ಸಂಘಟನೆಗೆ ಹೆಚ್ಚು ಒತ್ತು ನೀಡಿದರು. ನಾನು ರಾಯಚೂರು ಸ್ನಾತಕೋತ್ತರ ಕೇಂದ್ರದಲ್ಲಿ ಅತಿಥಿ ಉಪನ್ಯಾಸಕನಾಗಿದ್ದೆ. 2004 ಅಕ್ಟೋಬರ್‌ನಲ್ಲಿ ತುರ್ತಾಗಿ

ಹತ್ತು ಸಾವಿರ ರೂಪಾಯಿ ಬೇಕಾಗಿತ್ತು. ದಿನ್ನಿಯನ್ನು ಕೇಳಿದಾಗ ಪಂಪಯ್ಯ ಶೆಟ್ಟರ ಹತ್ತಿರ ಹೋಗಲು ತಿಳಿಸಿದರು. ಅವರು ಆಗಿಂದಾಗ್ಗೆ ನನಗೆ ಕೊಟ್ಟು ಕಳಿಸಿದರು. ನಂತರ ವಾಪಸ್ಸು ಕೊಡಲಾಯಿತು. ಹೀಗೆ ಪಂಪಯ್ಯ ಶೆಟ್ಟರು ಸಹಾಯವನ್ನು ಬೇಡಿ ಬಂದವರಿಗೆ ಸಹಾಯವನ್ನು ನೀಡುತ್ತಿದ್ದರು. ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡಿದ್ದರು. ಅವರು ರಾಯಚೂರಿನಲ್ಲಿ ಎಲ್ಲಿಯೇ ಇರಲಿ ಸದ್ದುಗದ್ದಲವಿಲ್ಲದೇ ಕೆಲಸಗಳನ್ನು ನಿರ್ವಹಿಸಿಕೊಂಡು ಬರುತ್ತಿದ್ದರು. ಸಾಹಿತ್ಯ ಪರಿಚಾರಕ, ಚಿಂತಕ, ನಿಗರ್ವಿ, ವಿರಳ ವ್ಯಕ್ತಿತ್ವದ ಸರಳ ಜೀವನದ ಸಾತ್ತ್ವಿಕ ಆದರ್ಶ ವ್ಯಕ್ತಿ ಸ್ನೇಹಜೀವಿಯಾದ ಪಂಪಯ್ಯ ಶೆಟ್ಟರ ಅಕ್ಷರ ಬಾಗಿನಕ್ಕೆ ನನ್ನ ಅಕ್ಷರ ತೋರಣದ ನುಡಿ ಸಲ್ಲಿಸುವೆ.

ಡಾ. ಗವಿಸಿದ್ದಪ್ಪ ಎಚ್. ಪಾಟೀಲ್
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರಕಾರಿ ಪ್ರಥಮ ದರ್ಜೆ ಕಾಲೇಜು
ಬಸವಕಲ್ಯಾಣ - 585327. ಜಿ. : ಬೀದರ್
ಸನಿಹವಾಣಿ : 9535911315

ಸಾಹಿತ್ಯ, ಸಂಘಟನೆಯಲ್ಲಿ ಪಂಪಯ್ಯ ಶೆಟ್ಟರ ಕೊಡುಗೆ ಅನನ್ಯ

✍ ಪಲುಗುಲ ನಾಗರಾಜ

ಸಾಹಿತ್ಯ ಮತ್ತು ಸಂಘಟನೆ ಈ ಎರಡೂ ಜವಾಬ್ದಾರಿಯನ್ನು ನಿಭಾಯಿಸುವುದು ಬಹಳ ಕಷ್ಟಕರ. ಅದರಲ್ಲೂ ಗಡಿನಾಡ ಪ್ರದೇಶ, ಎತ್ತ ನೋಡಿದರೂ ತೆಲುಗು ಭಾಷಿಕರ ಪ್ರಭಾವ ಇಂತಹ ಸ್ಥಿತಿಯ ರಾಯಚೂರು - ಕೊಪ್ಪಳ ಅವಿಭಜಿತ ಜಿಲ್ಲೆಯಲ್ಲಿ ಕನ್ನಡದ ತೇರನ್ನು ಎಳೆಯುವುದು ಸಾಹಸವೇ ಸರಿ. ಅಂತಹ ಸಂದರ್ಭದಲ್ಲೂ ನಿರಂತರವಾಗಿ ಕನ್ನಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸದಾ ಕನ್ನಡದ ವಿವಿಧ ರೀತಿಯ ರೂಪಕಗಳನ್ನು ಬಿತ್ತಿದವರು ಪಂಪಯ್ಯ ಶೆಟ್ಟಿ ಎಂದರೆ ತಪ್ಪಲ್ಲ. ತಂದೆ ಹೊಸೂರು ರಾಮಸ್ವಾಮಿಗೆ ಸದಾ ನಾಟಕದ ಗೀಳು ರಂಗಭೂಮಿಗಾಗಿ ಇರುವ ಆಸ್ತಿಯನ್ನೇ ಕಳೆದುಕೊಂಡವರು. ಅಂತಹ ರಂಗಪ್ರೇಮಿಯ ಕುಟುಂಬದಲ್ಲಿ 1952ರಲ್ಲಿ ಜನಿಸಿದವರೇ ಪಂಪಯ್ಯ ಶೆಟ್ಟಿ ಈಗಲೂ ಅವರಿಗೆ ಗ್ರಾಮಾಂತರದಲ್ಲಿ ಹೊಸೂರು ಪಂಪಯ್ಯ ಶೆಟ್ಟಿ ಅಂತಲೇ ಕರೆಯುವುದು. ತಮ್ಮ ಪ್ರಾಥಮಿಕ ಶಿಕ್ಷಣವನ್ನು ನದಿಬ್ಯಾಗಿ ಮತ್ತು ಹಚ್ಚೊಳ್ಳಿ ಗ್ರಾಮದಲ್ಲಿ ಪಡೆದುಕೊಂಡರು. ಪ್ರೌಢ ಶಿಕ್ಷಣಕ್ಕಾಗಿ ಜಿಲ್ಲಾ ಕೇಂದ್ರ ರಾಯಚೂರು ನಗರಕ್ಕೆ ಆಗಮಿಸಿ ಹಮದರ್ದ್ ಪ್ರೌಢ ಶಾಲೆಗೆ ಸೇರಿದರು. ನಂತರ ಬಿಆರ್‌ಬಿ ಕಾಲೇಜ್‌ನಲ್ಲಿ ವಾಣಿಜ್ಯ ಪದವಿಯನ್ನು ಪೂರ್ತಿಗೊಳಿಸಿದರು.

ವಿದ್ಯಾರ್ಥಿ ಜೀವನದಲ್ಲಿಯೇ 1971ರಲ್ಲಿ 'ಕನ್ನಡ ಬಳಗ' ಸ್ಥಾಪನೆ. ಆ ಬಳಗದ ಪ್ರಧಾನ ಕಾರ್ಯದರ್ಶಿಯಾಗಿ ರಾಯಚೂರಿನ ಅಂದಿನ ತೆಲುಗು ಹಾಗೂ ಉರ್ದುಮಯ ಪರಿಸರದಲ್ಲಿ ಕನ್ನಡ ವಾತಾವರಣ ಮೂಡಿಸಲು ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕಾಗಿ ನಿರಂತರ ಹೋರಾಟ ನಡೆಸಿದರು. ಮುಂದೆ ಅದ್ದೂರಿಯಾಗಿ ರಾಜ್ಯೋತ್ಸವ ಹಾಗೂ ನಾಡಹಬ್ಬ ಆಚರಿಸಿದರು. ಮಹಾಜನ ವರದಿ ಜಾರಿಗಾಗಿ ಚಳುವಳಿ ಮುಂತಾದ ಹತ್ತು ಹಲವು ರೀತಿಯಲ್ಲಿ ಕನ್ನಡದ ಏಳ್ಗೆಗಾಗಿ ಜಾಗೃತಿ ಮೂಡಿಸುವ ಚಟುಟಿಕೆಗಳಿಂದ ಸಾರ್ವಜನಿಕರ ಪ್ರೀತಿಗೆ ಪಾತ್ರರಾದರು. ಈ ಪಂಪಯ್ಯ ಶೆಟ್ಟಿ ಕನ್ನಡದ ಜಟ್ಟಿ ಎಂದು ರಾಯಚೂರಿನಲ್ಲಿ ಗುರುತಿಸುವಂತಾದರು. 1972ರಲ್ಲಿ ಜರುಗಿದ ರಾಯಚೂರು ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸ್ವಯಂ ಸೇವಕ ಸಮಿತಿಯ ಅಧ್ಯಕ್ಷರಾಗಿ ವಿದ್ಯಾರ್ಥಿ ದೆಸೆಯಲ್ಲೇ ಹೊತ್ತ

ಜವಾಬ್ದಾರಿ, ಸಂಘಟನಾ ಕೌಶಲ್ಯದ ದುಡಿಮೆ ಸಮ್ಮೇಳನದ ಯಶಸ್ಸಿನಲ್ಲಿ ಹಿರಿಮೆ ಇವರದು. 1972 ರಿಂದ 1992ರ ವರೆಗೆ ನಾಡಿನಲ್ಲೇ ಅತ್ಯಂತ ಹಳೆಯದಾದ ರಾಯಚೂರು ನಗರದ ಕಲೆ-ಸಾಹಿತ್ಯ-ಸಂಗೀತಗಳ ಹೃದಯ ಸಂವಾದಕ್ಕೆ ಪ್ರಸಿದ್ಧವಾಗಿರುವ 'ಕರ್ನಾಟಕ ಸಂಘದ' ಕಾರ್ಯದರ್ಶಿಯಾಗಿ 15 ವರ್ಷಗಳವರೆಗೆ ನಿರಂತರ ಸಾಹಿತ್ಯ ಚಟುವಟಿಕೆಗಳ ಮೂಲಕ ಸ್ತುತ್ಯರ್ಹ ಕನ್ನಡದ ಸೇವೆಗೈಯುತ್ತ 1983 ರಿಂದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಕೋಶಾಧ್ಯಕ್ಷರಾಗಿ ಸಮರ್ಥ ಸೇವೆ ಸಲ್ಲಿಸಿದರು. ನಗರದಲ್ಲಿ ನಡೆದ ಎರಡು ದಾಸ ಸಾಹಿತ್ಯ ಮತ್ತು ಸಂಗೀತ ಮೇಳದ ಯಶಸ್ಸಿಗಾಗಿ ಅವಿರತ ಶ್ರಮ, ಹತ್ತು ದಿನಗಳ ಯಶಸ್ವಿ ಕಾವ್ಯ ಕಮ್ಮಟ, ಜಿಲ್ಲಾಮಟ್ಟದ ನಾಟಕ ಸ್ಪರ್ಧೆ ಸಂಘಟಿಸಿದರು. ಗೋಕಾಕ ಚಳುವಳಿಯ ಹೋರಾಟದಲ್ಲಿ ಮುಂದಾಳಾಗಿ ದುಡಿದು ಹೆಸರು ಮಾಡಿದರು.

1991ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನೇಮಕಗೊಂಡರು. ನೇಮಕವಾದೊಡನೆ ರಾಯಚೂರು ಜಿಲ್ಲೆಯಲ್ಲಿ ಇಪ್ಪತ್ತು ವರ್ಷಗಳ ಅನಂತರ "ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿ, ಸಾಹಿತ್ಯ ಪ್ರೇಮಿಗಳ ಗಮನ ಸೆಳೆದರು. 1993ರಲ್ಲಿ ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿ ಅಖಿಲ ಭಾರತ 62ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಘಟಿಸಿ, ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಕಾರ್ಯನಿರ್ವಹಿಸಿ ಅವಿಭಜಿತ ರಾಯಚೂರು ಜಿಲ್ಲೆಯಾದ್ಯಂತ ಸಾಹಿತ್ಯ ಸಂಘಟನೆಯ ಯಶಸ್ಸಿಗಾಗಿ ಪ್ರೀತಿ ಪಾತ್ರರಾದರು.

ಜಿಲ್ಲೆಯಲ್ಲಿ 40 ವರ್ಷಗಳ ಅನಂತರ ಅಖಿಲ ಭಾರತ ಮಟ್ಟದ ಸಾಹಿತ್ಯ ಸಮ್ಮೇಳನ ರೂಪಿಸಿದ ಕೀರ್ತಿಗೆ ಪಾತ್ರರಾದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ 1992, 1995 ಮತ್ತು 1998ರ ಚುನಾವಣೆಯಲ್ಲಿ ಸತತವಾಗಿ ಮೂರು ಬಾರಿ ಆಯ್ಕೆಯಾಗಿ, ಅವಿಭಜಿತ ರಾಯಚೂರು ಜಿಲ್ಲೆಯ 3ನೇ, 4ನೇ ಮತ್ತು 5ನೇ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಕ್ರಮವಾಗಿ ಸಿಂಧನೂರು ಲಿಂಗಸುಗೂರು ಹಾಗೂ ರಾಯಚೂರಿನಲ್ಲಿ ಅದ್ದೂರಿಯಾಗಿ ಸಂಘಟಿಸಿ, ಮಹತ್ವಪೂರ್ಣ ಸ್ಮರಣ ಸಂಚಿಕೆಗಳನ್ನು ಹೊರತಂದರು. 1995-1999ರಲ್ಲಿ ಎರಡು ಬಾರಿ ರಾಯಚೂರು ಜಿಲ್ಲಾ ಮಹಿಳಾ ಸಾಹಿತ್ಯ ಸಮ್ಮೇಳನ ನಡೆಸಿದ್ದು, ಜಿಲ್ಲಾ ಬರಹಗಾರರ ಸಮಾವೇಶ, ಯುವ ಬರಹಗಾರರ ಕಮ್ಮಟ, ಬೆಳ್ಳಿಹಬ್ಬ ಹಾಗೂ (ಅವಿಭಜಿತ) ಜಿಲ್ಲೆಯಾದ್ಯಂತ ಒಂಬತ್ತು ತಾಲ್ಲೂಕುಗಳಲ್ಲಿ ಒಂಬತ್ತು ದಿನಗಳ "ಜಿಲ್ಲಾ ಸಾಹಿತ್ಯ ಯಾತ್ರೆ" ಯಶಸ್ವಿಯಾಗಿ ಸಂಘಟಿಸಿ ದಾಖಲೆ ಪ್ರಮಾಣದಲ್ಲಿ ಪುಸ್ತಕ ಮಾರಾಟ ಮಾಡಿಸಿ, ಲೇಖಕರಿಗೆ ಪ್ರಕಾಶಕರಿಗೆ ನವಚೈತನ್ಯ ತುಂಬಿ ಸಾಹಿತ್ಯ ಪ್ರೇಮಿಗಳಲ್ಲಿ ಅಪಾರ ಪ್ರೀತಿ-ವಿಶ್ವಾಸ ಮೂಡಿಸಿದ್ದಾರೆ. ಜಾನಪದ ಮೇಳ ನಡೆಸಿದ್ದು, ದತ್ತಿ ಉಪನ್ಯಾಸಕ್ಕಾಗಿ ತಲಾ ರೂ. 10 ಸಾವಿರಗಳ ಹತ್ತು ದತ್ತಿನಿಧಿಗಳನ್ನು ಸಂಗ್ರಹಿಸಿದ ಶ್ರೇಯಸ್ಸು ಪಂಪಯ್ಯ ಶೆಟ್ಟರದು.

ಅವರ ಗೌರವ ಸಂಪಾದಕತ್ವದಲ್ಲಿ 45 ಸಾವಿರ ರೂ.ಗಳ ವೆಚ್ಚದಲ್ಲಿ ಜಿಲ್ಲಾ ಕ.ಸಾ.ಪ.

ವತಿಯಿಂದ ಹೈದರಾಬಾದ್ ಕರ್ನಾಟಕದ ಪ್ರಾತಿನಿಧಿಕ ಬೃಹತ್ ಕಥಾ ಸಂಕಲನ 'ಬಿಸಿಲ ಹನಿಗಳು' ಹಾಗೂ ಜಿಲ್ಲಾ ಯುವ ಬರಹಗಾರರ ಪ್ರಾತಿನಿಧಿಕ ಕಥಾ ಸಂಕಲನ 'ಒರೆಗಲ್ಲು' ಪ್ರಕಟಣೆ. 'ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು' ಮತ್ತು 'ನವರಂಗ' ಕೃತಿಗಳ ಪ್ರಕಟಣೆ ಜಿಲ್ಲಾ ಮಟ್ಟದಲ್ಲಿ ಕಥಾ ಹಾಗೂ ಕವನ ಸ್ಪರ್ಧೆ ನಡೆಸಿದ ಪ್ರಯುಕ್ತ 'ಕಥಾ-ಕವನ' ಎಂಬ ಕೃತಿಯ ಪ್ರಕಟಣೆ. ಬೆಳ್ಳಿಹಬ್ಬದ ಕ್ಯಾಲೆಂಡರ್ ಪ್ರಕಟಣೆ. ಈ ಅವಧಿಯ ನಾಡಿನ ಇಡೀ ಕ.ಸಾ.ಪ. ಇತಿಹಾಸದಲ್ಲೇ ಅಭೂತಪೂರ್ವ ಯಶಸ್ಸಿನ ಪ್ರಕಟಣಾ ಕಾರ್ಯ ಒಂದು ದಾಖಲೆಯಾಗಿದೆ.

ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ ಸಮಿತಿಯ ಹಾಗೂ ವಿಚಾರ ಸಂಕಿರಣ ಉಪ ಸಮಿತಿಯ ಅಧ್ಯಕ್ಷರಾಗಿ ಸ್ಮರಣ ಸಂಚಿಕೆ ಸಂಪಾದಕ ಮಂಡಳಿ ಸದಸ್ಯರಾಗಿ ಕಾರ್ಯನಿರ್ವಹಣೆ, ರಾಯಚೂರು ನಗರದಲ್ಲಿ ಅತ್ಯುತ್ತಮ ಶ್ರೀ ಕನ್ಯಕಾ ಪರಮೇಶ್ವರಿ ಪ್ರಾಥಮಿಕ ಕನ್ನಡ ಶಾಲೆ ಸ್ಥಾಪನೆ, ಶಾಲಾ ಸಮಿತಿ ಅಧ್ಯಕ್ಷರಾಗಿ ಶಾಲೆಯ ಅಪಾರ ಪ್ರಗತಿಗಾಗಿ ಅವಿರತ ಶ್ರಮ ವಹಿಸಿದ್ದಾರೆ. ಆರ್ಯ ವೈಶ್ಯ ಅಧಿಕಾರಿಗಳ ವೃತ್ತಿನಿರತರ ಸಂಘದ (ಅವೋಪ) ಅಧ್ಯಕ್ಷರಾಗಿ ಸೇವೆ ವಧು-ವರರ ಸಮಾವೇಶಗಳು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮುಂತಾದ ಜನಮೆಚ್ಚುಗೆ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಕನ್ನಡ ಸೇವೆ ಹಾಗೂ ಸಂಘಟನೆಗಾಗಿ ವಿಶ್ವೇಶ್ವರಯ್ಯ ಪ್ರಶಸ್ತಿ 'ಕರ್ನಾಟಕ ಸಂಘ, ಜಿಲ್ಲಾ ಕನ್ನಡ ಕ್ರಿಯಾ ಸಮಿತಿ , ಆರ್ಯವೈಶ್ಯ ಸಮಾಜ, ಶ್ರುತಿ ಸಾಹಿತ್ಯ ಮೇಳ, ಜಾಲಹಳ್ಳಿ ಬೃಹನ್ಮಠ, ಆಡವಿ ಅಮರೇಶ್ವರ ಸುಕ್ಷೇತ್ರ ಮಠದ ಸಮಿತಿ, ಶ್ರೀ ವಾಸವಿ ಜಯಂತಿ ಉತ್ಸವ ಸಮಿತಿ, ಶ್ರೀ ಕನ್ಯಕಾಪರಮೇಶ್ವರಿ ಹಾಸ್ಟೆಲ್ ಕಮಿಟಿ, ಟಾಗೋರ್ ಸ್ಮಾರಕ ವಿದ್ಯಾ ಸಂಸ್ಥೆ ಮುಂತಾದ ಸಂಘ-ಸಂಸ್ಥೆಗಳಿಂದ ಸನ್ಮಾನ. ರಾಯಚೂರು-ಮಾನವಿ-ದೇವದುರ್ಗ ತಾಲ್ಲೂಕುಗಳ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಇವರ ಸಾಧನೆಗಳ ಗೌರವಿಸಿ ಸನ್ಮಾನಿಸಿದ್ದಾರೆ. ವೃತ್ತಿಯಿಂದ ಟಾಗೋರ್ ಸ್ಮಾರಕ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ದರ್ಜೆ ಸಹಾಯಕರಾದರೂ, ಪ್ರವೃತ್ತಿಯಿಂದ ಸಂಘಟನೆಯ ಮೂಲಕ, ಕನ್ನಡ ಕೆಲಸ, ಸೇವೆ ಸಾಧನೆಗಳ ಮೂಲಕ ನಾಡಿನಾದ್ಯಂತ ಪರಿಚಿತರಾಗಿದ್ದಾರೆ.

ಹೈದರಾಬಾದ್ ಕರ್ನಾಟಕದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸ್ವಾಗತ ಸಮಿತಿಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ರಾಯಚೂರು - ಕೊಪ್ಪಳ ಜಿಲ್ಲೆಯ ತಾಲ್ಲೂಕಾ ಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿ ಗೋಷ್ಠಿಗಳನ್ನು ಉದ್ಘಾಟಿಸಿ, ಅತಿಥಿಗಳಾಗಿ ಪಾಲ್ಗೊಳ್ಳುವ, ಸನ್ಮಾನಿತರಾಗಿ, ಉಪಸ್ಥಿತರಿರುವ ಗೌರವಕ್ಕೆ ಸದಾ ಪಾತ್ರರಾಗುತ್ತಿರುವ ಪಂಪಯ್ಯ ಶೆಟ್ಟರು, ಈ ಹಿಂದೆ ಸಲ್ಲಿಸಿದ ಸೇವೆಗೆ ಸಾಹಿತ್ಯಾಸಕ್ತ ಮಿತ್ರರ ಪ್ರೀತಿ-ವಿಶ್ವಾಸ ಪುರಸ್ಕಾರವಾಗಿ ಮುಂದುವರೆದಿದೆ.

ಆರ್ಯವೈಶ್ಯ ಜನಾಂಗಕ್ಕೆ ಒಂದು ಸಂವಹನ ವೇದಿಕೆಯ ಕೊರತೆಯನ್ನು ಮನಗಂಡು

'ವೈಶ್ಯವಾರ್ತಾ' ಮಾಸಪತ್ರಿಕೆ ಪ್ರಾರಂಭಿಸಿ, ಸಂಪಾದಕರಾಗಿ ತಮ್ಮ ಸುವ್ಯವಸ್ಥಿತ ಚಟುವಟಿಕೆ, ಸೂಕ್ತ ಮಾಹಿತಿ, ಶಿಸ್ತುಬದ್ಧ ವಿಚಾರ, ಅರ್ಥಪೂರ್ಣ ಲೇಖನಗಳು, ನಾಡಿನಾದ್ಯಂತ ಸುದ್ದಿ ಚಿತ್ರಗಳು, ವೈಚಾರಿಕ ಬರಹಗಳಿಂದ ವೈವಿಧ್ಯಮಯವಾಗಿ ಪ್ರಕಟಗೊಳ್ಳುತ್ತಿರುವ, ನಾಡಿನಾದ್ಯಂತ ಕಳೆದ ಹದಿನೈದು ವರ್ಷಗಳಿಂದ ನಿರಂತರವಾಗಿ ಪ್ರಸಾರವಾಗುವ ಹೆಮ್ಮೆಯ ಪತ್ರಿಕೆಯನ್ನು ಕಟ್ಟಿ ಬೆಳೆಸಿದ್ದಾರೆ. ಆದರಿಂದ ಸಮಾಜಕ್ಕೆ ಉತ್ಕಟ ಲಾಭ ಕೊಟ್ಟು ಪ್ರಗತಿಪರ ಚಿಂತನೆಗಳನ್ನು ಪ್ರಸರಿಸಿದ್ದಾರೆ. ಕಳೆದ ವರ್ಷ ರಾಯಚೂರಿನಲ್ಲಿ ವೈಶ್ಯವಾರ್ತಾ ಪತ್ರಿಕೆಯ ದಶಮಾನೋತ್ಸವ ಸಮಾರಂಭವನ್ನು ಏಗನೂರು ಟೆಂಪಲ್‌ನಲ್ಲಿ ಕನ್ನಡ ಕಾರ್ಯಕ್ರಮದ ಜೊತೆಗೆ ಆಚರಿಸಿಕೊಂಡಿರುವುದು ಅವರಲ್ಲಿರುವ ಕನ್ನಡ ಅಭಿಮಾನವನ್ನು ಎತ್ತಿ ತೋರಿಸುತ್ತದೆ. ಈ ಹಿಂದೆ ರಾಯಚೂರಿನಲ್ಲಿ ಜರುಗಿದ ದಕ್ಷಿಣ ಭಾರತ ರಾಜ್ಯಗಳ ಆರ್ಯ ವೈಶ್ಯರ ಪ್ರಥಮ ಮಹಾಸಮ್ಮೇಳನದ ಸ್ಮರಣ ಸಂಚಿಕೆ ಸಂಪಾದಕರಾಗಿ ಅರ್ಥಪೂರ್ಣವಾದ ಸುಂದರ ಸಂಚಿಕೆ ಹೊರತಂದಿದ್ದಾರೆ.

ಹತ್ತು ವರ್ಷಗಳವರೆಗೆ ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಸವಿನೆನಪಿಗಾಗಿ 'ದಶಕದ ನೆನಪು' ಎನ್ನುವ ವಿಶಿಷ್ಟ ಕಾರ್ಯಕ್ರಮ ರೂಪಿಸಿ ತಮ್ಮ ಸಾಧನೆಗೆ ನೆರವು ಸಹಕಾರ ನೀಡಿದವರನ್ನು ಅಭಿನಂದಿಸಿದ್ದಾರೆ.

ಗ್ರಾಮಾಂತರ ಪ್ರದೇಶದಿಂದ ಬಂದು ಕಳೆದ ನಾಲ್ಕು ದಶಕಗಳಿಂದ ಹಿಂದುಳಿದ ಕರ್ನಾಟಕದ ಗಡಿಭಾಗವಾದ ರಾಯಚೂರು ನಗರದಲ್ಲಿ ನೆಲೆಸಿ, ರಾಯಚೂರು-ಕೊಪ್ಪಳ ಉಭಯ ಜಿಲ್ಲೆಯಲ್ಲಿ ಕನ್ನಡಕ್ಕಾಗಿ ಹೋರಾಟ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಂಘಟನೆಗಾಗಿ ನಿರಂತರ ಚಟುವಟಿಕೆ. ಅನೇಕ ವರ್ಷಗಳ ಕಾಲ ಜಡವಾಗಿದ್ದ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ತಮ್ಮ ಸಂಘಟನಾ ಚಾತುರ್ಯದಿಂದ ಚೈತನ್ಯ ತುಂಬಿದ್ದಾರೆ. ನಿರಂತರ ವೈವಿಧ್ಯಮಯ ಸಾಹಿತ್ಯ ಚಟುವಟಿಕೆ ಸಂಘಟಿಸುವ ಮೂಲಕ ನಾಡಿಗೆ ಕೀರ್ತಿ ತಂದಿರುವ ಎಚ್. ಪಂಪಯ್ಯಶೆಟ್ಟರ ನಿಸ್ವಾರ್ಥ ಕನ್ನಡ ಸೇವೆಯ ಪರಿಗಣಿಸಿ, ನಮ್ಮ ರಾಜ್ಯ ಸರಕಾರವು ಅವರಿಗೆ 'ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸುವ ಎಲ್ಲಾ ಅರ್ಹತೆಯನ್ನೂ ಅವರು ಪಡೆದಿದ್ದಾರೆ.

ಬಿ.ಕಾಂ. ಓದುತ್ತಿದ್ದಾಗಲೇ 1971ರಲ್ಲಿ ತನ್ನ ವಯಸ್ಸಿನ 40 ಗೆಳೆಯರ ತಂಡ ಕಟ್ಟಿ ಕನ್ನಡ ಬಳಗ ಸ್ಥಾಪಿಸಿ, ಸ್ಥಾಪಕ ಕಾರ್ಯದರ್ಶಿಯಾಗಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜರನ್ನು ರಾಯಚೂರಿಗೆ ಕರೆಯಿಸಿ, ಮೆರವಣಿಗೆ ಮಾಡಿ ಭಾರೀ ಬಹಿರಂಗ ಸಭೆ ನಡೆಸಿದ್ದು ಇನ್ನೂ ನೆನಪಿದೆ. ಕನ್ನಡ ಚಲನಚಿತ್ರ ನಟರಾದ ರಾಜೇಶ, ಲಲಿತಾ, ಬಿ.ವಿ.ರಾಧಾ, ಸುದರ್ಶನ, ಶೈಲಶ್ರೀ, ದಿನೇಶ ಶಕ್ತಿಪ್ರಸಾದ, ಧೀರೇಂದ್ರ ಗೋಪಾಲ ಮುಂತಾದವರನ್ನು ರಾಯಚೂರಿಗೆ ಕರೆದುಕೊಂಡು ಬಂದು, ಪ್ರತಿ ವರ್ಷ ರಾಜ್ಯೋತ್ಸವವನ್ನು ವಿಜೃಂಭಣೆ ಯಿಂದ ಆಚರಿಸಿದ್ದರು. ಪ್ರತಿ ವರ್ಷ ನೂರಾರು ಶಾಲಾ ಮಕ್ಕಳನ್ನು ಸೇರಿಸಿ, ಸಾಂಸ್ಕೃತಿಕ

ಕಾರ್ಯಕ್ರಮ ಸ್ಪರ್ಧೆಗಳನ್ನು ಏರ್ಪಡಿಸಿ ಬಹುಮಾನಗಳನ್ನು ಕೊಟ್ಟು ಪುರಸ್ಕರಿಸಲಾಗುತ್ತಿತ್ತು. ಕಾದಂಬರಿಕಾರ ಮ.ನ. ಮೂರ್ತಿಯವರನ್ನು ಕರೆಯಿಸಿ, ವಿಜಯನಗರ ಇತಿಹಾಸ ಕುರಿತು ಭಾಷಣ ಏರ್ಪಡಿಸಿದ್ದಾರೆ. ರಾಯಚೂರಿನಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕಾಗಿ ಹೋರಾಟ ಮಾಡಿದ್ದಲ್ಲದೇ ಪ್ರತಿಯೊಂದು ಚಿತ್ರಮಂದಿರದಲ್ಲಿ ಕನಿಷ್ಠ ಮೂರು ತಿಂಗಳಿಗೊಮ್ಮೆ ಯಾದರೂ ಕನ್ನಡ ಚಿತ್ರ ಪ್ರದರ್ಶನವಾಗುವಂತೆ ನೋಡಿಕೊಳ್ಳುತ್ತಿದ್ದರು. ಅವರ ಹೋರಾಟದ ಫಲವಾಗಿ ರಾಜ್ಯೋತ್ಸವ ಸಮಯದಲ್ಲಿ ಇಡೀ ವಾರ ಎಲ್ಲಾ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರ ಪ್ರದರ್ಶನ ನಡೆಯುತ್ತಿದ್ದವು. ಯಾವುದೇ ಚಿತ್ರಮಂದಿರದಲ್ಲಿ ಕನ್ನಡ ಚಿತ್ರ ಪ್ರದರ್ಶನ ಗೊಂಡರೆ ಮೊದಲ ದಿನದ ಎರಡನೆಯ ಪ್ರದರ್ಶನಕ್ಕೆ ಗೆಳೆಯರೆಲ್ಲ ಕೂಡಿ ಸಿನಿಮಾ ನೋಡಲು ಹೋಗುವ ಅಭ್ಯಾಸ ಬೆಳೆಸಿಕೊಂಡಿದ್ದರು. ಈ ತಂಡ ಸಿನಿಮಾ ನೋಡಲು ಬಂದೇ ಬರುತ್ತದೆಂದು ಚಿತ್ರಮಂದಿರದವರು ಕೂಡ ಟಿಕೇಟು ತೆಗೆದಿಟ್ಟು ಕೊಡುತ್ತಿದ್ದರು. ಸಂಪತ್ತಿಗೆ ಸವಾಲ್, ಶ್ರೀ ಕೃಷ್ಣದೇವರಾಯ, ಮಯೂರ ಚಿತ್ರಗಳು ರಾಯಚೂರಿನಲ್ಲಿ 50 ದಿನಗಳ ಪ್ರದರ್ಶನ ಕಂಡಿದ್ದು ಅವರ ಹೋರಾಟದ ಫಲದಿಂದ, ಈ ಸಮಯದಲ್ಲಿ ನಾರದಗಡ್ಡೆ ಮಠದ ಪೀಠಾಧಿ ಪತಿಗಳಾಗಿದ್ದ ಶ್ರೀ ನಾರದಗಡ್ಡೆ ಚೆನ್ನಬಸವ ಸ್ವಾಮಿಗಳ ಕೃಪಾಶೀರ್ವಾದ ಹಾಗೂ ಬೆಂಬಲ ಅವರ ಮೇಲಿತ್ತು. ಕನ್ನಡ ಬಳಗದಿಂದ ಶ್ರೀ ನಾ.ಚೆ. ಅವರ ವಚನ ಸಂಕಲನ ಹಾಗೂ ಯೂನಿಯನ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಪ್ರೇಮವಾಣಿಯವರ ಕವನ ಸಂಕಲನ ಕನ್ನಡ ಬಳಗದಿಂದ ಪ್ರಕಟಿಸಿದ್ದಲ್ಲದೇ ಕನ್ನಡ ಬಳಗದ ಐದನೆಯ ವಾರ್ಷಿಕೋತ್ಸವ ಸಮಯದಲ್ಲಿ ಸ್ಮರಣ ಸಂಚಿಕೆ ಹೊರತಂದು, ಆಗ ಮುಂಬೈನಲ್ಲಿದ್ದ ತರಂಗ ಪತ್ರಿಕೆಯ ಸಂಪಾದಕ ಸಂತೋಷ ಕುಮಾರ ಗುಲ್ವಾಡಿಯವರನ್ನು ರಾಯಚೂರಿಗೆ ಕರೆಯಿಸಿ ವಾರ್ಷಿಕೋತ್ಸವ ಆಚರಿಸಿದ್ದರು.

ಕನ್ನಡ ಶಕ್ತಿ ಕೇಂದ್ರದ ಜಿಲ್ಲಾಧ್ಯಕ್ಷರಾಗಿದ್ದ ಶಾಂತರಸರು ಪಂಪಯ್ಯ ಶೆಟ್ಟರನ್ನು ಅದರ ಕಾರ್ಯದರ್ಶಿಯಾಗಿ ನೇಮಿಸಿದರು. ಈ ಸಂದರ್ಭದಲ್ಲಿ ಅನೇಕ ಕನ್ನಡಪರ ಹೋರಾಟಗಳಲ್ಲಿ ಮುಖ್ಯವಾಗಿ ಗೋಕಾಕ್ ಚಳುವಳಿಯಲ್ಲಿ ಪಾಲ್ಗೊಂಡಿರುತ್ತಾರೆ. 1983ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ನಗರಸಭೆ ಅಧ್ಯಕ್ಷರಾಗಿದ್ದ ಆರ್. ಆಂಜನೇಯಲುರವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಗೊಂಡ ನಂತರ ಎಚ್. ಪಂಪಯ್ಯ ಶೆಟ್ಟರಿಗೆ ಕಾರ್ಯದರ್ಶಿ ಸ್ಥಾನದ ಜವಾಬ್ದಾರಿ ವಹಿಸಿಕೊಟ್ಟರು. ಆರ್. ಆಂಜನೇಯಲು ಅಧ್ಯಕ್ಷತೆಯಲ್ಲಿ ರಾಯಚೂರಿನಲ್ಲಿ 9 ದಿನಗಳ ಕಾಲ ನಡೆದ ಕಾರ್ಯ ಕಾವ್ಯ ಕಮ್ಮಟ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆ ಅತಿ ದೊಡ್ಡ ಕಾರ್ಯಕ್ರಮಗಳಾಗಿರುತ್ತವೆ. ಕಳೆದ 8 ವರ್ಷಗಳ ಹಿಂದೆ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಎಂಬ ರಾಜ್ಯ ಮಟ್ಟದ ಸಂಘಟನೆಯನ್ನು ಹುಟ್ಟುಹಾಕಿದರು. ಜೊತೆಗೆ ರಾಜ್ಯಾಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನೂ ಸಹ ಹೆಗಲಿಗೆ ಹೊತ್ತುಕೊಂಡು ನಿರಂತರವಾಗಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಆರ್ಯವೈಶ್ಯರಿಗೂ ಸಹ ಸಾಹಿತ್ಯದ ಸವಿಯೂಟವನ್ನು ನೀಡುತ್ತಿದ್ದಾರೆ. ಜೊತೆಗೆ ರಾಯಚೂರಿನ ರಂಗಮಂದಿರದಲ್ಲಿ ಕರ್ನಾಟಕ

ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ದ್ವಿತೀಯ ಸಮ್ಮೇಳನವನ್ನು ಅದ್ದೂರಿಯಾಗಿ ಮಾಡಿದ ಹೆಗ್ಗಳಿಕೆ ಎಚ್. ಪಂಪಯ್ಯಶೆಟ್ಟಿಯವರಿಗೆ ಸಲ್ಲುತ್ತದೆ. ತುಮಕೂರು 2012ರಲ್ಲಿ, 2014ರಲ್ಲಿ ಚಿತ್ರದುರ್ಗ ಮತ್ತು 2016ರಲ್ಲಿ ಶಿವಮೊಗ್ಗದಲ್ಲಿ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ರಾಜ್ಯ ಮಟ್ಟದ ಸಮ್ಮೇಳನಗಳನ್ನು ವಿಶೇಷವಾಗಿ ನಡೆಸಿದರು. ಸಮ್ಮೇಳನದಲ್ಲಿ ಹಲವಾರು ಗೋಷ್ಠಿಗಳನ್ನು ಜನಾಂಗದ, ಕನ್ನಡದ ಅಭಿವೃದ್ಧಿಗಾಗಿ ಏರ್ಪಡಿಸಿದರು.

60 ವಸಂತಗಳನ್ನು ಪೂರೈಸಿದ ಎಚ್. ಪಂಪಯ್ಯಶೆಟ್ಟರವರು ತಮ್ಮ ಷಷ್ಠಿಪೂರ್ತಿ ಸಮಾರಂಭವನ್ನು ಅದ್ದೂರಿಯಾಗಿ ಆಚರಿಸದೇ ಭಿನ್ನವಾಗಿ ವಿಶೇಷವಾಗಿ ಇಡೀ ಒಂದು ದಿನ ಕನ್ನಡದ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಮಾಡಿರುವುದು ಅವರಲ್ಲಿರುವ ಕನ್ನಡ ಪ್ರೇಮವನ್ನು ಎತ್ತಿ ತೋರಿಸುತ್ತದೆ. ಆಡಂಬರಕ್ಕೆ ಏಣಿ ಹಾಕದೆ ಸರಳತೆಯಿಂದ ನಿರಂತರವಾಗಿ ಕನ್ನಡ ಕಾಯಕವನ್ನು ಮೈಗೂಡಿಸಿಕೊಂಡಿರುವ ಎಚ್. ಪಂಪಯ್ಯಶೆಟ್ಟರವರು ಹೈದರಾಬಾದ್ ಕರ್ನಾಟಕದ ಕನ್ನಡಿಗರ ಆಸ್ತಿ ಎಂದರೆ ತಪ್ಪಲ್ಲ. ಕನ್ನಡ ಸಂಘಟನೆ ನಾಡು ನುಡಿಯ ಏಳಿಗೆಗಾಗಿ ಅವರ ರಕ್ತದ ಕಣಕಣಗಳಲ್ಲಿಯೂ ಹಬ್ಬಿರುವ ಕನ್ನಡದ ಪ್ರೇಮ ಇಂದಿನ ಯುವ ಪೀಳಿಗೆಗೆ ಮಾದರಿ ಅಂದರೆ ತಪ್ಪಲ್ಲ ಎಚ್. ಪಂಪಯ್ಯಶೆಟ್ಟರವರು 100 ವಸಂತಗಳನ್ನು ಪೂರೈಸಲಿ, ಕನ್ನಡದ ತೇರನ್ನು ಎಳೆಯಲಿ ಎಂದು ಶುಭ ಹಾರೈಸೋಣ.

ಪಲಗುಲ ನಾಗರಾಜ
ನಗರೇಶ್ವರ ದೇವಸ್ಥಾನದ ಹಿಂದುಗಡೆ
ನೇತಾಜಿ ನಗರ, ರಾಯಚೂರು ;
ಸನಿಹವಾಣಿ : 9341887990

ಸ್ನೇಹ ಸ್ಪಂದನದ ಪಂಪಯ್ಯ ಶೆಟ್ಟಿ

✍ ಡಾ|| ಮಹಾಂತೇಶ ಮಲ್ಲನಗೌಡರ

ಪಂಪಯ್ಯ ಶೆಟ್ಟಿಯವರು ಈಗ ನಿವೃತ್ತ ಜೀವನ ನಡೆಸುತ್ತಿದ್ದರೂ ಸದಾ ಕ್ರಿಯಾಶೀಲವಾಗಿರುವ ವ್ಯಕ್ತಿ. ಅವರ ನನ್ನ ಸ್ನೇಹ 23 ವರ್ಷದಷ್ಟು ದೀರ್ಘವಾದದ್ದು. ನಾನು 1985ರಲ್ಲಿ ಕೊಪ್ಪಳಕ್ಕೆ ಬಂದಾಗ ಕೊಪ್ಪಳವು ರಾಯಚೂರು ಜಿಲ್ಲೆಯ ತಾಲೂಕಾ ಕೇಂದ್ರ ಹಾಗೂ ಉಪವಿಭಾಗ ಕೇಂದ್ರವಾಗಿತ್ತು. ಆಗ ಗಾಢವಾದ ತೆಲುಗಿನ ಪ್ರಭಾವದಲ್ಲಿದ್ದ ರಾಯಚೂರು ಹೈದರಾಬಾದ್ ಕರ್ನಾಟಕದ ಪ್ರಮುಖ ನಗರ. ಸುಮಾರು 224 ವರ್ಷಗಳ ನಿಜಾಮನ ಆಳ್ವಿಕೆಯಲ್ಲಿ ಒಂದು ಕಡೆ ಉರ್ದು ಇನ್ನೊಂದು ಕಡೆ ತೆಲುಗು ಇವುಗಳ ಮಧ್ಯೆ ಕನ್ನಡ ನಲುಗಿ ಹೋಗಿತ್ತು. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಕನ್ನಡವನ್ನು ಕನ್ನಡ ಸಂಸ್ಕೃತಿಯನ್ನು ಜೀವಂತವಾಗಿಟ್ಟು ಕನ್ನಡ ಪರಿಸರ ನಿರ್ಮಾಣ ಮಾಡಿತ್ತು. ರಾಯಚೂರಿನ ಕರ್ನಾಟಕ ಸಂಘ. ಪಂಪಯ್ಯ ಶೆಟ್ಟಿಯವರು ಅಲ್ಲಿ ಸಕ್ರಿಯವಾಗಿದ್ದು ಗೆಳೆಯರ ಬಳಗ ಕಟ್ಟಿಕೊಂಡು ಕನ್ನಡ ಪರ ಚಟುವಟಿಕೆ ಮಾಡುತ್ತಿದ್ದುದು ಇತಿಹಾಸ. ಇವರು 3 ಬಾರಿ ರಾಯಚೂರು ಜಿಲ್ಲಾ ಕ. ಸಾ. ಪ. ಅಧ್ಯಕ್ಷರಾಗಿ ಆಯ್ಕೆ ಆದುದು ಕನ್ನಡ ಪ್ರೇಮದಿಂದಲೇ ಹೊರತು ಬೇರೆ ಪ್ರಭಾವದಿಂದಲ್ಲ.

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಶಾಂತರಸ ಹಾಗೂ ಶ್ರೀ ಆಂಜನೇಯಲು ಅವರ ನೇತೃತ್ವದಲ್ಲಿ ಆಗ ಕೆಲಸ ಮಾಡುತ್ತಿತ್ತು. ಆಂಜನೇಯಲು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಸಾಮಾನ್ಯವಾಗಿ ಅವರು ಅವಿರೋಧವಾಗಿಯಾಗಿ ಆಯ್ಕೆ ಆಗುತ್ತಿದ್ದರು. ಅವರ ನಿಧನದ ಅನಂತರ ಹಂಗಾಮಿ ಅಧ್ಯಕ್ಷರಾಗಿ ನೇಮಕವಾದ ಪಂಪಯ್ಯ ಶೆಟ್ಟರು ಪರಿಷತ್ತನ್ನು ಹೆಚ್ಚು ಕ್ರಿಯಾಶೀಲ ಗೊಳಿಸಿದರು. ಆಗ ಅಲ್ಲಿ ಸಾಹಿತಿಗಳ ಪಡೆಯೇ ನಿರ್ಮಾಣವಾಗಿತ್ತು. ಶಾಂತರಸ, ರಾಮಣ್ಣ ಹವಳೆ, ಅಯ್ಯಪ್ಪ ತುಕ್ಕಾಯಿ, ಎಸ್.ಜಿ. ಸ್ವಾಮಿ, ಅಯ್ಯಪ್ಪಯ್ಯ ಹುಡಾ, ಭಗತ್‌ರಾಜ ನಿಜಾಮಕರ್, ಎಚ್.ಎಸ್. ಮುಕ್ತಾಯಕ್ಕ ಮುಂತಾದವರು ನನಗೆ ಈಗ ನೆನಪಾಗುತ್ತಾರೆ.

ಇಂತಹ ಸಂದರ್ಭದಲ್ಲಿ ಕೊಪ್ಪಳದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಬೇಕೆಂಬ ಬೇಡಿಕೆ ಮೊಟ್ಟಮೊದಲು ಹುಬ್ಬಳ್ಳಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ

ಕೇಳಿ ಬಂತು, ಆಗ ಅದು ನಂಬಲಸಾಧ್ಯವಾಗಿತ್ತು. ಆದರೆ ಆ ಕನಸು ನನಸಾಗಿ 1993 ಫೆಬ್ರವರಿ 5, 6, 7 ರಂದು 62ನೆಯ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಕೊಪ್ಪಳದಲ್ಲಿ ನಡೆದದ್ದು ಈಗ ಇತಿಹಾಸ ಗರ್ಭದಲ್ಲಿ ಸೇರಿದೆ. ಇದು ಸಾಧ್ಯವಾದುದಕ್ಕೆ ಆಗ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪಂಪಯ್ಯ ಶೆಟ್ಟಿಯವರು ನೀಡಿದ ಪ್ರೋತ್ಸಾಹ, ಸಹಾಯ ಸಹಕಾರವೇ ಪ್ರಮುಖ ಕಾರಣ.

ನಾನು ಪಂಪಯ್ಯ ಶೆಟ್ಟಿಯವರ ಅಧಿಕಾರವಧಿಯಲ್ಲಿ ಎರಡು ಅವಧಿಗೆ ಕೊಪ್ಪಳ ತಾಲ್ಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದೆ. ನಾನು ಯಾವುದೇ ಕಾರ್ಯಕ್ರಮ ಹಮ್ಮಿಕೊಂಡರೂ ಸಹಿತ ನನಗೆ ಸಹಾಯ, ಸಹಕಾರ, ಪ್ರೋತ್ಸಾಹ ನೀಡುತ್ತಿದ್ದರು. ರಾಯಚೂರಿನಲ್ಲಿ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡರೂ ಸಹಿತ ನನಗೆ ಆಮಂತ್ರಣ ನೀಡಿ 200 ಕಿ. ಮೀ. ದೂರವಿದ್ದರು ಹೋಗುವ ಹಾಗೆ ಮಾಡುತ್ತಿದ್ದರು. ತಿಮ್ಮಾಪುರ ಪೇಟೆಯಲ್ಲಿದ್ದ ಅವರ ಮನೆಗೆ ಹೋದಾಗ ಪಂಪಯ್ಯ ಶೆಟ್ಟಿ ದಂಪತಿಗಳು ನೀಡುತ್ತಿದ್ದ ಸತ್ಕಾರ, ಊಟ ಹಾಗೂ ಪ್ರೀತಿಯ ಮಾತುಗಳನ್ನು ಮರೆಯಲಾರೆ. ಅವರು ವೃತ್ತಿಯಿಂದ ಠ್ಯಾಗೋರ ಮೆಮೊರಿಯಲ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಅವರ ಸಾಹಿತ್ಯ ಪ್ರೇಮ ಅನನ್ಯವಾದದ್ದು. ನಿವೃತ್ತೀ ನಂತರವೂ ತಮ್ಮ ಸಮಾಜದ ಸಂಘಟನೆಗಾಗಿ ಪತ್ರಿಕೆಯನ್ನು ಪ್ರಾರಂಭಿಸಿದರು. ಸಮಾಜದ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸಿ ಸಮ್ಮೇಳನ ನಡೆಸುತ್ತಿದ್ದಾರೆ. ಈಗ ಅವರಿಗೆ ಅಭಿನಂದನಾ ಗ್ರಂಥ ಅರ್ಪಿಸುತ್ತಿರುವದು ಸಕಾಲಿಕ. ಅವರಿಗೆ ಶುಭ ಹಾರೈಕೆಗಳು.

ಡಾ॥ ಮಹಂತೇಶ ಮಲ್ಲನಗೌಡರು
ಗವಿಶ್ರೀ ನಗರ, ಒಂದನೆಯ ಕ್ರಾಸ್
ಕೊಪ್ಪಳ
ಸನಿಹವಾಣಿ : 9448634014

ಅಪೂರ್ವ ಸಾಹಿತ್ಯ, ಸಂಸ್ಕೃತಿ ಸಂಘಟಕ : ಪಂಪಯ್ಯ ಶೆಟ್ಟರು

✍ ಪ್ರೊ. ಅಮರೇಶ ನುಗಡೋಣಿ

ಪಂಪಯ್ಯ ಶೆಟ್ಟರನ್ನು ನಾನು ರಾಯಚೂರಿನಲ್ಲಿ ಬಿ.ಎ. ಓದುವಾಗ ನೋಡುತ್ತಿದ್ದೆ. ತಿಮ್ಮಾಪುರ ಪೇಟೆಯಲ್ಲಿ ನಾನು ವಿದ್ಯಾಭ್ಯಾಸಕ್ಕಾಗಿ ರೂಮ್ ಮಾಡಿಕೊಂಡಿದ್ದೆ ಹನುಮಾನ ಚಿತ್ರಮಂದಿರದ ಹಿಂಬದಿಯ ಓಣಿಯಲ್ಲಿ ಅವರ ಮನೆಯಿತ್ತು. ಚಿಕ್ಕ ಮನೆ. ನಾನು ಗೆಳೆಯರ ಜೊತೆ ಎಲ್.ವಿ.ಡಿ. ಕಾಲೇಜಿಗೆ ಹೋಗುವ ದಾರಿ ಅದೇ ಆಗಿತ್ತು. ಅವರ ಪರಿಚಯ ನನಗಿರಲಿಲ್ಲ. ಆದರೆ ದಿನ ನೋಡುವುದರಿಂದ ಮಾತುಕತೆ ಇಲ್ಲದಿದ್ದರೂ ಮುಖ ಪರಿಚಯವಿತ್ತು. ಹನುಮಾನ್ ಚಿತ್ರಮಂದಿರ ರಸ್ತೆಯ ಅಕ್ಕಪಕ್ಕ ಚಿಕ್ಕ ಚಿಕ್ಕ ಹೋಟೆಲ್‌ಗಳಿದ್ದು ಅಲ್ಲಿ ನಾವು ಚಹ ಕುಡಿಯಲು ನಿಲ್ಲುತ್ತಿದ್ದೆವು. ಅವರು ನಮ್ಮ ಹಾಗೆ ಪರಿಚಿತರ ಜೊತೆ ಚಹ ಕುಡಿಯಲು ಬಂದಿರುತ್ತಿದ್ದರು. ಹನುಮಾನ್ ಚಿತ್ರಮಂದಿರದ ಪಕ್ಕದ ರಸ್ತೆಯ ಆ ಬದಿಗೆ ಕರ್ನಾಟಕ ಸಂಘವಿತ್ತು. ಅದಕ್ಕೊಂದು ಕಟ್ಟಡವಿತ್ತು. ವಾಚನಾಲಯವೂ ಇತ್ತು. ಸಾಹಿತ್ಯ, ಸಂಗೀತ, ನಾಡಹಬ್ಬ, ಉತ್ಸವಗಳು ಕರ್ನಾಟಕ ಸಂಘದಲ್ಲಿ ನಡೆಯುತ್ತಿದ್ದವು. ಪಂಪಯ್ಯ ಶೆಟ್ಟರು ಇಲ್ಲಿಗೆ ನೋಡಲು ಬರುತ್ತಿದ್ದರು. ಅವರಿಗೆ ಸಾಹಿತ್ಯ ಸಂಸ್ಕೃತಿ ಆಸಕ್ತಿ ಇರುವುದು ಗೊತ್ತಾಯಿತು. ರಾಯಚೂರಿನಲ್ಲಿದ್ದ ಶಾಂತರಸರೋ, ಎಸ್.ಜಿ. ಸ್ವಾಮಿಯೊ ಒಮ್ಮೆ ಪಂಪಯ್ಯ ಶೆಟ್ಟರನ್ನು ಪರಿಚಯಿಸಿದ ನೆನಪಿದೆ. ಅಂದಿನಿಂದ ನಾನು ಅವರನ್ನು ಕಂಡರೆ 'ನಮಸ್ಕಾರ' ಎನ್ನುವ ಸ್ನೇಹ ಬೆಳೆಯಿತು. ಅವರ ನಗು, ಆ ನಗುವಿನ ಮುಖ ನನಗೆ ಆ ಹೊತ್ತಿನಿಂದ ಈ ಹೊತ್ತಿನವರೆಗೆ ಮಾಸದೆ ಉಳಿದಿರುವುದನ್ನು ಕಾಣುತ್ತಿದ್ದೇನೆ. ಅದೇ ವಿಶೇಷ. ರಾಯಚೂರಿನಲ್ಲಿ ನಾನು ಪದವಿ ಮುಗಿಸುವ ತನಕ ಅವರು ನನಗೆ ಪರಿಚಿತರು.

ನಾನು ಎಂ.ಎ. ಓದಲು ಕಲಬುರಗಿ ಸೇರಿಕೊಂಡೆ. ಅನಂತರ ಕೆಲಸಕ್ಕಾಗಿ ಅಲ್ಲಿ ಇಲ್ಲಿ ಅಲೆದಾಡಿ ಕೊನೆಗೆ 1992ರ ಕೊನೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಸೇರಿಕೊಂಡೆ. ಬಹುಶಃ ಈ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರೆಂದು ಕಾಣುತ್ತದೆ. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿದ್ದ ನನ್ನನ್ನು ಕರೆದು 'ಅಮರೇಶ, ನನ್ನ ಅವಧಿಯಲ್ಲಿ ಪುಸ್ತಕ ಪ್ರಕಟಣೆಗೆ ಆದ್ಯತೆ ಕೊಡಬೇಕಾಗಿದೆ. ನೀವು ಒಂದು ಪುಸ್ತಕವನ್ನು ಸಿದ್ಧಪಡಿಸಿ

ಕೊಡಲು ಪ್ರಯತ್ನಿಸಿ. ನಾನು ಆರ್ಥಿಕ ನೆರವು ನೀಡುತ್ತೇನೆಂದರು'. ನಾನು ಪಿಎಚ್.ಡಿ. ಪದವಿಗಾಗಿ ಅಧ್ಯಯನ ಮಾಡಲು ಯತ್ನಿಸುತ್ತಿದ್ದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಆಗ ಇದ್ದ ಹಿರಿಯ ಪ್ರಾಧ್ಯಾಪಕರು ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಬಗ್ಗೆ ವಿಶೇಷ ಒಲವು ತೋರಿಸುತ್ತಿದ್ದರು. ನಾನು ಅದೇ ಪ್ರಾಂತ್ಯದ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಲು ಡಾ|| ಎಚ್. ಎಸ್. ರಾಘವೇಂದ್ರರಾವ್, ಡಾ|| ರಹಮತ್ ತರೀಕೆರೆ ಅವರು ಪ್ರೇರೇಪಿಸಿದರು. ಅದೇ ಪ್ರಾಂತ್ಯದವನಾಗರೂ ಅದರ ಸಾಂಸ್ಕೃತಿಕ ಚರಿತ್ರೆಯ ಬಗ್ಗೆ ನನಗೆ ತಿಳಿವಳಿಕೆ ಇರಲಿಲ್ಲ. 'ನೀವು ಯುವಕತೆಗಾರರು, ನಿಮ್ಮ ಪ್ರಾಂತ್ಯದ ಕಥಾಸಾಹಿತ್ಯವನ್ನು ಕುರಿತು ಕೆಲಸಮಾಡಿ' ಎಂದು ಎಚ್.ಎಸ್. ರಾಘವೇಂದ್ರರಾವ್ ಅವರು ಹೇಳಿದರು. ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಕತೆಗಾರರ ಪ್ರಾತಿನಿಧಿಕ ಕಥಾಸಂಕಲನ ತರುತ್ತೇನೆಂದು ಪಂಪಯ್ಯ ಶೆಟ್ಟರಿಗೆ ತಿಳಿಸಿದೆ. ಅವರು 'ಆಯಿತು ಅಮರೇಶ' ಎಂದು ಪ್ರೋತ್ಸಾಹಿಸಿದರು.

ಪಂಪಯ್ಯ ಶೆಟ್ಟರು ಬೆಂಬಲ ನೀಡಿದ ಫಲವಾಗಿ 'ಬಿಸಿಲ ಹನಿಗಳು' ಎಂಬ ಕಥಾಸಂಕಲನ ಪ್ರಕಟವಾಯಿತು. ಎಚ್.ಎಸ್.ಆರ್. ಅವರೇ ಮುನ್ನುಡಿ ಬರೆದರು. ಈ ಕಥಾ ಸಂಕಲನದ ವಿಶೇಷವೆಂದರೆ ಹೈ.ಕ. ಪ್ರಾಂತ್ಯದ ಆರಂಭಿಕ ಕತೆಗಾರರಿಂದ ಹಿಡಿದು 90ರರ ದಶಕದವರೆಗೆ ಬರೆಯುತ್ತಿರುವ ಕತೆಗಾರರ ಒಂದು ಉತ್ತಮ ಕಥೆಯನ್ನು ಆಯ್ಕೆಮಾಡಿ ಕೊಂಡು, ಆ ಕಥೆಗಾರರು ಬರೆದ ಎಲ್ಲ ಕಥೆಗಳನ್ನು ಕುರಿತು ಒಂದೊಂದು ವಿಮರ್ಶಾ ಟಿಪ್ಪಣಿಯನ್ನು ಪ್ರಕಟಿಸಲಾಯಿತು. 25 ಕತೆಗಾರರ 25 ಕಥೆಗಳು, ಅವರ ಕಥೆಗಳ ಟಿಪ್ಪಣಿ ಅದರಲ್ಲಿ ಸೇರಿಸಲಾಗಿತ್ತು. ಈ ಟಿಪ್ಪಣಿಗಳನ್ನು ಬರೆದವರು ಡಾ|| ಕೆ. ವಿ. ನಾರಾಯಣ, ಡಾ|| ಪುರುಷೋತ್ತಮ ಬಿಳಿಮಲೆ, ಡಾ|| ರಹಮತ್ ತರೀಕೆರೆ ಮುಂತಾದವರು. ಪುಸ್ತಕ ಬಿಡುಗಡೆಯಾದ ಮೇಲೆ 'ಬಿಸಿಲ ಹನಿಗಳು' ಕುರಿತು 10 ಪತ್ರಿಕೆಗಳಲ್ಲಿ ವಿಮರ್ಶೆಗಳು ಪ್ರಕಟಗೊಂಡವು.' ಡಾ|| ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ಮಯೂರ' ಮಾಸ ಪತ್ರಿಕೆಗೆ ಲೇಖನ ಬರೆದರು. ಪಂಪಯ್ಯ ಶೆಟ್ಟರ ಕಾಲಾವಧಿಯಲ್ಲಿ ಪ್ರಕಟಗೊಂಡ ಈ ಪುಸ್ತಕವು ಕರ್ನಾಟಕದ ಸಾಹಿತ್ಯಿಕ ವಲಯದಲ್ಲಿ ಪ್ರಸಿದ್ಧಿಯನ್ನು ಪಡೆಯಿತು.

ಡಾ|| ಎಂ.ಎಂ. ಕಲಬುರ್ಗಿ ಅವರು ಕುಲಪತಿಯಾಗಿ ಕ.ವಿ.ವಿ. ಹಂಪಿಗೆ ಬಂದರು. ಅವರ ಅವಧಿಯಲ್ಲಿ ನನಗೊಂದು ವಿಚಾರ ಸಂಕಿರಣ ಮಾಡಲು ಹೇಳಿದರು. ನಾನು ಕರ್ನಾಟಕದಲ್ಲಿ ಬಾಳಿದ ಸಂತ ಪರಂಪರೆಯ ಸಂತರನ್ನು ಗಮನದಲ್ಲಿರಿಸಿಕೊಂಡು 'ಕರ್ನಾಟಕದ ಸಾಂಸ್ಕೃತಿಕ ನಾಯಕರು' ಎಂಬ ವಿಷಯದ ಮೇಲೆ ವಿಚಾರ ಸಂಕಿರಣವನ್ನು ನಡೆಸಬಹುದೆಂದು ಎಂ.ಎಂ. ಕಲಬುರ್ಗಿಯವರಿಗೆ ಪ್ರಸ್ತಾವವನ್ನು ತೋರಿಸಿದೆ. ಅವರು ಒಪ್ಪಿದರು. ಅದನ್ನು ರಾಯಚೂರಿನಲ್ಲಿ ನಡೆಸಲು ತೀರ್ಮಾನಿಸಿದೆ. ಆಗ ಪಂಪಯ್ಯ ಶೆಟ್ಟರನ್ನು ಕೇಳಿದೆ. ವಿಚಾರಸಂಕಿರಣ ನಡೆಸಲು ಪರಿಷತ್ತಿನ ಸಹಭಾಗಿತ್ವ ನೀಡಲು ಸಮ್ಮತಿಸಿದರು. ಬಹುಶಃ ಅವರು ಎರಡನೆಯ ಅವಧಿಗೂ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೆಂದು ತೋರುತ್ತದೆ.

ರಾಯಚೂರಿನ ಎ.ಪಿ.ಎಂ.ಸಿ. ಸಭಾಂಗಣದಲ್ಲಿ ಸಮಾರಂಭ ಮಾಡಿದೆವು. ಡಾ|| ಎಂ. ಎಂ. ಕಲಬುರ್ಗಿಯವರು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲೆ ಒಲವು ತೋರಿಸಲಿಲ್ಲ. ನಾನು ಪಂಪಯ್ಯ ಶೆಟ್ಟರ ಬಗ್ಗೆ, ಅವರ ಕೆಲಸಗಳ ಬಗ್ಗೆ ವಿವರಿಸಿ 'ಬಿಸಿಲ ಹನಿಗಳು' ಪುಸ್ತಕವನ್ನು ತೋರಿಸಿದ ಮೇಲೆ ಒಪ್ಪಿಕೊಂಡಿದ್ದರು. ಕರ್ನಾಟಕ ಸಾಂಸ್ಕೃತಿಕ ನಾಯಕರು ವಿಚಾರ ಸಂಕಿರಣ ಚೆನ್ನಾಗಿಯೇ ನಡೆಯಿತು. ಸಮಾರೋಪಕ್ಕೆ ಡಾ|| ಕೆ.ವಿ. ನಾರಾಯಣ ಅವರು ಬಂದಿದ್ದರು. ಕರ್ನಾಟಕದ ಪ್ರಾತಿನಿಧ್ಯವಿತ್ತು. ಆದರೆ ಅಲ್ಲಿ ಮಂಡನೆಯಾದ ಪ್ರಬಂಧಗಳು ಸಕಾಲದಲ್ಲಿ ಲೇಖನ ರೂಪದಲ್ಲಿ ನನ್ನ ಕೈಗೆ ಸಿಗಲಿಲ್ಲ. 10 ಲೇಖನಗಳು ಸಿಕ್ಕಿದ್ದರೆ ಅದು ಪುಸ್ತಕ ರೂಪದಲ್ಲಿ ಪ್ರಕಟವಾಗಿದ್ದರೆ. ಚೆನ್ನಾಗಿತ್ತು ಎಂದು ಈಗಲೂ ನನಗೆ ಅನಿಸುತ್ತದೆ. ಪರಿಷತ್ತು ಮತ್ತು ಕ.ವಿ.ವಿ.ಹಂಪಿ ಪ್ರಕಟಿಸಲು ಒಪ್ಪಿದ್ದವು.

ರಾಯಚೂರಿನ ಜಿಲ್ಲಾ ಸಾಹಿತ್ಯ ಪರಿಷತ್ತು ಘಟಕದ ಅಧ್ಯಕ್ಷರಾಗಿ ಪಂಪಯ್ಯ ಶೆಟ್ಟರು ಅನೇಕ ಸಮಾರಂಭಗಳನ್ನು ಮಾಡಿದರು. ನನ್ನನ್ನು ರಾಯಚೂರಿಗೆ ಕರೆಯುತ್ತಿದ್ದರು. ಹೊಸಪೇಟೆಯಿಂದ ರಾಯಚೂರಿಗೆ ಹೋಗಲು 6 ತಾಸಿನ ಪ್ರಯಾಣಕ್ಕೆ ಅಂಜಿ ನಾನು ಹೋಗಲು ಹಿಂಜರಿಯುತ್ತಿದ್ದೆ. ಅಮರೇಶ, ರಾಯಚೂರಿನವರಾಗಿ ನೀವು ರಾಯಚೂರಿಗೆ ಬರಲು ಹಿಂಜರಿಯಬಾರದು. ಬಂದು ಹೋಗುತ್ತಿರಬೇಕು' ಎಂದು ಅನೇಕ ಸಲ ಅವರು ಕಾಳಜಿಯಿಂದ ಹೇಳುತ್ತಿದ್ದರು. ಸೂಕ್ಷ್ಮ ಮನಸ್ಸಿನ ಅವರು ಮೂಲತಃ ರೈತ, ವ್ಯಾಪಾರಸ್ಥ ಮನೆತನಕ್ಕೆ ಸೇರಿದವರು. ಅವರ ಪರಿಸರದಲ್ಲಿ ಸಾಹಿತ್ಯ ಕಲೆ, ಸಂಗೀತದ ಪ್ರತಿಭೆಗಳು ಅಷ್ಟಾಗಿ ಅರಳುವುದಿಲ್ಲವೆಂದು ಪ್ರತೀತಿ. ವ್ಯಾಪಾರಸ್ಥರು ಹೆಚ್ಚು ಅನ್ನುತ್ತಾರೆ. ಪಂಪಯ್ಯ ಶೆಟ್ಟರು ಮೂಲತಃ ಬರಹಗಾರರಲ್ಲ. ಸಾಹಿತ್ಯದ ಬಗೆಗೆ ಅವರ ಆಸಕ್ತಿ ಮಾತ್ರ ದೊಡ್ಡದು. ಟ್ಯಾಗೂರ್ ಕಾಲೇಜಿನಲ್ಲಿ ಅವರು ಲೆಕ್ಕಿಗರಾಗಿ ಕೆಲಸ ಮಾಡಿದರು. ಕರ್ನಾಟಕ ಸಂಘ ರಾಯಚೂರಿನಲ್ಲಿ ಸಾಹಿತ್ಯ ಸಂಸ್ಕೃತಿ ಬೆಳವಣಿಗೆಗೆ ಅಪಾರ ಶ್ರಮಿಸಿದರು. ಅದರ ಕಾರ್ಯದರ್ಶಿಯಾಗಿದ್ದರು. ಅಂದರೆ ಸಾಹಿತ್ಯಾಸಕ್ತಿಯಿಂದಲೇ ಆಗಿದ್ದರು ಎಂಬುವುದು ತಿಳಿಯುತ್ತದೆ. ಹಾಗೆ ನೋಡಿದರೆ ರಾಯಚೂರು ಸಾಹಿತ್ಯಿಕವಾಗಿ ಹೆಸರು ಮಾಡಿದ ಜಿಲ್ಲೆಯಲ್ಲ. ಆದರೂ ಶಾಂತರಸರು, ಸಿದ್ಧಯ್ಯ ಪುರಾಣಿಕರು, ಜಯತೀರ್ಥ ರಾಜಪುರೋಹಿತರು, ಶೈಲಜಾ ಉಡಚಣ, ಜಂಬಣ್ಣ ಅಮರಚಿಂತ ಮುಂತಾದವರಿಂದ ರಾಯಚೂರಿಗೆ ಹೆಸರಿತ್ತು. ಪಂಪಯ್ಯ ಶೆಟ್ಟರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಮಾಡಿದ ಸಾಧನೆ ಯಾವ ಆಯಾಮದಿಂದ ನೋಡಿದರೂ ದೊಡ್ಡದೆ. ಏಕೆಂದರೆ ಮೂಲತಃ ಬರಹಗಾರರಿಗೆ ಸಾಹಿತ್ಯ, ಸಂಸ್ಕೃತಿ ಕುರಿತು ಸಮ್ಮೇಳನ ಕಮ್ಮಟ ಉತ್ಸವ ವಿಚಾರ ಸಂಕಿರಣ ಮುಂತಾದವುಗಳನ್ನು ಸ್ವಂತ ನಿಂತು ಹಮ್ಮಿಕೊಳ್ಳುವ ಗುಣ ಇರುವುದಿಲ್ಲ. ಹೆಚ್ಚೆಂದರೆ ಭಾಗವಹಿಸುವ ಕೆಲಸ ಮಾಡುತ್ತಾರೆ. ತಮ್ಮ ಪುಸ್ತಕವನ್ನು ಬಿಡುಗಡೆ ಮಾಡಿಕೊಳ್ಳಲು ಸಮಾರಂಭ ಮಾಡುತ್ತಾರೆ. ಆದರೆ ಪಂಪಯ್ಯ ಶೆಟ್ಟರು ಸಾಹಿತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ರಾಯಚೂರು ಜಿಲ್ಲೆಯಾದ್ಯಂತ

ಬರೆಹಗಾರರನ್ನು ಪ್ರೋತ್ಸಾಹಿಸಿದರು. ಒಂದು ಸಾಹಿತ್ಯ ಸಮಾರಂಭವನ್ನು ಹಮ್ಮಿಕೊಂಡು ಅದನ್ನು ಯಶಸ್ವಿಯಾಗಿ ನಡೆಸುವುದು ಸಣ್ಣ ಸಂಗತಿಯಲ್ಲ. ಸಾಂಸ್ಕೃತಿಕವಾಗಿ ಬೆಳೆಯಲು ಅವರು ನಡೆಸಿದ ಸಮಾರಂಭಗಳು ಹತ್ತಾರು. ಅವುಗಳನ್ನು ಅವರೇಕೆ ನಡೆಸಿದರು ಎಂಬ ಪ್ರಶ್ನೆಗೆ ಸರಳವಾದ ಉತ್ತರವೇನೆಂದರೆ, ರಾಯಚೂರು ಜಿಲ್ಲೆಯಲ್ಲಿ ಸಾಹಿತ್ಯಿಕ ಪರಿಸರವನ್ನು ಬಲಪಡಿಸುವುದು ಅವರ ಗುರಿಯಾಗಿತ್ತು. ಹಿರಿಯರನ್ನು, ಕಿರಿಯರನ್ನು ಒಟ್ಟಿಗೆ ಸೇರಿಸಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಸರವನ್ನು ಬೆಳೆಸುವುದೇ ಆಗಿತ್ತು. ಬರಹಗಾರರು ತಮ್ಮ ಪ್ರಚಾರ ಪ್ರಸಿದ್ಧಿಯನ್ನು ತಾವು ಮಾಡಿಕೊಳ್ಳುವ ಹುಚ್ಚಿನವರಾಗಿರುತ್ತಾರೆ. ಇಂಥವರ ನಡುವೆ ಅದರಲ್ಲೂ ರಾಯಚೂರಿನಂತಹ ಹಿಂದುಳಿದ ಜಿಲ್ಲೆಯಲ್ಲಿ ಪಂಪಯ್ಯ ಶೆಟ್ಟರು ಮಾಡಿದ ಕೆಲಸಗಳು ಮಾದರಿಯಾಗಿ ನಿಲ್ಲುತ್ತವೆ.

ಅವರು ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿ ಅವರು ಮಾಡಿದ ಸಮ್ಮೇಳನ ಕಮ್ಮಟ, ಉತ್ಸವ ಹತ್ತಾರು. ನನಗೆ ನೆನಪಿರುವುದು ಕಮ್ಮಿ. ಕೆಲವನ್ನು ಹೆಸರಿಸುತ್ತೇನೆ.

1. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವೊಂದು ಇವರ ಕಾಲದಲ್ಲಿ ಯಶಸ್ವಿಯಾಗಿ ನಡೆಯಿತು.
2. ನಾಲ್ಕು ಸಲ ಜಿಲ್ಲಾ ಸಾಹಿತ್ಯ ಸಮ್ಮೇಳನಗಳನ್ನು ಸಂಭ್ರಮದಿಂದ ನಡೆಸಿದರು.
3. ಎರಡು ತಾಲೂಕು ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡರು.
4. ಎರಡು ಮಹಿಳಾ ಸಾಹಿತ್ಯ ಸಮ್ಮೇಳನ ನಡೆಸಿದ್ದು ಮಾದರಿಯಾಯಿತು.
5. ಗಡಿನಾಡಿನಲ್ಲಿ ಕನ್ನಡಿಗರನ್ನು ಒಗ್ಗೂಡಿಸಿ ಸಾಹಿತ್ಯ ಸಮ್ಮೇಳನ ನಡೆಸಿದ್ದು ಮಹತ್ವದ ಹೆಜ್ಜೆಗುರುತಾಯಿತು.
6. ಮೇಲಿಂದ ಮೇಲೆ ಯುವ ಲೇಖಕರಿಗೆ ಅವಕಾಶಗಳನ್ನು ಕಲ್ಪಿಸುವ ಸಂಬಂಧವಾಗಿ ಕಮ್ಮಟ, ಸ್ಪರ್ಧೆಗಳನ್ನು ಏರ್ಪಡಿಸಿದರು.
7. ಬಿಸಿಲ ಹನಿಗಳು ಕಥಾ ಸಂಕಲನವಂತೂ ಒಂದು ಮಾದರಿಯನ್ನೇ ಹುಟ್ಟುಹಾಕಿತ್ತು. 'ಒರೆಗಲ್ಲು' ಎಂಬ ಯುವಕರ ಕಥೆಗಳ ಸಂಕಲನವನ್ನು ಪ್ರಕಟಿಸಿದರು.
8. ಬಹಳ ಮುಖ್ಯವಾಗಿ ಹಲವು ಸ್ಮರಣ ಸಂಚಿಕೆಗಳನ್ನು ಪ್ರಕಟಿಸಿದರು. ಈ ಸ್ಮರಣ ಸಂಚಿಕೆಗಳ ವಿಶೇಷವೇನೆಂದರೆ, ಸ್ಥಳೀಯ ಸಾಹಿತ್ಯ, ಸಂಸ್ಕೃತಿ ಚರಿತ್ರೆಯನ್ನು ದಾಖಲಿಸುವುದು.

ಒಟ್ಟಿನಲ್ಲಿ ಶೆಟ್ಟರು ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಮಾಡಿದ ಕೆಲಸಗಳಿಂದ ರಾಯಚೂರು ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಸಮೃದ್ಧಿಗೊಳಿಸಿದರು. ಅವರು ಸಾಹಿತಿ ಅಲ್ಲವಾದರೂ, ಅವರು ಸಾಹಿತ್ಯಿಕ ಸಾಂಸ್ಕೃತಿಕ ಸಂಘಟನೆಗಳಲ್ಲಿ ಮಾಡಿದ ಕೆಲಸಗಳು ಅಪೂರ್ವವಾಗಿದೆ. ಅದರಿಂದಾಗಿಯೇ ಅವರು ಮಾನ್ವಿ ತಾಲೂಕು ಸಾಹಿತ್ಯ ಸಮ್ಮೇಳನದ

ಅಧ್ಯಕ್ಷರಾದರು. ಅವರ ಅಧ್ಯಕ್ಷೀಯ ಭಾಷಣದಲ್ಲಿ ರಾಯಚೂರು ಜಿಲ್ಲೆಯ ಶೈಕ್ಷಣಿಕ ಪರಿಸರ, ಸಾಹಿತ್ಯಕ ಪರಿಸರ ವಿಕಾಸಗೊಳ್ಳುವ ಹಂಬಲವನ್ನು ವ್ಯಕ್ತಪಡಿಸಿದ್ದರು.

ಪಂಪಯ್ಯ ಶೆಟ್ಟರು ಒಳ್ಳೆಯ ಓದುಗರು. ಒಳ್ಳೆಯ ಸಾಹಿತ್ಯವನ್ನು ಸಾಹಿತಿಗಳನ್ನು ಗುರುತಿಸುವ ಸಾಮರ್ಥ್ಯವನ್ನು ಹೊಂದಿದ್ದರು. ರಾಯಚೂರಿನಾದ್ಯಂತ ಸಾಹಿತ್ಯ ಸಮಾರಂಭವನ್ನು ಹಮ್ಮಿಕೊಂಡರೆ ರಾಯಚೂರು ಪರಿಸರದಲ್ಲಿ ಇರುತ್ತಿದ್ದ ಬರೆಹಗಾರರನ್ನು ಗುರುತಿಸಿ ಸಮಾರಂಭದಲ್ಲಿ ಪ್ರಾತಿನಿಧ್ಯ ಕಲ್ಪಿಸುತ್ತಿದ್ದರು. ಅದು ತಮ್ಮ ಜವಾಬ್ದಾರಿ ಎಂದು ಭಾವಿಸುತ್ತಿದ್ದರು. ಯಾರನ್ನು ಉದಾಸೀನ ಮಾಡುತ್ತಿರಲಿಲ್ಲ. ಅವಕಾಶ ಕಲ್ಪಿಸುವತ್ತ ಅವರ ಆಲೋಚನೆ ಇರುತ್ತಿತ್ತು. ಇಂತಹ ಪಂಪಯ್ಯ ಶೆಟ್ಟರು ರಾಯಚೂರನ್ನು ಬಿಡದೆ ಅಲ್ಲಿಯೇ ಇದ್ದಿದ್ದರೆ ಈ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯನ್ನು ಇನ್ನೂ ಗಟ್ಟಿಗೊಳಿಸುತ್ತಿದ್ದರು ಎಂಬುವುದರಲ್ಲಿ ಸಂಶಯವಿಲ್ಲ.

ಡಾ|| ಅಮರೇಶ ನುಗಡೋಣಿ
ಕನ್ನಡ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ. ತಾ|| ಹೊಸಪೇಟೆ
ದೂರವಾಣಿ : 08394-220872

ಸಾರಸ್ವತಲೋಕದ ಸುವ್ಯವಸ್ಥಿತ ನಿರೂಪಕ

✍ ಹನುಮೇಶ ಗುಮಗೇರಿ

ಮಾತಿಗಿಂತ ಕೃತಿ ಮುಖ್ಯವೆನ್ನುವಂತೆ ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ವಿದ್ವತ್ತು ವಿನಯ ಹಾಗೂ ಸಂಘಟನಾ ಶಕ್ತಿಗಳಿಂದ ನಾಡಿನೆಲ್ಲೆಡೆ ಹೆಸರಾಗಿರುವ ಪಂಪಯ್ಯ ಶೆಟ್ಟರು ನನ್ನಂಥ ಅಸಂಖ್ಯಾತ ಬರಹಗಾರರಿಗೆ ಜೀವಸೆಲೆಯಾಗಿ ಸ್ಫೂರ್ತಿ ತುಂಬುತ್ತ ಇಂದಿಗೂ ವೇದಿಕೆ ಕಲ್ಪಿಸಿ ಪ್ರೋತ್ಸಾಹಿಸುತ್ತಿರುವದು ಅನನ್ಯತೆ.

ಮೂರು ದಶಕಗಳ ಹಿಂದೆ ನಾವೆಲ್ಲಾ ಅಖಂಡ ರಾಯಚೂರು ಜಿಲ್ಲೆಯ (ಈಗಿನ ಕೊಪ್ಪಳ ಜಿಲ್ಲೆ ರಚನೆಯಾಗಿರಲಿಲ್ಲ) ಒಡಲಲ್ಲಿದ್ದಾಗ ನಮ್ಮ ಕುಷ್ಟಗಿಯಲ್ಲಿ ಪಿ.ಯು.ಸಿ. ಅಭ್ಯಾಸವೇ ಕೊನೆಯಾಗಿದ್ದರಿಂದ ಆದಾಗಲೇ ಸಾಕಷ್ಟು ಸಾಹಿತ್ಯದ ಹುಚ್ಚು ಹಚ್ಚಿಕೊಂಡು ಒಂದೆರಡು ವರ್ಷ ಸಾಹಿತ್ಯ ರಚನೆ. ಸಂಘಟನೆ, ಕವಿಗೋಷ್ಠಿ ನಮ್ಮೂರಿನಲ್ಲಿಷ್ಟು ಸಮಾಜ ಸೇವೆಗೆ ತೊಡಗಿದ್ದ ನಾನು ಬಿ.ಎ. ಓದಲು ರಾಯಚೂರಿನ ಎಲ್.ವಿ.ಡಿ. ಕಾಲೇಜಿಗೆ ಹೋಗಲು ಬಯಸಿ ಅಲ್ಲಿಯ ಶ್ರೀ ಕನ್ಯಕಾಪರಮೇಶ್ವರಿ ಹಾಸ್ಟೆಲ್‌ನಲ್ಲಿದ್ದೆ. ಸಾಹಿತ್ಯದ ಆಳವಾದ ಅಧ್ಯಯನ ಮಾಡಲೆಂದೇ ಐಚ್ಛಿಕ ಕನ್ನಡದ ವಿದ್ಯಾರ್ಥಿಯಾದೆ. ಹಾಸ್ಟೆಲ್‌ನಲ್ಲಿ ವಿಶೇಷ ಸಂದರ್ಭಗಳಲ್ಲಿ ಕಾರ್ಯಕ್ರಮ ನಿರೂಪಿಸುವಾಗ ಅಲ್ಲಿಗೆ ಆಗಾಗ ಬಂದು ಆಸಕ್ತಿಯಿಂದ ಆಲಿಸುತ್ತಿದ್ದ ಪಂಪಯ್ಯ ಶೆಟ್ಟರ ಪರಿಚಯವಾಗಿ ಅವರು ಮೂರು ವರ್ಷಗಳವರೆಗೆ ತುಂಬಾ ಪ್ರೋತ್ಸಾಹಿಸಿದರು. ಸ್ಥಳೀಯ ಪತ್ರಿಕೆಗಳಲ್ಲಿ ಕವಿತೆಗಳು ಪ್ರಕಟವಾದಾಗ ಖುಷಿ ಪಟ್ಟರು. ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಗೂ ಕಾವ್ಯ ಕಮ್ಮಟ, ಕಥಾ ಕಮ್ಮಟಗಳಲ್ಲಿ ಪಾಲ್ಗೊಳ್ಳಲು ದಾರಿ ತೋರಿದರು.

ಓದನ್ನು ಪದವಿ ಶಿಕ್ಷಣಕ್ಕೇ ಮೊಟಕುಗೊಳಿಸಲು ತೊಂದರೆ ತಾಪತ್ರಯಗಳಿಲ್ಲ ದಿದ್ದರೂ ಅಂದಿನ ದಿನಗಳಲ್ಲಿ ಉದ್ಯೋಗಸೃಷ್ಟಿ ಇಲ್ಲದೆ ಪರದಾಡುತ್ತಿರುವ ಅದೆಷ್ಟೋ ವಿದ್ಯಾವಂತ ನಿರುದ್ಯೋಗಿಗಳನ್ನು ನೋಡಿ ಸಾಕಷ್ಟು ನೊಂದು ಇದ್ದುದರಲ್ಲೇ ಏನಾದರೂ ಮಾಡೋಣವೆಂದು ಊರಲ್ಲೇ ಉಳಿದೆ ಊರು ಉಪಕಾರ ಅರಿಯಲಿಲ್ಲ ಎಂಬ ಮಾತು ಮೊನಚಾಗಿ ಕಾಡುತ್ತಿದ್ದರೂ ಹವ್ಯಾಸ ಬಲದಿಂದ ಅತಿಯಾದ ಸಮಾಜಸೇವೆಯ ಹಂಬಲ ದಿಂದ ಮೂರು ವರ್ಷದ ನಂತರ ಕುಷ್ಟಗಿಯಲ್ಲಿ ಪುಸ್ತಕಾಲಯ ನಡೆಸಿದರೂ ಅದೂ ಕೂಡ ಕೈ ಹಿಡಿಯಲಿಲ್ಲ. ಈ ಹಂತದಲ್ಲಿ ನನ್ನ ಹಾಗೂ ಪಂಪಯ್ಯ ಶೆಟ್ಟರ ನಡುವೆ ನಿರಂತರ ಸಂಪರ್ಕವಿತ್ತು.

ಈ ನಡುವೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದ ಪಂಪಯ್ಯ ಶೆಟ್ಟರು ರಾಯಚೂರಿನ ಪ್ರತಿಷ್ಠಿತ ''ಕರ್ನಾಟಕ ಸಂಘ''ದ ಕಾರ್ಯದರ್ಶಿಗಳಾಗಿ ಉತ್ತಮ ಸಾಹಿತ್ಯಕ ಕಾರ್ಯಕ್ರಮ ರೂಪಿಸಿದ ನಂತರ ನಿಧಾನವಾಗಿ ಅವಿಭಜಿತ ಜಿಲ್ಲೆಯ ತುಂಬ ಪರಿಷತ್ತನ್ನು ಬೆಳೆಸಿದರು. ನಾನೂ ಕೂಡ ತಾಲ್ಲೂಕಾ ಕ.ಸಾ.ಪ. ಪದಾಧಿಕಾರಿಯಾದೆ. ತಾಲೂಕಾ ಕೇಂದ್ರ ಸಿಂಧನೂರಿನಲ್ಲಿ ರಾಜ್ಯಮಟ್ಟದ ಸಾಹಿತ್ಯ ಸಮ್ಮೇಳನದಂತೆ ರೂಪಿಸಿದ್ದ 'ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ'ಯಲ್ಲಿ ಅವಕಾಶ ಕಲ್ಪಿಸಿದ್ದರು. ಒಂದು ಮಹತ್ವದ ವೇದಿಕೆಯಲ್ಲಿ ಕವಿತೆ ವಾಚಿಸಿ ಸ್ಮರಣಿಕೆ ಸ್ವೀಕರಿಸಿದಾಗ ನನ್ನ ಜೀವನದ ಮೊದಲ ಸ್ಮರಣಿಕೆ ಪಡೆದ ಕ್ಷಣಗಳನ್ನು ಸದಾ ನೆನಪಿನಲ್ಲಿ ಉಳಿಸಿಕೊಂಡಿರುವೆ.

ಮೊಬೈಲುಗಳು ಬಳಕೆಗೆ ಬರದಿದ್ದ ಕಾಲದಲ್ಲಿ ಎಸ್.ಟಿ.ಡಿ. ಲ್ಯಾಂಡ್ ಫೋನ್‌ಗಳ ಮೂಲಕ ಅವರು ಮನೆಯಲ್ಲಿರುವ ವೇಳೆಯಲ್ಲಿ ಮಾತನಾಡುತ್ತಿದ್ದೆವು. ಅಂಚೆ ಪತ್ರಗಳು ಮಹತ್ವದ ಸಂಪರ್ಕ ಸಾಧನವಾಗಿದ್ದವು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕವಿಗೋಷ್ಠಿ ಪುಸ್ತಕ ಪ್ರಕಟಣೆ, ಸಾಹಿತ್ಯ ಸಮ್ಮೇಳನ, ಮಹಿಳಾ ಸಾಹಿತ್ಯ ಸಮ್ಮೇಳನ, ಜಿಲ್ಲಾ ಸಾಹಿತ್ಯ ಯಾತ್ರೆ ಹೀಗೆ ಇನ್ನಿತರ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸಿ ಸಹೃದಯರ ಮನಗೆದ್ದರು. ಅಂದಿನ ಜಿಲ್ಲಾ ಪರಿಷತ್‌ನಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳಿಗೆ ಅನುದಾನ ದೊರಕಿಸಲು ಧರಣಿ ಸತ್ಯಾಗ್ರಹ ನಡೆಸಿ ಯಶಸ್ವಿಯಾದದ್ದು ಒಂದು ಮಾದರಿ ಕಾರ್ಯವಾಗಿದೆ.

ಕುಷ್ಟಗಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಆಯ್ಕೆಯಾಗಿ ಮಧ್ಯಮ ವರ್ಗದ ಪರದಾಟದ ಅತಂತ್ರ ದಿನಗಳಲ್ಲಿ ಅಧ್ಯಕ್ಷನಾಗಿ ಯಾವುದೇ ಅನುದಾನವಿಲ್ಲದ ಪದವಿಗೆ ಅಂಟಿಕೊಂಡು ಪಂಪಯ್ಯ ಶೆಟ್ಟರು ಹಾಕಿಕೊಟ್ಟ ದಾರಿಯಲ್ಲಿ ಗಮನ ಸೆಳೆವ ಕಾರ್ಯಕ್ರಮ ರೂಪಿಸಿ ಸಾರಸ್ವತಲೋಕ ಇಂದಿಗೂ ನೆನಪಿಡುವಂತೆ ಪರಿಶ್ರಮ ವಹಿಸಿದ್ದು ತೃಪ್ತಿಯ ಭಾವನೆ ಮೂಡಿಸಿದೆ.

ರಾಯಚೂರಿನಲ್ಲಿ ಜರುಗಿದ ದಕ್ಷಿಣ ಭಾರತ ಆರ್ಯವೈಶ್ಯ ಸಮ್ಮೇಳನ ಹಾಗೂ ಮಹಾಸಭೆಯ ಸಮ್ಮೇಳನದಲ್ಲಿ ಕಾರ್ಯಕ್ರಮ ನಿರೂಪಕನಾಗಿದ್ದು ಪಂಪಯ್ಯ ಶೆಟ್ಟರ ಗುರುತಿಸುವಿಂದಾಗಿಯೇ. ಅದೆಷ್ಟೋ ಬಾರಿ ಸಮಾಜದ ಪತ್ರಿಕೆಯಾಗಿ ಮರೆಯಾಗಿದ್ದ ಗದಗನಿಂದ ಪ್ರಕಟವಾಗುತ್ತಿದ್ದ ಎಸ್.ಎಚ್. ಶಿರಹಟ್ಟಿ ಅವರ ಸಂಪಾದಕತ್ವದ 'ವಾಸವಿ' ಪತ್ರಿಕೆ ಕುರಿತು ಚರ್ಚಿಸುತ್ತಿದ್ದಾಗ ಸಮಾಜದ ಪತ್ರಿಕೆ ಪ್ರಕಟಿಸುವ ಹಂಬಲ ವ್ಯಕ್ತಪಡಿಸುತ್ತಿದ್ದ ಪಂಪಯ್ಯ ಶೆಟ್ಟರ ಸಮಾಜದ ಏಳ್ಗೆಯ ಕಳಕಳಿ ನನ್ನಲ್ಲಿ ಅವ್ಯಕ್ತ ಭಯವನ್ನುಂಟು ಮಾಡುತ್ತಿತ್ತು. ಇದೊಂದು ಸಾಹಸದ ಕೆಲಸ. ನಮ್ಮವರ ಅಸಹಕಾರ ಕುರಿತು ಮಾತುಕತೆಗಳ ವಿನಿಮಯ ವಾಗುತ್ತಿತ್ತು. ಆದರೂ ಒಂದು ದಿನ 'ವೈಶ್ಯವಾರ್ತಾ' ಪತ್ರಿಕೆಯ ಕುರಿತ ಪರಿಚಯ ಪತ್ರ ಕೈ ಸೇರಿದಾಗ ಆಶ್ಚರ್ಯವಾಯಿತು. ಅವರ ಹಂಬಲ, ಮನೋಭಿಲಾಷೆಗೆ ಖುಷಿಪಟ್ಟೆ. ಸಂಪಾದಕೀಯ ಮಂಡಳಿಯಲ್ಲಿ ನನ್ನನ್ನು 'ಸಹಸಂಪಾದಕ'ನೆಂದು ಸೇರಿಸಿಕೊಂಡದ್ದು ತುಂಬಾ ಸಂತಸವೆನಿಸಿತು. ಇಂದಿಗೂ ಕೂಡ ಆ ಸೇವೆಯನ್ನು ಕೃತಜ್ಞತಾಪೂರ್ವಕ ನೆನೆಯುತ್ತೇನೆ.

ವೈಶ್ಯವಾರ್ತಾ ಪರಿಚಯ ಮಾಡಿಸಿ, ಚಂದಾದಾರರನ್ನಾಗಿಸಲು ಪಂಪಯ್ಯ ಶೆಟ್ಟರ ಜೊತೆ ಉತ್ತರ ಕರ್ನಾಟಕ ಸುತ್ತಾಡಿದಾಗ ನಮ್ಮ ಜನರ ಪ್ರೋತ್ಸಾಹದ ಜೊತೆ ವಿಶಿಷ್ಟ ಅನುಭವಗಳಾದವು. ಪ್ರವಾಸ ಸಮಯದ ಸುದ್ದಿಗಳನ್ನು ಬರೆದೆ. ಪ್ರತಿ ಸಂಚಿಕೆಯಲ್ಲೂ ಕವಿತೆ, ಹನಿಗವನಗಳು ಪ್ರಕಟವಾಗಿ ನಾಡಿನ ಸಾಹಿತಿ ಮಿತ್ರರೆಲ್ಲಾ ಸಮಾಜದ ಸಾಹಿತಿಗಳು ಒಂದೆಡೆ ಸೇರುವಂತಾಯಿತು, ''ವೈಶ್ಯವಾರ್ತಾ'' ವಾರ್ಷಿಕೋತ್ಸವದಲ್ಲಿ ಸಾಹಿತ್ಯಿಕ ಚಟುವಟಿಕೆ, ಕವಿಗೋಷ್ಠಿ ರೂಪಿಸಿದ ಹೆಗ್ಗಳಿಕೆಗೆ ಪಾತ್ರರಾದ ಶೆಟ್ಟರು ಮಹಾಸಭೆಯಿಂದ ಮೊದಲು ರೂಪಿಸಿದ ಸಾಹಿತ್ಯ ಸಮ್ಮೇಳನದಲ್ಲಿ ಕೊಪ್ಪಳ ಜಿಲ್ಲೆಯಿಂದ ಪಾಲ್ಗೊಳ್ಳುವಂತೆ ನನಗೆ ಆಮಂತ್ರಿಸಲೂ ಕಾರಣರಾದರು.

ದಶಕದ ಸಾಹಿತ್ಯ ಪರಿಷತ್ತಿನ ಸೇವೆಯ ಸವಿನೆನಪಿಗಾಗಿ ಏಗನೂರು ಟೆಂಪಲ್‌ನಲ್ಲಿ ಆಯೋಜಿಸಿದ ''ಸಾಹಿತ್ಯ ಸಂಭ್ರಮ'' ಕಾರ್ಯಕ್ರಮ ಹಚ್ಚಹಸಿರಾಗಿದೆ. ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನಿಂದ ಜರುಗುವ ಪ್ರತೀ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡ ಖುಷಿಗೆ ಕಾರಣ ಪುರುಷರಾದ ಪಂಪಯ್ಯ ಶೆಟ್ಟರು ಬೀದರ್‌ನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾವೆಲ್ಲಾ ಗೆಳೆಯರು ಚರ್ಚಿಸುತ್ತಿದ್ದಾಗ ನಮ್ಮ ಮಾತುಗಳನ್ನು ಆಸಕ್ತಿಯಿಂದ ಆಲಿಸುತ್ತಿದ್ದ ಶೆಟ್ಟರು ಕೃತಿಯ ಹಸ್ತಪ್ರತಿ ತಯಾರಿಸಿ ಕಳಿಸಲು ಹೇಳಿದರು. ಕಳಿಸಿದ ನಂತರ ನನ್ನ ಮೊದಲ ಕವನ ಸಂಕಲನ 'ಸ್ಥಿತ್ಯಂತರ'ವನ್ನು ದಾನಿಗಳ ನೆರವಿನಿಂದ ಪ್ರಕಟಿಸಿ ಅದನ್ನು ಬೆಂಗಳೂರಿನ ವೇದಿಕೆಯಲ್ಲಿ ಬಿಡುಗಡೆ ಮಾಡಿಸಿ ನಾಡಿಗೆ ನನ್ನನ್ನು ಪರಿಚಯಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ''ಸ್ಥಿತ್ಯಂತರ'' ಪ್ರಕಟಿಸಿದ ಈ ಹತ್ತು ವರ್ಷಗಳ ಅನಂತರವೂ ಸಾಹಿತ್ಯಾಸಕ್ತರು - ಅದರ ಮೂಲಕ ನನ್ನನ್ನು ಇಂದಿಗೂ ಗುರುತಿಸುವುದು ಒಂದು ಹಸಿ ಹಸಿರು ಚಿತ್ತಾರದ ಎಂದಿಗೂ ಮಾಸದ ನೆನಪು.

ಪಂಪಯ್ಯ ಶೆಟ್ಟರ ತಂದೆಯವರಾದ ರಾಮಸ್ವಾಮಿ ಅವರು ಕಲಾವಿದರಾಗಿದ್ದು ನಾಟಕದಲ್ಲಿ ನಟನೆ, ನಿರ್ದೇಶನ ಹಾಗೂ ಮಾಲೀಕರಾಗಿ ಅಭಿರುಚಿಗಾಗಿ ಆಸ್ತಿಯನ್ನೇ ಮಾರಿಕೊಂಡರು. ಕಲಾರಾಧನೆಗೆ ಮಾರುಹೋಗಿ ಸತತ ಆರ್ಥಿಕ ನಷ್ಟ ಅನುಭವಿಸಿದವರು. ಅವರ ಜೊತೆಯೂ ನನ್ನ ಒಡನಾಟವಿತ್ತು. ಅವರ ಅನುಭವದ ಕಥನಗಳನ್ನು ಮೈಯ್ಯೆಲ್ಲಾ ಕಿವಿಯಾಗಿ ಆಲಿಸಿದ ನೆನಪು ಇಂದಿಗೂ ಇದೆ.

ಪಂಪಯ್ಯ ಶೆಟ್ಟರು ವೇದಿಕೆಗಳನ್ನು ಸಮರ್ಪಕವಾಗಿ ಬಳಸಿಕೊಂಡ ಸಂದರ್ಭವೆಂದರೆ ಅವರ ಮಕ್ಕಳ ಮದುವೆ. ಅದು ರಾಯಚೂರಿನ ಕಲ್ಯಾಣ ಮಂಟಪದಲ್ಲಿ ನೆರವೇರಿದಾಗ ಊಟದ ನಂತರ ''ಕವಿಗೋಷ್ಠಿ'' ಏರ್ಪಡಿಸಿ ಕವಿಗಳಿಗೆ ವೇದಿಕೆ ಕಲ್ಪಿಸಿ, ನೆನಪಿನ ಕಾಣಿಕೆ ವಿತರಿಸಿ ಪ್ರೋತ್ಸಾಹಿಸಿದ ಪರಿ ಅನನ್ಯ. ಆಸಕ್ತಮನದ ತುಂಬು ಹಂಬಲದ ನನ್ನಂಥವರ ಪಾಲಿಗೆ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದಂಥ ಅನುಭವ.

ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಕಳೆದ ಎಂಟು ವರ್ಷಗಳಿಂದ ನಿರಂತರ ಸಾಹಿತ್ಯ ಚಟುವಟಿಕೆ, ಪುಸ್ತಕ ಪ್ರಕಟಣೆ, ಸಾಹಿತ್ಯ ಸಮ್ಮೇಳನಗಳನ್ನು ಸಂಘಟಿಸುತ್ತ ಸಮಾನ ಮನಸ್ಕರ ತಂಡದೊಂದಿಗೆ ನಾಡಿನೆಲ್ಲೆಡೆ ಚಿರಪರಿಚಿತರಾದ ಶ್ರೀ ಪಂಪಯ್ಯ ಶೆಟ್ಟರಿಗೆ "ರಾಜ್ಯೋತ್ಸವ ಪ್ರಶಸ್ತಿ" ನೀಡಿ ಗೌರವಿಸಬೇಕಾದ ಅಗತ್ಯವಿದೆ. ಸರಕಾರ ಪಂಪಯ್ಯ ಶೆಟ್ಟರ ಕನ್ನಡ ನಾಡುನುಡಿಯ ಸೇವೆಯನ್ನು ಸೂಕ್ತವಾಗಿ ಗಮನಿಸಿ ಮೇಲ್ಮನೆಗೆ (ಕರ್ನಾಟಕ ವಿಧಾನ ಪರಿಷತ್ತು) ನಾಮಕರಣ ಮಾಡುವ ಮೂಲಕ ಶೆಟ್ಟರನ್ನು ಗೌರವಿಸಿ ಅವರಿಂದ ಇನ್ನೂ ಹೆಚ್ಚಿನ ಸೇವೆಗೆ ಸದಾವಕಾಶ ಒದಗಿಸಲೆಂದು ಮನವಿ ಮಾಡುತ್ತೇನೆ. ಪಂಪಯ್ಯ ಶೆಟ್ಟರ ಅಭಿನಂದನೆಗೆ ಸಂಘಟನಾತ್ಮಕವಾಗಿ ಶ್ರಮಿಸುತ್ತಿರುವ ಕನ್ನಡ ಮನಸ್ಸುಗಳಿಗೆ ವಂದಿಸುತ್ತ ಅವರ ಈ ಕಾರ್ಯತತ್ಪರತೆ ಇತರರಿಗೂ ಸ್ಫೂರ್ತಿಯಾಗಲೆಂದು ಹಾರೈಸುವೆ.

ಹನುಮೇಶ ಗುಮಗೇರಿ
ಅಂಚೆ ಗುಮಗೇರಿ ತಾ : ಕುಷ್ಟಗಿ
ಜಿಲ್ಲಾ : ಕೊಪ್ಪಳ
ಸನಿಹವಾಣಿ : 9731375341

ಅಭಿನಂದನ ಪುಷ್ಪ ಸಮರ್ಪಣೆ

✍ ವಿಜಯ ನಾಗೇಶ್

ಸಹಜವಾಗಿ ಪ್ರತಿಯೊಬ್ಬ ಮನುಷ್ಯ ತನ್ನ ಅಗತ್ಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಒಂದಲ್ಲ ಒಂದು ಕೆಲಸ ಹಮ್ಮಿಕೊಂಡು ತನ್ನನ್ನು ಕಾಯಕದಲ್ಲಿ ತೊಡಗಿಸಿಕೊಳ್ಳುತ್ತಾನೆ. ಅದಕ್ಕೆ ವೃತ್ತಿ ಧರ್ಮ ಎನ್ನಲಾಗುತ್ತದೆ. ಅದೇ, ಲೌಕಿಕ ಜಗತ್ತಿನಲ್ಲಿ ಉದರ ಪೋಷಣೆಯ ಮಾರ್ಗವೂ ಆಗಿರುತ್ತದೆ. ಇನ್ನು ಭಾವಲೋಕದ ವ್ಯಾಪಾರ ತೆರೆದುಕೊಳ್ಳುವುದು, ಬುದ್ಧಿ-ಮನಸ್ಸು ಹುಟ್ಟು ಹಾಕುವ ಪ್ರತಿಭೆಯಿಂದ. ಅದು ಕಲೆ-ಸಾಹಿತ್ಯ, ಸಂಗೀತ ಹೀಗೆ ಅದಾವುದೇ ಆಗಿರಬಹುದು, ಪ್ರವೃತ್ತಿ ಎನಿಸಿಕೊಳ್ಳುತ್ತದೆ. ಈ ಪ್ರವೃತ್ತಿಯನ್ನು ತನ್ನದಾಗಿಸಿ ಸಾಗುವ ವ್ಯಕ್ತಿಗೆ ಒಂದು ಆತ್ಮತೃಪ್ತಿ ಸಿಗುತ್ತದೆ. ಆ ಪ್ರವೃತ್ತಿ ಸುಧಾರಣೆಯ ಹಾದಿಯಲ್ಲಿ ಮುಂದುವರೆದಾಗ, ಅದೊಂದು ಸುಸಂಸ್ಕಾರವಾಗುತ್ತದೆ - ಸುಸಂಸ್ಕೃತಿಯನ್ನು ಬೆಳೆಸುತ್ತದೆ ಹಾಗೂ ಒಂದು ಪರಂಪರೆಯನ್ನೇ ಹುಟ್ಟು ಹಾಕುತ್ತದೆ. ಅಂತೆಯೇ, ಇದು ಜನ-ಮನವನ್ನು ತಲುಪಿದಾಗ ಹಾಗೂ ಅದು ಲೋಕಾರ್ಪಣೆಯಾದಾಗ ಅದಕ್ಕೊಂದು ಸಾರ್ಥಕತೆ ಲಭಿಸುತ್ತದೆ. ಇಂತಹ ಸಾಧನೆಯು ವ್ಯಕ್ತಿಗೆ ಶ್ರೇಷ್ಠ ವ್ಯಕ್ತಿತ್ವನ್ನು ದೊರಕಿಸಿ ಕೊಡುತ್ತದೆ. ಅಂತಹ ವ್ಯಕ್ತಿತ್ವವನ್ನು ಗುರುತಿಸಿ - ಆದರಿಸುವ ಸತ್ಸಂಪ್ರದಾಯ ಸಮಾಜದ್ದಾಗಿರುತ್ತದೆ. ಅದಕ್ಕೆಂದೇ ಒಂದು ನಿರ್ದಿಷ್ಟವೇದಿಕೆ ಸೃಷ್ಟಿಯಾಗುತ್ತದೆ. ಅಲ್ಲಿ ಆ ವ್ಯಕ್ತಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ. ಆ ಸಂದರ್ಭದಲ್ಲಿ ಅಭಿನಂದನ ಗ್ರಂಥವನ್ನು ಹೊರ ತರಲಾಗುತ್ತದೆ. ಅದೊಂದು ಸ್ಮರಣಿಕೆಯಾಗಿ ಉಳಿಯುತ್ತದೆ. ಆ ಸಂಚಿಕೆಗೆ, ಆ ವ್ಯಕ್ತಿಯನ್ನು ಬಲ್ಲವರಿಂದ ಆಪ್ತರಿಂದ, ಗಣ್ಯರಿಂದ ಬರೆಹಗಳನ್ನು ಆಹ್ವಾನಿ ಸುವ ಕೆಲಸವನ್ನು ಅಭಿನಂದನ ಸಮಿತಿಯವರಿಂದ ನಡೆಸಲಾಗುತ್ತದೆ. ಹೀಗೆ ಸಂಗ್ರಹಗೊಂಡ ಅಭಿನಂದನ ಪುಷ್ಪಗಳು ಸಂಯೋಜಕರ ಕೈ ಸೇರಿ ಒಂದು ಮಾಲೆಯಾಗಿ ರೂಪುಗೊಳ್ಳುತ್ತದೆ. ಆ ಬರೆಹಗಳು ಲೇಖನವಿರಬಹುದು, ಕವನವಿರಬಹುದು- ಶುಭಾಶಯ ಕೋರುವುದಿರ ಬಹುದು ಅಥವಾ ಹಿರಿಯರಿಂದ ಬಂದ ಆಶೀರ್ವಚನವಿರಬಹುದು. ಒಟ್ಟಿನಲ್ಲಿ ಅದೊಂದು ಐತಿಹಾಸಿಕ ದಾಖಲೆಯಾಗಿ, ಮುಂದಿನ ಪೀಳಿಗೆಗೆ ಮಾಹಿತಿಯಾಗುತ್ತದೆ ಹಾಗೂ ಆದರ್ಶಪ್ರಾಯವಾಗುತ್ತದೆ. ಅಲ್ಲದೆ, ಸಾಧಕನಿಗೆ ತೋರುವ ಗೌರವವಾಗುತ್ತದೆ. ಹೀಗಾಗಿ, ಇಂತಹ ಅಭಿನಂದನೆಯ ಆಯೋಜನೆ ಸ್ವಾಗತಾರ್ಹ - ಸ್ತುತ್ಯರ್ಹ, ಪ್ರಶಂಸಾರ್ಹ.

ಈ ನಿಟ್ಟಿನಲ್ಲಿ ಸಾಗಿದ ಆರ್ಯ ವೈಶ್ಯ ಸಮಾಜವೀಗ ತನ್ನ ಮುಂದೆ ಉಪಸ್ಥಿತವಿರುವ

ಪ್ರತಿಭಾನ್ವಿತರನ್ನು ಅಭಿನಂದಿಸಲು ಹೊರಟಿರುವುದು ಅಭಿಮಾನಿ ವರ್ಗಕ್ಕೆ ಅತ್ಯಂತ ಹರ್ಷವನ್ನುಂಟು ಮಾಡಿದೆ. ಎರಡು ಮೂರು ವರ್ಷದ ಹಿಂದೆ ಈ ಸಮಾಜ ಗುರುಮೂರ್ತಿ ಪೆಂಡಕೂರರಂತಹ ದಿಗ್ಗಜರನ್ನು ಅಭಿನಂದಿಸಿರುವುದು ಜನ-ಮನದಲ್ಲಿ ಹಸಿರಾಗಿ ಉಳಿದಿದೆ. ಇಂದು ಪಂಪಯ್ಯ ಶೆಟ್ಟರಿಗೆ ಅಭಿನಂದನೆಯನ್ನು ಆಯೋಜಿಸಿರುವುದು ಸಂತಸದ ಸಂಗತಿಯೆಂದು ಈ ಲೇಖನಿ ಭಾವಿಸುತ್ತದೆ. ಈ ರೀತಿಯ ಉತ್ತಮ ಕೆಲಸ ಮಾಡುವುದರಿಂದ ಸಮಾಜ, ತನ್ನನ್ನೇ ತಾನು ಗೌರವಿಸಿಕೊಂಡಂತೆ ಅಲ್ಲವೇನು ? ಹೀಗೆ ಗೌರವಿಸಿಕೊಂಡ ಸಮಾಜವು ಸಾರ್ವತ್ರಿಕವಾಗಿ ಸಭೆ-ಸಮಾರಂಭವನ್ನು ಹಮ್ಮಿಕೊಂಡು ಆ ಅಭಿನಂದನಾ ಮಾಲೆಯನ್ನು ಅವರ ಕೊರಳಿಗೆ ಹಾಕಲು ಹೊರಟಿರುವುದು ಮೆಚ್ಚುವಂತಹ ಸಂಗತಿಯಾದರೆ, ಇದಕ್ಕೆ ತನ್ನ ಅಕ್ಷರ ಪುಷ್ಪಗಳನ್ನು ಪೋಣಿಸುವ ಸದವಕಾಶ ಲಭಿಸಿದುದಕ್ಕೆ ಲೇಖನಿಯು ಸಂತಸ ವ್ಯಕ್ತಪಡಿಸುತ್ತದೆ. ಇಂತಹ ಅವಕಾಶವನ್ನಿತ್ತ ಅಭಿನಂದನಾ ಸಮಿತಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಹಾಗೂ ಈ ಗ್ರಂಥವನ್ನು ಓದಲು ಕೈಗೆತ್ತಿಕೊಳ್ಳುವ ವಾಚಕರಿಗೆ ಧನ್ಯವಾದಗಳನ್ನು ತಿಳಿಸಬಯಸುತ್ತದೆ. ದೀಪದಿಂದ-ದೀಪ ಹಚ್ಚಿ ಎಂಬುದಾಗಿ ಶ್ರೇಷ್ಠರ ಬಗ್ಗೆ ಹೇಳಲು ಹೊರಟಿರುವ ಲೇಖನಿಯು ಹೂವಿನಿಂದ ನಾರು ಸ್ವರ್ಗಕ್ಕೆ ಎನ್ನುವಂತೆ, ಗಣ್ಯರ ಪರಿಚಯವನ್ನು ತನ್ನ ಮಾತುಗಳಲ್ಲಿ ಹೇಳಲು ಪ್ರಯತ್ನಿಸಿ ಅಭಿನಂದನ ಗ್ರಂಥಕ್ಕೆ ಗ್ರಾಸ ನೀಡಲು ಸಜ್ಜಾಗಿದೆ.

ಕಾಲದಿಂದಲೂ ಆರ್ಯವೈಶ್ಯರು ತಮ್ಮ ಕುಲಕಸುಬಾಗಿ ವಾಣಿಜ್ಯ-ವ್ಯಾಪಾರ, ಪಶುಪಾಲನೆ-ಕೃಷಿಯನ್ನು ಅವಲಂಬಿಸಿದರಾದರೂ ಪಂಪಯ್ಯ ಶೆಟ್ಟರ ತಂದೆ ರಾಮಸ್ವಾಮಿಯವರು ಆಯ್ದುಕೊಂಡದ್ದು ಕಲೆಯನ್ನು, ನಾಟಕ ಕಂಪೆನಿಯೊಂದನ್ನು ಸತತ 30 ವರ್ಷಗಳ ಕಾಲ ನಡೆಸಿಕೊಂಡು ಬಂದದ್ದು ಮಹತ್‌ಸಾಧನೆಯೇ ಸರಿ. ಕಂಪೆನಿ ಅವರನ್ನು ನಷ್ಟಕ್ಕೀಡು ಮಾಡಿದರೂ ಹೆಸರು ಮತ್ತು ಕೀರ್ತಿಗಳನ್ನು ತಂದುಕೊಟ್ಟಿತ್ತು. ಹಾಗಾಗಿ, ಪಂಪಣ್ಣನ ರಕ್ತದಲ್ಲೇ ಕಲೆ ಮತ್ತು ಸಾಹಿತ್ಯದ ಬಗ್ಗೆ ಸಹಜ ಒಲವು ಮೂಡಿತ್ತು. ಬಾಲ್ಯದಿಂದಲೇ ಅವರು ನಾಟಕಗಳಲ್ಲಿ ಅಭಿನಯಿಸತೊಡಗಿದರು. ಶಾಲಾ-ಕಾಲೇಜಿನ ದಿನಗಳಲ್ಲಿ ಸಂಘ ಕಟ್ಟುವ ಶಿಲ್ಪಿಗಳಾದರು. ಗಡಿನಾಡ ಕನ್ನಡಿಗರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟ ನಡೆಸಿದರು. ರಾಯಚೂರಿನಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗಿತ್ತೆಂದರೆ, ತೆಲುಗು ಮತ್ತು ಉರ್ದು ಭಾಷೆಗಳ ಅಬ್ಬರಕ್ಕೆ ಸಿಲುಕಿ ಕನ್ನಡ ಭಾಷೆ ಸೊರಗಿಹೋಗಿತ್ತು. ಕನ್ನಡದ ವಾತಾವರಣ ಸೃಷ್ಟಿಸಲೆಂದೇ ಅವರು ಕನ್ನಡ ಚಲನಚಿತ್ರಗಳ ಕಡ್ಡಾಯ ಪ್ರದರ್ಶನಕ್ಕೆ ಒತ್ತಾಯ ತಂದರು. ನಾಡ ಹಬ್ಬ-ರಾಜ್ಯೋತ್ಸವಗಳನ್ನು ಅದ್ದೂರಿಯಾಗಿ ನಡೆಸಿ ಜನ-ಮನಕ್ಕೆ ಹತ್ತಿರವಾದರು. ಮಹಾಜನ ವರದಿ ಜಾರಿಗೆ ಒತ್ತಾಯಿಸಿದರು. ಗೋಕಾಕ್ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಇವರು ಮಂದಿಯಿಂದ ಕನ್ನಡದ ಜಟ್ಟಿ ಎಂದು ಕರೆಸಿಕೊಳ್ಳುವವರಾದರು.

ರಾಯಚೂರಿನ ಕರ್ನಾಟಕ ಸಂಘದಲ್ಲಿ 15 ವರ್ಷಗಳ ಕಾಲ ಕಾರ್ಯದರ್ಶಿಯಾಗಿದ್ದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯಾಗಿ ಕೋಶಾಧ್ಯಕ್ಷರಾಗಿ ತಮ್ಮ ಸೇವೆ ಸಲ್ಲಿಸಿ ಅಧ್ಯಕ್ಷರಾಗಿಯೂ ಮುಂದುವರೆದರು. ಸಾಮಾನ್ಯವಾಗಿ ಒಂದು ಸ್ಥಾನಕ್ಕೆ - ಒಂದು ಬಾರಿ

ಚುನಾಯಿತರಾಗಿ ಬರುವುದೇ ಕಷ್ಟವಾಗಿರುವಾಗ ಇವರು ನಾಲ್ಕು ಅವಧಿಯಲ್ಲಿ ಅಧ್ಯಕ್ಷ ಸ್ಥಾನ ಅಲಂಕರಿಸುವವರಾದರು. ಇವರ ಅವಧಿಯಲ್ಲಿ 2, 3, 4 ಮತ್ತು 5ನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಹಾಗೂ 62ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಜರುಗಿತು. ಕಾವ್ಯ ಕಮ್ಮಟ-ನಾಟಕ ಸ್ಪರ್ಧೆ, ದಾಸ ಸಾಹಿತ್ಯ - ಸಂಗೀತ ಸ್ಪರ್ಧೆಗಳು ಯಶಸ್ವಿಯಾಗಿ ನಡೆದುವು. ಅಂತೆಯೇ, ಮಾನ-ಸನ್ಮಾನ, ಪ್ರಶಸ್ತಿ-ಪುರಸ್ಕಾರಗಳು ಇವರನ್ನರಸಿ ಬಂದುವು. ಈ ಮನುಷ್ಯ ಯಾವುದೇ ಕೆಲಸಕ್ಕೆ ಕೈ ಹಾಕಲಿ, ನಿಷ್ಠೆಯಿಂದ ದುಡಿದು - ಅದರ ಯಶಸ್ಸಿಗೆ ಕಾರಣರಾಗಿ ತುಂಬು ದಕ್ಷತೆ ಮೆರೆಸಿರುತ್ತಾರೆ. ಕಲಾವಿದರಾಗಿ - ಸಂಘಟಕರಾಗಿ ಇವರ ಸಾಧನೆ ಅನನ್ಯ. ಕಟ್ಟಿರುವ ಸಂಸ್ಥೆಗಳು ಹಾಗೂ ನಡೆಸಿರುವ ಚಟುವಟಿಕೆಗಳು ಬಹಳಷ್ಟು ಇನ್ನು ಪತ್ರಿಕೋದ್ಯಮದ ಬಗ್ಗೆ ಹೇಳುವುದಾದರೆ, 'ವೈಶ್ಯವಾರ್ತಾ' ಎನ್ನುವ ಜನಾಂಗದ ಹೆಮ್ಮೆಯ ಪತ್ರಿಕೆಯ ರೂವಾರಿಗಳಿವರು. ಪತ್ರಿಕೆಯನ್ನು ನಡೆಸುವುದು ಸುಲಭ ಸಾಧ್ಯ ಕೆಲಸವಲ್ಲ. ನೇರ-ದಿಟ್ಟ ನಿರಂತರ ಎಂಬಂತೆ, ದಕ್ಷತೆಯಿಂದ ನಿರ್ವಹಿಸಿ, ಈಗ ಅದನ್ನು ರೂಪಾಂತರಿಸಿ 'ನಿಮ್ಮ ವೈಶ್ಯವಾರ್ತೆ' ಎಂದು ಹೆಸರಿಸಿದ್ದಾರೆ. ಇನ್ನು ಪ್ರಕಾಶಕರಾಗಿಯೂ ಮಿಂಚಿರುವ ಇವರು 41 ಮಂದಿ ವೈಶ್ಯ ಕವಿಗಳ 55 ಕವನಗಳನ್ನು ಸಂಗ್ರಹಿಸಿ 'ಅಂಕುರ' ಎಂಬ ಕವನ ಸಂಕಲನದ ಹುಟ್ಟಿಗೆ ಕಾರಣೀಭೂತರಾಗಿರುತ್ತಾರೆ.

ರಾಜಧಾನಿ ಬೆಂಗಳೂರಿನಿಂದ ದೂರವಿರುವ ರಾಯಚೂರು ಜಿಲ್ಲೆಯ ಒಂದು ಹಳ್ಳಿಯ ಪೋರ ಇಷ್ಟೆಲ್ಲ ಸಾಧನೆಗಳನ್ನು ಸಾಧಿಸಿರಲು ಇದೀಗ ಇಡೀ ಕನ್ನಡಿಗರು ಹೆಮ್ಮೆಯಿಂದ ಸನ್ಮಾನಿಸುವ - ಅಭಿನಂದಿಸುವ ಘಟ್ಟಕ್ಕೆ ತಲುಪಿದ್ದಾರೆಂದರೆ, ಇದು ಸಾಮಾನ್ಯ ಸಂಗತಿ ಅಲ್ಲ. ಇವರು ಹುಟ್ಟಿದ ನೆಲಕ್ಕೆ ಕೀರ್ತಿ ತಂದು ಸಾಹಿತ್ಯಲೋಕದಲ್ಲಿ ಇವರ ಊರಿನ ಹೆಸರನ್ನು ಶಾಶ್ವತವಾಗಿಸಿದ್ದಾರೆ. ಹಿಂದೆ ಸಾಹಿತ್ಯ ದಿಗ್ಗಜ ಪಂಪಾಮಹಾಕವಿ ಬನವಾಸಿಯನ್ನು ಭೂಪಟದಲ್ಲಿ ಗುರುತಿಸುವಂತೆ ಮಾಡಿದರೆ, ಇಂದು ಈ ಪಂಪಣ್ಣ ರಾಯಚೂರಿನ ಹೆಸರನ್ನು ಭೂಪಟದಲ್ಲಿ ಶ್ರೀಮಂತಗೊಳಿಸಿರುತ್ತಾರೆ.

ಇನ್ನೊಂದು ಮಾತನ್ನು ಹೇಳಲೇಬೇಕು. ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು 19-7-2009ರಂದು ರಾಯಚೂರಿನಲ್ಲಿ ಮೂರನೆಯ ಸಾಹಿತ್ಯ ಸಮ್ಮೇಳನವನ್ನು ಆಚರಿಸಿದಾಗ, ಪಂಪಯ್ಯ ಶೆಟ್ಟರು ಅದರ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಹೆಗಲ ಮೇಲೆ ಹೊತ್ತರು. ಸ್ಥಳೀಯರನ್ನು ಸೇರಿಸಿಕೊಂಡು ಆತಿಥೇಯರಾಗಿ, ಬಂದವರನ್ನು ಮದುವೆಯ ಮನೆಯಲ್ಲಿ ನೆಂಟರನ್ನು ಉಪಚರಿಸುವಂತೆ ನೋಡಿಕೊಂಡರು. ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟರು. ನಾನಲ್ಲಿಗೆ ಸಂಕಿರಣದಲ್ಲಿ ನನ್ನ ಪ್ರಬಂಧ ಮಂಡಿಸಲು ಹೋಗಿದ್ದೆ. ಅಲ್ಲಿ ಅವರನ್ನು ಹತ್ತಿರದಿಂದ ನೋಡಿ ಬೆರಗಾದೆನು. ಆ ಅನುಭವ ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚ-ಹಸಿರಾಗಿದೆ. ಇಂತಹ ಮೇರು ವ್ಯಕ್ತಿತ್ವದ ಅಣ್ಣ ಪಂಪಣ್ಣನವರಿಗೆ ಕುಲದೇವಿ ವಾಸವಿ ಸಕಲ ಸಂಪದವೀಯಲಿ. ಕನ್ನಡಾಂಬೆಗೆ ಇವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತಾಗಲಿ. ಶ್ರೀಯುತರು ಹೀಗೆ ಹೆಮ್ಮರವಾಗಿ ಬೆಳೆಯಲು ಸಹಕರಿಸಿದಂತಹ ಅವರ ಕುಟುಂಬವರ್ಗಕ್ಕೆ ಸನ್ಮಂಗಳವುಂಟಾಗಲಿ.

ವಿಜಯ ನಾಗೇಶ್, ವಾಸವಿ ದೇವಸ್ಥಾನದ ರಸ್ತೆ, ಮಾಗಡಿ. ; ಸನಿಹವಾಣಿ : 9036080368

ನಾನು ಕಂಡಂತೆ ಪಂಪಯ್ಯಶೆಟ್ಟಿ

✍ ಭೀಮನಗೌಡ ಇಟಗಿ, ರಾಯಚೂರು

ಎಚ್. ಪಂಪಯ್ಯಶೆಟ್ಟಿಯವರನ್ನು ಕಳೆದ ಮೂರು ದಶಕಗಳಿಂದ ನಾನು ಹತ್ತಿರದಿಂದ ಬಲ್ಲೆ. ಅವರೊಬ್ಬ ಆತ್ಮೀಯ ಸ್ನೇಹಜೀವಿ, ಕ್ರಿಯಾಶೀಲ ಸಂಘಟನಾ ಮನೋಭಾವದ ವ್ಯಕ್ತಿ; ಹಿಡಿದ ಕೆಲಸವನ್ನು ಶಿಸ್ತಿನಿಂದ ಮಾಡುವ ಗುಣ ಸ್ವಭಾವವನ್ನು ಮೈಗೂಡಿಸಿಕೊಂಡು ಬಂದ ಚಿಂತಕರಾಗಿದ್ದಾರೆ. ಮೊದಲಿನಿಂದಲೂ ಕನ್ನಡ-ನಾಡು ನುಡಿ ನೆಲ-ಜಲಗಳ ಬಗೆಗೆ ಅಭಿಮಾನ, ಪ್ರೀತಿಯನ್ನಿಟ್ಟುಕೊಂಡು ಕನ್ನಡಪರ ಸಂಘಟನೆಗಳಲ್ಲಿ ಕೆಲಸ ಮಾಡುತ್ತಾ ಬಂದವರಾಗಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಆಯ್ಕೆಯಾಗಿ ಒಂಬತ್ತು ವರ್ಷಗಳವರೆಗೆ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪರಿಷತ್ತಿಗೆ ನ್ಯಾಯವನ್ನು ಒದಗಿಸಿದ್ದಾರೆ. ಯುವ ಬರೆಹಗಾರರಿಗೆ, ಸಂಗೀತಗಾರರಿಗೆ ವೇದಿಕೆಯನ್ನು ಕಲ್ಪಿಸಿ ಅವರಲ್ಲಿರುವ ಪ್ರತಿಭೆ ಅರಳಲು ಪ್ರೋತ್ಸಾಹವನ್ನು ನೀಡಿದ್ದಾರೆ.

ಸದಾ ಏನಾದರೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಲೇ ಇರಬೇಕೆಂಬ ಹಂಬಲ ಶೆಟ್ಟರದು. ಅವರು ಯಾವುದೇ ಸಮ್ಮೇಳನವನ್ನು ಹಮ್ಮಿಕೊಂಡರೂ ಗೋಷ್ಠಿಗಳಲ್ಲಾಗಲೀ, ಸಮಕಾಲೀನ ವಿದ್ಯಮಾನಗಳಿಗೆ ಸಂಬಂಧಿಸಿದ ವಿಚಾರಸಂಕಿರಣಗಳಲ್ಲಾಗಲೀ ಒಂದು ವಿಶೇಷತೆ ಕಂಡು ಬರುತ್ತಿತ್ತು. ನಾನು ಅವರೊಂದಿಗೆ ಪರಿಷತ್ತಿನ ಪದಾಧಿಕಾರಿಯಾಗಿ ಕೆಲಸ ಮಾಡಿರುವೆ. ಜೊತೆಗೆ ಸಮ್ಮೇಳನಗಳ ವಿವಿಧ ಸ್ವಾಗತ ಸಮಿತಿಯಲ್ಲೂ ಕೂಡ ಸದಸ್ಯನಾಗಿ ಕಾರ್ಯನಿರ್ವಹಿಸಿದ್ದೇನೆ. ಎಲ್ಲರನ್ನು ಸಮಾನವಾಗಿ ನೋಡುವ, ತಾವು ಕೂಡ ಅಧ್ಯಕ್ಷರು ಎನ್ನುವುದನ್ನು ತೋರಿಸದೇ ಎಲ್ಲರೊಂದಿಗೆ ಬೆರೆತು ಕಾರ್ಯನಿರ್ವಹಿಸುವ ಸ್ವಭಾವ ಅವರಲ್ಲಿದೆ.

ಟ್ಯಾಗೋರ್ ಕಾಲೇಜಿನಲ್ಲಿ ಅವರು ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದರೂ ಈ ಇಳಿವಯಸ್ಸಿನಲ್ಲೂ ಕ್ರಿಯಾಶೀಲವಾಗಿ ಓಡಾಡುತ್ತಿದ್ದಾರೆ. ಆರ್ಯವೈಶ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಅನೇಕ ಕಾರ್ಯಕ್ರಮಗಳನ್ನು ಬೆಂಗಳೂರಿನಲ್ಲಿ ಮಾಡುತ್ತಿದ್ದಾರೆ. ವೈಶ್ಯವಾರ್ತಾ ಪತ್ರಿಕೆಯ ಗೌರವ ಸಂಪಾದಕರಾಗಿಯೂ ನಿರಂತರವಾಗಿ ಪತ್ರಿಕೆಯನ್ನು ಹೊರತರುತ್ತಿದ್ದಾರೆ.

ಒಟ್ಟಾರೆ ಹೇಳಬೇಕೆಂದರೆ ಪಂಪಯ್ಯಶೆಟ್ಟಿಯವರು ಕ್ರಿಯಾಶೀಲ ಮನಸ್ಸಿನವರು. ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡವರು. ಅವರಿಗೆ ಈಗ ಅಭಿನಂದನಾ ಗ್ರಂಥ ಹೊರತರುತ್ತಿರುವುದು ಸಂತೋಷದ ಸಂಗತಿ. ✿

ಭೀಮನಗೌಡ ಇಟಗಿ, ಎಲ್. ಐ. ಜಿ.191, ನಿಜಲಿಂಗಪ್ಪ ಕಾಲೋನಿ, ರಾಯಚೂರು ; ಸ. : 9449761911

ಕನ್ನಡದ ಕಟ್ಟಾಳು

✍ ಕೊಪ್ಪರಂ ಅನ್ನಪೂರ್ಣ ಸುಬ್ರಹ್ಮಣ್ಯಂ

ಎಚ್. ಪಂಪಯ್ಯ ಶೆಟ್ಟರು ರಾಯಚೂರಿನವರು. ಅವರ ಭಾಷಾಶೈಲಿಯಲ್ಲಿ ಒಂದು ರೀತಿ ಸೊಗಸಿದೆ. ಆ ಪ್ರದೇಶದ ಕನ್ನಡದ ಸೊಗಡು ಕೇಳುವುದೇ ಚೆಂದವಿದೆ. ಪಂಪಯ್ಯ ಶೆಟ್ಟರ ಮಾತಿನಲ್ಲಿ ಹಿಡಿತ-ತೂಕ ಕಾಣುತ್ತೇವೆ. ಅನವಶ್ಯಕ ಮಾತುಗಳಿಗೆ ಅಲ್ಲಿ ಜಾಗವೇ ಇರುವುದಿಲ್ಲ. ಏನನ್ನು ಹೇಳಬೇಕೋ ಅದನ್ನು ಕರಾರುವಾಕ್ಕಾಗಿ ಹೇಳಿ ಬಿಡುವರು. ಶಿಸ್ತು- ಸಂಯಮ ರೂಢಿಸಿಕೊಂಡಿದ್ದಾರೆ. ಮಾತಿಗಿಂತಲೂ ಕೃತಿಯಲ್ಲಿಯೇ ಹೆಚ್ಚು ನಂಬಿಕೆಯುಳ್ಳವರು.

ಎತ್ತಣ ಮಾಮರ - ಎತ್ತಣ ಕೋಗಿಲೆ
ಎತ್ತಣ ವೈಶ್ಯರು - ಎತ್ತಣ ಸಾಹಿತ್ಯ

ಎಂಬ ಮಾತನ್ನು ಸುಳ್ಳಾಗಿಸಿ ನಮ್ಮ ಜನಾಂಗದ ಸಾಹಿತಿಗಳನ್ನು , ಸಾಹಿತ್ಯಾಸಕ್ತರನ್ನು ಒಂದುಗೂಡಿಸಿ 'ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು' ಹುಟ್ಟುಹಾಕಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಕೀರ್ತಿ ಪಂಪಯ್ಯಶೆಟ್ಟರಿಗೆ ಸೇರುವುದು. ಪರಿಷತ್ತು ಹುಟ್ಟಿದ ಮೊದಲ ದಿನದಿಂದ ನಾನೂ ಸಹ ಅದರ ಭಾಗವಾಗಿ ನಡೆದು ಬರುತ್ತಿರುವೆನು. ಕಾರ್ಯಕಾರಿ ಸಮಿತಿಯಲ್ಲಿ ಮೊಟ್ಟಮೊದಲ ಕೋಶಾಧ್ಯಕ್ಷರ ಸ್ಥಾನ ನೀಡಿ ನನಗೆ ಪರಿಷತ್ತು ಗೌರವಿಸಿದೆ.

ಪಂಪಯ್ಯ ಶೆಟ್ಟರ ನೇತೃತ್ವದಲ್ಲಿ ಬರುತ್ತಿದ್ದ 'ವೈಶ್ಯವಾರ್ತಾ' ಪತ್ರಿಕೆಯಲ್ಲಿ ಬೆಂಗಳೂರಿನ ಮುಖ್ಯ ವರದಿಗಾರರ ಹುದ್ದೆಯನ್ನು ನೀಡಿದ್ದರು. ನನಗೆ ಈಗಲೂ ನೆನಪಿದೆ - ಪತ್ರಿಕೆಗೆ ನನ್ನ ಮೊಟ್ಟಮೊದಲ ವರದಿ ಬರೆದು ಕಳುಹಿಸಿ ಅನಂತರ ಪಂಪಯ್ಯಶೆಟ್ಟರಿಗೆ ಫೋನ್ ಮೂಲಕ ಹೇಳಿದ್ದೆ - ನನ್ನ ಬರವಣಿಗೆಯಲ್ಲಿ ಏನಾದರೂ ತಪ್ಪಿದ್ದರೆ ಹೇಳಿ ಸರಿಪಡಿಸಿಕೊಳ್ಳುತ್ತೇನೆ ಎಂದು. ಅವರು ಹೇಳಿದ್ದು ಹೀಗೆ ; ಇದರಲ್ಲಿ ನನಗೆ ಯಾವ ತಪ್ಪೂ ಕಾಣಲಿಲ್ಲ, ಹೀಗೇ ಮುಂದುವರಿಸಿ ಎಂದು ಹೇಳಿ ನನ್ನ ಅಳುಕನ್ನು ನಿವಾರಿಸಿದರು.

ಪಂಪಯ್ಯಶೆಟ್ಟರು ಅನೇಕ ವರ್ಷಗಳಿಂದ ಕನ್ನಡದ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಈ ಸೇವೆ ನಿರಂತರವಾಗಿ ಸಾಗಲಿ. ಕನ್ನಡ ತಾಯಿಯ ಕೀರ್ತಿವಂತ ಮಗನಾಗಿ ಹೆಸರಾಗಲಿ ಎಂದು ಆಶಿಸುತ್ತೇನೆ.

ಕೊಪ್ಪರಂ ಅನ್ನಪೂರ್ಣ, 38, 15ನೇ ತಿರುವು, 5ನೇ ದೇವಸ್ಥಾನದ ರಸ್ತೆ, ಮಲ್ಲೇಶ್ವರ, ಬೆಂಗಳೂರು-560 003 ; ಸನಿಹವಾಣಿ : 9845847911

ವೈಶ್ಯ ವಾರ್ತಾ ಮತ್ತು ಪಂಪಯ್ಯ ಶೆಟ್ಟಿ

✍ ಶ್ರೀ. ರಾ. ವಿಜಯ ಸಮರ್ಥ

ನನ್ನ ಮತ್ತು ಪಂಪಯ್ಯ ಶೆಟ್ಟಿಯವರ ಪರಿಚಯ ಸಿನಿಮೀಯ ರೀತಿಯಲ್ಲಿ ನಡೆಯಿತು. ಅದು 2000-2001ರ ಸಮಯ. ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ವಾಸವಿ ವೈದಿಕ ಭವನದಲ್ಲಿ ನನ್ನ ಹಿರಿಯ ಅಣ್ಣ ಎಸ್.ಆರ್. ರಂಗನಾಥ ಶೆಟ್ಟಿಯವರ ವಾರ್ಷಿಕ ಪುಣ್ಯ ತಿಥಿಯಲ್ಲಿ ಭಾಗವಹಿಸಲು ಹೋಗಿದ್ದೆನು. ಅಲ್ಲಿ ಬೇರೆ ಬೇರೆ ಸ್ಥಳಗಳಿಂದ ಅನೇಕ ಜನ ಸಮಾಜದ ಬಂಧುಗಳು ಸಹ ಅವರ ಹಿರಿಯರ ಕಾರ್ಯಕ್ರಮಗಳನ್ನು ನಡೆಸಲು ಬಂದಿದ್ದರು. ಜನಗಳ ಓಡಾಟ ಗಮನಿಸುತ್ತಿದ್ದ ನನಗೆ ಅಲ್ಲಿ ನೆಲದ ಮೇಲೆ ಬಿದ್ದಿದ್ದ ಒಂದು ಪುಸ್ತಕ ಕಣ್ಣಿಗೆ ಕಾಣಿಸಿತು. ಅದನ್ನು ಎತ್ತಿ ಮೇಲೆ ಇಡಲು ತೆಗೆದುಕೊಂಡು ನೋಡಿದರೆ ರಾಯಚೂರಿನಿಂದ ಪ್ರಕಟವಾಗಿದ್ದ ವೈಶ್ಯವಾರ್ತಾ ಮಾಸಪತ್ರಿಕೆ. ಅದನ್ನು ನೋಡಿದ ನನಗೆ ಆಶ್ಚರ್ಯ ಮತ್ತು ಸಂತೋಷ ಎರಡೂ ಒಟ್ಟಿಗೆ ಆದವು. ಕಾರಣ ಆ ಪತ್ರಿಕೆ ಪೂರ್ತಿಯಾಗಿ ವೈಶ್ಯ ಸಮಾಜದ ಚಟುವಟಿಕೆಗಳಿಗೆ ಮಾತ್ರ ಮೀಸಲಾದ ಪತ್ರಿಕೆ. ಅದಕ್ಕೂ ಮೊದಲು 10 ವರ್ಷಗಳಿಂದ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಒಡನಾಟ ಹೊಂದಿದ್ದ ನಾನು ನಮ್ಮ ಸಮಾಜದ ಪತ್ರಿಕೋದ್ಯಮಕ್ಕೂ ಬರೆಯಬೇಕೆನ್ನುವ ಆಸೆಯಿಂದ ಪಂಪಯ್ಯ ಶೆಟ್ಟಿಯವರಿಗೆ ಮೊದಲು ವಾರ್ಷಿಕ ಚಂದಾ ಹಣ ಮತ್ತು ಎರುಡು ಚುಟುಕುಗಳನ್ನು ಬರೆದು ಕಳುಹಿಸಿದೆನು. ಅದು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಯಿತು. ಹೀಗೆ ಸುಮಾರು ಮೂರು ತಿಂಗಳು ನನ್ನ ಚುಟುಕುಗಳು ಪ್ರಕಟವಾದವು. ಈ ಪತ್ರಿಕೆಯ ಪ್ರಸಾರ ಹಚ್ಚಿಸಬೇಕೆನ್ನುವ ಉದ್ದೇಶದಿಂದ ನನ್ನ ಪರಿಚಯದವರ ಹತ್ತಿರ ವಾರ್ಷಿಕ ಚಂದಾ ಸಂಗ್ರಹ ಮಾಡಿ ಕಳುಹಿಸಿಕೊಡಲು ಪ್ರಾರಂಭಿಸಿದೆನು. ಹೀಗೆಯೇ ಪುನಃ 3 ತಿಂಗಳು ಕಳೆಯಿತು. ಆಗಾಗ ನಮ್ಮ ಸಮಾಜದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳ ವರದಿಯನ್ನು ಕಳುಹಿಸಿಕೊಡಲು ಪ್ರಾರಂಭಿಸಿದೆನು. ಆ ಸುದ್ದಿಗಳೂ ಸಹ ಪ್ರಕಟವಾಗಲು ನನ್ನ ಸಂತೋಷ ಜಾಸ್ತಿಯಾಯಿತು. ಹೀಗೆ ಒಂದು ವರ್ಷ ಕಳೆಯಿತು. ಒಂದು ದಿನ ನನಗೆ ಸಂಪಾದಕರಾದ ಪಂಪಯ್ಯ ಶೆಟ್ಟಿಯವರಿಂದ ಒಂದು ಪತ್ರ ಬಂದಿತು. ಅದರಲ್ಲಿ ನನ್ನ ಭಾವಚಿತ್ರ ಕಳುಹಿಸಿಕೊಡಬೇಕೆಂದು ಸೂಚಿಸಿದ್ದರು. ಅನುಮಾನ ದಿಂದಲೇ ನನ್ನ ಭಾವಚಿತ್ರ ಕಳುಹಿಸಿ ಕೊಡಲಾಗಿ ಮುಂದಿನ ತಿಂಗಳು ನನ್ನನ್ನು ಪತ್ರಿಕೆಯ ಉಪ ಸಂಪಾದಕನಾಗಿ ನೇಮಿಸಿ ಪ್ರಕಟಣೆಯನ್ನು ಹೊರಡಿಸಿ ನನಗೆ ಅಧಿಕೃತವಾಗಿ ಸ್ಥಾನ ನೀಡಿದರು. ಆದರೂ ಸಹ ಒಬ್ಬರಿಗೊಬ್ಬರ ಭೇಟಿ ಆಗಿರಲಿಲ್ಲ. ಹೀಗೆಯೇ ಪತ್ರಿಕೆಯ ಕೆಲಸ ತಡೆಯಿಲ್ಲದೆ ನಡೆಯುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಪಂಪಯ್ಯ ಶೆಟ್ಟರು ಬೆಂಗಳೂರು,

ಮೈಸೂರು ಸೇರಿದಂತೆ ರಾಜ್ಯದ ದಕ್ಷಿಣ ಭಾಗದಲ್ಲಿ ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವ ಕೆಲಸ ನಾನು ಮಾಡುತ್ತ ಬಂದೆವು. ಒಂದು ದಿನ ನನಗೆ ಪಂಪಯ್ಯ ಶೆಟ್ಟಿಯವರಿಂದ ದೂರವಾಣಿ ಕರೆಬಂದು ತಾನು ತುಮಕೂರಿಗೆ ಬರುತ್ತಿರುವುದಾಗಿಯೂ ಅಲ್ಲಿ ಬಂದು ತಮ್ಮನ್ನು ಕಾಣಬಹುದೆಂದು ತಿಳಿಸಿದರು. ನಾನೂ ಸಹ ಆ ದಿನಕ್ಕಾಗಿ ಕುತೂಹಲದಿಂದ ಕಾದಿದ್ದು ಸಂಪಾದಕರನ್ನು ನೇರವಾಗಿ ಭೇಟಿಯಾಗ ಬಹುದೆನ್ನುವ ಸಂಭ್ರಮದಿಂದ ತುಮಕೂರಿನಲ್ಲಿ ಅವರನ್ನು ಭೇಟಿಯಾದೆವು. ಒಬ್ಬರಿಗೊಬ್ಬರು ನೋಡುತ್ತಿದ್ದಂತೆಯೇ ಏನೋ ಒಂದು ರೀತಿಯ ತೃಪ್ತಿ ಮತ್ತು ಸಂತೋಷ ಹೊರಹೊಮ್ಮಿದವು. ಸಂಜೆಯವರೆಗೆ ಪತ್ರಿಕೆಯ ಬೆಳವಣಿಗೆ ಪ್ರಸಾರ, ಸುದ್ದಿ ಹೀಗೆ ಚರ್ಚಿಸಿ ಹೊರಬಂದೆವು. ಸುಮಾರು 25 ವರ್ಷಗಳಿಂದ ನಮ್ಮ ಸಮಾಜದಲ್ಲಿ ಪತ್ರಿಕೆಯೇ ಇಲ್ಲದಿದ್ದು ಹೊಸದಾಗಿ ಪ್ರಾರಂಬಿಸಿದ ನಮಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿತ್ತು. ಸಮಾಜಕ್ಕೆ ಏನನ್ನಾದರೂ ಹೊಸತನ್ನು ಕೊಡಬೇಕೆನ್ನುವ ಉದ್ದೇಶದಿಂದ ಕರ್ನಾಟಕದಾದ್ಯಂತ ಓಡಾಡಿ ಶತಮಾನ ಕಂಡಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನಗಳ ಪರಿಚಯದ ಮಾಲಿಕೆಯನ್ನು ಪತ್ರಿಕೆಯಲ್ಲಿ ಬರೆದಿದ್ದೇನೆ ಮತ್ತು ನಾನು ಉಪ ಸಂಪಾದಕನಾಗಿ ಕೆಲಸ ಮಾಡಿದ ಒಂಬತ್ತು ವರ್ಷಗಳಲ್ಲಿ 100 ಕ್ಕೂ ಹೆಚ್ಚು ಕಾರ್ಯಕ್ರಮಗಳ ವರದಿಯನ್ನು 115 ಜನ ಆರ್ಯವೈಶ್ಯ ಸಾಧಕರನ್ನು ಪರಿಚಯಿಸಿದ ಹೆಮ್ಮೆ ಮತ್ತು ಸಮಾಧಾನ ನನಗೆ ಇದೆ. ಸರಳ, ಸಜ್ಜನ, ಸಂಘಟಕ, ಪಂಪಯ್ಯ ಶೆಟ್ಟಿಯವರ ಒಡನಾಟ ಎಂತಹವರಿಗೂ ಮುದ ಕೊಡುತ್ತದೆ. ಕಾಲಾಯತಸ್ಮೈ ನಮಃ ಎನ್ನುವಂತೆ ಪತ್ರಿಕೆ ಪ್ರಾರಂಭವಾಗಿ ಹತ್ತು ವರ್ಷಗಳ ಅನಂತರ ಅವರು ಮಕ್ಕಳ ಉದ್ಯೋಗದ ನಿಮಿತ್ತ ಬೆಂಗಳೂರಿಗೆ ರಾಯಚೂರಿನಿಂದ ಮನೆಯನ್ನು ಬದಲಾಯಿಸಿಕೊಂಡು ಬಂದರು. ನಾನು ಬೆಂಗಳೂರು ಆರ್ಯವೈಶ್ಯ ಮಂಡಳಿಗಳ ಒಕ್ಕೂಟದ ಸ್ಥಾಪಕ ಅಧ್ಯಕ್ಷನಾಗಿ ಕೆಲಸದ ಒತ್ತಡದಿಂದ ಪತ್ರಿಕೆಗೆ ರಾಜೀನಾಮೆಯನ್ನು ಕೊಟ್ಟು ಬಿಡುಗಡೆ ಹೊಂದಿದೆನು. ಪಂಪಯ್ಯ ಶೆಟ್ಟಿಯವರು ಪತ್ರಿಕೆಯನ್ನು ಬೇರೆಯವರಿಗೆ ವಹಿಸಿಕೊಟ್ಟು ಬಿಟ್ಟರು. ಈಗ ನಾವು ಇಬ್ಬರೂ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನಲ್ಲಿ ಅವರು ಅಧ್ಯಕ್ಷರಾಗಿ ನಾನು ಉಪಾಧ್ಯಕ್ಷನಾಗಿ ಸಾಹಿತ್ಯದ ಚಟುವಟಿಕೆಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಪತ್ರಿಕಾರಂಗದಲ್ಲಿ ಕೆಲಸ ಮಾಡುವುದು ಸುಲುಭದ ಮಾತಲ್ಲ. ಪತ್ರಿಕೋದ್ಯಮದಲ್ಲಿ ಎರಡು ವಿಧ. ಒಂದು ಸಾಮಾನ್ಯ ಪತ್ರಿಕೋದ್ಯಮ ಮತ್ತು ಸಮಾಜದ ಪತ್ರಿಕೋದ್ಯಮ. ನಾನು ಸಾಮಾನ್ಯ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿದ್ದು ಸಮಾಜದ ಪತ್ರಿಕೋದ್ಯಮದಲ್ಲಿ ಕೆಲಸ ಮಾಡಲು ಪಂಪಯ್ಯ ಶೆಟ್ಟರು ಅವಕಾಶ ಮಾಡಿಕೊಟ್ಟಿದ್ದರಿಂದ ನಾನು ಸಮಾಜಕ್ಕೆ ಹತ್ತಿರದವನಾದೆ. ಇಂತಹ ಅವಕಾಶ ಕೊಟ್ಟ ಪಂಪಯ್ಯ ಶೆಟ್ಟಿಯವರನ್ನು ನಾನು ನನ್ನ ಜೀವನದಲ್ಲಿ ಮರೆಯುವಂತಿಲ್ಲ. ಇದೇ ಸಂದರ್ಭದಲ್ಲಿ ಅವರಿಗೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿರುವುದು ಮತ್ತು ಅಭಿನಂದನಾ ಗ್ರಂಥ ಹೊರತರುತ್ತಿರುವುದು ಸಮಾಜದ ಪತ್ರಿಕೋದ್ಯಮಕ್ಕೆ ಮತ್ತು ಸಂಘಟನೆಗೆ ಸಿಕ್ಕ ಗೌರವ ವಾಗಿದೆ. ಪಂಪಯ್ಯ ಶೆಟ್ಟಿಯವರು ನೂರ್ಕಾಲ ಬಾಳಲಿ ಎಂದು ಈ ಮೂಲಕ ಹಾರೈಸುತ್ತೇನೆ. ❁

ಶ್ರೀ. ರಾ. ವಿಜಯಸಮರ್ಥ,
966, ಲಕ್ಷ್ಮಿ ನರಸಿಂಹ ನಿಲಯ, 1ನೇ ಮಹಡಿ, 6ನೇ ಮುಖ್ಯರಸ್ತೆ, ವಿ.ವಿ.ನಗರ,
ಎಚ್.ಎಂ.ಟಿ. ಲೇಔಟ್, ಆರ್.ಟಿ.ನಗರ, ಬೆಂಗಳೂರು-560 032. ಸನಿಹವಾಣಿ : 9880019693

ಪಂಪಯ್ಯಶ್ರೇಷ್ಠಿಯವರೊಂದಿಗೆ ಮುಖಾಮುಖಿ

✍ ಟಿ.ವಿ. ಸುರೇಶಗುಪ್ತ

ಹದಿನೈದು ವರ್ಷಗಳ ಹಿಂದಿನ ಮಾತು. ಪಂಪಯ್ಯಶೆಟ್ಟರು ಒಮ್ಮೆ ಕಾರ್ಯನಿಮಿತ್ತ ಚಿತ್ರದುರ್ಗಕ್ಕೆ ಬಂದಿದ್ದಾಗ ವಾಸವಿ ವಿದ್ಯಾ ಸಂಸ್ಥೆ ಕಾರ್ಯದರ್ಶಿ ರಾಮಲಿಂಗಶ್ರೇಷ್ಠಿಯವರ ಮೂಲಕ ಅವರ ಪರಿಚಯವಾಯಿತು. ಮಹತ್ವದ ಒಂದು ಸಂಗತಿಯನ್ನು ನನ್ನೊಡನೆ ಆಗ ಅವರು ಹಂಚಿಕೊಂಡರು. ಅದೇ ವೈಶ್ಯವಾರ್ತಾ ಪತ್ರಿಕೆಯ ಸಮಾಚಾರ. ನಿಜಕ್ಕೂ ಅದೊಂದು ಅಚ್ಚರಿಯ ಸಂಗತಿಯಾಗಿತ್ತು. ಇದರ ಮೂಲಕ ಅವರ ಜೊತೆ ಮೊದಲ ಮುಖಾಮುಖಿ (ಪರಿಚಯ) ಆಯಿತು.

ಆರ್ಯವೈಶ್ಯರಿಗಾಗಿ ವೈಶ್ಯರಿಂದಲೇ ವೈಶ್ಯರ ಸಮಾಚಾರ ಸಂಗತಿಗಳನ್ನು ವಿಚಾರ ವಿನಿಮಯ ಮಾಡುವ ಸಲುವಾಗಿ ಪತ್ರಿಕೆಯೊಂದನ್ನು ಹುಟ್ಟು ಹಾಕುವ ಕನಸನ್ನು ಅವರು ಹಂಚಿಕೊಂಡಾಗ ಅವರಲ್ಲಿ ಪುಟಿದೇಳುತ್ತಿದ್ದ ಉತ್ಸಾಹ ಕಂಡೊಡನೆ ನನ್ನಲ್ಲಿ ಆದಾಗಲೇ ರಕ್ತಗ್ತತವಾಗಿದ್ದ ಕುಲಾಭಿಮಾನ ಉದ್ದೀಪನವಾಯಿತು. ಬಹಳ ವರ್ಷಗಳ ಹಿಂದೆ ಮೈಸೂರಿನಿಂದ ಪ್ರಕಟವಾಗುತ್ತಿದ್ದ ಕರ್ನಾಟಕ ಆರ್ಯವೈಶ್ಯ ಪತ್ರಿಕೆಯ ಅನಂತರ ನಮ್ಮ ಜನಾಂಗದ ಸಮಾಚಾರಗಳ ವಿನಿಮಯಕ್ಕೆ ಅವಕಾಶವೇ ಇಲ್ಲದೆ ಹಲವು ದಶಕಗಳ ಕಂದರ ಏರ್ಪಟ್ಟಿತ್ತು. ನಮ್ಮ ಸಂವೇದನೆಗಳಿಗಾಗಿ ಒಂದು ವೇದಿಕೆಯೇ ಇಲ್ಲವಲ್ಲ ಎಂಬ ನಮ್ಮಂಥವರ ಕೊರಗಿಗೆ ಉತ್ತರ ಹೇಳಬಯಸುವಂತೆ ಅವರ ಪ್ರಯತ್ನ ಇತ್ತೆಂದರೆ ತಪ್ಪಾಗದು. ಎಲ್ಲಾ ಶಕ್ತಿ ಮೂಲಗಳು ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಿರುವಾಗ ದೂರದ ರಾಯಚೂರಿನಿಂದ ಪತ್ರಿಕಾ ಪ್ರಕಟಣೆಯ ಸಾಧಕ-ಬಾಧಕಗಳ ಬಗ್ಗೆ ಅವರೊಡನೆ ನಮ್ಮ ಮನೆಯಲ್ಲಿಯೇ ಸಾಕಷ್ಟು ಮಾತನಾಡಿದೆವು. ಕೆಲವೇ ದಿನಗಳು ನಡೆದು ನಿಲ್ಲಿಸಿಬಿಡುವ ಪ್ರಯತ್ನಕ್ಕೆ ಕೈ ಹಾಕಬೇಡಿ, ನಿರಂತರತೆ ಆಗತ್ಯ. ಆದರಲ್ಲೂ ಸಾಹಿತ್ಯ, ಸಂಸ್ಕೃತಿ, ಆಚಾರ, ವಿಚಾರಗಳ ಬಗ್ಗೆ ಉತ್ಸುಕತೆಯೇ ಕಡಿಮೆ ಇರುವ ನಮ್ಮ ಸಮಾಜದ ಸ್ಥಿತಿ ಗತಿಗಳ ಬಗ್ಗೆ ಕೂಲಂಕಷ ವಿಚಾರ ವಿನಿಮಯ ಅಗತ್ಯವೆನ್ನುತ್ತಾ, ಆರ್ಯವೈಶ್ಯರಿಗಾಗಿ ಅಹರ್ನಿಶಿ ಶ್ರಮಿಸಿದ ನಮ್ಮ ತಂದೆ ಟೀಕಾರವರ ಒಳಬೇಗುದಿ ಅದೇ ಮಾರ್ಗದಲ್ಲಿ ಸಾಗುತ್ತಿರುವ ನನ್ನ ಅಂತರಂಗವನ್ನು ತೆರೆದಿಟ್ಟೆ. ಇದೊಂದು ಅರ್ಥಪೂರ್ಣ ಮುಖಾಮುಖಿಯ ಸ್ವರೂಪದಲ್ಲಿದ್ದಿತು.

ಅಂತಹ ಪಂಪಯ್ಯನವರು ನಡೆದು ಬಂದ ದಾರಿ ಹೂವಿನ ದಾರಿಯೇನಲ್ಲ,

ಹಲವಾರು ಸವಾಲು, ಸಂಕಷ್ಟಗಳನ್ನು ಎದುರಿಸುತ್ತಾ ಅವರ ಎಲ್ಲಾ ಸಂಘಟನಾ ಶಕ್ತಿಯನ್ನು ಧಾರೆಯೆರೆದು ವೈಶ್ಯವಾರ್ತಾ ಪತ್ರಿಕೆಯನ್ನು ಪ್ರಾರಂಭಿಸಿಯೇಬಿಟ್ಟರು. ಅದೊಂದು ಸಾಹಸದ ಇತಿಹಾಸದ ಪುಟವೆಂದು ಕರೆಯಬಹುದು. ಒಂದೊಂದು ಸಂಚಿಕೆ ಪ್ರಕಟವಾಗುತ್ತಾ ಹೋದಂತೆ ಆಜೀವ ಸದಸ್ಯರ ಪಟ್ಟಿಯೂ ಬೆಳೆಯಿತು. 900ಕ್ಕೂ ಹೆಚ್ಚಿನ ಸದಸ್ಯರ ಸೇರ್ಪಡೆ ಪಂಪಯ್ಯ ಶ್ರೇಷ್ಠಿಯವರ ಅದ್ಭುತ ಸಂಘಟನಾ ಶಕ್ತಿಯ ಪರಿ. ಈ ಹಂತದಲ್ಲಾಗಲೇ ರಾಯಚೂರಿನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿ, ಜನಾನುರಾಗಿಗಳಾಗಿದ್ದ ಅವರು ಈ ದೃಷ್ಟಿಯಿಂದಲೂ ಯಶಸ್ವಿಯಾದುದು ಒಂದು ಸಾಹಸ ಗಾಥೆ.

ಇದೇ ಸಂದರ್ಭದಲ್ಲಿ ಶ್ರೀ. ರಾ. ವಿಜಯಕುಮಾರ್ (ವಿಜಯಸಮರ್ಥ) ಅವರ ಪ್ರವೇಶ. ಅವರ ಓಡಾಟ ಈ ಪತ್ರಿಕೆಗೆ ಹೆಚ್ಚಿನ ಜನಾದರಣೆ ಗಳಿಸಲು ಸಹಾಯಕವಾದುದು ಪಂಪಯ್ಯ ಶ್ರೇಷ್ಠಿಯವರಿಗೆ ಆನೆ ಬಲ ಬಂದಂತಾಯಿತು. ಚಂದಾ ಹಣ ಸಂಗ್ರಹಣೆ, ಹೊಸಬರ ಸೇರ್ಪಡೆ ಇಷ್ಟಕ್ಕೇ ಸೀಮಿತವಾಗದೆ, ಅಪರೂಪದ ವೈಶ್ಯ ಸಾಧಕರನ್ನು ಪರಿಚಯಿಸಿ, ಮೂಡಿಸಿದ ಅವರ ಲೇಖನಗಳು, ಕವಿತೆಗಳು, ಶತಮಾನ ಕಂಡ ಕನ್ಯಕಾಪರಮೇಶ್ವರಿ ದೇವಸ್ಥಾನದ ಚಿತ್ರಣ ಹೀಗೆ ವೈವಿಧ್ಯಮಯವಾಗಿ ಪತ್ರಿಕೆಯನ್ನು ರೂಪಿಸುವಲ್ಲಿ ವಿಜಯಕುಮಾರ್‌ರವರ ಬಲ ಹೆಚ್ಚು ಜನಾದರಣೀಯವಾಗಿ ಪತ್ರಿಕೆ ಮುನ್ನುಗ್ಗತೊಡಗಿತು.

ಇಷ್ಟಕ್ಕೇ ಸುಮ್ಮನಾಗದ ಅವರು ವೈಶ್ಯವಾರ್ತಾ ಓದುಗರ ಬಳಗದ ಸಮಾವೇಶ, ಪತ್ರಿಕೆಯ ವಾರ್ಷಿಕೋತ್ಸವ ನಡೆಸಿ, ವಿವಿಧ ಗಣ್ಯರನ್ನು ಆಹ್ವಾನಿಸಿ, ಕಾರ್ಯಕ್ರಮ ರೂಪಿಸಿದುದು ಒಂದು ವೈಶಿಷ್ಟ್ಯ. ದೂರದ ರಾಯಚೂರಿಗೆ ದೂರದ ಊರುಗಳಿಂದ ಆಸಕ್ತರು, ತಜ್ಞರು ಬರುತ್ತಾ, ಕಾರ್ಯಕ್ರಮಕ್ಕೆ ಹಾಗೂ ಪತ್ರಿಕೆಗೆ ರಂಗು ತರಲಾರಂಭಿಸಿದರು. ಇದು ಅವರನ್ನು ಎತ್ತರಕ್ಕೆ ಬೆಳೆಸುವಲ್ಲಿ ಸಹಾಯಕ ಅಂಶಗಳಾದವು. ''ಸಿಹಿ ಲೇಪನದಿಂದೊಡಗೂಡಿದ, ಪೂರ್ತಿ ಸಿಹಿಯಲ್ಲದ ಮಾತುಗಳ ಮೂಲಕ ಕಹಿ ಎನಿಸದ ಹಾಗೆ ಅವರ ಸಂಪಾದಕೀಯ ಬರೆಹಗಳು ಇದ್ದವು''. ಎಂದರೆ ತಪ್ಪಾಗಲಾರದು ಈ ಶೈಲಿಯೂ ಹೆಚ್ಚಿನ ಜನರನ್ನು ಸೂಜಿಗಲ್ಲಿನಂತೆ ಸೆಳೆಯಿತು.

ಕಾಲೇಜು ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಕಚೇರಿಯೊಂದರಲ್ಲಿ ಪತ್ರ ವ್ಯವಹಾರ, ಲೆಕ್ಕಪತ್ರ ಇವುಗಳ ನಿರ್ವಹಣೆ ಅವರ ವೃತ್ತಿಯ ಅಂಗವಾಗಿದ್ದರೂ ಬಹುಶಃ ಕಾಲೇಜಿಗೆ ಬರುತ್ತಿದ್ದ ಬಗೆ ಬಗೆಯ ಜನರೊಡನೆ ಅವರ ಸಂಪರ್ಕ ಏರ್ಪಟ್ಟು ಅನುಭವ ವಿಸ್ತರಿಸಿಕೊಂಡಿರಬೇಕೆಂದು ನನ್ನ ಅನಿಸಿಕೆ. ವರ್ಷ ಅರವತ್ತು ಆದೊಡನೆ ವೃತ್ತಿಗೆ ಪುರಸೊತ್ತು, ಪ್ರವೃತ್ತಿ ಪ್ರಸಾರಕ್ಕೆ ಮುಕ್ತ ರಹದಾರಿ ಎಂಬ ಸೂತ್ರದೊಂದಿಗೆ ತಮ್ಮ ಕಾರ್ಯಕ್ಷೇತ್ರ ರಾಯಚೂರನ್ನು ತಾತ್ಕಾಲಿಕವಾಗಿ ಬೆಂಗಳೂರಿಗೆ ವರ್ಗಾಯಿಸಿದ್ದರಿಂದ ವಿಸ್ತೃತ ಪ್ರಪಂಚದ ಸಾಕ್ಷಾತ್ ದರ್ಶನ ಅವರಿಗೆ ಪ್ರಾಪ್ತವಾಗಿದೆ. 'ವೈಶ್ಯವಾರ್ತಾ' ಪತ್ರಿಕೆಯನ್ನು 'ನಿಮ್ಮ ವೈಶ್ಯವಾರ್ತೆ'

ಎಂದು ಮರುನಾಮಕರಣ ಗೊಳಿಸಿ, ಕೆ.ಎಲ್. ನಟರಾಜ್ ಅವರ ಸಂಪಾದಕತ್ವದಲ್ಲಿ ಮುನ್ನಡೆಯುವಂತೆ ಮಾಡಿದರು. ಅದರ ಕಾರಣಗಳು ಏನೇ ಇರಲಿ ಪತ್ರಿಕೆಯ ಮುಖಪುಟ ವರ್ಣಮಯವಾಗಿ, ವಿಷಯ ಪ್ರಬೋಧಕತೆಗೂ ಹೆಚ್ಚಿನ ಆಯಾಮ ನೀಡಿದೆ. ಈ ಎಲ್ಲಾ ಕಾರ್ಯಕ್ರಮಗಳ ಹಿಂದೆ ಅವರ ಮುಂದಾಲೋಚನೆ, ಕಾರ್ಯಕ್ಷಮತೆಯ ಎಳೆಗಳು ಇದ್ದೇ ಇವೆ. ಚಿತ್ರದುರ್ಗದಲ್ಲಿ ನಡೆದ ಐದನೆಯ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಸಮ್ಮೇಳನದ ವರದಿಗಾಗಿ ಒಂದು ಸಂಚಿಕೆಯನ್ನೇ ಮುಡಿಪಾಗಿಟ್ಟು ಪ್ರಕಟಿಸಿದುದು ಗಮನಾರ್ಹ ಅಂಶ. ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾಗಿ ಅವರ ಸಲಹೆ, ಸಾಕಾರಗೊಳ್ಳಲು ಉಪಾಧ್ಯಕ್ಷರಾದ ವಿಜಯಸಮರ್ಥ, ಕಾರ್ಯದರ್ಶಿಗಳಾದ ಕೆ.ಎಲ್. ನಟರಾಜ್, ನೇಭ ರಾಮಲಿಂಗಶೆಟ್ಟಿ ಟಿ.ಎನ್. ಅಶೋಕ್ ಹಾಗೂ ಇತರರ ಬೆಂಗಾವಲು ಈ ವೇದಿಕೆ ಉತ್ತುಂಗಕ್ಕೇರಲು ಕಾರಣವಾಯಿತು.

ಮೊದಲ ಭೇಟಿಯಲ್ಲೇ ಜನರನ್ನು ಸೆಳೆಯುವ ಅವರ ಹಸನ್ಮುಖ, ಮೆಲುಮಾತುಗಳು ಮಂತ್ರಮುಗ್ಧವಾಗಿಸುತ್ತವೆ. ಆರ್ಯವೈಶ್ಯ ಪತ್ರಿಕೆಯ ಪ್ರಕಟಣೆಯ ಯಶಸ್ಸಿನ ಬಗ್ಗೆ ನಾನು ಅಂದು ವ್ಯಕ್ತಪಡಿಸಿದ ಸಂದೇಹ ಮಾಯವಾಗುವಂತೆ ಸಾಹಸ ಗಾಥೆಯನ್ನೇ ಸೃಷ್ಟಿಸಿದ್ದಾರೆ. ಅವರ ಕಾರ್ಯಕ್ಷಮತೆ, ಸಾಹಿತ್ಯ ಪರಿಚಾರಿಕೆ ಇವೆಲ್ಲವನ್ನು ಗಮನಿಸಿ, ರಾಜ್ಯಮಟ್ಟದಲ್ಲಿ ಅಭಿನಂದಿಸು ತ್ತಿರುವುದು, ಅದರ ನೆನಪಿಗಾಗಿ ಅಭಿನಂದನಾ ಗ್ರಂಥ ಪ್ರಕಟಿಸುತ್ತಿರುವುದು ಅವರ ಜವಾಬ್ದಾರಿ ಹೆಚ್ಚಿಸಲಿದೆ, ಇನ್ನೂ ಹೆಚ್ಚಿನ ಅವಕಾಶಗಳು ಅವರಿಗೆ ಪ್ರಾಪ್ತವಾಗಿ ಆರ್ಯವೈಶ್ಯರಿಗೆ ಸಂಬಂಧಿಸಿದ ವಿಚಾರಗಳನ್ನು ಪ್ರತಿಪಾದಿಸುವಲ್ಲಿ, ಪ್ರಕಟಿಸುವಲ್ಲಿ ನಮ್ಮ ಕುಲಮಾತೆ ಶ್ರೀ ಕನ್ಯಕಾಪರಮೇಶ್ವರಿ ಹೆಚ್ಚಿನ ಶಕ್ತಿ ಕರುಣಿಸಲೆಂದು ಹಾರೈಸುವೆ.

❁

ಪ್ರೊ. ಟಿ.ವಿ. ಸುರೇಶ್ ಗುಪ್ತ
ಟೀಕಾ ಸದನ, ಬುರುಜನ ಹಟ್ಟಿ ಸರ್ಕಲ್
ಚಿತ್ರದುರ್ಗ - 577501
ಸನಿಹವಾಣಿ : 9945461834.

ಬದುಕು-ಸಂಘಟನೆ

✍ ಎಚ್. ಪಂಪಯ್ಯಶೆಟ್ಟಿ

ಅಭಿನಂದನಾ ಸಮಾರಂಭ ಮತ್ತು ಅಭಿನಂದನಾ ಗ್ರಂಥಕ್ಕೆ ನಾನು ಅರ್ಹನೆ ಎಂಬ ವಿಷಯ ನನ್ನನ್ನು ಹಲವು ಸಾರಿ ಕಾಡುತ್ತಿದೆ. ಆದರೆ ಲೇಖಕರನ್ನು, ಚಿತ್ರ, ಸಂಗೀತ ಹಾಗೂ ನಾಟಕ ಕಲಾವಿದರನ್ನು ಪ್ರಶಸ್ತಿ ನೀಡಿ ಗೌರವಿಸುತ್ತಾರೆ. ಆದರೆ ಇವರಿಗೆಲ್ಲ ತಮ್ಮ ಸಂಘಟನೆ ಮೂಲಕ ವೇದಿಕೆ ಕಲ್ಪಿಸುವವರನ್ನು ಗುರುತಿಸುವುದಿಲ್ಲ, ಕನ್ನಡಪರ ಚಟುವಟಿಕೆ ನಡೆಸುವ ಕಾರ್ಯ-ಕರ್ತರಾಗಿ ಕೆಲಸ ಮಾಡುವ, ಹೋರಾಟಕ್ಕೆ ಅರ್ಪಿಸಿಕೊಳ್ಳುವ ಜನ ಉಪೇಕ್ಷೆಗೆ ಒಳಗಾಗಿದ್ದಾರೆಂದು ಅನ್ನಿಸುತ್ತಿದೆ. ಹಾಗಾಗಿ ಗುರುತಿಸಿಕೊಳ್ಳಲು ಇಂತಹ ಸಮಾರಂಭ ಅವಶ್ಯವೆನಿಸುತ್ತಿದೆ.

ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಘಟಕರನ್ನು ಗುರುತಿಸಿ ಗೌರವಿಸಿದರೂ, ಸರಕಾರ, ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡುವಾಗ ಸಂಘಟಕರನ್ನು, ಕನ್ನಡಪರ ಕೆಲಸ ಮಾಡುವ ಪರಿಚಾರಕರನ್ನು ಪರಿಗಣಿಸುತ್ತಿಲ್ಲವೆಂಬ ಭಾವನೆ ನನ್ನಲ್ಲಿದೆ. ಅದೂ ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶ, ಗಡಿಭಾಗದ ರಾಯಚೂರು ಜಿಲ್ಲೆಯಲ್ಲಿ ಕೆಲಸ ಮಾಡಿರುವ ನಮ್ಮಂಥವರು ನಿರ್ಲಕ್ಷಿಸಲ್ಪಟ್ಟಿದ್ದೇವೆ. ಆದರೂ ನನ್ನ ಸುದೈವ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಇಂತಹ ಒಂದು ಅಭಿನಂದನೆಯನ್ನು ಪಡೆಯುವ ಭಾಗ್ಯ ನನ್ನದಾಗಿದೆ.

ಬೆಂಗಳೂರಿಗೆ ಬಂದು ಸಾರಕ್ಕಿಯಲ್ಲಿ ನೆಲೆಸಿದ ಅನಂತರ ಪರಿಚಯವಾದವರು ಸಿ.ಆರ್. ಜನಾರ್ದನರವರು. ಹೆಚ್ಚಾಗಿ ಸಾಹಿತ್ಯದ ಕೃತಿಗಳನ್ನು ಮುದ್ರಣ ಮಾಡುವ ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್ ಬಗ್ಗೆ ಗೊತ್ತಿದ್ದರಿಂದ ಬೋರ್ಡ್ ನೋಡಿದೊಡನೆ ಮುದ್ರಣಾಲಯದ ಒಳಗೆ ಹೋಗಿ ಜನಾರ್ದನ ಅವರನ್ನು ಪರಿಚಯಮಾಡಿಕೊಂಡೆ. ಕರ್ನಾಟಕ ಮುದ್ರಣಕಾರರ ಸಂಘ, ರಾಜ್ಯದ ಪ್ರತಿಷ್ಠಿತ ಕರ್ನಾಟಕ ಸಣ್ಣ ಕೈಗಾರಿಕಾಸಂಘದ ಅಧ್ಯಕ್ಷರಾಗಿ ಕೆಲಸ ಮಾಡಿರುವಂತಹವರು, ಸಾಹಿತ್ಯಾಸಕ್ತರಾಗಿದ್ದರಿಂದ ಆತ್ಮೀಯತೆ ಬೆಳೆಯಿತು. ಜನಾರ್ದನ ಅವರ ನಿಕಟ ಗೆಳೆಯರು ಲಕ್ಷ್ಮೀ ಮುದ್ರಣಾಲಯದ ಅಶೋಕ್‌ಕುಮಾರ್‌ರವರು. 'ಬಿಸಿಲ ಹನಿಗಳು' ಕಥಾಸಂಕಲನ, 'ನವರಂಗ' ನೆನಪಿನ ಸಂಚಿಕೆ, 'ವೈಶ್ಯವಾರ್ತಾ' ಪತ್ರಿಕೆಯ ಪ್ರಥಮ ಸಂಚಿಕೆ ಲಕ್ಷ್ಮೀ ಮುದ್ರಣಾಲಯದಲ್ಲಿ ಮಾಡಿಸಿದ್ದರಿಂದ ಅಶೋಕ್‌ಕುಮಾರ್‌ರವರ ಪರಿಚಯವಿತ್ತು. ನಾಡಿನ ಖ್ಯಾತ ಲೇಖಕರ ಪುಸ್ತಕಗಳು ಮುದ್ರಣಗೊಳ್ಳುವ, ಸಾಹಿತಿಗಳೊಂದಿಗೆ

ನಿಕಟ ಬಾಂಧವ್ಯ ಹೊಂದಿರುವ ಕರ್ನಾಟಕ ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷರಾಗಿರುವ ಅಶೋಕ್‌ಕುಮಾರ್‌ರವರು ಜನಾರ್ದನ ಅವರೊಂದಿಗೆ ಕೈ ಜೋಡಿಸಿದ್ದರಿಂದ ಅಭಿನಂದನಾ ಸಮಾರಂಭ ನಡೆಯಿತು. ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ, ನಿಮ್ಮ ವೈಶ್ಯ ವಾರ್ತೆ ಪತ್ರಿಕೆ ಸಂಪಾದಕ ಮಿತ್ರ ಕೆ.ಎಲ್. ನಟರಾಜ್ ಮತ್ತು ಅಭಿನಂದನಾ ಗ್ರಂಥ ಸಂಪಾದಿಸಿಕೊಡುವ ಹೊಣೆ ಹೊತ್ತಿರುವ ಲೇಖಕ, ಕನ್ನಡದ ಕೋಶವೆಂದು ಅಭಿಮಾನದಿಂದ ಕರೆಯಲ್ಪಡುವ, ಒಳ್ಳೆಯ ವಾಗ್ಮಿ ಆತ್ಮೀಯ ಮಿತ್ರ ಕೆ. ರಾಜಕುಮಾರ್ ಅವರು ತೋರಿದ ಅಭಿಮಾನ ಮರೆಯಲಾರೆ.

ಹುಟ್ಟಿದ್ದು ತಾಯಿ ತವರೂರು ನದಿಚ್ಯಾಗಿ (ಆಂಧ್ರಪ್ರದೇಶ ಗಡಿ ಭಾಗ ಆದೋನಿ ತಾಲ್ಲೂಕು)ಯಲ್ಲಿ ಶ್ರೀ ನಂದನನಾಮ ಸಂವತ್ಸರ ಆಶ್ವಯುಜ ಮಾಸ ಕೃಷ್ಣಪಕ್ಷ ಸಪ್ತಮಿ, ಶುಕ್ರವಾರ (10.10.1952)ದಂದು. ಬಾಲ್ಯ ಸ್ವಂತ ಊರು ಉಮಳಿ ಹೊಸೂರು (ಮಾನ್ವಿ ತಾಲ್ಲೂಕು, ರಾಯಚೂರು ಜಿಲ್ಲೆ)ನಲ್ಲಿ ಕಳೆಯಿತು, ಪ್ರಾಥಮಿಕ ಶಿಕ್ಷಣ ಒಂದರಿಂದ ನಾಲ್ಕನೆಯ ತರಗತಿಯವರೆಗೆ ನದಿಚ್ಯಾಗಿಯಲ್ಲಿ, ಐದರಿಂದ ಏಳನೆಯ ತರಗತಿಯವರೆಗೆ (1962-65) ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ಹಚ್ಚೊಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ (ವೀರಶೈವ ಹಾಸ್ಟೆಲ್), ಪ್ರೌಢ ಶಿಕ್ಷಣ (1965-68) ರಾಯಚೂರು ನಗರದ ಹಮದರ್ದ್ ಪ್ರೌಢಶಾಲೆಯಲ್ಲಿ ಬಿ.ಕಾಂ. ಪದವಿ (1968-1972) ಬಿ.ಆರ್.ಬಿ. ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆಯಿತು.

ತಂದೆ ಹೊಸೂರು ರಾಮಸ್ವಾಮಿ, ಸಾಕಷ್ಟು ಶ್ರೀಮಂತರಾಗಿದ್ದರೂ ರಂಗಭೂಮಿಯ ಸೆಳೆತದಿಂದಾಗಿ ನಾಟಕ ತಂಡ ಕಟ್ಟಿದ್ದಲ್ಲದೇ, ನಾಟಕಗಳಲ್ಲಿ ಅಭಿನಯಿಸುತ್ತ ನಷ್ಟ ಅನುಭವಿಸಿ, ನಾನು ಪ್ರೌಢಾವಸ್ಥೆಗೆ ಬರುವಷ್ಟರಲ್ಲಿಯೇ ಇದ್ದ ಆಸ್ತಿಯನ್ನೆಲ್ಲಾ ಮಾರಾಟ ಮಾಡುತ್ತ ಜೀವನ ಮಾಡುತ್ತಿದ್ದರಿಂದ ಬಡತನಕ್ಕೆ ಕಾಲಿಟ್ಟೆವು. ನಮ್ಮ ತಂದೆಯ ನಾಟಕದ ಪ್ರೀತಿ ಬಗ್ಗೆ ನಮ್ಮ ತಾತನಿಗೆ ಗೊತ್ತಿದ್ದರಿಂದ ಇವರ ಹೆಸರಿನಲ್ಲಿ ನೂರಾರು ಎಕರೆ ಭೂಮಿ ಮಾಡಿದ್ದರು. ನಮ್ಮ ತಂದೆ ಯಾವುದೇ ವೃತ್ತಿ ಕೈಗೊಂಡರೂ (ಹೋಟೆಲ್, ಕಿರಾಣಿ ವ್ಯಾಪಾರ) ನಾಟಕದ ಆಸಕ್ತಿಯಿಂದ ವ್ಯಾಪಾರದ ಕಡೆ ಗಮನ ಕೊಡದೇ ನಷ್ಟ ಅನುಭವಿಸುತ್ತಿದ್ದರು. ನಾಟಕ ಕಂಪನಿಗಳಿಗೆ ಸಾಲ ಕೊಟ್ಟು, ವಸೂಲಾಗದೇ ತೊಂದರೆ ಅನುಭವಿಸಿದ್ದುಂಟು. ಕಿರಾಣಿ ಅಂಗಡಿಯಲ್ಲಿ ಕೂಡ ನಾಟಕ ಕಂಪನಿಗಳಿಗೆ ಉದರಿ ಕೊಟ್ಟು ಸಾಲ ಮಾಡಿಕೊಳ್ಳುತ್ತಿದ್ದರು.

ಬಾಲ್ಯದಲ್ಲಿ ನನ್ನ ಮೇಲೆ ಅಪ್ಪನ ಗಾಳಿ ಬೀಸಿತು. ರಂಗಾಸಕ್ತಿ ಬೆಳೆಸಿಕೊಂಡು ಸಣ್ಣ ವಯಸ್ಸಿನಲ್ಲಿ ಹಳ್ಳಿಗಳಲ್ಲಿ ಎಲ್ಲೆಲ್ಲಿ ನಾಟಕ ನಡೆಯುತ್ತಿವೆಯೋ ಅಲ್ಲಿಗೆ ಹೋಗಿ ನಾಟಕ ತಾಲೀಮು ಹಾಗೂ ನಾಟಕ ಪ್ರದರ್ಶನ ನೋಡಿಕೊಂಡು ಬರುವ ಹವ್ಯಾಸ ಕಂಡು ನನ್ನ ತಾಯಿಯ ತವರು ಮನೆಯವರು (ಅಜ್ಜಿ) ಈ ಹುಡುಗನೂ ಅಪ್ಪನಂತೆ ಹಾಳಾಗುತ್ತಾನೆಂದು ಹಿಡಿದುಕೊಂಡು ಹೋಗಿ ತಮ್ಮ ಊರಿನಲ್ಲಿ ಶಾಲೆಗೆ ಸೇರಿಸಿದರು. ಪ್ರೌಢಶಾಲೆಯಲ್ಲಿ ಅಭ್ಯಾಸ

ಮಾಡುತ್ತಿರುವಾಗಲೇ ಅನೇಕ ನಾಟಕಗಳಲ್ಲಿ ಪಾತ್ರ ವಹಿಸಿದ್ದುಂಟು. ಆದರೂ ಬಾಲ್ಯದಲ್ಲಿಯೇ ತಂದೆಯ ಸಂಸ್ಕಾರ ನನ್ನ ಮೇಲೆ ಸಾಕಷ್ಟು ಪರಿಣಾಮ ಬೀರಿ, ಸಾಂಸ್ಕೃತಿಕ ವಾತಾವರಣದಲ್ಲಿ ಬೆಳೆದ ನಾನು ಓದಿನಲ್ಲಿ ಬುದ್ಧಿವಂತನಾಗಿದ್ದರೂ ಅಭ್ಯಾಸದ ಕಡೆ ಹೆಚ್ಚು ಒತ್ತು ನೀಡದ್ದರಿಂದ ಬಿ.ಕಾಂ.ವರೆಗೆ ಓದಿ, ಸಾಮಾನ್ಯ ದರ್ಜೆಯಲ್ಲಿ 1972ರಲ್ಲಿ ಪಾಸಾದೆ, ಆರ್ಥಿಕ ತೊಂದರೆ ಇದ್ದುದರಿಂದ, ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ 1972-77ರವರೆಗೆ ನೌಕರಿ ಮಾಡಿದ್ದು ಅನಂತರ 1977ರಲ್ಲಿ ರಾಯಚೂರಿನ ಟ್ಯಾಗೋರ್ ಸ್ಮಾರಕ ಪದವಿಪೂರ್ವ ಕಾಲೇಜಿನಲ್ಲಿ ಕ್ಲರ್ಕ್ ಕಂಟೈಪಿಸ್ಟ್ ಎಂದು ಸೇರಿಕೊಂಡಿದ್ದರಿಂದ ಜೀವನಕ್ಕೆ ದಾರಿಯಾಯಿತು. ಆ ಸಣ್ಣ ನೌಕರಿಯಲ್ಲಿಯೇ ತಂದೆ-ತಾಯಿ, ತಮ್ಮ-ತಂಗಿಯ ಜವಾಬ್ದಾರಿ ಮತ್ತು ಹೆಂಡತಿ ಹಾಗೂ ಮೂವರು ಮಕ್ಕಳ ಸಂಸಾರದ ಹೊಣೆ ಹೊತ್ತು ಸಾಗಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸಲು ನೌಕರಿ ಜೊತೆಗೆ ಎರಡು ಮೂರು ಕಡೆ ಲೆಕ್ಕ ಬರೆಯಲು ಪಾರ್ಟ್‌ಟೈಮ್ ಕೆಲಸ ಮಾಡಿದ್ದೂ ಉಂಟು.

ಜೀವನ ಕಷ್ಟದಲ್ಲಿದ್ದರೂ ಸ್ವಾತಂತ್ರ್ಯ ಹೋರಾಟಗಾರ, ಕನ್ನಡಾಭಿಮಾನಿ ಡಾ॥ ಎಸ್. ರಾಮಕೃಷ್ಣ ಪ್ರೌಢಶಾಲೆಯಲ್ಲಿ ಕನ್ನಡ ಕಲಿಸಿದ ಗುರುಗಳಾದ ನಾಡಿನ ಹಿರಿಯ ಸಾಹಿತಿ ಶಾಂತರಸ, ಡಾ॥ ಚನ್ನಣ್ಣ ವಾಲೀಕಾರ ಮುಂತಾದವರ ಪ್ರಭಾವದಿಂದ ವಿದ್ಯಾರ್ಥಿ ಜೀವನದಲ್ಲಿಯೇ, ಸಾಹಿತ್ಯದ ಒಲವು ಬೆಳೆಸಿಕೊಂಡು ಮಹಾಜನ ವರದಿ ಜಾರಿಗಾಗಿ ಹೋರಾಟದಲ್ಲಿ ಭಾಗವಹಿಸಿದ್ದು ನೆನಪಿದೆ. ಬಿ.ಕಾಂ. ಓದುತ್ತಿದ್ದಾಗಲೇ 1971ರಲ್ಲಿ ನನ್ನ ವಯಸ್ಸಿನ 40 ಗೆಳೆಯರ ತಂಡ ಕಟ್ಟಿ ಕನ್ನಡ ಬಳಗ ಸ್ಥಾಪಿಸಿ, ಅದರ ಸ್ಥಾಪಕ ಕಾರ್ಯದರ್ಶಿಯಾಗಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜರನ್ನು ರಾಯಚೂರಿಗೆ ಕರೆಯಿಸಿ, ಮೆರವಣಿಗೆ ಮಾಡಿ ಭಾರೀ ಬಹಿರಂಗ ಸಭೆ ನಡೆಸಿದ್ದು ಇನ್ನೂ ನೆನಪಿದೆ. ಕನ್ನಡ ಚಲನಚಿತ್ರ ನಟರಾದ ರಾಜೇಶ್, ಶ್ರೀಲಲಿತಾ, ಬಿ.ವಿ. ರಾಧಾ, ಸುದರ್ಶನ್, ಶೈಲಶ್ರೀ, ದಿನೇಶ್, ಶಕ್ತಿಪ್ರಸಾದ್, ಧೀರೇಂದ್ರ ಗೋಪಾಲ್ ಮುಂತಾದವರನ್ನು ರಾಯಚೂರಿಗೆ ಕರೆದುಕೊಂಡು ಬಂದು, ಪ್ರತಿವರ್ಷ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದ್ದೇವೆ. ರಾಯಚೂರಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡುವುದನ್ನು ಜಾರಿಗೆ ತಂದ ಕೀರ್ತಿ ಕನ್ನಡ ಬಳಗಕ್ಕೆ ಸಲ್ಲುತ್ತಿದೆ.

ಪ್ರತಿ ವರ್ಷ ನೂರಾರು ಶಾಲಾ ಮಕ್ಕಳನ್ನು ಸೇರಿಸಿ, ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿ, ಬಹುಮಾನಗಳನ್ನು ಕೊಟ್ಟು ಪುರಸ್ಕರಿಸಲಾಗುತ್ತಿತ್ತು. ಕಾದಂಬರಿಕಾರ ಮ.ನ. ಮೂರ್ತಿ ಯವರನ್ನು ಕರೆಯಿಸಿ, ವಿಜಯನಗರದ ಇತಿಹಾಸ ಕುರಿತು ಭಾಷಣ ಏರ್ಪಡಿಸಿದ್ದೆವು. ರಾಯಚೂರಿನಲ್ಲಿ ಕನ್ನಡ ಚಿತ್ರಗಳ ಪ್ರದರ್ಶನಕ್ಕಾಗಿ ಹೋರಾಟ ಮಾಡಿದ್ದಲ್ಲದೇ ಪ್ರತಿಯೊಂದು ಚಿತ್ರಮಂದಿರದಲ್ಲಿ ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಕನ್ನಡ ಚಿತ್ರ ಪ್ರದರ್ಶನವಾಗುವಂತೆ ನೋಡಿಕೊಳ್ಳುತ್ತಿದ್ದೆವು. ನಮ್ಮ ಹೋರಾಟದ ಫಲವಾಗಿ ರಾಜ್ಯೋತ್ಸವದ ಸಮಯದಲ್ಲಿ ಇಡೀ ವಾರ ಎಲ್ಲಾ ಚಿತ್ರಮಂದಿರಗಳಲ್ಲಿ ಕನ್ನಡ ಚಿತ್ರ ಪ್ರದರ್ಶನ ನಡೆಯುತ್ತಿತ್ತು. ಯಾವುದೇ

ಚಿತ್ರಮಂದಿರದಲ್ಲಿ ಕನ್ನಡ ಚಿತ್ರ ಪ್ರದರ್ಶನಗೊಂಡರೆ ಮೊದಲ ದಿನ ಎರಡನೆಯ ಆಟಕ್ಕೆ ಗೆಳೆಯರೆಲ್ಲ ಕೂಡಿ ನೋಡಲು ಹೋಗುವ ಅಭ್ಯಾಸ ಬೆಳೆಸಿಕೊಂಡಿದ್ದೆವು. ನಾವು ಸಿನಿಮಾ ನೋಡಲು ಬಂದೇ ಬರುತ್ತೇವೆಂದು ಚಿತ್ರಮಂದಿರದವರು ಕೂಡ ಟಿಕೇಟು ತೆಗೆದಿಡುತ್ತಿದ್ದರು. ಶ್ರೀ ಕೃಷ್ಣದೇವರಾಯ, ಸಂಪತ್ತಿಗೆ ಸವಾಲ್, ಮಯೂರ ಚಿತ್ರಗಳು ರಾಯಚೂರಿನಲ್ಲಿ 50 ದಿನಗಳ ಪ್ರದರ್ಶನ ಕಂಡಿದ್ದು ನಮ್ಮ ಹೋರಾಟದ ಫಲದಿಂದ. ಈ ಸಮಯದಲ್ಲಿ ನಾರದಗಡ್ಡೆ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ನಾರದಗಡ್ಡೆ ಚೆನ್ನಬಸವ ಸ್ವಾಮಿಗಳ ಕೃಪಾಶೀರ್ವಾದ ಮತ್ತು ಬೆಂಬಲ ನಮ್ಮ ಮೇಲಿತ್ತು. ಕನ್ನಡ ಬಳಗದಿಂದ ಶ್ರೀ ನಾ.ಚೆ. ಅವರ ವಚನ ಸಂಕಲನ ಹಾಗೂ ಯೂನಿಯನ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದ ಪ್ರೇಮವಾಣಿಯವರ ಕವನ ಸಂಕಲನ ಪ್ರಕಟಿಸಿದ್ದಲ್ಲದೇ ಕನ್ನಡ ಬಳಗದ ಐದನೆಯ ವಾರ್ಷಿಕೋತ್ಸವದ ಸಮಯದಲ್ಲಿ ಸ್ಮರಣ ಸಂಚಿಕೆ ಹೊರತಂದು, ಆಗ ಮುಂಬೈನಲ್ಲಿದ್ದ ತರಂಗ ಪತ್ರಿಕೆಯ ಸಂಪಾದಕ ಸಂತೋಷಕುಮಾರ ಗುಲ್ವಾಡಿಯವರನ್ನು ರಾಯಚೂರಿಗೆ ಕರೆಯಿಸಿ ವಾರ್ಷಿಕೋತ್ಸವ ಆಚರಿಸಲಾಯಿತು.

1971ರಲ್ಲಿ ರಾಯಚೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ನಡೆದ ರಾಯಚೂರು ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿದ್ಯಾರ್ಥಿಯಾಗಿದ್ದರೂ ಸ್ವಯಂಸೇವಕ ಸಮಿತಿ ಅಧ್ಯಕ್ಷನಾಗಿ ಗೆಳೆಯರನ್ನೆಲ್ಲಾ ಕೂಡಿಸಿಕೊಂಡು ಎರಡು ದಿನಗಳ ಕಾಲ ಸೇವೆ ಸಲ್ಲಿಸಿದ್ದಲ್ಲದೇ ಸಮ್ಮೇಳನಕ್ಕೆ ಆಗಮಿಸಿದ ಸಾಹಿತಿಗಳಾದ ದೇ.ಜ.ಗೌ., ಸಿದ್ದಯ್ಯ ಪುರಾಣಿಕ ಮುಂತಾದವರಿಂದ ಸೈ ಎನಿಸಿಕೊಂಡಿದ್ದುಂಟು.

1972ರಲ್ಲಿ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ 50ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಯುವ ನಾಯಕನಾಗಿ ರಾಯಚೂರಿನಿಂದ 30 ಜನ ಯುವಕರನ್ನು ಪ್ರತಿನಿಧಿಗಳಾಗಿ ಕರೆದುಕೊಂಡು ಹೋಗಿ, ಸಮ್ಮೇಳನದಲ್ಲಿ ಭಾಗವಹಿಸಿದ್ದು ಮಾಸಲಾರದ ನೆನಪು.

ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹಳೆಯ ಮೂರು ಕನ್ನಡ ಸಂಘಗಳಲ್ಲಿ ಒಂದಾದ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ 1975ರಲ್ಲಿ ನೇಮಕಗೊಂಡು ಸುಮಾರು 15 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ಒಂಬತ್ತು ದಿನಗಳ ಕಾಲ ನಾಡಹಬ್ಬವನ್ನು ರಾಯಚೂರು ವಾಣಿ ಸಂಪಾದಕರು ಮತ್ತು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಎನ್.ಕೆ. ಕುಲಕರ್ಣಿ ಅವರ ನೇತೃತ್ವದಲ್ಲಿ ಲೇಖಕ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ ಆನಂದರಾಮ ಶಾಸ್ತ್ರಿ ಜೊತೆಯಲ್ಲಿ ಅದ್ದೂರಿಯಾಗಿ ಆಚರಿಸಿದ್ದು, ಚಲನಚಿತ್ರ ಕಲಾವಿದ, ಬೀದಿ ನಾಟಕಗಳಲ್ಲಿ ಪ್ರಸಿದ್ಧರಾದ ಎ.ಎಸ್. ಮೂರ್ತಿಯವರ ತಂಡವನ್ನು ರಾಯಚೂರಿಗೆ ಕರೆಯಿಸಿ ಹಲವಾರು ಕಡೆ ಬೀದಿ ನಾಟಕ ಏರ್ಪಡಿಸಿದ್ದು, ಮೂರು ದಿನಗಳ ಕಾಲ ಕರ್ನಾಟಕ ರಾಜ್ಯದ ಬೆಳ್ಳಿಹಬ್ಬ ಕಾರ್ಯಕ್ರಮಗಳು ನಡೆಸಿದ್ದು, ಆ ಸಮಯದಲ್ಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಗೆ ಎರಡು ಬಾರಿ ಚುನಾವಣೆಗಳು ನಡೆದಿದ್ದು (ಚುನಾವಣೆಗಳು ನಡೆದದ್ದು ಮೊದಲು ಹಾಗು ಕೊನೆ), ಚುನಾವಣೆಯಲ್ಲಿ ಅಧಿಕ ಮತಗಳಿಸಿ ಆಯ್ಕೆಯಾಗಿದ್ದು ಮತ್ತು ನಾನಿದ್ದ ತಂಡವೇ ಗೆದ್ದಿದ್ದು ನನ್ನ ಕೆಲಸಕ್ಕೆ ಪ್ರೋತ್ಸಾಹ ದೊರೆತಂತಾಯಿತು.

ಕನ್ನಡ ಶಕ್ತಿ ಕೇಂದ್ರದ ಜಿಲ್ಲಾಧ್ಯಕ್ಷರಾಗಿದ್ದ ಶಾಂತರಸರು ನನ್ನನ್ನು ಅದರ ಕಾರ್ಯದರ್ಶಿಯಾಗಿ ನೇಮಿಸಿದ್ದು ಅನೇಕ ಕನ್ನಡಪರ ಹೋರಾಟಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿತು. 1983ರಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ನಗರಸಭೆ ಅಧ್ಯಕ್ಷರಾಗಿದ್ದ ಆರ್. ಆಂಜನೇಯಲುರವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ನೇಮಕಗೊಂಡ ಅನಂತರ ನನಗೆ ಕಾರ್ಯದರ್ಶಿ ಸ್ಥಾನದ ಜವಾಬ್ದಾರಿ ವಹಿಸಿಕೊಟ್ಟರು. ಅವರ ಅವಧಿಯಲ್ಲಿ ರಾಯಚೂರಿನಲ್ಲಿ ಒಂಬತ್ತು ದಿನಗಳ ಕಾಲ ನಡೆದ ಕಾವ್ಯ ಕಮ್ಮಟ, ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆ ಅತಿದೊಡ್ಡ ಕಾರ್ಯಕ್ರಮಗಳು.

1991ರ ನವೆಂಬರ್‌ನಲ್ಲಿ ಆರ್. ಆಂಜನೇಯಲು ನಿಧನರಾದಾಗ ಅದೇ ಡಿಸೆಂಬರ್‌ನಲ್ಲಿ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ನೇಮಕಗೊಂಡೆ. ಇದಕ್ಕೆ ಕಾರಣ ಆಗ ಜಿಲ್ಲಾ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾಗಿದ್ದ ಪಂಪಾಪತಿ ಸ್ವಾಮಿ, ಕಾರ್ಯದರ್ಶಿ ರಾಮಣ್ಣ ಹವಳೆ, ಬಿ. ಶೇಖರಪ್ಪ ಹೂಲಿಗೇರಿ ಕರ್ನಾಟಕ ಸಂಘದ ಕೋಶಾಧ್ಯಕ್ಷ ಗದ್ವಾಲ್ ನರಸಣ್ಣ ಹಾಗು ಮಿತ್ರರು. ನಾನು ಅಧ್ಯಕ್ಷನಾಗಿ ನೇಮಕಗೊಂಡಾಗ ನನಗಿಂತ ಹಿರಿಯರಾಗಿದ್ದ ಮತ್ತು ಒಳ್ಳೆಯ ಸ್ಥಾನದಲ್ಲಿದ್ದ ರಾಮಣ್ಣ ಹವಳೆ ಮತ್ತು ಕೆ.ಎಂ. ಪುರದರವರು ಕಾರ್ಯದರ್ಶಿಗಳಾಗಲು ಹಾಗೂ ಬಿ. ಶೇಖರಪ್ಪ ಹೂಲಿಗೇರಿ ಕೋಶಾಧ್ಯಕ್ಷರಾಗಲು ಒಪ್ಪಿಕೊಂಡು ಸಹಕಾರ ನೀಡಿದ್ದು ಅವರ ದೊಡ್ಡಸ್ತಿಕೆ. ಅಧ್ಯಕ್ಷನಾದ ಒಂದು ತಿಂಗಳಲ್ಲೇ 22 ವರ್ಷಗಳ ಅನಂತರ ರಾಯಚೂರಿನಲ್ಲಿ ಎರಡನೆಯ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ನಡೆಯಲು ಅವರ ಬೆಂಬಲವೇ ಕಾರಣ. ಆಗ ನಗರಸಭೆ ಅಧ್ಯಕ್ಷರಾಗಿದ್ದ ಎ. ಪಾಪಾರೆಡ್ಡಿಯವರು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಹಣಕಾಸು ಕೂಡಿಸಲು ನೆರವಾಗಿ ಸಮ್ಮೇಳನ ಯಶಸ್ವಿಯಾಗಲು ಕಾರಣರಾದರು.

ರಾಯಚೂರು ಜಿಲ್ಲಾ ಎರಡನೆಯ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲು ರಾಯಚೂರು ಜಿಲ್ಲೆಯ ಸಾಹಿತಿಗಳು, ಪತ್ರಕರ್ತರು, ಅಭಿಮಾನಿಗಳು, ಒಮ್ಮನಸ್ಸಿನಿಂದ ಕೈಜೋಡಿಸಿದರು. ಬಹಳ ವರ್ಷಗಳ ನಂತರ ನಡೆದ ಸಮ್ಮೇಳನವಾಗಿದ್ದರಿಂದ ಅದು ನಡೆದ ಕರ್ನಾಟಕ ಸಂಘ ತುಂಬಿ ತುಳುಕಿತು, ಹೊಸ ಗಾಳಿ ಬೀಸಿತು. ನನ್ನ ನಿರ್ಧಾರಕ್ಕೆ ಎಲ್ಲರ ಬೆಂಬಲ ದೊರೆಯಿತು.

1971ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕ ಪ್ರಾರಂಭವಾದರೂ, 1992ರವರೆಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ನಡೆಯದೆ ಅವಿರೋಧ ಆಯ್ಕೆಯಾಗುತ್ತಿತ್ತು. 1992ರಲ್ಲಿ ನಾನು ಉಮೇದುವಾರನಾದಾಗ ಪ್ರಥಮ ಬಾರಿಗೆ ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಕುಕನೂರಿನ ಕೆ.ಬಿ. ಬ್ಯಾಳಿಯವರು ಸ್ಪರ್ಧಿಸಿದರೂ, ಜಿಲ್ಲಾ ಕೇಂದ್ರದಲ್ಲಿದ್ದ ಹಾಗೂ 22 ವರ್ಷಗಳ ಅನಂತರ ಎರಡನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನ ಮಾಡಿದ್ದ ನನಗೆ ಗೆಲುವು ದೊರೆಯಿತು. 37 ವರ್ಷಗಳ ಅನಂತರ 1993ರಲ್ಲಿ ರಾಯಚೂರು ಜಿಲ್ಲೆಯಲ್ಲಿ (ಕೊಪ್ಪಳದಲ್ಲಿ)

ಅಖಿಲ ಭಾರತ 62ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸುವ ಭಾಗ್ಯ ದೊರೆತದ್ದು ಹೆಮ್ಮೆಯ ವಿಷಯ. ಕೊಪ್ಪಳದಂತಹ ತಾಲ್ಲೂಕು ಕೇಂದ್ರದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಮಾಡಿದ್ದು ಸಾಹಸಕಾರ್ಯ. ಸ್ವಾಗತಸಮಿತಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ದಿವಟರ, ಕಾರ್ಯದರ್ಶಿಗಳಾದ ಎಚ್.ಎಸ್. ಪಾಟೀಲ್ ಗವಿಸಿದ್ದ ಬಳ್ಳಾರಿ, ತಾ.ಕ.ಸಾ.ಪ. ಅಧ್ಯಕ್ಷ ಮಹಂತೇಶ ಮಲ್ಲನಗೌಡರ ಸಹಕಾರ ಮರೆಯಲಾರೆ.

ಜಿಲ್ಲೆಯಲ್ಲಿ ಕಾರ್ಯಕ್ರಮಗಳ ಮೂಲಕ ಸಾಹಿತ್ಯ ಪರಿಷತ್ತಿಗೆ ಹೆಸರು ತಂದುಕೊಟ್ಟ ನನಗೆ 1995ರ ಜಿಲ್ಲಾ ಅಧ್ಯಕ್ಷ ಸ್ಥಾನದ ಚುನಾವಣೆ ಮರೆಯಲಾಗದ ಅನುಭವ ತಂದಿತು. ಆಗ ನನ್ನ ವಿರುದ್ಧ ಹೆಸರಾಂತ ಶಿಕ್ಷಕ, ಸುದ್ದಿಮೂಲ ದಿನಪತ್ರಿಕೆಯ ಬಳಗದಲ್ಲಿ ಒಬ್ಬರೂ, ರಾಜಕಾರಣಿಗಳಿಗೆ ಹತ್ತಿರದವರೂ, ಪ್ರಬಲ ಕೋಮಿನವರೂ ಆದ ಬಿ. ಶೇಖರಪ್ಪ ಹೂಲಿಗೇರಿ ಅವರು ಸ್ಪರ್ಧಿಸಿದರು. ಹೆಚ್ಚು ಕಡಿಮೆ ಜಿಲ್ಲೆಯ ಶೇ. 80ರಷ್ಟು ಮತದಾರರು ಬಿ. ಶೇಖರಪ್ಪ ಅವರಿಗೆ ಬೆಂಬಲ ವ್ಯಕತಿಪಡಿಸಿದರು. ಹೆಸರಾಂತ ವ್ಯಕ್ತಿಗಳೆಲ್ಲ ಅವರ ಜೊತೆಯಲ್ಲಿದ್ದರು. ಚುನಾವಣೆಯ ದಿನ ಮತ ನೀಡಲು ಬಂದವರಲ್ಲಿ ಹೆಚ್ಚಿನವರು ನನ್ನ ಹತ್ತಿರ ಸುಳಿಯಲಿಲ್ಲ. ಪಂಪಯ್ಯ ಶೆಟ್ಟಿಯ ಸೋಲು ಶತಸಿದ್ಧವೆಂದು ಮಾತನಾಡುತ್ತಿದ್ದರು. ಆದರೆ ನನ್ನ ಗುರುಗಳು, ಹೆಸರಾಂತ ಲೇಖಕರು ಅದೇ ತಾನೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕಗೊಂಡು ಅಧಿಕಾರ ಸ್ವೀಕರಿಸಿದ್ದ ಶಾಂತರಸರು ನನ್ನನ್ನು ಬೆಂಬಲಿಸಿ ಮತದಾರರ ಮನೆಮನೆಗೆ ಹೋಗಿ ನನ್ನ ಪರವಾಗಿ ಮಾತನಾಡಿದ್ದು ಸದ್ದಿಲ್ಲದೆ ಕೆಲಸ ಮಾಡಿತ್ತು. ಮತ ಎಣಿಕೆಯಾದಾಗ ಜಯ ನನಗೆ ದೊರಕಿದ್ದು ಆಶ್ಚರ್ಯ ಹಾಗು ವಿಸ್ಮಯ ತಂದಿತ್ತು. ನನ್ನ ಸುದೈವವೋ, ಜಯದ ಪ್ರಭಾವವೋ ಸಿಂಧನೂರಿನ ಶಾಸಕ ಬಾದರ್ಲಿ ಹಂಪನಗೌಡರನ್ನು ಭೇಟಿ ಮಾಡಿ ಜಿಲ್ಲಾ ಸಾಹಿತ್ಯ ಸಮ್ಮೇಳನ ಮಾಡಿಕೊಡಲು ಕೋರಿದಾಗ ಯೋಚಿಸದೇ ಒಪ್ಪಿ ಅದ್ದೂರಿಯಾಗಿ ರಾಯಚೂರು ಜಿಲ್ಲಾ ಮೂರನೆಯ ಸಾಹಿತ್ಯ ಸಮ್ಮೇಳನ ನಡೆಸಿಕೊಟ್ಟರು. ಆಗ ಜಿಲ್ಲಾಧಿಕಾರಿಗಳಾಗಿದ್ದ ಐ.ಆರ್. ಪೆರುಮಾಳರಿಗೆ ಜಿಲ್ಲಾ ಸಾಹಿತ್ಯ ಸಮ್ಮೇಳನ ನೋಡಿ ಸ್ವತಃ ಕವಿಗಳಾದ ಅವರಿಗೆ ನನ್ನ ಮೇಲೆ ಅತ್ಯಂತ ಗೌರವ ಭಾವನೆ ಮೂಡಿ ಹತ್ತಿರದವರಾಗಿ ಹೆಚ್ಚಿನ ಬೆಂಬಲ ಕೊಟ್ಟರು. ಅನಂತರ ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿಯಾಗಿ ಪೆರುಮಾಳರು ಸಾಹಿತ್ಯ ಪರಿಷತ್ತಿಗೆ ಒಂದು ಲಕ್ಷ ರೂಪಾಯಿಗಳು ಅನುದಾನ ನೀಡಿದರು. ಆಗ ಜಿಲ್ಲಾ ಉತ್ಸವದ ಸಿದ್ಧತೆ ನಡೆದಿತ್ತು. ನನಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ವೇದಿಕೆ ಹಾಗು ಪುಸ್ತಕ ಪ್ರದರ್ಶನ ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದರು. ಖ್ಯಾತ ಕಥೆಗಾರ ಅಮರೇಶ ನುಗಡೋಣಿ ಅವರು ಹೈದರಾಬಾದ್ ಕರ್ನಾಟಕದ ಪ್ರಾತಿನಿಧಿಕ ಬೃಹತ್ ಕಥಾ ಸಂಕಲನ ಸಂಪಾದಿಸಿಕೊಟ್ಟರು. ರೂ. 45 ಸಾವಿರ ವೆಚ್ಚದಲ್ಲಿ 'ಬಿಸಿಲ ಹನಿಗಳು' ಪರಿಷತ್ತಿನಿಂದ ಪ್ರಕಟಣೆ ಮಾಡಿದ್ದು ನನಗೆ ಹೆಚ್ಚಿನ ಗೌರವ ತಂದುಕೊಟ್ಟಿತು.

1997ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬ ಅರ್ಥಪೂರ್ಣವಾಗಿ

ಆಚರಿಸಲು ನಿರ್ಧರಿಸಿ ಒಂಬತ್ತು ದಿನಗಳ ಕಾಲ ಜಿಲ್ಲೆಯ ಒಂಬತ್ತು ತಾಲ್ಲೂಕುಗಳಲ್ಲಿ ಪ್ರತಿದಿನ ನಾಲ್ಕು ಗ್ರಾಮಗಳಂತೆ ಒಂದು ವ್ಯಾನ್ ಮಾಡಿಕೊಂಡು ಭಾಷಣಕಾರರು, ಹಾಡುಗಾರರು, ಸ್ವಯಂ ಸೇವಕರನ್ನು ಕೂಡಿಸಿಕೊಂಡು ಪುಸ್ತಕ ರಾಶಿ ಹಾಕಿಕೊಂಡು ಮಾರಾಟಮಾಡುತ್ತಾ 36 ಕೇಂದ್ರಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಪ್ರತಿಯೊಂದು ಕೇಂದ್ರದಲ್ಲಿ ಇದಕ್ಕೆ ಸಿಕ್ಕ ಅದ್ದೂರಿ ಸ್ವಾಗತ, ಔತಣ - ಜಿಲ್ಲೆಯಲ್ಲಿ ಹೊಸ ಚೇತನ ಮೂಡಿಸಿತು. 25 ಜನ ಹಿರಿಯರನ್ನು ಗೌರವಿಸುವ ಮೂಲಕ ಬೆಳ್ಳಿಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ರಾಜ್ಯದಲ್ಲಿ ಯಾರೂ ಮಾಡದ ಹೊಸ ಕಾರ್ಯಕ್ರಮವಾಗಿತ್ತು. ಜಿಲ್ಲೆಯ ಹಿರಿಯ ಲೇಖಕರು, ಸಮ್ಮೇಳನಾಧ್ಯಕ್ಷರ ಭಾವಚಿತ್ರ ಹಾಗೂ ದೇವಾಲಯಗಳ ಚಕ್ರವರ್ತಿ ಇಟಗಿಯ ಮಹಾದೇವ ದೇವಾಲಯದ ಚಿತ್ರದೊಂದಿಗೆ ಕೂಡಿದ ಕ್ಯಾಲೆಂಡರ್ ಮಾಡಿಸಿದ್ದು (ಎಚ್.ಎಚ್. ಮ್ಯಾದಾರ್ ಅವರ ಚಿತ್ರಕಲೆ), ಪತ್ರಕರ್ತ ಕೆ. ರಾಮಕೃಷ್ಣ ಹಾಗೂ ಕಥೆಗಾರ ಮಹಂತೇಶ ನವಲಕಲ್ ಸಂಪಾದಕತ್ವದಲ್ಲಿ ಜಿಲ್ಲೆಯ ಯುವ ಕಥೆಗಾರರ ಪ್ರಾತಿನಿಧಿಕ ಕಥಾ ಸಂಕಲನ 'ಒರೆಗಲ್ಲು' ಪ್ರಕಟಿಸಿದ್ದು ಬೆಳ್ಳಿಹಬ್ಬದ ಸಂಭ್ರಮಕ್ಕೆ ಕಳೆತಂದಿತು.

ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ತೆಲುಗರೆಂದು ಬಿಂಬಿತರಾಗಿದ್ದ ಎನ್.ಎಸ್. ಬೋಸರಾಜ್‌ರವರು ನನ್ನ ಮಾತಿಗೆ ಒಮ್ಮೆಲೇ ಒಪ್ಪಿ ರಾಯಚೂರು ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಿಸಿದ್ದು ಜಿಲ್ಲೆಯ ಎಲ್ಲಾ ರಾಜಕೀಯ ಪಕ್ಷಗಳ ನಾಯಕರು ಜವಾಬ್ದಾರಿ ಹೊತ್ತುಕೊಂಡು, ಉತ್ಸಾಹದಿಂದ ನಿಭಾಯಿಸಿದ್ದು ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಕೀರ್ತಿ ತಂದಿತು. ಜಿಲ್ಲೆಯಲ್ಲಿ ಅತಿಹೆಚ್ಚು ಸಾಹಿತ್ಯ ಸಮ್ಮೇಳನಗಳನ್ನು ನಡೆಸಿದ ಕೀರ್ತಿ ಎನ್.ಎಸ್. ಬೋಸರಾಜ್ ಅವರಿಗೆ ಸಲ್ಲುತ್ತದೆ. ಲಿಂಗಸೂಗೂರು ಶಾಸಕರಾದ ಅಮರೇಗೌಡ ಬೈಯ್ಯಾಪೂರ ಅವರು ರಾಯಚೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಸಮ್ಮೇಳನದ ನೆನಪಿಗಾಗಿ ಐದು ಸಾಹಿತ್ಯ ಕೃತಿಗಳನ್ನು ಪ್ರಕಟಿಸಿದ್ದು ವಿಶೇಷ

ನನ್ನ ಬಗ್ಗೆ ಎಷ್ಟೊಂದು ಗೌರವ ಮೂಡಿತ್ತೆಂದರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಜ್ಯೋತ್ಸವ ಹಾಗು ಇತರೆ ಕಾರ್ಯಕ್ರಮಗಳ ಪೂರ್ವಭಾವಿ ಸಭೆ ನಡೆದರೆ ನನ್ನ ಮಾತಿಗೆ ಹೆಚ್ಚಿನ ಮನ್ನಣೆ ದೊರೆಯುತ್ತಿತ್ತು. ಜಿಲ್ಲಾ ಆಡಳಿತ ಹಮ್ಮಿಕೊಳ್ಳುವ ರಾಜ್ಯೋತ್ಸವ ಸಮಾರಂಭಕ್ಕೆ ರಾಜ್ಯದ ಸಚಿವರು ಅತಿಥಿಯಾದರೆ ಸಮಾರಂಭದ ಅಧ್ಯಕ್ಷತೆ ವಹಿಸುವ ಅವಕಾಶ ನನ್ನದಾಗುತ್ತಿತ್ತು.

ಅಶೋಕ ದಳವಾಯಿಯವರು ರಾಯಚೂರು ಜಿಲ್ಲಾಧಿಕಾರಿಗಳಾಗಿದ್ದಾಗ ಕನ್ನಡದ ಕೆಲಸಕ್ಕೆ ಒಳ್ಳೆಯ ಪ್ರೋತ್ಸಾಹ ನೀಡುತ್ತಿದ್ದರು. ಅವರಿಗೆ ನನ್ನ ಮೇಲೆ ಅಪಾರ ನಂಬಿಕೆ. ರಾಯಚೂರು ಜಿಲ್ಲೆಗೆ ಹೊಂದಿಕೊಂಡಿರುವ, ಆಂಧ್ರಪ್ರದೇಶದಲ್ಲಿರುವ ಗಡಿ ಪ್ರದೇಶ ಆದವಾನಿಯಲ್ಲಿ ಎರಡು ದಿನಗಳ ಗಡಿನಾಡು ಉತ್ಸವ ಭರ್ಜರಿಯಾಗಿ ಆಚರಿಸಲಾಯಿತು. ಗಡಿನಾಡು ಸಮ್ಮೇಳನ ಯಶಸ್ವಿಯಾಗಿ ಮಾಡುವ ಪೂರ್ತಿ ಹೊಣೆಗಾರಿಕೆಯನ್ನು ನಾಲ್ಕು

ಜನರಿಗೆ ಒಪ್ಪಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷನಾಗಿದ್ದರಿಂದ ನಾಲ್ಕು ಜನ ಸಂಚಾಲಕರಲ್ಲಿ ಒಬ್ಬನಾಗಿದ್ದ ನನಗೆ ಬಹಳ ಜವಾಬ್ದಾರಿಯಿತ್ತು ಮತ್ತು ಜಿಲ್ಲಾಡಳಿತದ ಜೊತೆಗೆ ಜಿಲ್ಲಾ ಕಸಾಪದ ಸಹಭಾಗಿತ್ವ ಇತ್ತು. ಹೀಗೆ ಕೆಲಸ ಮಾಡುವ ಅವಕಾಶಗಳು ಮೇಲಿಂದ ಮೇಲೆ ನನಗೆ ದೊರೆಯುತ್ತಿದ್ದವು.

ಕಾಲೇಜಿನಲ್ಲಿ ಸಣ್ಣ ಹುದ್ದೆಯಲ್ಲಿದ್ದರೂ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಮಾಡಿದ ಕೆಲಸ, ಸಿಕ್ಕ ಗೌರವ ನನಗೆ ಅನಾಹುತವನ್ನೂ ಮಾಡಿದೆ. ಕಾಲೇಜಿನಲ್ಲಿ ನನ್ನ ಹುದ್ದೆ ನಿಭಾಯಿಸಿ, ಕಾಲೇಜಿನ ಅವಧಿ ಮುಗಿದ ನಂತರ ಪರಿಷತ್ತಿನ ಕೆಲಸ ಮಾಡಿದರೂ, ಆಡಳಿತ ಮಂಡಳಿಯ ಕಣ್ಣು ನನ್ನ ಮೇಲೆ ನಿಗಾವಹಿಸುತ್ತಿತ್ತು. ನಾನು ಕೆಲಸ ಮಾಡುತ್ತಿದ್ದುದು ಅನುದಾನಿತ ಕಾಲೇಜಾಗಿದ್ದರಿಂದ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಆಡಳಿತ ಮಂಡಳಿಯ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ಆಡಳಿತ ಮಂಡಳಿ ಸಭೆಯಲ್ಲಿ ಸ್ಪರ್ಧಿಸಲು ಅನುಮತಿ ನೀಡಬಾರದೆಂದು ತೀರ್ಮಾನ ತೆಗೆದುಕೊಳ್ಳಲಾಗಿ ತ್ತೆಂದು ಇತರೆ ಮೂಲೆಗಳಿಂದ ತಿಳಿದು ಬಂದರೂ, ಆದೇಶ ಪತ್ರ ನನಗೆ ಮುಟ್ಟಿಸುತ್ತಿರಲಿಲ್ಲ. ನನ್ನ ಬಗ್ಗೆ ಅಸಮಾಧಾನವಿದ್ದರೂ ತೋರ್ಪಡಿಸುತ್ತಿರಲಿಲ್ಲ. ಕಾದುಕುಳಿತಿದ್ದ ಆಡಳಿತ ಮಂಡಳಿ ಅವಕಾಶ ಸಿಕ್ಕೊಡನೆ ಹೆಚ್ಚು ವಿಚಾರ ಮಾಡದೆ ನನ್ನನ್ನು ಅಮಾನತ್ತು ಮಾಡಿತ್ತು. ಸ್ವಾತಂತ್ರ್ಯೋತ್ಸವದ ದಿನ ಸುದ್ದಿಮೂಲ ಪತ್ರಿಕೆಯಲ್ಲಿ ಮುಖಪುಟದಲ್ಲಿ ದೊಡ್ಡ ಸುದ್ದಿಯಾಗಿತ್ತು. ನನ್ನ ಕುರಿತು ಒಳ್ಳೆಯ ಅಭಿಮಾನವಿದ್ದ ರಾಯಚೂರುವಾಣಿ ಪತ್ರಿಕೆ ಸುದ್ದಿ ಪ್ರಕಟಿಸಲಿಲ್ಲ. ರಾಜ್ಯಮಟ್ಟದ ಪತ್ರಿಕೆಗಳು ನನ್ನ ಕೆಲಸ ನೋಡಿದ್ದರಿಂದ ಚುಟುಕಾಗಿ ವರದಿ ಮಾಡಿದ್ದವು.

ಆಡಳಿತ ಮಂಡಳಿಗೆ ನನ್ನ ಮೇಲೆ ಎಷ್ಟೊಂದು ಸಿಟ್ಟಿತ್ತೆಂದರೆ ನನ್ನನ್ನು ಒಂದು ವರ್ಷಕಾಲ ಅಮಾನತ್ತಿನಲ್ಲಿಟ್ಟಿದ್ದರೂ, ಆರು ತಿಂಗಳು ಶೇ. 50 ಸಂಬಳ, ಅನಂತರ ಶೇ. 75 ಸಂಬಳ ನಿಯಮದ ಪ್ರಕಾರ ಕೊಡಬೇಕು. ಆದರೆ ನನಗೆ ಶೇ. 50 ಕೊಟ್ಟು ಸತಾಯಿಸಿತು. ಅನಂತರ ಸಂಸ್ಥೆಯ ಹಣಕಾಸು ವಿಷಯದಲ್ಲಿ ರಾದ್ಧಾಂತವಾಗಿ ಸಂಸ್ಥೆಯು ಸರಕಾರದ ಆಡಳಿತಾಧಿಕಾರಿಯ ತೆಕ್ಕೆಗೆ ಹೋಯಿತು.

ಅಮಾನತ್ತುಗೊಂಡೊಡನೆ ಮನಸ್ಸು ಕೆಡಿಸಿಕೊಳ್ಳದೆ ನನ್ನ ಬಹುದಿನದ ಕನಸಾದ ವೈಶ್ಯಪತ್ರಿಕೆ ಪ್ರಾರಂಭಿಸಲು ನಿರ್ಧರಿಸಿ ಜಿಲ್ಲಾಧಿಕಾರಿಗಳ ಮೂಲಕ ದೆಹಲಿಗೆ ಪತ್ರಿಕೆ ಹೆಸರು ಪಡೆಯಲು ಕಳುಹಿಸಿಕೊಟ್ಟೆ. ಕೇವಲ 40 ದಿನಗಳಲ್ಲಿ ಪತ್ರಿಕೆ ಹೆಸರು 'ವೈಶ್ಯವಾರ್ತಾ' ಎಂದು ಅನುಮತಿ ದೊರಕಿತು. ಕರಪತ್ರ ಹಾಗು ರಸೀದಿ ಪುಸ್ತಕಗಳೊಂದಿಗೆ ಚಂದಾದಾರರನ್ನು ಮಾಡಿಸಿಕೊಳ್ಳಲು ತಿರುಗಾಟ ಪ್ರಾರಂಭಿಸಿದೆ. ಅಮಾನತ್ತಿನ ಅವಧಿ ಒಂದು ವರ್ಷ. ಆಗ ತಿಂಗಳಲ್ಲಿ 8 ರಿಂದ 10ದಿನಗಳ ಕಾಲ ರಾಜ್ಯದ ತುಂಬೆಲ್ಲಾ ಪ್ರವಾಸ ಮಾಡಿದೆ. ಎಲ್ಲಾ ಕಡೆ ಪರಿಚಿತರಿದ್ದಲ್ಲಿಗೆ ಹೋಗಿ ಸಹಾಯ ಪಡೆದೆ. ಸಾಕಷ್ಟು ಬೆಂಬಲ ದೊರೆಯದಿದ್ದರೂ ಪತ್ರಿಕೆ ಸರಾಗವಾಗಿ ನಡೆಸಿಕೊಂಡು ಹೋಗುವಷ್ಟು ಬೆಂಬಲ ದೊರೆಯಿತು. ರಾಜ್ಯದ ತುಂಬೆಲ್ಲ

ವೈಶ್ಯವಾರ್ತಾ ಬಳಗ ಹುಟ್ಟಿಕೊಂಡಿತು. ಹಿರಿಯರು ಮುತ್ಸದ್ದಿಗಳಾದ ಟಿ. ಶೀನಯ್ಯ ಶೆಟ್ಟರಂತೂ ಪತ್ರಿಕೆಗೆ ರೂ. 5,000 ಹಣ ನೀಡಿ ಪ್ರಥಮ ಪೋಷಕರಾಗಿದ್ದಲ್ಲದೆ ಬೆಂಗಳೂರು ನಗರದಲ್ಲಿ ಚಂದಾದಾರರನ್ನು ಮಾಡಿಸಿಕೊಟ್ಟು ನೆರವಾದರು. ಕೆ.ಎಲ್. ನಟರಾಜರನ್ನು ಪರಿಚಯಿಸಿದರು. ಅನಂತರ ಎಸ್.ಆರ್. ವಿಜಯಕುಮಾರ್ ಪತ್ರಿಕೆಗೆ ಸಹ ಸಂಪಾದಕರಾಗಿ ಸೇರಿಕೊಂಡರು. ಪತ್ರಿಕೆ ಗಟ್ಟಿಯಾಗಿ ನೆಲೆನಿಂತಿತು. ನನ್ನ ಆಡಳಿತ ಸಂಸ್ಥೆ ನನಗೆ ಕೆಟ್ಟದ್ದು ಮಾಡಿದರೂ ಅದು ನನಗೆ ಒಳ್ಳೆಯದಾಯಿತು. ಅಯ್ಯೋ ಪಾಪ ಸಂಸ್ಥೆಯು ಅನ್ಯಾಯ ಮಾಡಿತೆನ್ನುವವರು ಹಲವರಿದ್ದರೆ, ಕುಹಕ ಮಾತನಾಡುವವರೂ ಇದ್ದರು. ಆದರೆ ನನ್ನ ಮೇಲೆ ನಂಬಿಕೆಯಿಟ್ಟಿದ್ದ ಜಿಲ್ಲೆಯ ಜನರು ಎಂದೂ ಅಗೌರವ ತೋರಲಿಲ್ಲ. ಅಮಾನತ್ತು ಮಾಡಿದ ಕಾರಣ ಅರ್ಧ ಸಂಬಳ ಪಡೆದು ಕಾಲೇಜಿಗೆ ಹೋಗದೆ ಪತ್ರಿಕೆಗಾಗಿ ರಾಜ್ಯದ ತುಂಬೆಲ್ಲಾ ತಿರುಗಾಡಲು ಅವಕಾಶವಾಯಿತು. ನನ್ನ ರಾಜ್ಯ ಸಂಪರ್ಕ ಬೆಳೆಯಿತು. ಪತ್ರಿಕೆಯೊಂದು ಉದಯವಾಯಿತು. ವೇತನದ ಮೇಲೆ ಅವಲಂಬಿತನಾಗಿದ್ದ ನನಗೆ ಪತ್ರಿಕೆಯಿಂದಾಗಿ ಆರ್ಥಿಕ ಸ್ಥಿತಿ ಸುಧಾರಿಸುವಂತಾಯಿತು. ಅಮಾನತ್ತು ನನಗೆ ಶಾಪವಾಗದೆ ವರವಾಯಿತು. ಸಂಸ್ಥೆಯು ವಿಚಾರಣೆ ಮಾಡದೆ ಅಮಾನತ್ತನ್ನು ವಾಪಸ್ಸು ತೆಗೆದುಕೊಂಡಿತು.

ನಾನು ಲೇಖಕನಲ್ಲದಿದ್ದರೂ ಸಾಹಿತಿಗಳ ಸಂಪರ್ಕ, ಓದು-ಬರೆವಣಿಗೆ ರೂಢಿಸಿ ಕೊಳ್ಳಲು ನೆರವಾಯಿತು. ರಾಯಚೂರು ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ 'ನವರಂಗ' ಸಂಚಿಕೆ ಹೊರತಂದೆ. ರೂಪುರೇಷೆ, ಲೇಖನಗಳ ಆಯ್ಕೆ ನನ್ನದೇ. ಸಂಚಿಕೆ ಬಿಡುಗಡೆ ಅನಂತರ ಎಲ್ಲರಿಂದ ಮೆಚ್ಚುಗೆ ವ್ಯಕ್ತವಾಯಿತು. ಜಾಹೀರಾತಿಲ್ಲದೆ ಸ್ಮರಣ ಸಂಚಿಕೆಯೊಂದು ಸುಂದರವಾಗಿ ಮುದ್ರಣಗೊಂಡು ಹೊಸತನ ಮೂಡಿಸಿತು.

ಈ ಸಮಯದಲ್ಲಿ ನಾನು ಮೈಲಾಪುರ ಸುಬ್ರಹ್ಮಣ್ಯಂ ಅವರನ್ನು ನೆನೆಯಲೇಬೇಕು. ಅವರು ನನ್ನನ್ನು ಪ್ರೋತ್ಸಾಹಿಸಿದರು. ರಾಯಚೂರಿನ ಶ್ರೀ ಕನ್ಯಕಾಪರಮೇಶ್ವರಿ ಹಾಸ್ಟೆಲ್ ಸಮಿತಿ ಕಾರ್ಯಕಾರಿ ಸದಸ್ಯನಾಗಿ ಆಯ್ಕೆಗೊಳ್ಳಲು ಕಾರಣೀಕರ್ತರು. ಆ ಸಮಿತಿ ವತಿಯಿಂದ ಬಹಳ ವರ್ಷಗಳಿಂದ ಶಿಶುವಿಹಾರ ನಡೆಸಿಕೊಂಡು ಬರಲಾಗಿತ್ತು. ಸ್ವಂತ ಜಾಗ, ಸ್ವಂತ ಕಟ್ಟಡವಿತ್ತು. ರಾಯಚೂರಿನಲ್ಲಿ ಒಂದು ಉತ್ತಮ ಕನ್ನಡ ಶಾಲೆ ಪ್ರಾರಂಭಿಸಲು ಮನಸ್ಸಾಯಿತು. ಹಾಸ್ಟೆಲ್ ಸಮಿತಿ ಸಹಕಾರ ಸಿಕ್ಕಿ ಶ್ರೀ ಕನ್ಯಕಾಪರಮೇಶ್ವರಿ ಪ್ರಾಥಮಿಕ ಶಾಲೆ ಉದ್ಘಾಟನೆಗೊಂಡಿತು. ಐದು ವರ್ಷ ಶಾಲಾ ಸಮಿತಿಯ ಅಧ್ಯಕ್ಷನಾಗಿ ಶಾಲೆ ಬೆಳೆಯಲು ಕೆಲಸ ಮಾಡಿದೆ. ಉತ್ತಮ ಶಿಕ್ಷಕರು ನೇಮಕಗೊಂಡು ಶಾಲೆ ಹೆಸರು ಮಾಡಿತು. ಇಂದು ಕನ್ನಡ ಮತ್ತು ಇಂಗ್ಲಿಷ್ ಪ್ರೌಢಶಾಲೆ ಹಾಗು ಬಿ.ಇಡಿ ಕಾಲೇಜುವರೆಗೆ ಬೆಳೆದು ಖ್ಯಾತಿ ಹೊಂದಿದೆ. ಕನ್ನಡ ಶಾಲೆಯೊಂದು ಪ್ರಾರಂಭಿಸಿದ ಕೀರ್ತಿ ನನಗೆ ದೊರಕಿತು.

ಮೈಲಾಪುರ ಸುಬ್ರಹ್ಮಣ್ಯಂರವರು ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷರಾಗಿದ್ದಾಗ ರಾಯಚೂರಿನಲ್ಲಿ ಕರ್ನಾಟಕ ರಾಜ್ಯ ಐದನೆಯ ಆರ್ಯವೈಶ್ಯ ಸಮ್ಮೇಳನ

ಹಾಗೂ ದಕ್ಷಿಣ ಭಾರತ ಪ್ರಥಮ ಆರ್ಯವೈಶ್ಯ ಸಮ್ಮೇಳನ ಆಯೋಜಿಸಿದರು. ಅವರು ನನ್ನನ್ನು ಸ್ಮರಣ ಸಂಚಿಕೆ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದರು. ಸಮ್ಮೇಳನದ ನೆನಪಿಗಾಗಿ 'ವೈಶ್ಯಶ್ರೀ' ಸಂಚಿಕೆ ಸಂಪಾದಿಸಿಕೊಟ್ಟೆ. ಸಂಚಿಕೆ ಆಕರ್ಷಕವಾಗಿ ಮೂಡಿಬಂದಿತು. ಮೈಲಾಪುರ ಅವರು ಮಂತ್ರಾಲಯ ಆರ್ಯವೈಶ್ಯ ಸೇವಾ ಸಮಾಜದ ವಾಸವಿ ನಿತ್ಯಾನ್ನಛತ್ರದ ಅಧ್ಯಕ್ಷರಾಗಿ ಬೃಹತ್ ಛತ್ರ ನಿರ್ಮಾಣ ಮಾಡಿದ್ದಾರೆ. ಛತ್ರದ ಬೆಳ್ಳಿಹಬ್ಬದ ಎರಡು ದಿನದ ಸಂಭ್ರಮದ ಸಮಾರಂಭಕ್ಕೆ ಪ್ರಚಾರ ಸಮಿತಿ ಅಧ್ಯಕ್ಷನಾಗಿ ಹಾಗು ಸ್ಮರಣ ಸಂಚಿಕೆ ಸಂಪಾದಕ ಮಂಡಳಿ ಸದಸ್ಯನಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರು. ಛತ್ರದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಖ್ಯಾತರೊಂದಿಗೆ ನನ್ನನ್ನು ಸನ್ಮಾನಿಸಿ ಗೌರವಿಸಿದರು. ಮಂತ್ರಾಲಯದಲ್ಲಿ ಪ್ರಥಮ ದಕ್ಷಿಣ ಭಾರತ ಆರ್ಯವೈಶ್ಯ ಪತ್ರಕರ್ತರ ಸಮ್ಮೇಳನ ಮಾಡಲು ನಿರ್ಧರಿಸಿ, ನನ್ನನ್ನು ಸಮಿತಿ ಅಧ್ಯಕ್ಷನನ್ನಾಗಿ ಮಾಡಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತಮಿಳುನಾಡು ವೈಶ್ಯಪತ್ರಿಕೆಗಳ ಸಂಪಾದಕರನ್ನು ಕರೆಯಿಸಿ ಸನ್ಮಾನಿಸಿ ಪತ್ರಕರ್ತರ ಸಮ್ಮೇಳನ ಯಶಸ್ವಿಯಾಗಿ ಮಾಡಿಕೊಟ್ಟರು.

ಶರಣ ಸಾಹಿತ್ಯ ಪರಿಷತ್ತಿನವರು ರಾಯಚೂರಲ್ಲಿ ಮೂರು ದಿನಗಳ ಕರ್ನಾಟಕ ರಾಜ್ಯ ಶರಣ ಸಾಹಿತ್ಯ ಸಮ್ಮೇಳನ ಮಾಡಿದಾಗ ಪ್ರಚಾರ ಸಮಿತಿ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದವರು ರಾಜ್ಯಮಟ್ಟದ ದಾಸ ಸಾಹಿತ್ಯ ಸಮ್ಮೇಳನ ಏರ್ಪಡಿಸಿದಾಗ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡುವ ಅವಕಾಶ ಒದಗಿಬಂತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ರಾಯಚೂರಿನಲ್ಲಿ ಎರಡು ದಿನಗಳ ಕಾಲ 'ಶತಮಾನದ ಸಾಹಿತ್ಯ' ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ ಮಾಡುವ ಅವಕಾಶ ನನಗೆ ಒದಗಿತು. ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಸ್ಥಾಪಕ ಅಧ್ಯಕ್ಷನಾಗಿ ರಾಯಚೂರಿನಲ್ಲಿ ರಾಜ್ಯಮಟ್ಟದ ಮೂರನೆಯ ಆರ್ಯವೈಶ್ಯ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಮಾಡಿಕೊಡುವ ಸೌಭಾಗ್ಯ ದೊರೆಯಿತು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಭೂಪಾಳ ಶ್ರೀನಿವಾಸರನ್ನ ನೆನೆಯಲೇ ಬೇಕು. ಎಂಟು ವರ್ಷ ಕಾಲ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಪರಿಷತ್ತನ್ನು ಮುನ್ನಡೆಸುವ ಅವಕಾಶ ನನಗೆ ಸಿಕ್ಕಿದೆ.

ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ಸಮ್ಮೇಳನ, ಸಾಹಿತ್ಯ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು ಕರ್ನಾಟಕ ಆರ್ಯವೈಶ್ಯ ಮಹಾಸಭ ಅಧ್ಯಕ್ಷ ಆರ್.ಪಿ. ರವಿಶಂಕರ್ ಅವರು ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ ನನ್ನನ್ನು ಮಹಾಸಭಾದ ಕಾರ್ಯಕಾರಿ ಸಮಿತಿಗೆ ವಿಶೇಷ ಆಹ್ವಾನಿತನನ್ನಾಗಿ ನೇಮಿಸಿಕೊಂಡರು. ಹೀಗಾಗಿ ಕರ್ನಾಟಕ ಆರ್ಯವೈಶ್ಯ ಮಹಾಸಭ ಕಾರ್ಯಕಾರಿ ಸಮಿತಿ ಸದಸ್ಯನಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅವಕಾಶ ಸಿಕ್ಕಿತು.

ಭೂಪಾಳ ಶ್ರೀನಿವಾಸರವರು ತಿರುಮಲ ತಿರುಪತಿ ಆರ್ಯವೈಶ್ಯ ಸೇವಾ ಸಮಾಜ ಸ್ಥಾಪಿಸಿ ತಿರುಮಲದಲ್ಲಿ ನವರಾತ್ರಿ ಸಮಯದಲ್ಲಿ ಒಂಬತ್ತು ದಿನಗಳ ಕಾಲ ಆರ್ಯವೈಶ್ಯರಿಗೆ

ಚಿತ್ತೂರು ಛತ್ರದಲ್ಲಿ ಉಚಿತ ಭೋಜನ ವ್ಯವಸ್ಥೆ ಮಾಡುತ್ತಿದ್ದರು. ಅವರು ನನ್ನನ್ನು ಕಾರ್ಯದರ್ಶಿಯನ್ನಾಗಿ ಮಾಡಿಕೊಂಡು ಅವರೊಂದಿಗೆ ಕೂಡಿ ಕೆಲಸ ಮಾಡಲು ಅವಕಾಶ ಕಲ್ಪಿಸಿದ್ದರು. ರಾಯಚೂರಿನಲ್ಲಿ ಎರಡು ಸಾರಿ ದೊಡ್ಡದಾಗಿ, ಭರ್ಜರಿಯಾಗಿ ಶ್ರೀನಿವಾಸ ಕಲ್ಯಾಣೋತ್ಸವ ಏರ್ಪಡಿಸಿದ್ದಾಗ ಸಮಿತಿಯ ಕಾರ್ಯದರ್ಶಿಯಾಗಿದ್ದೆ. ಕರ್ನಾಟಕ ಆರ್ಯವೈಶ್ಯ ಮಹಾಸಭಾ ವತಿಯಿಂದ ಸೋಮೇಶ್ವರ ಗುಪ್ತರವರು ಅಧ್ಯಕ್ಷರಾಗಿದ್ದಾಗ ರಾಯಚೂರಿನಲ್ಲಿ ವಿಭಾಗ ಮಟ್ಟದ ವೈಶ್ಯ ಸಮ್ಮೇಳನ ನಡೆದಾಗ ಪ್ರಧಾನ ಕಾರ್ಯದರ್ಶಿಯಾಗಿ ಇಡೀ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಿ ಸಮ್ಮೇಳನದ ಯಶಸ್ಸಿನಲ್ಲಿ ಪಾಲುದಾರನಾಗಿದ್ದೆ.

ಒಂದು ಕ್ಷೇತ್ರದಲ್ಲಿ ಗುರುತಿಸಿಕೊಂಡು ಏನಾದರೂ ಸಾಧಿಸಬಹುದು. ನಾನು ಸಂಘಟಕನಾಗಿ, ಸಾಹಿತ್ಯದ ಪರಿಚಾರಕನಾಗಿ ಗುರುತಿಸಿಕೊಂಡೆ. ಸಮಾಜ ಗುರುತಿಸಿ ಗೌರವಿಸಿದೆ. ಸಂಖ್ಯಾಬಾಹುಳ್ಯವಿರದ ವೈಶ್ಯ ಸಮಾಜದವನಾಗಿದ್ದರಿಂದ ರಾಜಕೀಯ ಬೆಂಬಲವಿಲ್ಲದೆ ಸರ್ಕಾರದ ಅಕಾಡೆಮಿಗಳ, ಪ್ರಾಧಿಕಾರಗಳ ಸದಸ್ಯನಾಗುವ ಅವಕಾಶ ದೊರೆತಿಲ್ಲ. ರಾಜ್ಯೋತ್ಸವ ಪ್ರಶಸ್ತಿ ಬಲುದೂರ. ಆದರೂ ಜೀವನದಲ್ಲಿ ಸ್ವಲ್ಪವಾದರೂ ಸಾಧನೆ ಮಾಡಿದ ಸಂತೃಪ್ತಿ ಇದೆ. 14ನೆಯ ಶತಮಾನದ ದಾಸ ಪರಂಪರೆಯಿಂದ (ವಿಜಯದಾಸರು, ಜಗನ್ನಾಥದಾಸರು) ಹಿಡಿದು 21ನೆಯ ಶತಮಾನದವರೆಗೆ 700 ವರ್ಷಗಳಲ್ಲಿ ಮಾನ್ವಿ ತಾಲ್ಲೂಕಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಾನೀಯರನ್ನು ಪರಿಚಯಿಸುವ ಬೃಹತ್ ಪ್ರತಿ 'ಮಾನ್ವಿಯ ಮಹನೀಯರು' ಪುಸ್ತಕವನ್ನು ಕನ್ನಡ ಉಪನ್ಯಾಸಕ ಸಿದ್ದಲಿಂಗಪ್ಪ ಕೊಟ್ನೇಕಲ್ ಪ್ರಕಟಿಸಿದ್ದು, ಪರಿಚಯಿಸಲ್ಪಟ್ಟ 40 ಜನರಲ್ಲಿ ನಾನು ಒಬ್ಬನಾಗಿದ್ದೇನೆ.

ನಾನು ನನ್ನ ನೆಲೆಯನ್ನು ಬೆಂಗಳೂರಿಗೆ 2013ರಲ್ಲಿ ವರ್ಗಾಯಿಸಿದೆ. ಆಗ ನನ್ನ ಸ್ವಂತ ತಾಲ್ಲೂಕಾದ ಮಾನ್ವಿಯಲ್ಲಿ ನಡೆದ ಆರನೆಯ ತಾಲ್ಲೂಕು ಸಮ್ಮೇಳನದ ಸರ್ವಾಧ್ಯಕ್ಷನಾಗಿ ನನ್ನನ್ನು ಆಯ್ಕೆಮಾಡಿ ಗೌರವಿಸಲಾಯಿತು. ಇದು ನನ್ನ ಬದುಕಿನ ಅತ್ಯಂತ ಸ್ಮರಣೀಯ ಘಟನೆಗಳಲ್ಲಿ ಒಂದು. ಸಮ್ಮೇಳನವೂ ಅದ್ದೂರಿಯಾಗಿ ಅಷ್ಟೇ ಅಲ್ಲ ಅರ್ಥಪೂರ್ಣವಾಗಿಯೂ ನಡೆಯಿತು.

ಪ್ರತಿ ಯಶಸ್ವೀ ಪುರುಷನ ಹಿಂದೆ ಒಬ್ಬ ಮಹಿಳೆಯ ಪಾತ್ರವಿರುವುದು ಮರೆಯುವಂತಿಲ್ಲ. ನನ್ನ ಯಶಸ್ಸಿನಲ್ಲಿ ನನ್ನ ಧರ್ಮಪತ್ನಿ ಶಾರದೆಯ ಪಾತ್ರ ದೊಡ್ಡದು. ಬೆಳಗ್ಗೆ 7.30ರಿಂದ ಮಧ್ಯಾಹ್ನ 1.30ರವರೆಗೆ ನನ್ನ ಕಾಲೇಜು ಅವಧಿ. ಕಾಲೇಜಿನಿಂದ ಬಂದೊಡನೆ ಸಂಘ ಸಂಸ್ಥೆಗಳ ಕೆಲಸ. ನಾನು ನನ್ನ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನ ನೀಡಿದ್ದೇ ಇಲ್ಲ, ನನ್ನ ಸಾಕಷ್ಟು ಸಮಯವು ಸಂಘ ಸಂಸ್ಥೆಗಳಿಗೆ ಹಾಗೂ ಕನ್ನಡದ ಕೆಲಸಗಳಿಗೆ ಮೀಸಲಾಗಿತ್ತು. ನನಗೆ ಬರುವ ಕಡಿಮೆ ಸಂಬಳದಲ್ಲಿಯೇ ನನ್ನ ಹೆಂಡತಿ ಶಾರದೆ ಸಂಸಾರವನ್ನು ತೂಗಿಸಿದ್ದಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಿ ಅವರು ಇಂದು ಬಿ.ಇ. ಮುಗಿಸಿ ಸಾಫ್ಟ್‌ವೇರ್ ಎಂಜಿನಿಯರುಗಳಾಗಲು ಅವಳ ಪಾತ್ರವೇ ದೊಡ್ಡದು. ನಾನು ಮನೆ ಬಿಡುವ ಕಾಲಕ್ಕೆ ಮಕ್ಕಳು ಎದ್ದಿರುತ್ತಿರಲಿಲ್ಲ, ರಾತ್ರಿ ಮನೆಗೆ ಬಂದಾಗ ಮಲಗಿರುತ್ತಿದ್ದರು. ಅವರ ಶಿಕ್ಷಣದ

ಸಂಪೂರ್ಣ ಹೊಣೆ ನನ್ನ ಹೆಂಡತಿಯೇ ಹೊತ್ತಿದ್ದಳು. ಕೇವಲ ಎಂಟನೆಯ ತರಗತಿವರೆಗೆ ಓದಿದ್ದರೂ ನನ್ನ ಕನ್ನಡದ ಕೆಲಸಗಳಲ್ಲಿ ನೆರವಾಗುತ್ತಿದ್ದದ್ದಲ್ಲದೆ ವೈಶ್ಯವಾರ್ತಾ ಪತ್ರಿಕೆ ನಡೆಸುವಾಗ ಪತ್ರ ವ್ಯವಹಾರ ಹಾಗೂ ಅಂಚೆ ಕೆಲಸ ನೋಡಿಕೊಳ್ಳುತ್ತಿದ್ದಳು. ನನ್ನ ತಮ್ಮ ಹಾಗು ತಂಗಿಯ ಮದುವೆ ಕೂಡ ಸುಗಮವಾಗಿ ನಡೆಯುವಲ್ಲಿ ಅವಳ ಪಾತ್ರ ಮುಖ್ಯವಾಗಿತ್ತು.

ನನ್ನ ಹಿರಿಯ ಮಗ ಎಚ್. ವೆಂಕಟೇಶ್, ಬಿ.ಇ. (ಕಂಪ್ಯೂಟರ್ ಸೈನ್ಸ್) ಪಾಸುಮಾಡಿ ಈಗ ಬೆಂಗಳೂರಿನಲ್ಲಿ ಬ್ರಿಟಿಷ್ ಟೆಲಿಕಮ್ಯುನಿಕೇಷನ್ಸ್ ಸಾಫ್ಟ್‌ವೇರ್ ಕಂಪೆನಿಯಲ್ಲಿ ಡೆಲಿವರಿ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದಾನೆ. ಹಿರಿಯ ಸೊಸೆ ಅರ್ಚನಾ ಎಂ.ಎಸ್ಸಿ., ಪದವೀಧರೆ. ಅವರಿಗೆ ಇಬ್ಬರು ಗಂಡು ಮಕ್ಕಳು ಆಶ್ರಿತ್ ಹಾಗು ಸಂವಿತ್.

ನನ್ನ ಕಿರಿಯ ಮಗ ಎಚ್. ರಾಘವೇಂದ್ರ ಬಿ.ಇ. (ಮೆಕ್ಯಾನಿಕಲ್) ಓದಿದ್ದು ಬೆಂಗಳೂರಿನಲ್ಲಿ ಎಂಫೆಸಿಸ್ ಸಾಫ್ಟ್‌ವೇರ್ ಕಂಪೆನಿಯಲ್ಲಿ ಪ್ರಾಜೆಕ್ಟ್ ಲೀಡರ್ ಆಗಿ ದುಡಿಯುತ್ತಿದ್ದಾನೆ. ನನ್ನ ಕಿರಿಯ ಸೊಸೆ ಡಾ॥ ಸಪ್ನಾ, ಎಂಬಿಬಿಎಸ್., ಡಿಎನ್‌ಬಿ, ಹಾಗು ಕೃತಕ ಗರ್ಭಧಾರಣೆ ಕೋರ್ಸ್ ಫೆಲೋಷಿಪ್ ಮಾಡಿ ಬೆಂಗಳೂರಿನ ಕುಮಾರಸ್ವಾಮಿ ಲೇಔಟ್‌ನಲ್ಲಿರುವ ವಾಸವಿ ಆಸ್ಪತ್ರೆಯಲ್ಲಿ ಪ್ರಸೂತಿತಜ್ಞೆಯಾಗಿ ಸೇವೆ ಸಲ್ಲಿಸುತ್ತಿದ್ದಾಳೆ. ಅವರ ಏಕೈಕ ಮಗಳು ಅಕ್ಷರ.

ನನ್ನ ಮಗಳು ಶಿವರಂಜನಿ ಎಂಎಸ್ಸಿ ಸ್ನಾತಕೋತ್ತರ ಪದವೀಧರೆ. ಅಳಿಯ ರಾಜೇಶ್ ಸುರಪುರ ಕಾಂಗಿರ್ಝೆಡ್ ಸಾಫ್ಟ್‌ವೇರ್ ಕಂಪೆನಿಯಲ್ಲಿ ಪ್ರೊಗ್ರಾಮ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸುತ್ತಿದ್ದು ವಿದೇಶದಲ್ಲಿ ನೆಲೆಸಿದ್ದಾರೆ. ಅವರ ಇಬ್ಬರು ಮಕ್ಕಳು ರಿತ್ವಿಕ್ ಹಾಗು ರಿಷಿಕಾ.

ನನಗೆ ಕನ್ನಡದ ಹುಚ್ಚು, ನನ್ನ ಮಕ್ಕಳೆಲ್ಲ ಕನ್ನಡ ಮಾಧ್ಯಮದಲ್ಲೇ ಓದಿ ಮುಂದೆ ಬಂದವರು. ಅದೂ ಸರ್ಕಾರಿ ಶಾಲೆಗಳಲ್ಲಿ! ನಾನು ನನ್ನ ಜೀವನದಲ್ಲಿ ಎಷ್ಟೇ ಕಷ್ಟಪಟ್ಟಿದ್ದರೂ, ಮಕ್ಕಳು ಓದಿ ಉತ್ತಮ ಹುದ್ದೆಯಲ್ಲಿದ್ದಾರೆ. ಅವರಿಗೆ ಒಳ್ಳೆಯ ಮನೆತನದ ಸಂಬಂಧಗಳು ಕೂಡಿಬಂದು ಅನುಕೂಲಕರವಾಗಿ ಜೀವನ ನಡೆಸುತ್ತಿರುವುದರಿಂದ ನನ್ನ ನಿವೃತ್ತಿಯ ಜೀವನ ಸರಾಗವಾಗಿ ನೆಮ್ಮದಿಯಿಂದ ನಡೆದಿದೆ.

ಎಚ್. ಪಂಪಯ್ಯ ಶೆಟ್ಟಿ
ಎಸ್. 1, ನಂ. 32, 8ನೇ ಮೈನ್,
ಶಾಕಾಂಬರಿನಗರ, ಜೆಪಿ ನಗರ 1ನೇ ಹಂತ, ಬೆಂಗಳೂರು-560 078
ಸನಿಹವಾಣಿ : 9448183754 / 9845685332

ಸಾನೆಟ್ (ಸುನೀತ) ಎಚ್. ಪಂಪಯ್ಯ ಶೆಟ್ಟಿ

✍ ಡಾ|| ಗವಿಸಿದ್ಧಪ್ಪ ಎಚ್. ಪಾಟೀಲ

ಪಂಪಯ್ಯ ಶೆಟ್ಟಿ ಎಡೆದೊರೆ ನಾಡಿಗೆ ಬೆಳಕ ಬೀರಿದ ಶಕ್ತಿ
ಲೆಖ್ಖ ಬರೆಯುತ್ತಲೇ ಕಸಾಪಕ್ಕೆ ಲೆಖ್ಖ ಕಲಿಸಿದ ಧೀರ
ಕನ್ನಡ ಭಾಷೆ ಸಂಸ್ಕೃತಿಗೆ ಸದಾ ಹೊಸ ಕನಸ ಕಂಡ ಕನಸುಗಾರ
ಧೂಳಿಡಿದ ಕಸಾಪಕ್ಕೆ ಜಿಲ್ಲೆಯಲ್ಲಿ ಚಾಲನೆ ನೀಡಿದ ಚಂದಿರ
ಕತ್ತಲಲಿ, ಬೆಳಕಲಿ, ಉರಿಬಿಸಿಲಿನಲಿ ನೂತನ ಸ್ಪರ್ಶಕೊಟ್ಟ ಸವಿಗಾರ
ಸಾಹಿತ್ಯ ಜಾತ್ರೆ ಸಮ್ಮೇಳನಕೆ ಕಳೆತಂದಿಟ್ಟ ಸೂರ್ಯ
ಜಿಲ್ಲೆಯ ಜಾಲಾಡಿ ಯುವ-ಹಿರಿಯ-ಮಹಿಳೆಯರಿಗೆ ವೇದಿಕೆ ಕಲ್ಪಿಸಿದವ
ನಿತ್ಯ ನಿರಂತರ ಸಾಹಿತ್ಯ ಚಿಂತನ-ಮಂಥನದ ಪರಿಚಾರಕ.
ಮಾನ್ವಿಯಿಂದ ನಗರದಲಿ ನಡೆದ ಹಾದಿ ಬಹುದೂರ
ಆರ್ಯವೈಶ್ಯ ಸಮುದಾಯದ ಸಂಘಟನೆಗೆ ತಿರುವು ನೀಡಿದವ
ವರದಿಗಾರ ಸಂಪಾದಕ ಹಲವು ವೇಷಭೂಷಣಕೆ ತಯಾರಿ
ವೃತ್ತಿ-ಪ್ರವೃತ್ತಿ; ನಡೆ-ನುಡಿ-ಬದುಕಿನಲಿ ಒಂದಾಗಿಸಿದ ಜೀವನಾಡಿ
ದೋಆಬ್ ಪ್ರದೇಶದಲಿ ಸಂಘಟನೆಗೆ ಆಯಾಮ ನೀಡಿದ ಜಂಗಮನೀತ
ಪಂಪಯ್ಯ ಎಲ್ಲರೆದೆಯಲ್ಲಿ ಅಪ್ಪಿ-ಒಪ್ಪಿದ ಹೆಸರಿಗೆ ಅಕ್ಷರ ಬಾಗಿನ.... ಬಾಗಿನ

ಅಜಾತ ಶತ್ರು ಪಂಪಯ್ಯಶೆಟ್ಟಿ

✍ ಅಯ್ಯಪ್ಪಯ್ಯ ಹುಡಾ

ಅಪ್ಪಟ ಕನ್ನಡಾಭಿಮಾನ
ಸಹಜತೆ, ಸರಳತೆಗಳೊಂದಿಗೆ
ಸಹನೆ, ತಾಳ್ಮೆಗಳ ರೂವಾರಿ
ಸದಾ ಕ್ರಿಯಾಶೀಲ, ಸಂಘಟಕ
ಪಂಪಯ್ಯಶೆಟ್ಟಿ ಅಜಾತಶತ್ರು

ಪ್ರೀತಿಯನ್ನೇ ಉಸಿರಾಗಿರಿಸಿಕೊಂಡು
ಮಿತ್ರತ್ವವನ್ನು ಸೂಕ್ಷ್ಮವಾಗಿ
ಕಾಪಾಡಿಕೊಂಡಿರುವ
ಆಪ್ತರನು ಕಂಡೊಡನೇ
ಆತ್ಮೀಯವಾಗಿ ಮಾತನಾಡುವ
ಕಣ್ಣರಳಿಸಿ ನಗುವ, ಸಂತಸಪಡುವ
ಪಂಪಯ್ಯ ಶೆಟ್ಟಿ ಅಜಾತಶತ್ರು

ಮಗುಮನದ
ಮೃದು ಮನೋಭಾವ
ಯಾರನ್ನೂ ನೋಯಿಸದ
ಯಾರಿಗೂ ಕಟುವಾಗಿ ಮಾತನಾಡದ
ಎಲ್ಲರೊಡನೆ ಬೆಲ್ಲ ಸಕ್ಕರೆಯಾಗಿ
ಅರಳು ಮಗಮಗಿಸುವ ಆತ್ಮೀಯ
ಪಂಪಯ್ಯಶೆಟ್ಟಿ ಅಜಾತಶತ್ರು

ಕನ್ನಡವೆಂದರೆ
ರೋಮಾಂಚನಗೊಳ್ಳುವ
ಸದು ಹೃದಯದ
ಸಂಪನ್ನತೆಯ ಸಾಕಾರ ಸ್ವರೂಪ
ನೂರುವಸಂತಗಳು ಬಾಳಿ
ಕನ್ನಡಕ್ಕಾಗಿ ದುಡಿದು ಬೆಳಕು ನೀಡುವ
ಪಂಪಯ್ಯ ಶೆಟ್ಟಿ ಅಜಾತಶತ್ರು

ಅಯ್ಯಪ್ಪಯ್ಯ ಹುಡಾ
ಸುದ್ದಿಮೂಲ ದಿನಪತ್ರಿಕೆ
ಸಿಯಾ ತಲಾಬ, ರಾಯಚೂರು
ಸನಿಹವಾಣಿ : 9986568183

ಶ್ರೇಷ್ಠ ಶೆಟ್ಟಿ

✍ ಜಂಬಣ್ಣ ಅಮರಚಿಂತ, ರಾಯಚೂರು

ತಂದೆಯಂತೆ, ಪಂಪಯ್ಯಶೆಟ್ಟಿ
ತಕ್ಕಡಿತೂಗದ, ವ್ಯಾಪಾರ ಮಾಡದ
ಆದರೂ ಎನಿಸಿದರು ಶ್ರೇಷ್ಠ-ಶೆಟ್ಟಿ
ಕಲೆ, ಸಾಹಿತ್ಯ ಇವರ ಬಂಡವಾಳ
ಪ್ರತಿಭೆಗಳನ್ನು ತೂಗಿದರು, ಆರಿಸಿ ಗೌರವಿಸಿದರು.
ವೃತ್ತಿಯಲ್ಲಿ ಲೆಕ್ಕಿಗರು, ಪ್ರವೃತ್ತಿಯಲ್ಲಿ ಚಿಂತಕರು
ಆ ಜಾತಿ, ಈ ಜಾತಿ ಎನ್ನದ ಜಾತ್ಯತೀತರು
ಪ್ರತಿಭೆಗಳನ್ನು ಗೌರವಿಸಿ, ಸನ್ಮಾನಿಸಿದರು.
ರಾಜಕೀಯ ಕ್ಷೇತ್ರದ ಗಣ್ಯರು, ಸಾಹಿತ್ಯ ದಿಗ್ಗಜರು
ಇವರ ಒಡನಾಡಿಗಳು ಒಳನಾಡಿಗಳು
ಎಲ್ಲರಿಂದ ಗೌರವಪಡೆದ ಸುಕೋಮಲ ಮನದವರು
ಇದ್ದರೆ ಶೆಟ್ಟಿಯಂಥವರಿರಬೇಕು, ಶ್ರೇಷ್ಠಮಾನವರು
ಶೆಟ್ಟಿಯಂಥ ಪ್ರೀತಿ-ವಿಶ್ವಾಸದ ಬೆಳಕು
ಸದಾ ನಮ್ಮ ಜೊತೆಗಿರಲಿ
ಶೆಟ್ಟಿ ನೂರುಕಾಲ ಬಾಳಲಿ
ಸಾಹಿತ್ಯ ಕ್ಷೇತ್ರ ಬೆಳಗಿಸಲಿ
ಇದು ಎಲ್ಲರ ಆಶಯ ಸದಾಶಯ

ಜಂಬಣ್ಣ ಅಮರಚಿಂತ
8-11-181/796
ವಿದ್ಯಾನಗರ, ರಾಯಚೂರು-584 103

ನುಡಿಶಿಲ್ಪಿ....

✍ ಹನುಮೇಶ ಗುಮಗೇರಿ

ಕನ್ನಡ ಪರಿಚಾರಿಕೆಗೆ ಹೆಸರು
ನಮ್ಮ ಪಂಪಯ್ಯ ಶೆಟ್ಟರು
ಮುನ್ನಡೆವ ದಾರಿಗೆ ಹಸಿರು
ನುಡಿಸೇವೆಗೆ ಸದಾ ಸಿದ್ಧಹಸ್ತರು

ನುಡಿಶಿಲ್ಪಿಯ ಒಡಲು
ಕನ್ನಡ ಮನಸ್ಸುಗಳ ಕಡಲು
ಜೀವಸೆಲೆಯ ಮಡಿಲು
ಸಂಸ್ಕೃತಿಗಾಗಿ ಹೆಗಲು

ಕಾಡುವ ಕಡುಕಷ್ಟಗಳ ಕದಲಿಸಿ
ಓದಿನ ದಿನಗಳ ವೇಗವಾಗಿಸಿ
ಸಂತೃಪ್ತ ಜೀವನದನುದಿನ
ಸಾಂಸ್ಕೃತಿಕ ಜಗತ್ತಿನ ಅನಾವರಣ

ಸಾಹಿತ್ಯಾಸಕ್ತರೆಲ್ಲರ
ಅಚ್ಚುಕಟ್ಟು ವೇದಿಕೆ
ಸಹೃದಯರ ಸಂಪ್ರೀತಿಯ
ಅಣೆಕಟ್ಟು ಜಗಕೆ

ಷಷ್ಠಿ ಪೂರ್ತಿಯ ಮುನ್ನಡೆ
ಪ್ರತಿ ಸವಾಲಿನಲ್ಲೂ ತೇರ್ಗಡೆ
ಘೂಮಳೆಯ ದಾರಿಗುಂಟ
ಅನಂತ ಸಂಚಲನೆ
ನಿಮಗಿದೋ ಅಭಿನಂದನೆ
ಶುಭಾಶಯಗಳ ಅರ್ಪಣೆ

ರವಿವಾರ 1-8-2010ರ ಸುದ್ದಿಮೂಲ ಪತ್ರಿಕೆಯಲ್ಲಿ ಸುದ್ದಿಸಂಪದ ಕಾಲಂನಲ್ಲಿ ಪ್ರಕಟವಾದ ಲೇಖನ

ಅಮೆರಿಕಾ ಸಂಯುಕ್ತಸಂಸ್ಥಾನದ ಪೆನ್ಸಿಲ್ವೇನಿಯಾ ರಾಜ್ಯದ ಪಿಟ್ಸ್‌ಬರ್ಗ್ ನಗರದಲ್ಲಿ ಅಳಿಯ ರಾಜೇಶ ಸುರಪುರ ಮತ್ತು ಮಗಳು ಶಿವರಂಜನಿ ನೆಲೆಸಿದ್ದು ಅವರುಗಳ ಆಹ್ವಾನದ ಮೇಲೆ ಮೇ ೩ ರಿಂದ ಜುಲೈ ೧೩ ರವರೆಗೆ ೮೦ ದಿನಗಳು ಅಮೆರಿಕಾ ಪ್ರವಾಸ ಮಾಡುವ ಅವಕಾಶ ಕೂಡಿಬಂತು. ಪ್ರವಾಸದ ಅನುಭವಗಳನ್ನು ಈ ಮೂಲಕ ಹಂಚಿಕೊಳ್ಳುತ್ತಿದ್ದೇನೆ.

–ಎಚ್. ಪಂಪಯ್ಯಶೆಟ್ಟಿ

ಹಸಿರು ಮತ್ತು ಸ್ವಚ್ಛತೆಗೆ ಹೆಸರಾದ ಪಿಟ್ಸ್‌ಬರ್ಗ್

ಬೆಂಗಳೂರು ನಗರದಿಂದ ಅಮೆರಿಕದ ಪಿಟ್ಸ್‌ಬರ್ಗ್ ತಲುಪಲು 23 ಗಂಟೆಗಳ ಸಮಯ ತೆಗೆದುಕೊಂಡಿತು. ಏರ್‌ಫ್ರಾನ್ಸ್ ವಿಮಾನದ ಮೂಲಕ ಪ್ರಯಾಣಿಸಿದ್ದು ಬೆಂಗಳೂರಿನಿಂದ ಫ್ರಾನ್ಸ್‌ಗೆ 10 ಗಂಟೆಗಳ ಪಯಣ. ಫ್ರಾನ್ಸ್‌ನಿಂದ ಅಮೆರಿಕದ ಅಟ್ಲಾಂಟಾ ನಗರ ತಲುಪಲು 9 ಗಂಟೆಗಳ ಪಯಣ. ಅಟ್ಲಾಂಟಾದಿಂದ ಪಿಟ್ಸ್‌ಬರ್ಗ್‌ಗೆ 1 ಗಂಟೆ 40 ನಿ.ಗಳ ಪಯಣ. ಒಟ್ಟು 20 ಗಂಟೆಗಳನ್ನು ವಿಮಾನದಲ್ಲಿಯೇ ಕಳೆದಿದ್ದೇವೆ. ಫ್ರಾನ್ಸ್ ಹಾಗೂ ಅಟ್ಲಾಂಟಾಗಳಲ್ಲಿ ವಿಮಾನಗಳನ್ನು ಬದಲಾಯಿಸಲಾಯಿತು. ಫ್ರಾನ್ಸ್ ಮತ್ತು ಭಾರತ ದೇಶಕ್ಕೆ 11 ಗಂಟೆಗಳ ಸಮಯ ವ್ಯತ್ಯಾಸವಿದ್ದರೆ, ಅಮೆರಿಕ ಮತ್ತು ಭಾರತಕ್ಕೆ 14 $^1/_2$ ಗಂಟೆಗಳ ವ್ಯತ್ಯಾಸವಿದೆ. ಭಾರತದಲ್ಲಿ ಬೆಳಗ್ಗೆ 6-00 ಗಂಟೆಯಾಗಿದ್ದರೆ ಅಮೆರಿಕದಲ್ಲಿ ರಾತ್ರಿ 8-30 ಆಗಿರುತ್ತದೆ. ಪಿಟ್ಸ್‌ಬರ್ಗ್ ಸಿಟಿ ತಲುಪಿದಾಗ ರಾತ್ರಿ 8-45 ಆಗಿತ್ತು. ಇನ್ನೂ ಸೂರ್ಯನ ಬಿಸಿಲಿತ್ತು. ಅಲ್ಲಿ ಮೇ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಹಗಲು ಹೆಚ್ಚಿರುತ್ತದೆ. ಬೆಳಗ್ಗೆ 5-30ಕ್ಕೆ ಸೂರ್ಯೋದಯವಾದರೆ ರಾತ್ರಿ 9-30ಕ್ಕೆ ಸೂರ್ಯಾಸ್ತವಾಗುತ್ತದೆ.

ಪಿಟ್ಸ್‌ಬರ್ಗ್ ನಗರದಲ್ಲಿ ಮಗಳು ಮತ್ತು ಅಳಿಯ ಗ್ರೀನ್ ಟ್ರೀ ರಸ್ತೆಯ ಕ್ಯಾರೇಜ್ ಪಾರ್ಕ್‌ನಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದಾರೆ. ಕ್ಯಾರೇಜ್ ಪಾರ್ಕ್‌ನಲ್ಲಿ ಸುಮಾರು 800 ಮನೆಗಳಿದ್ದು 700 ಮನೆಗಳಲ್ಲಿ ಭಾರತೀಯರು ವಾಸವಾಗಿದ್ದು ಅದರಲ್ಲಿ ಹೆಚ್ಚಿನವರು ದಕ್ಷಿಣ ಭಾರತೀಯರು. ಅದರಲ್ಲೂ ಮುಕ್ಕಾಲು ಪಾಲು ಆಂಧ್ರದವರು ನೆಲೆಸಿದ್ದಾರೆ.

ಅದೊಂದು ಮಿನಿ ಭಾರತ. ನನಗೆ ತೆಲುಗು ಬರುತ್ತಿದ್ದುರಿಂದ ಹತ್ತಾರು ಗೆಳೆಯರು ಸಿಕ್ಕರು. ಸಂಜೆ 6-30 ರಿಂದ 8-30ರವರೆಗೆ ಪಾರ್ಕ್‌ನಲ್ಲಿರುವ ಗಾರ್ಡನ್-ಕಂ-ಆಟದ ಮೈದಾನದಲ್ಲಿ ಎಲ್ಲರೂ ಒಂದೆಡೆ ಸೇರುತ್ತಿದ್ದೆವು. ಅಮೆರಿಕದಲ್ಲಿ ಮೇ ದಿಂದ ಆಗಸ್ಟ್‌ವರೆಗೆ 4 ತಿಂಗಳು ಬೇಸಿಗೆ ಕಾಲವಾಗಿದ್ದು ಹವಾಮಾನ ಬೆಂಗಳೂರಿನಲ್ಲಿದ್ದಂತಿರುತ್ತದೆ. ಆದ್ದರಿಂದ ಅಲ್ಲಿ ನೆಲೆಸಿರುವ ಭಾರತೀಯರು ಸಾಮಾನ್ಯವಾಗಿ ತಮ್ಮ ಪಾಲಕರನ್ನು ಈ ದಿನಗಳಲ್ಲಿ ಕರೆಯಿಸಿ ಕೊಳ್ಳುತ್ತಾರೆ. ಉಳಿದ 8 ತಿಂಗಳು ಚಳಿಗಾಲವಿದ್ದರೆ ಅದರಲ್ಲೂ ಜನವರಿಯಿಂದ ಮಾರ್ಚ್ ವರೆಗೆ ಮಂಜುಗಡ್ಡೆ ಬೀಳುತ್ತಿರುತ್ತದೆ. ಅಮೆರಿಕ ಸುತ್ತಲು ಈ 4 ತಿಂಗಳು ಪ್ರಶಾಂತವಾಗಿರುತ್ತದೆ.

ಜಗತ್ತಿನ ಅತ್ಯಂತ 10 ಸ್ವಚ್ಛವಾದ ನಗರಗಳಲ್ಲಿ (ಟಾಪ್ 10 ಕ್ಲೀನೆಸ್ಟ್ ಸಿಟೀಸ್‌ನಲ್ಲಿ) ಪಿಟ್ಸ್‌ಬರ್ಗ್ ಒಂದಾಗಿದೆ. ನೀವು ಎಲ್ಲಿ ತಿರುಗಾಡಿದರೂ ಒಂದು ಕಡ್ಡಿಯಷ್ಟು ಕಸ ಸಿಗುವುದಿಲ್ಲ. ಅಲ್ಲಿ ಯಾವ ಮನೆಗಳಿಗೂ ಕಾಂಪೌಂಡ್ ಇರುವುದಿಲ್ಲ. ಬದಲಾಗಿ ಗಾರ್ಡನ್ ಮತ್ತು ಹುಲ್ಲಿನ ಲಾಂಜ್ ಇರುತ್ತದೆ. ಹಸಿರು ಬೆಟ್ಟಗಳಿಂದ ಕೂಡಿದ ಸುಂದರ ನಗರ ವಿಶಾಲವಾಗಿ ಬೆಳೆದಿದೆ. ಅದರಲ್ಲೂ ನದಿ ತೀರದಲ್ಲಿ ಒಂದೆಡೆ ಡೌನ್‌ಟೌನ್ (ಕಾರ್ಯಾಲಯ ಗಳ ಸಮುಚ್ಚಯ) ಮತ್ತೊಂದೆಡೆ ನದಿಯ ತೀರದಲ್ಲಿ ಪ್ರವಾಸಿ ತಾಣ (ಸ್ಟೇಷನ್ ಸ್ಕ್ವಾಯರ್) ನಿರ್ಮಿಸಿದ್ದು ಗಾರ್ಡನ್, ಮ್ಯೂಜಿಕ್ ಫೌಂಟೇನ್, ಹೊಟೇಲ್‌ಗಳಿದ್ದು ಸಂಜೆಯ ಸಮಯದಲ್ಲಿ ನೋಡಲು ಆಹ್ಲಾದಕರವಾಗಿರುತ್ತದೆ. ನದಿ ತೀರದಲ್ಲಿ ಅಲ್ಲಲ್ಲಿ ನಿಲುಗಡೆಗಳನ್ನು ನಿರ್ಮಿಸಿದ್ದು ನಗರ ಸೌಂದರ್ಯ ಸವಿಯಲು ಬಹಳ ಅನುಕೂಲ ಮಾಡಿಕೊಟ್ಟಿರುತ್ತದೆ.

ಪಿಟ್ಸ್‌ಬರ್ಗ್ ನಗರದ ಮೂರ್‌ವಿಲ್ಲೇಯಲ್ಲಿ ವಿಶಾಲವಾದ ಬೆಟ್ಟದ ಮೇಲೆ ನಿರ್ಮಿಸಿರುವ ಸುಂದರ ಕಟ್ಟಡ ವಿನ್ಯಾಸ ಹೊಂದಿರುವ ವೆಂಕಟೇಶ್ವರ ದೇವಸ್ಥಾನ, ಅಮೆರಿಕದೇಶದಲ್ಲಿ ನೆಲೆಸಿರುವ ಭಾರತೀಯರಿಗೆ ತಿರುಪತಿಯಿದ್ದಂತೆ. ವಾರದ ಏಳು ದಿನಗಳು ಭಕ್ತಾದಿಗಳನ್ನು ಆಕರ್ಷಿಸುವ ದೇವಸ್ಥಾನವಾಗಿದೆ. ಅಲ್ಲಿ ಪೊಂಗಲ್, ಬಿಸಿಬೇಳೆಬಾತ್, ಸಾಂಬಾರ್ ರೈಸ್ ಕಡಿಮೆ ದರಗಳಲ್ಲಿ ಸಿಗುವ ಪ್ರಸಾದ್ ಕೌಂಟರ್ (ಕ್ಯಾಂಟಿನ್) ದಕ್ಷಿಣ ಭಾರತೀಯರನ್ನು ಕೈ ಬೀಸಿ ಕರೆಯುತ್ತದೆ. ಅದರಂತೆ ಹಿಂದೂ ಜೈನ್ ಟೆಂಪಲ್ (ಬಿರ್ಲಾ ಮಂದಿರದಂತೆ ಆಕರ್ಷಕ ಕಟ್ಟಡ) ಮತ್ತು ಸಾಯಿ ಬಾಬಾ ದೇವಸ್ಥಾನಗಳು ಪ್ರವಾಸಿಗರನ್ನು ಆಕರ್ಷಿಸುವ ಪವಿತ್ರ ಸ್ಥಾನಗಳಾಗಿದೆ.

ರಸ್ತೆಗಳು : ಅಲ್ಲಿ ನನ್ನ ಗಮನ ಸೆಳೆದಿದ್ದು ರಸ್ತೆಗಳು. ವಾಹನಗಳ ಸಂಖ್ಯೆಗಳ ಓಡಾಟದ ಅವಶ್ಯಕ್ಕನುಗುಣವಾಗಿ ಬಹಳ ನುಣುಪಾಗಿ ಭದ್ರವಾದ ಅಚ್ಚುಕಟ್ಟಾದ ರಸ್ತೆಗಳು ನಿರ್ಮಾಣಗೊಳಿಸಲಾಗಿದೆ. ಹೋಗಲು ಮತ್ತು ಬರಲು ರಸ್ತೆಗಳು ಬೇರೆ ಬೇರೆಯಾಗಿದ್ದು ಕನಿಷ್ಠವೆಂದರೆ ಎರಡೆರಡು ಸಬ್‌ವೇಗಳಿರುತ್ತವೆ. ಹೆಚ್ಚಿನ ವಾಹನಗಳು ಓಡಾಡುವ ರಸ್ತೆಗಳಲ್ಲಿ 3 ರಿಂದ 4 ಸಬ್‌ವೇಗಳು ಇರುತ್ತವೆ. ವಾಹನ ನಡೆಸುವಾಗ ಬಹಳಷ್ಟು ನಿಯಮಗಳನ್ನು

ಪಾಲಿಸುತ್ತಾರೆ. ಅಲ್ಲಿ ವಾಹನದ ಹಾರ್ನ್ ಮಾಡುವ ಅವಶ್ಯಕತೆಯೇ ಬರುವುದಿಲ್ಲ. ಗಂಟೆಗೆ ಕನಿಷ್ಠ 80 ರಿಂದ 100 ಕಿ.ಮೀ. ವೇಗದಲ್ಲಿ ಓಡಿಸುತ್ತಾರೆ. ಹೋಗುವ ರಸ್ತೆಯಿಂದ ಬರುವ ರಸ್ತೆಗೆ ಬರಬೇಕಾದರೆ ಟರ್ನ್ ಆಗಿ ಬರಲು ಅವಕಾಶವಿರುವುದಿಲ್ಲ. ಪ್ರತಿ 30 ರಿಂದ 40 ಕಿ.ಮೀ. ವರೆಗೆ ಓವರ್ ಬ್ರಿಡ್ಜ್‌ಗಳಿರುತ್ತವೆ. ಅದರ ಮೂಲಕ ಬರಬೇಕು.

ರಸ್ತೆಗಳಲ್ಲಿ ಜನರ ಓಡಾಟ ಕಂಡುಬರುವುದಿಲ್ಲ. ತಿರುಗಾಟ ಇಲ್ಲವೇ ಇಲ್ಲ, ಎಲ್ಲರಿಗೂ ಕಾರುಗಳು ಇರುತ್ತವೆ. ಪ್ರತಿ ಮನೆಯಲ್ಲಿ 2 ರಿಂದ 3 ಕಾರುಗಳು ಇರುತ್ತವೆ. ಕಾರಿನಲ್ಲಿಯೇ ಓಡಾಟ. ಏನಾದರೂ ಕೇಳಬೇಕೆಂದರೆ ಜನರು ಸಿಗುವುದೇ ಇಲ್ಲ. ಸ್ಥಳ ಮತ್ತು ಪರ ಊರುಗಳಿಗೆ ಹೋಗಬೇಕಾದರೆ ಕಾರಿನಲ್ಲಿ ಜಿ.ಪಿ.ಎಸ್. (ಮಾರ್ಗಸೂಚಿಯಂತ್ರ ಬಳಸುತ್ತಾರೆ). ಅದು ಸರಿಯಾಗಿ ಸೇರಬೇಕಾದ ಸ್ಥಳಕ್ಕೆ ಕರೆದು ಕೊಂಡು ಹೋಗುತ್ತದೆ.

ಶಾಪಿಂಗ್ ಮಾಲ್‌ಗಳು : ಬೆಂಗಳೂರಿನಲ್ಲಿ ಪ್ರಾರಂಭವಾಗಿರುವ ಬಿಗ್ ಬಜಾರ್, ಟೋಟಲ್, ಮೋರ್, ಮಂತ್ರಿ ಮುಂತಾದ ಶಾಪಿಂಗ್ ಮಾಲ್ಸ್ ನೋಡಿದಾಗ ನಮಗೆ ಅಬ್ಬಾ ಅನಿಸುತ್ತದೆ. ಅಮೆರಿಕದಲ್ಲಿ ಒಂದೊಂದು ಶಾಪಿಂಗ್ ಮಾಲ್ಸ್ ಬೆಂಗಳೂರಿಗಿಂತ 15 ರಿಂದ 20 ಪಟ್ಟು ದೊಡ್ಡದಾಗಿರುತ್ತದೆ. ಶಾಪಿಂಗ್ ಮಾಲ್ ಮುಂದೆ 200 ರಿಂದ 300 ಕಾರುಗಳು ನಿಲುಗಡೆ ಮಾಡಲು ಪಾರ್ಕಿಂಗ್ ವ್ಯವಸ್ಥೆ ಇರುತ್ತದೆ. ಅಲ್ಲಿಯ ವಾಲ್‌ಮಾರ್ಟ್, ಜಾಯಿಂಟ್ ಈಗಲ್, ಸಿಯರ್ಸ್, ಶಾಪ್-ನ್-ಸೇವ್, ಕೋಹ್ಲ್ಸ್ ಮುಂತಾದವು ಬಹಳ ಖ್ಯಾತಿ ಹೊಂದಿದ ಶಾಪಿಂಗ್ ಮಾಲ್‌ಗಳು, ಹಾಲು, ಹಣ್ಣು ಕಾಯಿಪಲ್ಲೆ ಸಿಹಿತಿಂಡಿ, ಬೇಕರಿ, ಪೀಠೋಪಕರಣಗಳು, ಹಾರ್ಡ್‌ವೇರ್, ಆಟೋಮೊಬೈಲ್ಸ್ ಗೃಹೋಪಯೋಗಿ ವಸ್ತುಗಳು, ಬಟ್ಟೆಗಳು, ಫೋಟೋ ಸ್ಟುಡಿಯೋ, ಬ್ಯಾಂಕ್, ಪೆಟ್ರೋಲ್ ಬಂಕ್, ಹೀಗೆ ಎಲ್ಲಾ ವಸ್ತುಗಳು ಒಂದೇ ಸೂರಿನಡಿ ದೊರೆಯುತ್ತವೆ. ವ್ಯವಹಾರದಲ್ಲಿ ಸ್ಪರ್ಧಾತ್ಮಕತೆ ಕಂಡು ಬಂತು. ಆಫರ್ಸ್ ಡಿಸ್ಕೌಂಟ್ಸ್ ಕ್ಲಿಯರೆನ್ಸ್ ಸೇಲ್ ಹೀಗೆ ಗ್ರಾಹಕರಿಗೆ ದರಗಳನ್ನು ನೋಡಿ ಖರೀದಿಸಲು ಬಹಳಷ್ಟು ಅನುಕೂಲಗಳಿರುತ್ತವೆ. ಮನೆ ಮನೆಗೆ ಆಫರ್ಸ್, ಡಿಸ್ಕೌಂಟ್ ಇರುವ ಬುಕ್‌ಲೆಟ್‌ಗಳನ್ನು ಪ್ರತಿ ವಾರ ತಲುಪಿಸುತ್ತಾರೆ. ಇಂಟರ್‌ನೆಟ್‌ನಲ್ಲಿ ಕೂಡ ಎಲ್ಲ ಮಾಹಿತಿ ದೊರಕುತ್ತದೆ. ಕ್ವಾಲಿಟಿ ಮತ್ತು ಕ್ವಾಂಟಿಟಿಗೆ ಆದ್ಯತೆ ಇದೆ. ಮೋಸ ಮತ್ತು ಕಲಬೆರಕೆ ಕಂಡುಬರುವುದಿಲ್ಲ.

ಶಾಲೆಗಳು : ಅಲ್ಲಿ ಏರಿಯಾ ವೈಜ್. ಜನಸಂಖ್ಯೆಗನುಗುಣವಾಗಿ ಆ ಭಾಗದಲ್ಲಿ ಒಂದೇ ಪ್ರಾಥಮಿಕ ಮತ್ತು ಪ್ರೌಢಶಾಲೆ ಇರುತ್ತದೆ. ಆ ಭಾಗದಲ್ಲಿ ವಾಸಿಸುವ ಜನರು ಅಲ್ಲಿಯೇ ಪ್ರವೇಶ ಪಡೆಯಬೇಕು. ಬೇರೆ ಕಡೆಯ ಶಾಲೆಗಳಲ್ಲಿ ಪ್ರವೇಶ ನೀಡುವುದಿಲ್ಲ. ಇಡೀ ಪಿಟ್ಸ್‌ಬರ್ಗ್ ನಗರದಲ್ಲಿ ಸುಮಾರು 10 ಶಾಲೆಗಳು ಮಾತ್ರ ಕಂಡುಬಂದಿವೆ. ಎಲ್ಲವೂ ಸರಕಾರದ ಅನುಮತಿ ಪಡೆದ ಗುಣಮಟ್ಟದ ಶಾಲೆಗಳು. ಮನಬಂದಂತೆ ಶಾಲೆಗಳನ್ನು ತೆರೆಯಲು ಅವಕಾಶವಿಲ್ಲ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಇಲ್ಲಿಯ ಎಂಜಿನಿಯರಿಂಗ್

ಕಾಲೇಜಿನಷ್ಟು ದೊಡ್ಡದಾಗಿದ್ದವು. ಪ್ರತಿ ಶಾಲೆಯಲ್ಲಿ ಮಕ್ಕಳನ್ನು ಕರೆದುಕೊಂಡು ಬರಲು ನೂರಾರು ಬಸ್ಸುಗಳಿರುವುದು ಕಂಡುಬಂತು. ಅಲ್ಲಿ ಆಟೋರಿಕ್ಷ , ಸಿಟಿಬಸ್ ವ್ಯವಸ್ಥೆ ಇಲ್ಲದ್ದರಿಂದ ಶಾಲಾ ಬಸ್ಸುಗಳು ಬಹಳ ಇರುತ್ತವೆ. ವರ್ಷದಲ್ಲಿ 8 ತಿಂಗಳು ಚಳಿಯಿರುವುದರಿಂದ ಶಾಲೆಗೆ ನಡೆದುಕೊಂಡು ಹೋಗಲು ಸಾಧ್ಯವಿಲ್ಲ. ಶಾಲೆಗಳಲ್ಲಿ ಎಲ್ಲಾ ಕ್ರೀಡೆಗಳ ಬೇರೆ ಬೇರೆ ಆಟದ ಮೈದಾನಗಳು, ಸ್ವಿಮ್ಮಿಂಗ್ ಪೂಲ್, ಗ್ರಂಥಾಲಯ, ತರಗತಿ ಕೋಣೆಗಳು, ಸುಸಜ್ಜಿತವಾಗಿರುತ್ತವೆ. ನಾವಿದ್ದ ಭಾಗದಲ್ಲಿ ಬರುವ ಚಾರ್ಟರ್ ವ್ಯಾಲಿ ಹೈಸ್ಕೂಲಿಗೆ ಭೇಟಿ ನೀಡಿದ್ದೆ. ಶಾಲೆಯ ವಾತಾವರಣ, ಶಿಸ್ತು ನೋಡಿ ಆಶ್ಚರ್ಯಚಕಿತನಾದೆ.

ದವಾಖಾನೆಗಳು : ಅಲ್ಲಿ ಪ್ರೈವೇಟ್ ಪ್ರಾಕ್ಟೀಸ್ ಮಾಡುವ ಖಾಸಗಿ ದವಾಖಾನೆಗಳು, ನರ್ಸಿಂಗ್ ಹೋಮ್‌ಗಳು, ಹೆಜ್ಜೆ ಹೆಜ್ಜೆಗೆ ಸಿಗುವ ಮೆಡಿಕಲ್ ಶಾಪ್‌ಗಳು ಕಂಡುಬರಲಿಲ್ಲ. ಪ್ರತಿಯೊಂದು ಭಾಗದಲ್ಲಿ ಶಾಲೆಯಿದ್ದಂತೆ ಒಂದೊಂದೇ ಆಸ್ಪತ್ರೆ ಇರುತ್ತದೆ. ಅದು ಎಲ್ಲಾ ವಿಭಾಗಗಳನ್ನು ಹೊಂದಿರುತ್ತದೆ. ಅಲ್ಲಿ ನೇರವಾಗಿ ಹೋಗಿ ಡಾಕ್ಟರನ್ನು ಕಾಣಲು ಸಾಧ್ಯವಿಲ್ಲ. ಮುಂಚಿತವಾಗಿಯೇ ಕಾಣುವ ಸಮಯ ತೆಗೆದುಕೊಂಡು (ಪ್ರಿಯರ್ ಅಪಾಯಿಂಟ್ ಮೆಂಟ್) ಸರಿಯಾದ ಸಮಯಕ್ಕೆ ಹೋಗಿ ಡಾಕ್ಟರನ್ನು ಕಾಣಬೇಕು. 15 ನಿಮಿಷ ತಡವಾಗಿ ಹೋದರೆ ಡಾಕ್ಟರ್ ಪ್ರವೇಶ ನೀಡುವುದಿಲ್ಲ. ಅರ್ಜೆಂಟ್ ಇದ್ದರೆ ಎಮರ್ಜೆನ್ಸಿ ವಿಭಾಗಕ್ಕೆ ಹೋಗಬೇಕು. ಅಲ್ಲಿ ಚಾರ್ಜ್ ಬಹಳ, ನಾವಿದ್ದ ಭಾಗದಲ್ಲಿ ಬರುವ ಸೇಂಟ್ ಕ್ಲೇರಾ ಆಸ್ಪತ್ರೆಯಲ್ಲಿ ನನ್ನ ಮಗಳ ಹೆರಿಗೆಯಾಯಿತು. ದವಾಖಾನೆ ಕಟ್ಟಡ, ಪೀಠೋಪಕರಣ, ಸ್ವಚ್ಛತೆ, ಔಷಧೋಪಚಾರ ನೋಡಿ ಬೆರಗಾದೆ. ಅಲ್ಲಿ ಸಾಮಾನ್ಯ ಹೆರಿಗೆಗೆ ಆದ್ಯತೆ, ಸಿಜೇರಿಯನ್ ಬಹಳ ಕಡಿಮೆ ಎನ್ನುವುದಕ್ಕಿಂತ ಇಲ್ಲವೇ ಇಲ್ಲ ಎನ್ನಬಹುದು. 10 ರಿಂದ 12 ಗಂಟೆ ಪ್ರಯತ್ನ ಪಟ್ಟು ಸಾಮಾನ್ಯ ಹೆರಿಗೆ ಮಾಡಿಸುವುದನ್ನು ಕಂಡೆನು. ಸರಳತೆ, ಸೌಜನ್ಯ ಕಂಡುಬಂತು. ಅಲ್ಲಿ ಡಾಕ್ಟರ್‌ಗಳು, ನರ್ಸ್‌ಗಳು ಬೇಸರ ಪಡುವುದಿಲ್ಲ, ಗೊಣಗುವುದಿಲ್ಲ. ಸೇವೆಗೆ ಹೆಸರಾದವರು.

ಸಂಗಮ-ಯುಗಾದಿ 2010 : ಪಿಟ್ಸ್‌ಬರ್ಗ್ ಕನ್ನಡಿಗರು ಸ್ಥಾಪಿಸಿಕೊಂಡಿರುವ ಸಂಸ್ಥೆ ಸಂಗಮ. ಕನ್ನಡಿಗರ ಸುಮಾರು 40 ಕುಟುಂಬಗಳು ನೆಲೆಸಿದ್ದು ಪ್ರತಿ ವರ್ಷ ಯುಗಾದಿ ಮತ್ತು ದೀಪಾವಳಿ ಹಬ್ಬಗಳನ್ನು ಎಲ್ಲರೂ ಸೇರಿ ವೆಂಕಟೇಶ್ವರ ದೇವಸ್ಥಾನದಲ್ಲಿ ಆಚರಿಸುತ್ತಾರೆ. ಸುಂದರ ಸಭಾಂಗಣ. ಭಾರತೀಯರಿಗೆ ಕೇಂದ್ರ ಸ್ಥಾನವಾಗಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಮೇ 8, 2010 ರಂದು ಆದಿವಾರ ಸಂಜೆ ಆಹ್ಲಾದಕರ ವಾತಾವರಣದಲ್ಲಿ ಸಂಭ್ರಮದಿಂದ ಯುಗಾದಿ ಕಾರ್ಯಕ್ರಮವನ್ನು ಆಚರಿಸಿದರು. ಮೊದಲೇ ನಿಗದಿಯಾದಂತೆ ಈ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸುವ ಮತ್ತು ಮಾತನಾಡುವ ಅವಕಾಶ ನನಗೆ ದೊರಕಿತ್ತು. ಅಧ್ಯಕ್ಷರಾದ ಶಶಿ ಕೃಷ್ಣರಾಜನಗರ್ ಪ್ರಾಸ್ತಾವಿಕವಾಗಿ ಮಾತನಾಡಿದರೆ, ಸಾಂಸ್ಕೃತಿಕ ಕಾರ್ಯದರ್ಶಿ ಸರ್ವೇಶ್ವರಿ ಹೆಗಡೆ ಸ್ವಾಗತಿಸಿದರು.

ಸುಮಾರು 3 ತಾಸು ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸೀತಾಲಕ್ಷ್ಮೀ ಮಾಧವನ್, ಸಹನರಾವು, ಸ್ನೇಹ ಹೊಯ್ಸಳ, ಈಶಾನ ಅಶ್ವತ್ಥ, ಸೋನ್ಯ ನಂಜುಂಡಪ್ಪ ಡಾ. ಮಾಲಿನಿ ಶ್ರೀಧರನ್ ಅವರು ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟರು. ಮಕ್ಕಳು ಗುಂಪು ಡ್ಯಾನ್ಸ್ ಹಾಗೂ ನೃತ್ಯ ಕಾರ್ಯಕ್ರಮ ನಡೆಸಿಕೊಟ್ಟರು. 5 ಜನ ದಂಪತಿಗಳು ಬಂಧನ ಚಿತ್ರದ ಬಣ್ಣ ನನ್ನ ಒಲವಿನ ಬಣ್ಣ ಹಾಡಿಗೆ ಡ್ಯಾನ್ಸ್ ಮಾಡಿದ್ದು ಖುಷಿ ನೀಡಿತು. ನವಚೇತನ ಕಲಾವಿದರು 90 ನಿಮಿಷಗಳ ಕಾಲ 'ನಡುಜೀವನದ ಗೊಂದಲ' ಹಾಸ್ಯ ನಾಟಕ ಮನಮೋಹಕವಾಗಿ ಪ್ರದರ್ಶಿಸಿದರು.

ಹುಟ್ಟಿದ ನಾಡು ಮಾತೃಭೂಮಿಯನ್ನು ಮರೆಯದಿರಲು ಹಾಗೂ ಹುಟ್ಟಿದ ಊರಿನಲ್ಲಿ ನೆನಪಿನಲ್ಲಿ ಉಳಿಯುವಂತಹ ಸೇವಾಕಾರ್ಯ ಮಾಡಲು ನನಗೆ ಸಿಕ್ಕ ಅವಕಾಶದಲ್ಲಿ ಹೇಳಿದೆ. ಈ ಸಮಯದಲ್ಲಿ ಅಲ್ಲಿ ಸೇರಿದ್ದ ಕನ್ನಡಿಗರು ಕರ್ನಾಟಕದ ಪ್ರವಾಹ ಸಂತ್ರಸ್ಥರ ನಿಧಿಗೆ 5000 ಡಾಲರ್ ಹಣ ಸಂಗ್ರಹಿಸಿದರು. ಕಾರ್ಯಕ್ರಮದ ನಂತರ ಭೋಜನಕೂಟ ಏರ್ಪಡಿಸಲಾಗಿತ್ತು .

ಜೂನ್ 9, 2013ರಂದು ನಡೆದ ಮಾನ್ವಿತಾಲ್ಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷರಾಗಿ ಪಂಪಯ್ಯ ಶೆಟ್ಟಿ ಮಾಡಿದ ಭಾಷಣ

ಮಾನ್ವಿಯ ಮಹಾಜನರೇ, ಬಂಧು-ಭಗಿನಿಯರೇ,

ಇತರರಿಗೆ ಸಂತೋಷವನ್ನು ನೀಡಿ
ಸಂತೋಷವು ಚಕ್ರಬಡ್ಡಿಯೊಂದಿಗೆ
ನಿಮಗೇ ಮರಳಿ ಬರುವುದು

ಇದು ಅನುಭಾವದ ನುಡಿ. ಬೆಳಗ್ಗೆ 6.00 ಗಂಟೆಗೆ ಹಿರಿಯ ಲೇಖಕ ಗಿರಿರಾಜ ಹೊಸಮನಿಯವರು ಫೋನ್ ಮಾಡಿ ಇದುವರೆಗೆ ನೀವು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಿದ್ದಿರಿ, ಈಗ ನಿಮ್ಮ ತಾಲ್ಲೂಕಿನ ಜನ ನಿಮ್ಮನ್ನು ಸಮ್ಮೇಳನದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಾರೆಂದು ಅಭಿನಂದಿಸಿದಾಗ ನಿಜಕ್ಕೂ ನಾನು ಸಂತೋಷಪಟ್ಟೆ. ಕಳೆದ 40 ವರ್ಷಗಳಿಂದ ಕನ್ನಡದ ಪರಿಚಾರಕನಾಗಿ, ಸಂಘಟಕನಾಗಿ, ಅಲ್ಪಸೇವೆ ಮಾಡಿದ ನನಗೆ ಇದು ಬಹುದೊಡ್ಡ ಕಾಣಿಕೆ.

2012 ನವೆಂಬರ್‌ನಲ್ಲಿ 60ನೆಯ ಹುಟ್ಟುಹಬ್ಬವನ್ನು ಆಚರಿಸಿಕೊಂಡ ನನಗೆ ಹುಟ್ಟುಹಬ್ಬದ ಕೊಡುಗೆ ಎನ್ನಲೇ, ಏಪ್ರಿಲ್ 30ರಂದು ವೃತ್ತಿಯಿಂದ ನಿವೃತ್ತನಾಗಿ ಬೆಂಗಳೂರಿನಲ್ಲಿ ನೆಲೆಸಲು ಹೋಗುತ್ತಿರುವಾಗ ಬೀಳ್ಕೊಡುಗೆ ಎನ್ನಲೆ? ಸಾಹಿತ್ಯದ ಅಭಿಮಾನಿಯಾದ ನನಗೆ ಸಾಹಿತ್ಯ ಸಮ್ಮೇಳನದ ಎತ್ತರದ ಗೌರವಸ್ಥಾನ ನೀಡಿ, ನಿಮ್ಮೊಂದಿಗೆ ಭಾಗಿಯಾಗಲು ಅವಕಾಶ ಕಲ್ಪಿಸಿದ್ದೀರಿ. ನಿಮ್ಮ ಅಭಿಮಾನ, ಪ್ರೀತಿ-ವಿಶ್ವಾಸಕ್ಕೆ ನಿಮ್ಮೆಲ್ಲರಿಗೆ ಚಿರಋಣಿಯಾಗಿದ್ದೇನೆ. ರಂಗಭೂಮಿ ಕಲಾವಿದರಾಗಿ, ನಾಟಕ ಕಂಪನಿ ಮಾಲೀಕರಾಗಿ ತಮ್ಮ ಇಡೀ ಆಸ್ತಿ-ಸಂಪತ್ತನ್ನೆಲ್ಲಾ ರಂಗಭೂಮಿಯ ಸೇವೆಗಾಗಿ ಕಳೆದಿರುವ ನನ್ನ ತಂದೆ ಹೊಸೂರು ರಾಮಸ್ವಾಮಿಯವರನ್ನು ನೆನೆಯುವೆ. ಅವರ ಆಶೀರ್ವಾದ, ಸಂಸ್ಕಾರ ಇಂತಹ ಸೌಭಾಗ್ಯ ಸಿಗಲು ಕಾರಣವೆಂದು ಭಾವಿಸುವೆ.

ಬರೆಹಗಾರರಿಗೆ ದೊರೆಯುವ ಅಪೂರ್ವ ಅವಕಾಶಗಳು, ಅಭಿಮಾನಿಗಳಿಗೆ, ಸ್ವಾಗತ ಸಮಿತಿಗೆ ತಾವು ಕನ್ನಡ ಸೇವೆ ಮಾಡಿದ ಸಂತೃಪ್ತಿ ಸಮಾಧಾನಗಳು, ಪುಸ್ತಕ ಪ್ರದರ್ಶನ, ಮಾರಾಟಗಳ ಮೂಲಕ ಬೆಳೆಯುವ ಪುಸ್ತಕ ಪ್ರೀತಿ, ಸಾಹಿತಿಗಳ ದರ್ಶನಭಾಗ್ಯ, ತಾಲ್ಲೂಕಿನ ಅಭಿವೃದ್ಧಿ ಕುರಿತು ಚರ್ಚೆ, ಇದು ಸಾಹಿತ್ಯ ಸಮ್ಮೇಳನಗಳ ಸಾಧನೆಯಾಗಿದೆ.

ರಾಯಚೂರು ಹಾಗೂ ಮಾನ್ವಿಯಲ್ಲಿ ಕೂಡಿ ಎರಡು ಜಿಲ್ಲಾ ಸಾಹಿತ್ಯ ಸಮ್ಮೇಳನಗಳು, ಮಾನ್ವಿ ನಗರದಲ್ಲಿ ಮೂರು ತಾಲೂಕಾ ಸಾಹಿತ್ಯ ಸಮ್ಮೇಳನವನ್ನು ನಡೆಸಿಕೊಟ್ಟು, ಮತ್ತೆ ಈ ಸಮ್ಮೇಳನವನ್ನು ನಡೆಸಿಕೊಡುತ್ತಿರುವ ಸ್ವಾಗತ ಸಮಿತಿ ಅಧ್ಯಕ್ಷ ಎನ್.ಎಸ್. ಬೋಸರಾಜು ಅವರನ್ನು, ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದಾಗ ಹಣಕಾಸು ಸಮಿತಿ ಅಧ್ಯಕ್ಷರಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ರೂ. 70,000/- ಅನುದಾನ ಬಿಡುಗಡೆಯಾಗಲು ಕಾರಣಕರ್ತರಾದ ಸಮ್ಮೇಳನದ ಕಾರ್ಯಾಧ್ಯಕ್ಷರಾದ ಶಾಸಕ ಹಂಪಯ್ಯ ನಾಯಕರನ್ನು, ಹಿಂದಿನ ಐದು ತಾಲ್ಲೂಕಾ ಸಾಹಿತ್ಯ ಸಮ್ಮೇಳನಗಳು ನಡೆಯಲು ಕಾರಣಕರ್ತರಾದ ಮಾನ್ವಿ ತಾಲ್ಲೂಕಾ ಕ.ಸಾ.ಪ. ಅಧ್ಯಕ್ಷರಾಗಿದ್ದ ರಾಮಚಂದ್ರಪ್ಪರವರನ್ನು, ಕಳೆದ ಅವಧಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಸಿ, ಈ ಅವಧಿಯಲ್ಲಿ ಮತ್ತೊಮ್ಮೆ ತಾಲೂಕ ಸಾಹಿತ್ಯ ಸಮ್ಮೇಳನ ನಡೆಸುತ್ತಿರುವ ಉತ್ಸಾಹಿ ತಾಲ್ಲೂಕಾ ಕ.ಸಾ.ಪ. ಅಧ್ಯಕ್ಷರಾದ ತಾಯಪ್ಪ ಹೊಸೂರು ಹಾಗೂ ಇನ್ನಿತರ ಎಲ್ಲರನ್ನು ಈ ಸಂದರ್ಭದಲ್ಲಿ ನೆನೆಯುತ್ತಾ, ನನ್ನ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹಿಸಿ ಹುರಿದುಂಬಿಸಿದ, ಅವಕಾಶಗಳನ್ನು ನೀಡಿದ, ವಿದ್ಯಾರ್ಥಿಯಾಗಿದ್ದಾಗ ರಾಯಚೂರು ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಸ್ವಯಂ ಸೇವಕ ಸಮಿತಿ ಅಧ್ಯಕ್ಷನನ್ನಾಗಿ ಮಾಡಿ, ಮಾರ್ಗದರ್ಶನ ನೀಡಿದ ಜಿಲ್ಲಾ ಕ.ಸಾ.ಪ. ಪ್ರಥಮ ಅಧ್ಯಕ್ಷ ದಿ॥ ಡಾ.ಎಸ್. ರಾಮಕೃಷ್ಣ . ಶಾಲೆಯಲ್ಲಿ ಕನ್ನಡ ಕಲಿಸಿದ, ಸಾಹಿತ್ಯಾಭಿಮಾನ ಬೆಳೆಸಿದ, ಎಲ್ಲಾ ಸಮಯದಲ್ಲಿಯೂ ಬೆಂಬಲ ನೀಡಿದ ಹಿರಿಯ ಸಾಹಿತ್ಯ ಚೇತನ ದಿ॥ ಶಾಂತರಸ, ನಾಡಿನ ಮೂರು ಹಳೆಯ ಕನ್ನಡ ಸಂಘಗಳಲ್ಲಿ ಒಂದಾದ ರಾಯಚೂರಿನ ಕರ್ನಾಟಕ ಸಂಘದ ಕಾರ್ಯದರ್ಶಿಯನ್ನಾಗಿ ಮಾಡಿ, ಸಾಹಿತ್ಯ ಸೇವೆ ಮಾಡಲು ಪ್ರೋತ್ಸಾಹಿಸಿದ, ಪತ್ರಿಕೆ ಮೂಲಕ ಬೆನ್ನು ತಟ್ಟಿದ ದಿ॥ ಎನ್.ಕೆ. ಕುಲಕರ್ಣಿ, ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡು ಬೆಳೆಯಲು ಅವಕಾಶ ಮಾಡಿಕೊಟ್ಟ ರಾಯಚೂರು ನಗರಸಭೆ, ಜಿಲ್ಲಾ ಕಾಂಗ್ರೆಸ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ದಿ॥ ಆರ್. ಆಂಜನೇಯಲು ಅವರನ್ನು ಹಾಗೂ ನನ್ನ ಬೆಳವಣಿಗೆಗೆ ಕಾರಣೀಕರ್ತರಾದ ಎಲ್ಲರನ್ನೂ ಸ್ಮರಿಸಿಕೊಳ್ಳುತ್ತೇನೆ.

ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ-ಗತಿ

ಇಂಗ್ಲಿಷ್ ಶಾಲೆಗಳಲ್ಲಿ ಓದಿದವರು ಮಾತ್ರ ಜಾಣರಾಗುತ್ತಾರೆ. ಡಾಕ್ಟರ್, ಇಂಜಿನಿಯರ್‌ಗಳಾಗಲು ಇಂಗ್ಲಿಷ್ ಮಾಧ್ಯಮವೇ ಶ್ರೇಷ್ಠ ಎಂಬ ತಪ್ಪು ಕಲ್ಪನೆ ಪಾಲಕರಲ್ಲಿ ಬೇರೂರಿ, ಹಳ್ಳಿ ಹಳ್ಳಿಗಳಲ್ಲಿ ಕೂಡ ಇಂಗ್ಲಿಷ್ ಮಾಧ್ಯಮದ ಶಾಲೆಗಳು ತಲೆಯೆತ್ತಿವೆ. ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಮೂಲಕ ಆಗಬೇಕೆಂಬ ಶಿಕ್ಷಣ ತಜ್ಞರ ಅಭಿಪ್ರಾಯಕ್ಕೆ ಮನ್ನಣೆ ಇಲ್ಲವಾಗಿದೆ ಮತ್ತು ನಾಲ್ಕನೆಯ ತರಗತಿಯವರೆಗೆ ಶಿಕ್ಷಣ ಮಾತೃಭಾಷೆಯಲ್ಲಿಯೇ ನಡೆಯಬೇಕೆಂಬ ಸರಕಾರಿ ಆದೇಶ ಉಲ್ಲಂಘನೆಯಾಗುತ್ತಿದೆ. ನಾಲ್ಕನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲು, ಐದನೆಯ ತರಗತಿಯಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಅನುಮತಿ ಪಡೆದ

ಶಾಲೆಗಳು ಸರಕಾರದ ಆದೇಶವನ್ನು ತಿರಸ್ಕರಿಸಿ ಕೇವಲ ಇಂಗ್ಲಿಷ್ ಮಾಧ್ಯಮದಲ್ಲಿ ಶಿಕ್ಷಣ ನೀಡುವುದನ್ನು ಕಾಣುತ್ತಿದ್ದೇವೆ. ಶಿಕ್ಷಣವೆಂಬುದು ವ್ಯಾಪಾರದ ಸರಕಾಗಿ, ವೃತ್ತಿಯಾಗಿ ಜೀವನಾಧಾರ ಮಾಡಿಕೊಂಡು, ಶಿಕ್ಷಣಕ್ಕೆ ಪೂರಕವಲ್ಲದ ಕಟ್ಟಡಗಳಲ್ಲಿ ಅರ್ಹರಲ್ಲದ ಶಿಕ್ಷಕರನ್ನು ನೇಮಿಸಿಕೊಂಡು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ರಾಜಾರೋಷವಾಗಿ ನಡೆಸುತ್ತಿರುವುದು ನೋಡಿದಾಗ, ಕನ್ನಡದ ಸ್ಥಿತಿ-ಗತಿ ಬಗ್ಗೆ ಚಿಂತೆ ಮೂಡುತ್ತದೆ. ಇನ್ನು ಸರ್ಕಾರವೇ ಇಂಗ್ಲಿಷ್ ಶಾಲೆಗಳನ್ನು ಪ್ರಾರಂಭಿಸಿ, ಕನ್ನಡದ ಶಾಲೆಗಳನ್ನು ಮುಚ್ಚುವತ್ತ ಹೆಜ್ಜೆ ಇಟ್ಟಿದೆ. ಶ್ರೀಮಂತರು, ವಿದ್ಯಾವಂತರು, ಉಳ್ಳವರು, ಶಿಕ್ಷಣಕ್ಕೆ ಆದ್ಯತೆ ನೀಡುವವರೆಲ್ಲಾ ತಮ್ಮ ಮಕ್ಕಳನ್ನು ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಕಳುಹಿಸುತ್ತಾರೆ. ಬಡವರು, ಕೂಲಿಕಾರರು, ಶಿಕ್ಷಣದ ಮಹತ್ವ ಅರಿಯದವರು, ಮಕ್ಕಳ ಶಿಕ್ಷಣದ ಬಗ್ಗೆ ಚಿಂತೆ ಇಲ್ಲದವರು, ಶುಲ್ಕ ಭರಿಸಲಾಗದವರು ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗಳಿಗೆ ಕಳುಹಿಸುತ್ತಿರುವ ಪರಿಸ್ಥಿತಿಯಲ್ಲಿ ಸರ್ಕಾರವೇ 'ಶಿಕ್ಷಣ ಹಕ್ಕು ಕಾಯ್ದೆ' ಮಾಡಿ ಪ್ರತಿಷ್ಠಿತ ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 25% ಪ್ರವೇಶಗಳನ್ನು ಆ ಭಾಗದಲ್ಲಿ ವಾಸಿಸುವ, ಅಪೇಕ್ಷಿಸುವ ಬಡ, ಹಿಂದುಳಿದ ವರ್ಗಗಳ ಜನರಿಗೆ ಪ್ರವೇಶ ನೀಡಬೇಕೆಂಬ ಆದೇಶ ಹೊರಡಿಸಿ, ಸಂಸ್ಥೆಗಳ ದೊಡ್ಡದಾದ ಶುಲ್ಕ ಸರ್ಕಾರವೇ ಭರಿಸಿ ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕೆ ಪರೋಕ್ಷವಾಗಿ ಬೆಂಬಲ ನೀಡುತ್ತಿದೆ.

ಇವತ್ತು ಈ ಸಮ್ಮೇಳನದಲ್ಲಿ ಪಾಲ್ಗೊಂಡವರಲ್ಲಿ ಶಿಕ್ಷಕರೇ ಅಧಿಕವಾಗಿದ್ದೀರಿ. ಸಾಹಿತ್ಯಾಸಕ್ತರಾದ ಚಿಂತಕರಾದ ನಿಮ್ಮಿಂದಲೇ ಕನ್ನಡ ಉಳಿಯಬೇಕು. ಕನ್ನಡ ಶಾಲೆಯ ಶಿಕ್ಷಕರೆ, ನೀವು ಉತ್ತಮ ಶಿಕ್ಷಣ ನೀಡಿ, ಕನ್ನಡ ಶಾಲೆಯ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಿ ಉತ್ತಮ ಫಲಿತಾಂಶ ತಂದು ಜನರ ತಪ್ಪು ತಿಳಿವಳಿಕೆ ಹೋಗಲಾಡಿಸಬೇಕು. ಸರ್ಕಾರವು ಕೂಡ ಉತ್ತಮ ಫಲಿತಾಂಶ ತರುವ ಕನ್ನಡ ಶಾಲೆಗಳಿಗೆ ಹಾಗೂ ಶಿಕ್ಷಕರಿಗೆ ಬಹುಮಾನ ನೀಡಿ ಪ್ರೋತ್ಸಾಹಿಸಬೇಕು. 40-50 ವರ್ಷಗಳ ಕೆಳಗೆ ಇಂಗ್ಲಿಷ್ ಮಾಧ್ಯಮದ ಶಾಲೆಗಳೇ ಇರಲಿಲ್ಲ. ಎಲ್ಲರೂ ಕನ್ನಡ ಶಾಲೆಗಳಲ್ಲಿ ಓದಿ ಬೆಳೆದವರೆ. ಖ್ಯಾತಿವೆತ್ತವರೆಲ್ಲ ಕನ್ನಡ ಮಾಧ್ಯಮದಲ್ಲಿ ಓದಿದವರು. ಕನ್ನಡ ಶಾಲೆ ಪ್ರಾರಂಭಿಸುವ ಸಂಸ್ಥೆಗಳಿಗೆ ಪ್ರಾರಂಭದಿಂದಲೇ ಅನುದಾನ ನೀಡಿ, ಪ್ರೋತ್ಸಾಹಿಸಬೇಕು. ಮೊದಲು ಪ್ರಥಮ ಭಾಷೆಯಾಗಿ ಕನ್ನಡ ಕಲಿಸಲು ಕಡ್ಡಾಯಗೊಳಿಸಬೇಕು.

ಪ್ರಾದೇಶಿಕ ಅಸಮಾನತೆ ತೊಲಗಲಿ

ಈ ಭಾಗದ ಜನ ಎಷ್ಟು ಮುಗ್ಧರೆಂದರೆ, ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳ ಅನಂತರ ನಮ್ಮ ಹೈದರಾಬಾದ್-ಕರ್ನಾಟಕಕ್ಕೆ ನಿಜಾಮರ ಆಡಳಿತದಿಂದ ಮುಕ್ತಿಗೊಂಡು ಒಂದು ವರ್ಷದ ಅನಂತರ ಸ್ವಾತಂತ್ರ್ಯ ಸಿಕ್ಕಿತೆಂಬುದೇ ತಿಳಿದಿರಲಿಲ್ಲ. ಇಡೀ ಭಾರತ ದೇಶಕ್ಕೆ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರೆತರೆ ನಮ್ಮ ಭಾಗಕ್ಕೆ 1948ರ ಸೆಪ್ಟೆಂಬರ್ 17 ರಂದು ಸ್ವಾತಂತ್ರ್ಯ ದೊರೆತ ವಿಷಯ ಪಠ್ಯ ಪುಸ್ತಕದಲ್ಲಿ ಸೇರಿಸಬೇಕಾಗಿತ್ತು. ಈ ವಿಷಯವೇ ಗೊತ್ತಿಲ್ಲದ ನಮಗೆ 371(ಜೆ) ಕಲಂಗೋಸ್ಕರ ಹೋರಾಟವೆಲ್ಲಿಂದ ಬರಬೇಕು ?

ಮಹಾರಾಷ್ಟ್ರದ ಮರಾಠಾವಾಡದ ಜನರು 40 ವರ್ಷದ ಕೆಳಗೆ, ಆಂಧ್ರಪ್ರದೇಶದ ತೆಲಂಗಾಣದ ಜನರು 30 ವರ್ಷದ ಕೆಳಗೆ ಪಡೆದ 371ನೇ ಕಲಂನ ಲಾಭ ನಾವು ಈಗ ಪಡೆಯುತ್ತಿದ್ದೇವೆ. ಸರಿಪಡಿಸಲಾಗದಷ್ಟು ಅನ್ಯಾಯವಾಗಿದೆ. ನಾವು ಯಾವಾಗಲೂ ಮಲತಾಯಿ ಮಕ್ಕಳೇ. ನಿಜಾಮರ ಆಡಳಿತಕ್ಕೆ ಒಳಪಟ್ಟಿದ್ದ ರಾಯಚೂರು ಜಿಲ್ಲೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಹಿನ್ನಡೆಯನ್ನು ಅನುಭವಿಸಿ, ತೀರಾ ಹಿಂದುಳಿದ ಭಾಗವಾಗಿದೆ. ಹಿಂದುಳಿದ ಭಾಗಗಳಿಗೆ ನ್ಯಾಯ ದೊರಕಿಸಿ ಕೊಡಲು ದಿವಂಗತ ಎಂ. ನಂಜುಂಡಪ್ಪ ವರದಿ ಅನುಷ್ಠಾನ, ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆಗೊಂಡು ಅಭಿವೃದ್ಧಿ ಹೆಸರಿನಲ್ಲಿ ಸಾಕಷ್ಟು ಹಣ ಹರಿದು ಬಂದರೂ ಹಿಂದುಳಿದ ಭಾಗವೆಂಬ ಹಣೆಪಟ್ಟಿ ಇನ್ನೂ ಹೋಗಿಲ್ಲ. ಭಾರತದ ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು, ಸಮಬಾಳ್ವೆ ನೀಡುವ ಆಶಯದೊಂದಿಗೆ ಭಾರತ ಒಕ್ಕೂಟದ ವ್ಯವಸ್ಥೆಯಲ್ಲಿ ಯಾವುದೇ ರಾಜ್ಯದ ಭೂಭಾಗವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಿಂದುಳಿದ ಭಾಗಗಳಿಗೆ ನ್ಯಾಯ ದೊರಕಿಸಿಕೊಡಲು ಹಿಂದುಳಿದ ಪ್ರದೇಶವನ್ನು ಪ್ರಗತಿ ವಾಹಿನಿಗೆ ತರುವ ನಿಟ್ಟಿನಲ್ಲಿ ಸಂವಿಧಾನದ 371ನೇ (ಜೆ) ಕಲಂ ವರದಾನವಾಗಲಿದೆ.

ಕರ್ನಾಟಕ ಸರ್ಕಾರವು ಕೂಡ ರಾಜ್ಯ ಉದಯವಾದಾಗಿನಿಂದಲೂ ಅಸಮಾನತೆ ತೋರಿದ್ದರಿಂದ ಈ ಭಾಗದ ಜನರು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸಾಕಷ್ಟು ಹಿನ್ನಡೆ ಅನುಭವಿಸಿದ್ದಾರೆ. ಸ್ಥಾನ-ಮಾನಗಳಿಂದ ವಂಚಿತರಾಗಿದ್ದಾರೆ. ಆಂಧ್ರದ ಗಡಿ ಭಾಗವಾಗಿರುವ ರಾಯಚೂರು ಜಿಲ್ಲೆಯಲ್ಲಿ ತೆಲುಗು ಭಾಷೆಯ ಪ್ರಭಾವ ಸಾಕಷ್ಟಿದ್ದು, ಕನ್ನಡಕ್ಕೆ ಮಾನ್ಯತೆ ಸಿಗಲು ಕನ್ನಡೀಕರಣಗೊಳಿಸಲು ಸಾಕಷ್ಟು ಕನ್ನಡದ ಕೆಲಸವಾಗಬೇಕಾಗಿದೆ. ಇದಕ್ಕಾಗಿ ರಚಿತಗೊಂಡಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಡಿ ಪ್ರಾಧಿಕಾರ, ಕನ್ನಡ ಪುಸ್ತಕ ಪ್ರಾಧಿಕಾರದ ಸಮಿತಿಗಳಲ್ಲಿ ಈ ಭಾಗದ ಜನರಿಗೆ ಅವಕಾಶ ಸಿಗಬೇಕಾಗಿತ್ತು. ದುರ್ದೈವ ವೆಂದರೆ, ಸಮಿತಿಗಳು ರಚನೆಯಾದಾಗಿನಿಂದಲೂ ಈ ದಿನದವರೆಗೆ ಒಂದು ಬಾರಿಯೂ ಈ ಭಾಗದ ಜನರಿಗೆ ಅವಕಾಶ ದೊರೆತಿಲ್ಲ. ಈ ಸಮಿತಿಯ ಕಾರ್ಯಗಳು ಈ ಭಾಗದಿಂದ ದೂರ ಉಳಿದಿವೆ. ಪ್ರಶಸ್ತಿಗೆ ಆಯ್ಕೆ ಮಾಡುವ, ಪ್ರಾಧಿಕಾರ ಅಕಾಡೆಮಿಗಳಿಗೆ ನೇಮಿಸುವ, ಉತ್ಸವಗಳನ್ನು ನಡೆಸುವ ಜವಾಬ್ದಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಇರುತ್ತದೆ. ಆದರೆ ಈ ಕನ್ನಡ ಮತ್ತು ಸಂಸ್ಕೃತಿಯ ಚಟುವಟಿಕೆ ಬೆಂಗಳೂರು ಹಾಗೂ ಸ್ವಲ್ಪ ಹಳೇ ಮೈಸೂರಿಗೆ ಮಾತ್ರ ಸೀಮಿತವಾಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಜೆಟ್ ಅಲ್ಲಿಯೇ ಉಪಯೋಗ ವಾಗುತ್ತಿದೆ. ನಮ್ಮ ಭಾಗದ ಶಾಸಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯವೈಖರಿ ಬಗ್ಗೆ ಪ್ರಶ್ನಿಸುವುದಿಲ್ಲ. ಹೋಗಲಿ ಪ್ರಾಧಿಕಾರ, ಅಕಾಡೆಮಿ, ನಿಗಮ, ಮಂಡಳಿಗಳಿಗೆ ಸಮಿತಿ ನೇಮಿಸುವಾಗ ಈ ಭಾಗಕ್ಕೆ ಅನ್ಯಾಯವಾಗುತ್ತಿದ್ದು ಪಟ್ಟುಹಿಡಿದು ಈ ಭಾಗದ ಜನರಿಗೆ ಸ್ಥಾನ-ಮಾನ ದೊರಕಿಸಿಕೊಡಲು ಪ್ರಯತ್ನಿಸುವುದಿಲ್ಲ. ನಾವು ಖಾಯಂ ವಂಚಿತರು. ಈ ಸಾಂಸ್ಕೃತಿಕ ಕ್ಷೇತ್ರದಿಂದ ನಮ್ಮ ರಾಜಕೀಯ ನಾಯಕರಿಗೆ ಯಾವುದೇ

ಲಾಭವಿಲ್ಲದ್ದರಿಂದ ಸಮಿತಿಯಲ್ಲಿ ಸ್ಥಾನ ಕೊಡಿಸುವ ಅವರ ಪ್ರಯತ್ನ ಶೂನ್ಯ. ಈ ಜಿಲ್ಲೆಯಿಂದ ಆಯ್ಕೆಯಾಗುವ ಶಾಸಕರಿಗೆ ರಾಜ್ಯದ ಮಂತ್ರಿಮಂಡಲದಲ್ಲಿ ಸಂಪುಟ ಸಚಿವ ಸ್ಥಾನ ಸಿಗದಿರುವಾಗ ಈ ವಿಷಯಗಳ ಕಡೆ ಗಮನ ಕೊಡುವುದು ಸಾಧ್ಯವೇ? ಹೋರಾಟ ಗೊತ್ತಿರದ, ರಾಜಕೀಯವಾಗಿ ಲಾಭ ಪಡೆಯದ, ಲಾಬಿ ಮಾಡಲು ಗೊತ್ತಿರದ, ದೂರದ ಬೆಂಗಳೂರಿನಲ್ಲಿ ವಿಧಾನಸಭೆ ಸುತ್ತಮುತ್ತ ಗಿರಕಿ ಹೊಡೆಯಲು ಸಾಧ್ಯವಾಗದೇ ಜನರು ಸ್ಥಾನಮಾನಗಳಿಂದ ವಂಚಿತರಾಗಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಈ ಭಾಗದ ಸಾಹಿತ್ಯ, ಸಂಸ್ಕೃತಿ ಹಾಗೂ ಕನ್ನಡ ಕಾರ್ಯಕರ್ತರ ಸಾಧಕರ ಪಟ್ಟಿ ಕೂಡ ಇಲ್ಲ. ಜೊತೆಗೆ ಇಲ್ಲಿಯ ಅಧಿಕಾರಿಗಳಿಗೆ ಯಾವುದೇ ಆಸಕ್ತಿ ಸಹ ಇಲ್ಲ.

ಐತಿಹಾಸಿಕ ಸ್ಥಳಗಳಲ್ಲಿ ಸರಕಾರವು ಉತ್ಸವಗಳನ್ನು ಭರ್ಜರಿಯಾಗಿ ನಡೆಸುತ್ತದೆ. ಪಕ್ಕದ ಜಿಲ್ಲೆಯ ಹಂಪಿ, ಆನೆಗೊಂದಿ, ಕನಕಗಿರಿ, ಇಟಗಿಯಲ್ಲಿ ಸರಕಾರದ ವತಿಯಿಂದ ಉತ್ಸವಗಳು ನಡೆಯುತ್ತವೆ. ಆದರೆ ಐತಿಹಾಸಿಕ ರಾಯಚೂರು ಜಿಲ್ಲೆ ಉತ್ಸವಗಳಿಂದ ವಂಚಿತವಾಗಿದೆ. ರಾಜಕೀಯ ಹಿನ್ನಡೆಯಿಂದ ಜಿಲ್ಲಾ ಉತ್ಸವ ಕೂಡ ಮಾಡಲು ಸಾಧ್ಯವಾಗುತ್ತಿಲ್ಲ. ರಾಜ್ಯ ಮತ್ತು ಅಕಾಡೆಮಿ ಪ್ರಶಸ್ತಿಗಳಿಂದ ನಾವು ಬಲು ದೂರ. ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಅಸಮಾನತೆ, ಅನ್ಯಾಯದ ವಿರುದ್ಧ ಹೋರಾಟಗಳಿಲ್ಲ. ನ್ಯಾಯ ದೊರಕುವುದೆಂದು ?

ಆಂಧ್ರಪ್ರದೇಶದಲ್ಲಿರುವ ಕನ್ನಡ ಶಾಲೆಗಳಿಗೆ ಸರ್ಕಾರವು ಪಠ್ಯಪುಸ್ತಕ ನೀಡಲಿ

ಪಠ್ಯಪುಸ್ತಕಗಳಿಲ್ಲದೆ ಆಂಧ್ರಪ್ರದೇಶದಲ್ಲಿರುವ ಕನ್ನಡ ಶಾಲೆಗಳ ವಿದ್ಯಾರ್ಥಿಗಳು ತೊಳಲಾಡುತ್ತಿದ್ದಾರೆ. ಆಂಧ್ರಪ್ರದೇಶದ ಆದೋನಿ ತಾಲ್ಲೂಕಿನ ಕೌತಾಳಂ ಮಂಡಳದಲ್ಲಿರುವ ನದಿಚ್ಯಾಗಿಯ ಕನ್ನಡ ಶಾಲೆ ಇತ್ತೀಚೆಗೆ ಶತಮಾನೋತ್ಸವ ಆಚರಿಸಿಕೊಂಡಿತು. ಶತಮಾನೋತ್ಸವ ಸಮಾರಂಭದಲ್ಲಿ ನನಗೆ ಅತಿಥಿಯಾಗಿ ಭಾಗವಹಿಸುವ ಭಾಗ್ಯ ದೊರೆತಿತ್ತು. ಸಮಾರಂಭದಲ್ಲಿ ಪಾಲ್ಗೊಂಡಂತಹ ಆಂಧ್ರಪ್ರದೇಶದ ನದಿಚ್ಯಾಗಿ, ಮ್ಯಾಳೂರು, ಹಾಲ್ವಿ, ಕಾತರಕಿ, ಬದನೆಹಾಳು, ಕೌತಾಳಂ ಮುಂತಾದಲ್ಲಿರುವ ಕನ್ನಡ ಶಾಲೆಯ ಮಕ್ಕಳು ಪಠ್ಯಪುಸ್ತಕಗಳಿಲ್ಲದೆ ಅಭ್ಯಾಸ ಮಾಡುತ್ತಿದ್ದಾರೆ ಎಂದು ಆ ಭಾಗದ ಶಿಕ್ಷಕರು ಸಮಾರಂಭದಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ಆಂಧ್ರಪ್ರದೇಶ ಸರ್ಕಾರ ಕನ್ನಡ ಪಠ್ಯಪುಸ್ತಕಗಳನ್ನು ಮುದ್ರಿಸುತ್ತಿಲ್ಲ ಮತ್ತು ಆಸಕ್ತಿ ತೋರುತ್ತಿಲ್ಲ. ಕರ್ನಾಟಕದ ಮಕ್ಕಳು ಇಂಗ್ಲಿಷ್ ಶಾಲೆಗಳತ್ತ ವಾಲುತ್ತಿದ್ದರೆ ಆಂಧ್ರ ಪ್ರದೇಶದ ಕನ್ನಡ ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. ನಮ್ಮ ಸರ್ಕಾರವು ಸರಕಾರದ ವತಿಯಿಂದಲೇ ಪಠ್ಯಪುಸ್ತಕಗಳನ್ನು ನೀಡಿ, ಆ ಭಾಗದ ಕನ್ನಡ ಮಾಧ್ಯಮದ ಮಕ್ಕಳಿಗೆ ಸಹಾಯ ಮಾಡುವ ಇಚ್ಛಾಶಕ್ತಿ ತೋರಲು ಒತ್ತಾಯಿಸುತ್ತೇನೆ. ಇದು ಸರ್ಕಾರದ ಕರ್ತವ್ಯ ಕೂಡ ಹೌದು. ಮಠ ಮಂದಿರಗಳಿಗೆ ಸಾವಿರಾರು ಕೋಟಿ ಖರ್ಚು ಮಾಡುವ ಸರ್ಕಾರ ಆಂಧ್ರ ಪ್ರದೇಶದಲ್ಲಿರುವ ಕನ್ನಡದ ಮಕ್ಕಳ ಶಿಕ್ಷಣಕ್ಕೆ ಉಚಿತ ಪಠ್ಯಪುಸ್ತಕ ವಿತರಿಸುವಂತಾಗಲಿ.

ತುಂಗಭದ್ರೆಯ ಅಳಲು

ಪ್ರತಿ ವರ್ಷವೂ ಸುದ್ದಿಯಾಗುವ ಕಾವೇರಿಕೊಳ್ಳದ ಗಲಾಟೆಯಲ್ಲಿ ನಮ್ಮ ಭಾಗದ ಜೀವನಾಡಿಯಾದ ತುಂಗಭದ್ರಾ ಜಲಾಶಯವನ್ನು ಎಷ್ಟು ನಿರ್ಲಕ್ಷಿಸಿದ್ದೇವೆ, ಅರ್ಧ ಕೋಟಿ ಗಿಂತಲೂ ಹೆಚ್ಚು ಜನ ಅದರಿಂದಾಗುವ ತೊಂದರೆಗಳನ್ನು ಸುಮ್ಮನೆ ಸಹಿಸಿಕೊಂಡು ಹೊರಟಿ ದ್ದಾರೆ. ಎಡದಂಡೆ ಕಾಲುವೆಯ ರಿಪೇರಿ ಹೆಸರಿನಲ್ಲಿ ಇದುವರೆಗೆ ಅಂದಾಜು 400 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ವ್ಯಯ ಮಾಡಲಾಗಿದೆ. ಇದರಲ್ಲಿ ಇನ್ನೊಂದು ಅಣೆಕಟ್ಟು ನಿರ್ಮಿಸಬಹು ದಿತ್ತು ಕಾಲುವೆ ಒಡೆಯದಂತೆ ಪರ್ಯಾಯ ವ್ಯವಸ್ಥೆ ಮಾಡಲು ಏಕೆ ಯೋಚಿಸುತ್ತಿಲ್ಲ?

ಜಲಾಶಯದ ನೀರು ಕಲುಷಿತಗೊಂಡು ದುರ್ನಾತವಾಗಿ ಕುಡಿಯಲು ಯೋಗ್ಯವಲ್ಲ ವೆಂದು ಪರಿಸರ ಇಲಾಖೆಯಿಂದ ವರದಿ ಬಂದರೂ ಯಾರೂ ಕಣ್ಣು ತೆರೆಯುತ್ತಿಲ್ಲ. ಜಲಾಶಯದಲ್ಲಿ ಈಗಾಗಲೇ ಸಾಕಷ್ಟು ಹೂಳು ತುಂಬಿದೆ. ಅದನ್ನು ತೆಗೆಯಲು ಸರಕಾರ ಗಮನ ಹರಿಸುತ್ತಿಲ್ಲ. ಅದೇನು ಅಸಾಧ್ಯವಾದದ್ದೆ ? ಎಡದಂಡೆ ಕಾಲುವೆಗೆ ನೀರು ಬಿಡುವಲ್ಲಿ ಏನು ತಾರತಮ್ಯ ನಡೆಯುತ್ತಿದೆ. ಬಲದಂಡೆ ಕಾಲುವೆಗೆ ಹೆಚ್ಚು ನೀರು ಬಿಟ್ಟುಕೊಂಡು ಆಂಧ್ರದವರು ಪ್ರಯೋಜನ ಪಡೆಯುತ್ತಿರುವುದೇಕೆ? ಆಗಾಗ ರೈತ ಸಂಘಟನೆಯ ಕೆಲವರು ಧ್ವನಿ ಎತ್ತಿದ್ದಾರೆ. ತಕ್ಕ ಮಟ್ಟಿನ ಹೋರಾಟ ಮಾಡಿದ್ದಾರೆ. ಆದರೆ ಸಮಗ್ರವಾದ ಪಾರದರ್ಶಕ ಮಾಹಿತಿ ನೀಡಿ ಕಾವೇರಿಕೊಳ್ಳದ ಜನತೆಯಿಂದ ಆಂದೋಲನ ನಡೆಯುವ ರೀತಿ ಕೆಲಸವಾಗಿಲ್ಲ. ಜನಪ್ರತಿನಿಧಿ ಗಳು ನಿರ್ಲಕ್ಷ್ಯ ವಹಿಸದೇ ಶಾಶ್ವತ ಪರಿಹಾರ ಹುಡುಕಬೇಕು. ಜಲಾಶಯದಲ್ಲಿ 133 ಟಿ.ಎಂ.ಸಿ. ನೀರು ಸಂಗ್ರಹವಾಗಬೇಕು. ಹೂಳು ತುಂಬಿ 104 ಟಿ.ಎಂ.ಸಿ.ಗಿಂತ ಕಡಿಮೆ ನೀರು ಸಂಗ್ರಹವಾಗುತ್ತಿದೆ. ಶೇಕಡ 20 ರಷ್ಟು ಕಡಿಮೆಯಾಗಿದೆ. ಮಾನವ ದುರಾಸೆಗೆ ಒಳಗಾಗಿ ಅರಣ್ಯನಾಶ, ಗಣಿಗಾರಿಕೆ, ನದಿ ಹಳ್ಳಗಳಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ಹೀಗೆ ಪರಿಸರ ನಾಶ ಮಾಡತ್ತಿರುವುದರಿಂದ ಮಳೆಯೂ ಕಡಿಮೆಯಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಒಳ ಹರಿವು ಶೇಕಡ 50ರಷ್ಟು ಕಡಿಮೆಯಾಗಿದೆ ಎಂದು ತಿಳಿದು ಬರುತ್ತದೆ. ಹೀಗಾಗಿ ಹಿಂಗಾರು ಬೆಳೆಗೆ ಸಮಸ್ಯೆ ಆಗುತ್ತಿರುವುದರಿಂದ ಸಮತೋಲನ ಜಲಾಶಯಗಳನ್ನು ನಿರ್ಮಿಸುವ ಅವಶ್ಯಕತೆಯಿದೆ ಎಂದು ಕೇಳಿ ಬರುತ್ತಿದೆ. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಶೇಕಡ 75%ರಷ್ಟು ಭೂಮಿ ಕಪ್ಪು ಮಣ್ಣಿನಿಂದ ಕೂಡಿದ್ದು ಇಂತಹ ಭೂಮಿಯಿಂದ ಸತತವಾಗಿ ಭತ್ತ ಬೆಳೆಯುವುದರಿಂದ ಭೂಮಿಯ ಮಣ್ಣಿನ ಗುಣಮಟ್ಟ ಕಡಿಮೆಯಾಗುತ್ತಿದೆ. ರೈತರಿಗೆ ಸಕಾಲಿಕ ಪೂರ್ಣ ಮಾರ್ಗದರ್ಶನ ನೀಡಿ ಬಂಜರು ಭೂಮಿಯ ಅಭಿವೃದ್ಧಿಗೆ ಸರಕಾರದ ನೆರವು ಸಿಗಬೇಕಾಗಿದೆ.

ಪುಸ್ತಕ ಪ್ರಕಾಶನದ ಕೊರತೆ - ಮಾರಾಟದ ವ್ಯವಸ್ಥೆ

ಜಿಲ್ಲೆಯಲ್ಲಿ ಪುಸ್ತಕ ಪ್ರಕಾಶನ ಸಂಸ್ಥೆಗಳು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ಬಳ್ಳಾರಿಯ ಲೋಹಿಯಾ ಪ್ರಕಾಶನ ಹಾಗೂ ಕಲ್ಬುರ್ಗಿಯ ಸಿದ್ಧಲಿಂಗೇಶ್ವರ ಪ್ರಕಾಶನ ಸಂಸ್ಥೆಗಳು

ಪ್ರತಿ ವರ್ಷ ಬಹಳಷ್ಟು ಪುಸ್ತಕಗಳನ್ನು ಪ್ರಕಟಿಸುತ್ತಿದ್ದು, ಈಗಾಗಲೇ ಹೆಸರುವಾಸಿ ಯಾಗಿದೆ. ಸಿಂಧನೂರಿನಲ್ಲಿ ಎಸ್. ಶರಣೇಗೌಡರು ಪ್ರಕಾಶನ ಸಂಸ್ಥೆ ಸ್ಥಾಪಿಸಿ ಪ್ರಥಮ ಪ್ರಯತ್ನವಾಗಿ 5 ಪುಸ್ತಕಗಳನ್ನು ಪ್ರಕಟಿಸಿ ಮೆಚ್ಚುಗೆಯ ಕೆಲಸ ಮಾಡಿದ್ದು ಮುಂದುವರೆಸಿ ಜಿಲ್ಲೆಯ ಲೇಖಕರಿಗೆ ಸಹಾಯಕವಾಗಲಿ ಎಂದು ಆಶಿಸುತ್ತೇನೆ. ಮಾರಾಟದ ತೊಂದರೆಯಿದ್ದು ಲೇಖಕರು ಪುಸ್ತಕ ಪ್ರಕಟಿಸಲು ಹಿಂಜರಿಯುತ್ತಿದ್ದಾರೆ ಇಲ್ಲಾ ತಾವೇ ಬಂಡವಾಳ ಹೂಡಿ ನಷ್ಟ ಅನುಭವಿಸುತ್ತಿದ್ದಾರೆ.

ಜಿಲ್ಲೆಯ ಲೇಖಕರು ಹಾಗೂ ಪ್ರಕಾಶಕರು ಪುಸ್ತಕ ಪ್ರಕಟಿಸಿದರೆ ಕನಿಷ್ಠ 200 ಪ್ರತಿಗಳನ್ನು ಕಡ್ಡಾಯವಾಗಿ ಖರೀದಿಸುವಂತೆ ಜಿಲ್ಲಾಧಿಕಾರಿಗಳು ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಆದೇಶಿಸಿ ಜಾರಿಗೆ ತರಬೇಕು. ಜಿಲ್ಲಾ ಪಂಚಾಯತ ಅನುದಾನ ನೀಡಿ ಎಲ್ಲಾ ಗ್ರಾಮ ಪಂಚಾಯತಗಳಿಗೆ ಪುಸ್ತಕಗಳನ್ನು ಕಳುಹಿಸಿಕೊಡಬೇಕು. ಇದರಿಂದ ಪುಸ್ತಕಗಳನ್ನು ಪ್ರಕಟಿಸಲು ಲೇಖಕರಿಗೆ ಅನುಕೂಲವಾಗುತ್ತದೆ. ಜಿಲ್ಲಾ ಮತ್ತು ತಾಲ್ಲೂಕು ಗ್ರಂಥಾಲಯಗಳಲ್ಲಿ ಜಿಲ್ಲೆಯ ಬರಹಗಾರರ, ಲೇಖಕರ ಪುಸ್ತಗಳು ಒಂದೆಡೆ ಪ್ರದರ್ಶನಕ್ಕಿಟ್ಟು ಜಿಲ್ಲೆಯ ಲೇಖಕರ ಪುಸ್ತಕ ವಿಭಾಗವನ್ನೇ ಮಾಡಬೇಕು. ಇದರಿಂದ ಸಾಹಿತ್ಯ ಸಮ್ಮೇಳನಗಳು, ವಿಚಾರ ಸಂಕಿರಣಗಳು ನಡೆದಾಗ ಪ್ರಬಂಧ ಮಂಡನೆಕಾರರಿಗೆ ಅನುಕೂಲ ವಾಗುತ್ತದೆ ಅಧ್ಯಯನಶೀಲರಿಗೆ ಜಿಲ್ಲೆಯ ಲೇಖಕರ ಪರಿಚಯವಾಗುತ್ತದೆ.

ಮಾನವಿ ನಗರದಲ್ಲಿ ಪಟ್ಟಣ ಗ್ರಂಥಾಲಯಕ್ಕೆ ಸ್ವಂತ ಕಟ್ಟಡ ಇಲ್ಲದಿರುವುದು ಖೇದವೆನಿಸುತ್ತದೆ. ಶಾಸಕರು ಖಾಲಿ ಇರುವ ಸಮುದಾಯ ಭವನ/ಶಿಕ್ಷಕರ ಭವನವನ್ನು ಗ್ರಂಥಾಲಯಕ್ಕೆ ನೀಡಿ ಓದುಗರಿಗೆ ಅನುಕೂಲ ಮಾಡಿಕೊಡಬೇಕು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ''ಕನ್ನಡ ಕುಲೋದ್ಧಾರಕರು ಮಾಲಿಕೆ''ಯಲ್ಲಿ ಚಿಕ್ಕ ಚಿಕ್ಕ ಹೊತ್ತಿಗೆಗಳನ್ನು ಪ್ರಕಟಿಸಿ, ದಾನಿಗಳಿಂದ ನೆರವು ಪಡೆದು, ಪುಸ್ತಕ ಬೆಲೆಯನ್ನು ರೂ. 5/-ಕ್ಕೆ ನಿಗದಿಪಡಿಸಿ, ಮಕ್ಕಳಿಗೆ, ಓದುಗರಿಗೆ ಪುಸ್ತಕ ಖರೀದಿಸಲು ಪ್ರೇರಣೆ ನೀಡಿದೆ. ಜಿಲ್ಲೆಯಲ್ಲೂ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲೆಯ ದಾಸರು, ಶರಣರು, ಸಾಹಿತಿಗಳು, ಕಲಾವಿದರು, ಹೋರಾಟಗಾರರನ್ನು ಪರಿಚಯಿಸುವ ಕೆಲಸವಾಗಬೇಕು. ಕಿರಿಯರು ಈ ಮಾಲಿಕೆಯ ಪುಸ್ತಕಗಳನ್ನು ಓದಿ, ಈ ಹಿರಿಯರ ಜೀವನದಿಂದ ಸ್ಫೂರ್ತಿ ಪಡೆದು, ತಮ್ಮ ನಡೆ-ನುಡಿ ಬದುಕಿನಲ್ಲಿ ಕನ್ನಡ ಪ್ರೇಮವನ್ನು, ಕನ್ನಡ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳಲು ಪ್ರೇರಕರಾಗಬೇಕು.

ಕಳೆದ ವರ್ಷ ಗಂಗಾವತಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾದ ಸಿ.ಪಿ.ಕೆ.ರವರು ಕನ್ನಡ ಸಾಹಿತ್ಯ ಪರಿಷತ್ತು ಹೆಸರಿನ ಬದಲು ಕನ್ನಡ ಪರಿಷತ್ತು ಎಂದಿರಬೇಕಿತ್ತು ಎಂದು ಅಭಿಪ್ರಾಯಪಟ್ಟರು. ಇಂದು ಕನ್ನಡ ಸಾಹಿತ್ಯ ಪರಿಷತ್ತು ಕೇವಲ ಸಾಹಿತ್ಯಕ್ಕಷ್ಟೇ ಮೀಸಲಾಗಿರದೆ ಭಾಷೆ, ಸಾಹಿತ್ಯ, ಸಂಸ್ಕೃತಿ, ಎಲ್ಲವನ್ನೂ ಒಳಗೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರೆಲ್ಲರ ಅಭಿಮಾನದ ಸಂಸ್ಥೆಯಾಗಿದೆ.



ರಾಯಚೂರು ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪ್ರಾಸ್ತಾವಿಕ ನುಡಿ.
ಶಾಂತರಸ, ಡಾ|| ಹಾ.ಮಾ.ನಾ. ಅವರೊಂದಿಗೆ



ಕೊಪ್ಪಳದಲ್ಲಿ ನಡೆದ 62ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಸಚಿವ ಎಚ್. ವಿಶ್ವನಾಥ್ ಅವರಿಂದ ನೆನಪಿನ ಕಾಣಿಕೆ ಸ್ವೀಕಾರ

ಅಕ್ಷರ ಜೋಗಿನ



ರಾಯಚೂರು ಜಿಲ್ಲಾ ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಶಯನುಡಿ.
ಡಾ।। ಚನ್ನವೀರ ಕಣವಿ, ಎನ್.ಎಸ್. ಬೋಸರಾಜು ಮತ್ತು ಜಂಬಣ್ಣ ಅಮರಚಿಂತ ಅವರೊಡನೆ



ರಾಯಚೂರು ಜಿಲ್ಲಾ ಎರಡನೆಯ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ
ನವರಂಗ ಸ್ಮರಣ ಸಂಚಿಕೆ ಬಿಡುಗಡೆ ಅ.ರಾ. ಚಂದ್ರಹಾಸ ಗುಪ್ತ ಅವರ ಜತೆಯಲಿ



ಹೈದರಾಬಾದ್ ಕರ್ನಾಟಕದ ಪ್ರಾತಿನಿಧಿಕ ಕಥಾ ಸಂಕಲನ 'ಬಿಸಿಲ ಹನಿಗಳು' ಬಿಡುಗಡೆ

ಡಾ॥ ಸಾ.ಶಿ. ಮರುಳಯ್ಯ ಅವರಿಂದ. ಚೆನ್ನಬಸಪ್ಪ ಬೆಟ್ಟದೂರು ಮತ್ತು ಪ್ರೊ॥ ವೀರೇಂದ್ರ ಸಿಂಪಿ ಅವರ ಸಹಿತ



'ರಾಯಚೂರು ಜಿಲ್ಲೆಯ ಅನುಭಾವಿ ಕವಿಗಳು' ಪುಸ್ತಕ ಬಿಡುಗಡೆ.

ಡಾ॥ ಬಸವರಾಜ ಸಬರದ, ನಾರದಗಡ್ಡೆ ಚನ್ನಬಸವ ಸ್ವಾಮೀಜಿ ಅವರ ಕೂಡ



ರಾಯಚೂರು ಜಿಲ್ಲಾ ಪ್ರಥಮ ಬರೆಹಗಾರರ ಸಮಾವೇಶ.

ಡಾ॥ ಚಂದ್ರಶೇಖರ ಪಾಟೀಲ (ಚಂಪಾ), ಕವಿ ಎಸ್.ಜಿ. ಸ್ವಾಮಿ ಮತ್ತು

ಸಚಿವ ಎಂ.ಎಸ್. ಪಾಟೀಲ್ ಅವರೊಟ್ಟಿಗೆ



ರಾಯಚೂರು ಜಿಲ್ಲಾ ಆಡಳಿತದ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ.
ಲೋಕೋಪಯೋಗಿ ಸಚಿವ ಎನ್. ಧರ್ಮಸಿಂಗ್ ಮತ್ತು ಜಿಲ್ಲಾಧಿಕಾರಿ ಜಿ. ಕುಮಾರನಾಯಕ್ ಅವರ ಸಮೇತ



ಕಾಡುಗಳ್ಳ ವೀರಪ್ಪನ್ ಬಂಧನದಿಂದ ಡಾ॥ ರಾಜಕುಮಾರ್ ಅವರನ್ನು ಬಿಡುಗಡೆ ಮಾಡಲು
ಒತ್ತಾಯಿಸಿ ಮಂತ್ರಾಲಯಕ್ಕೆ ಪಾದಯಾತ್ರೆ. ಜಿಲ್ಲಾಧಿಕಾರಿ ಜಿ. ಕುಮಾರನಾಯಕ್ ಅವರ ಸಂಗಡ



ಮಂತ್ರಾಲಯದಲ್ಲಿ ನಡೆದ ಗಡಿನಾಡ ಕನ್ನಡಿಗರ ಸಮ್ಮೇಳನದಲ್ಲಿ ಡಾ॥ ಚಂದ್ರಶೇಖರ ಪಾಟೀಲ (ಚಂಪಾ)
ಮತ್ತು ಮಂತ್ರಾಲಯ ಮಠದ ಆಡಳಿತಾಧಿಕಾರಿ ರಾಜಗೋಪಾಲ್ ಅವರ ಜೋಡಿಯಾಗಿ



ತಮ್ಮ ತಂದೆ ರಂಗಭೂಮಿ ಕಲಾವಿದ ಹೊಸೂರು ರಾಮಸ್ವಾಮಿ ಸ್ಮರಣೆಗಾಗಿ
ಉಮಳಿ ಹೊಸೂರಿನಲ್ಲಿ ತಾವೇ ಪ್ರಾಯೋಜಿಸಿದ ಗ್ರಾಮೀಣ ಸಾಹಿತ್ಯ ಸಮ್ಮೇಳನದಲ್ಲಿ



ಹೈದರಾಬಾದ್ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸ್ವಾಗತ ಭಾಷಣ.
ಸಾಹಿತಿ ಶಾಂತರಸ, ಸಚಿವ ಕುಮಾರ್ ಬಂಗಾರಪ್ಪ ಅವರ ಜತೆಯಲಿ



ಪಂಚಾಕ್ಷರಿ ಗವಾಯಿಗಳ ಸ್ಮರಣಾರ್ಥ ಸಂಗೀತ ಸಮ್ಮೇಳನದಲ್ಲಿ ಸನ್ಮಾನಿತರಾಗಿ ಭಾಷಣ.
ಪುಟ್ಟರಾಜ ಗವಾಯಿ ಅವರೊಂದಿಗೆ 'ಇರುವ ಭಾಗ್ಯವ ನೆನೆದು...'



2012ರಲ್ಲಿ ರಾಯಚೂರಿನಲ್ಲಿ ನಡೆದ ಪಂಪಯ್ಯಶೆಟ್ಟಿ ಅಭಿನಂದನಾ ಸಮಾರಂಭ



ರಾಯಚೂರಿನಲ್ಲಿ 2012ರಲ್ಲಿ ನಡೆದ ಪಂಪಯ್ಯಶೆಟ್ಟ ಅಭಿನಂದನಾ ಸಮಾರಂಭದಲ್ಲಿ

ಜೊತೆಜೊತೆಯಲಿ : ಗುರುಮೂರ್ತಿ ಪೆಂಡಕೂರು, ಶಾಶ್ವತಸ್ವಾಮಿ ಮುಕ್ಕುಂದಿಮಠ, ಕೆ.ರಾಜಕುಮಾರ್



ಮಾನ್ವಿ ತಾಲ್ಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷ ಭಾಷಣ



ಮಾನ್ವಿ ತಾಲ್ಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾಗಿ
ಸನ್ಮಾನ ಸ್ವೀಕಾರ. ಪತ್ನಿ ಶಾರದಾ ಪಂಪಯ್ಯಶೆಟ್ಟಿ ಸಮೇತರಾಗಿ



ತಮ್ಮ ಪುತ್ರಿ ಶಿವರಂಜನಿಯ ಮದುವೆಯ ಸಂದರ್ಭದಲ್ಲಿ ಏರ್ಪಡಿಸಿದ್ದ ಕವಿಗೋಷ್ಠಿಯಲ್ಲಿ



ರಾಯಚೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು
ಸಚಿವ ಅಮರೇಶ ನಾಯಕ್ ಅವರಿಂದ ಸ್ವೀಕಾರ. ಅವರ ಬದಿಯಲ್ಲಿ ಜಿಲ್ಲಾಧಿಕಾರಿ ವಿ.ಎನ್. ನಾಯಕ್



ಚಿತ್ರದುರ್ಗದಲ್ಲಿ ನಡೆದ 75ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ
ಸಚಿವ ಗಾಲಿ ಕರುಣಾಕರ ರೆಡ್ಡಿ ಅವರಿಂದ ಸನ್ಮಾನ ಸ್ವೀಕಾರ. ಅವರೊಟ್ಟಿಗೆ ಕಸಾಪ ಅಧ್ಯಕ್ಷ ಡಾ॥ ನಲ್ಲೂರು ಪ್ರಸಾದ್



ರಾಯಚೂರಿನಲ್ಲಿ ನಡೆದ ಕರ್ನಾಟಕ ರಾಜ್ಯ ಮೂರನೆಯ ಆರ್ಯವೈಶ್ಯ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ. ಡಿ. ಎಚ್. ಶಂಕರಮೂರ್ತಿ, ನಲ್ಲೂರು ಪ್ರಸಾದ್ ಅವರ ಕೂಡ



ತಮ್ಮ ಸಂಪಾದಕತ್ವದ 'ವೈಶ್ಯವಾರ್ತಾ' ಮಾಸಪತ್ರಿಕೆಯ ಬಿಡುಗಡೆ ಸಮಾರಂಭದಲ್ಲಿ ಮೈಲಾಪುರ ಸುಬ್ರಹ್ಮಣ್ಯಂ, ಎನ್.ಕೆ. ಕುಲಕರ್ಣಿ, ಪ್ರೊ॥ ಟಿ.ಎಸ್. ನಾಗರಾಜ ಶೆಟ್ಟಿ ಅವರೊಡನೆ




ಮಂತ್ರಾಲಯದಲ್ಲಿ ನಡೆದ ದಕ್ಷಿಣ ಭಾರತ ಆರ್ಯವೈಶ್ಯ ಪತ್ರಕರ್ತರ ಪ್ರಥಮ ಸಮಾವೇಶದಲ್ಲಿ
ಮೈಲಾಪುರ ಸುಬ್ರಹ್ಮಣ್ಯಂ, ಅಂಜನ್ ಶೆಟ್ಟಿ ಅವರ ಜತೆ



ಬೆಂಗಳೂರಿನ ಪರಸ್ಪರ ಚಾರಿಟಬಲ್ ಟ್ರಸ್ಟ್‌ನಿಂದ 'ಪರಸ್ಪರ ಪ್ರಶಸ್ತಿ' ಸ್ವೀಕಾರ.
ಬೇಲಿಮಠದ ಶಿವರುದ್ರ ಸ್ವಾಮೀಜಿ, ಶ್ರೀ. ರಾ. ವಿಜಯಸಮರ್ಥ ಅವರೊಂದಿಗೆ



ತಂದೆ ರಂಗಕಲಾವಿದ ಹೊಸೂರು ರಾಮಸ್ವಾಮಿ ಮತ್ತು ತಾಯಿ ಲಕ್ಷ್ಮೀದೇವಿ



ಪಿಯುಸಿ
ವಿದ್ಯಾರ್ಥಿಯಾಗಿದ್ದಾಗ



ಬಿ.ಕಾಂ. ಪದವಿ
ಪಡೆದ ಸಂದರ್ಭ




ಚುಕ್ಕಿ ಚಿತ್ರಕಲಾವಿದ
ಎಚ್. ಎಚ್. ಮ್ಯಾದಾರ್
ಅವರ ಕುಂಚದಲ್ಲಿ



ಹಿರಿಯ ಮಗ ವೆಂಕಟೇಶ ಹೊಸೂರು, ಸೊಸೆ ಅರ್ಚನಾ,
ಮೊಮ್ಮಕ್ಕಳಾದ ಆಶ್ರಿತ್ ಮತ್ತು ಸಂವಿತ್



ಎರಡನೆಯ ಮಗ ರಾಘವೇಂದ್ರ ಹೊಸೂರು,
ಸೊಸೆ ಡಾ॥ ಸಪ್ನಾ, ಮೊಮ್ಮಗಳಾದ ಅಕ್ಷರ



ಮಗಳು ಶಿವರಂಜನಿ, ಅಳಿಯ ರಾಜೇಶ್ ಸುರಪುರ,
ಮೊಮ್ಮಕ್ಕಳಾದ ರಿತ್ವಿಕ್ ಮತ್ತು ರಿಷಿಕಾ

ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಸಮಿತಿ



ಸಿ.ಆರ್. ಜನಾರ್ದನ್
ಗೌರವಾಧ್ಯಕ್ಷರು



ಬಿ.ಆರ್. ಅಶೋಕ್‌ಕುಮಾರ್
ಅಧ್ಯಕ್ಷರು



ಕೆ.ಎಲ್. ನಟರಾಜ್
ಕಾರ್ಯದರ್ಶಿ



ವೈ.ಎ. ರಾಮಸ್ವಾಮಿ
ಕಾರ್ಯದರ್ಶಿ




ಎಸ್. ಕೃಷ್ಣಮೂರ್ತಿ
ಕೋಶಾಧ್ಯಕ್ಷರು



ಕೆ. ರಾಜಕುಮಾರ್
ಸಂಪಾದಕರು, ಅಭಿನಂದನ ಗ್ರಂಥ


ಅಕ್ಷರ ಬಾಗಿನ

ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಸಮಿತಿಯ ಸದಸ್ಯರ


ಗುರುಮೂರ್ತಿ ಪೆಂಡಕೂರು


ಟಿ.ಎ.ಪಿ. ನಾಗರಾಜ್


ಪ್ರೊ|| ಟಿ.ವಿ. ಸುರೇಶ ಗುಪ್ತ


ಪ್ರೊ|| ಮಹಾಬಲೇಶ್ವರ ಗು


ಟಿ. ಶೀನಯ್ಯ ಶೆಟ್ಟಿ



ಎಂ. ವಿಠೋಬ ಶೆಟ್ಟಿ


ರಾಜೇಶ್ ಸುರಪುರ


ಭೂಪಾಳಂ ಸುನೀಲ್


ಸಿ.ಎನ್. ಮೋಹನ್‌ಕುಮಾರ್


ಟಿ.ಎಸ್. ನಾಗರಾಜ್


ಎಸ್.ಆರ್. ಕೃಷ್ಣಮೂರ್ತಿ


ಕಾಸುಲ ವೆಂಕಟಯ್ಯ


ವೆಂಕಟೇಶ್ ಹೊಸೂರು


ರಾಘವೇಂದ್ರ ಹೊಸೂರು


ಸತ್ಯಪ್ರಭಾ ವಸಂತಕುಮಾರ್

ದಿ. 11-5-92ರ ಸುದ್ದಿಮೂಲ ಪತ್ರಿಕೆಯ ಮುಖಪುಟ ದಲ್ಲಿ ಪ್ರಕಟವಾದ ಸುದ್ದಿ:

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಪಂಪಯ್ಯ ಶೆಟ್ಟಿ


ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಪೊಂಪಯ್ಯ ಶೆಟ್ಟಿ

ನಗರದಲ್ಲಿ ಸಂಗೀತ ಕಾರ್ಯಕ್ರಮ

ಇಂದು ಜರುಗಿದ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ನಗರದ ಪಂಪಯ್ಯ ಶೆಟ್ಟಿಯವರು ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಸಾಯಂಕಾಲ 6 ಗಂಟೆಗೆ ತಹಸೀಲ ಕಾರ್ಯಾಲಯದಲ್ಲಿ ನಡೆದ ಮತಗಳ ಎಣಿಕೆಯಲ್ಲಿ ಜಿಲ್ಲೆಯ ಒಟ್ಟು 75 ಮತಗಳ ಪೈಕಿ 47 ಜನರು ತಮ್ಮ ಮತಗಳನ್ನು ಚಲಾಯಿಸಿದರು. ಚಲಾಯಿತ ಒಟ್ಟು ಮತಗಳಲ್ಲಿ ಆಯ್ಕೆಗೊಂಡಿರುವ ಪಂಪಯ್ಯ ಶೆಟ್ಟಿ ಅವರು 31 ಮತಗಳನ್ನು ಪಡೆದು ಆಯ್ಕೆಗೊಂಡರೆ, ಅವರ ಪ್ರತಿಸ್ಪರ್ಧಿ ಕೆ.ಬಿ. ಬ್ಯಾಳಿ ಅವರಿಗೆ 16 ಮತಗಳು ಬಿದ್ದವು.

ತಹಸೀಲ್ದಾರ ಕೆ. ಭೀಮರಾವರವರ ನೇತೃತ್ವದಲ್ಲಿ ಮತಗಳ ಎಣಿಕೆ ನಡೆದು ನೂತನ ಅಧ್ಯಕ್ಷರಾಗಿ ಚುನಾಯಿತರಾದ ಪಂಪಯ್ಯಶೆಟ್ಟಿ ಅವರಿಗೆ ತಹಸೀಲ್ದಾರರು ಫಲಿತಾಂಶ ಘೋಷಣಾ ಪ್ರಮಾಣ ಪತ್ರವನ್ನು ನೀಡಿದರು.

ರಾಜ್ಯಮಟ್ಟದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಗೊ.ರು. ಚನ್ನಬಸಪ್ಪನವರು ರಾಯಚೂರು ಜಿಲ್ಲೆಯ ಮತಗಳಲ್ಲಿ ಬಹುಮತ ಪಡೆದಿದ್ದಾರೆ.

ಜಿಲ್ಲೆಯಿಂದ ಬಹುಮತ ಪಡೆದ ಗೊ.ರು. ಚನ್ನಬಸಪ್ಪನವರಿಗೆ ಹಿರಿಯ ಸಾಹಿತಿ ಶಾಂತರಸರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಪರಿಚಯ : ರಾಯಚೂರು ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಪಂಪಯ್ಯಶೆಟ್ಟಿ ಅವರು ಮೂಲತಃ ಮಾನವಿ ತಾಲ್ಲೂಕಿನ ಹೊಸೂರು ಗ್ರಾಮದವರು. ಬಿ.ಕಾಂ. ಪದವೀಧರರಾದ ಇವರು ನಗರದ ಟಾಗೋರ ಪದವಿ ಪೂರ್ವ ಸಂಯುಕ್ತ ಕಿರಿಯ ಮಹಾವಿದ್ಯಾಲಯದಲ್ಲಿ ದ್ವಿತೀಯ ದರ್ಜೆಯ ಸಹಾಯಕರಾಗಿ ಸೇವೆಸಲ್ಲಿಸುತ್ತಿದ್ದಾರೆ ಕಳೆದ ಹತ್ತು ವರುಷಗಳಿಂದ ಕ.ಸಾ.ಪ. ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ನಗರದಲ್ಲಿ ಕನ್ನಡ ಮಾಧ್ಯಮದ ಮಾದರಿ ಪ್ರಾಥಮಿಕ ಶಾಲೆಯೊಂದನ್ನು ಸ್ಥಾಪಿಸಿದ್ದಾರೆ, ಕರ್ನಾಟಕ ಸಂಘದ ಕಾರ್ಯದರ್ಶಿಗಳಾಗಿ ಗೋಕಾಕ ಚಳುವಳಿಯಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ ಪಂಪಯ್ಯ ಶೆಟ್ಟಿಯವರು ಜಿಲ್ಲೆಯ ಸಾಹಿತ್ಯ ಅಭಿವೃದ್ಧಿಗಾಗಿ ಇನ್ನೂ ಹೆಚ್ಚಿನ ಯೋಜನೆ ರೂಪುರೇಷೆಗಳನ್ನು ಹಾಕಿಕೊಳ್ಳುವ ಮಹದಾಸೆಯನ್ನು ಇಟ್ಟುಕೊಂಡಿದ್ದಾರೆ.

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಪಂಪಯ್ಯ ಶೆಟ್ಟಿ ಅವರಿಗೆ ನಗರದ ಸಾಹಿತ್ಯಾಸಕ್ತರಾದ ರಾಮಣ್ಣ ಹವಳೆ, ಸಂಗಯ್ಯ ಸೊಪ್ಪಿ ಮಠ, ಅಯ್ಯಪ್ಪ ತುಕ್ಕಾಯಿ. ಎಚ್. ಮಹಾದೇವಪ್ಪ, ಬಸವರಾಜಸ್ವಾಮಿ, ನಾಗಭೂಷಣ, ಕಟ್ಟಂ ಶ್ರೀನಿವಾಸ, ಚಂದ್ರಕಾಂತ ಆಲ್ಕೋಡ, ಶ್ರೀನಿವಾಸ ಶೆಟ್ಟಿ ಗದ್ವಾಲ ನರಸಣ್ಣಕೃಷ್ಣ, ಸುರೇಶ ವೈದ್ಯ, ಬಂಡೂರಾವ ಚಾಗಿ, ಎಂ. ಸಕ್ರಪ್ಪ, ಇಂದಪುರ ಮಲ್ಲನ ಗೌಡ, ಎಸ್.ಜಿ. ಸ್ವಾಮಿ, ಅಯ್ಯಪ್ಪಯ್ಯ ಹುಡಾ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

19-6-1995 ರಂದು ರಾಯಚೂರು ವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ:

ಜಿಲ್ಲಾ ಕಸಾಪ ಅಧ್ಯಕ್ಷ ಚುನಾವಣೆ : ಪಂಪಯ್ಯಶೆಟ್ಟಿಗೆ ಭಾರಿ ಗೆಲುವು



Regd. No. R. R. 1 ರಾಯಚೂರು ಸೋಮವಾರ 19-6-1995

ಜಿಲ್ಲಾ ಕಸಾಪ ಅಧ್ಯಕ್ಷ ಚುನಾವಣೆ

ಪಂಪಯ್ಯಶೆಟ್ಟಿಗೆ ಭಾರಿ ಗೆಲುವು

ರಾಯಚೂರು ಜೂ ೧೮ — ಸಾಹಿತ್ಯಾಸಕ್ತರಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಪ್ರತಿಷ್ಠಿತ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಹೆಚ್.ಪಂಪಯ್ಯ ಶೆಟ್ಟಿ ಪುನರಾಯ್ಕೆಗೊಂಡಿದ್ದಾರೆ.

ಸಾಧನೆ ಫಲ

ರಾಯಚೂರು ಜೂ. ೧೮ : ಸಾಹಿತ್ಯಾಸಕ್ತರಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಪ್ರತಿಷ್ಠಿತ ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಚ್. ಪಂಪಯ್ಯ ಶೆಟ್ಟಿ ಪುನರಾಯ್ಕೆಗೊಂಡಿದ್ದಾರೆ

ಇಂದು ಬೆಳಗ್ಗೆಯಿಂದ ಸಂಜೆಯವರೆಗೆ ತಹಸೀಲ್ ಕಾರ್ಯಾಲಯದಲ್ಲಿ ನಡೆದ ತುರುಸಿನ ಚುನಾವಣೆಯಲ್ಲಿ ಎಚ್. ಪಂಪಯ್ಯ ಶೆಟ್ಟಿ ಅವರು ಎಂಟು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಒಟ್ಟು 111 ಮತದಾರರಲ್ಲಿ ಎಚ್. ಪಂಪಯ್ಯ ಶೆಟ್ಟಿಗೆ 44 ಮತಗಳು ಬಿದ್ದರೆ ಇವರ ಪ್ರತಿಸ್ಪರ್ಧಿ ಬಿ. ಶೇಖರಪ್ಪ ಅವರಿಗೆ 36 ಮತಗಳು ಬಿದ್ದವು.

ಚಲಾವಣೆಯಾದ 85 ಮತಗಳಲ್ಲಿ ಕಣದಿಂದ ನಿವೃತ್ತಿಯಾದ ಕೆ.ಬಿ. ಬ್ಯಾಳಿ ಅವರಿಗೆ ಎರಡು ಮತಗಳು ಬಿದ್ದಿವೆ. ಮೂರು ಮತಗಳು ತಿರಸ್ಕೃತಗೊಂಡಿವೆ.

ಇದೇ ಸಮಯದಲ್ಲಿ ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಾ.ಶಿ. ಮರುಳಯ್ಯ ಅವರಿಗೆ 77, ಕುಮಾರಸ್ವಾಮಿಗೆ ಕೇವಲ 7 ಮತಗಳು ಬಂದಿದ್ದು 1 ಮತ ಕುಲಗೆಟ್ಟಿದೆ,

ಮತ ಎಣಿಕೆಯ ನಂತರ ತಹಸೀಲ್ದಾರ ಸಿದ್ಧಪ್ಪ ಅವರು ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಎಚ್. ಪಂಪಯ್ಯ ಶೆಟ್ಟಿ ಗೆದ್ದಿದ್ದಾರೆ ಎಂದು ಘೋಷಿಸಿದರು.

ಬೆಳಗ್ಗೆ 10 ಗಂಟೆಯಿಂದಲೇ ನಗರದ ಮತದಾರರು ಉತ್ಸಾಹದಿಂದ ಬಂದು ಮತ ಚಲಾಯಿಸಿದರು. ಮಧ್ಯಾಹ್ನದ ಮೇಲೆ ಜಿಲ್ಲೆಯ ದೂರದ ಕೊಪ್ಪಳ, ಯಲಬುರ್ಗಾ, ಗಂಗಾವತಿ, ಮಾನವಿ, ಸಿಂಧನೂರು, ಕುಷ್ಟಗಿ, ಲಿಂಗಸುಗೂರು, ದೇವದುರ್ಗ ತಾಲೂಕುಗಳಿಂದಲೂ ಮತದಾರರು ಆಸಕ್ತಿಯಿಂದ ಬಂದು ಮತ ಚಲಾಯಿಸಿದರು.

ಮತ ಚಲಾಯಿಸಿದವರಲ್ಲಿ ಪ್ರಮುಖರೆಂದರೆ ಶಾಂತರಸ, ಡಾ॥ ಮಂದಾಕಿನಿ, ಗವಿಸಿದ್ಧಪ್ಪ ಬಳ್ಳಾರಿ, ಬೋಸರಾಜ, ಮಾಜಿ ಶಾಸಕ ಮಲ್ಲಿಕಾರ್ಜುನ ದಿವಟರ, ಪಾಪರೆಡ್ಡಿ, ಗಂಗಾಧರ ಯಲಿ. ನಗರದ 68 ಮತದಾರರಲ್ಲಿ ಕೇವಲ ಆರು ಜನ ಮಾತ್ರ ಮತ ಹಾಕಿಲ್ಲ.

ಬೆಳಗ್ಗೆ 10 ರಿಂದ ಆರಂಭವಾದ ಮತದಾನ ಸಂಜೆ 5ಕ್ಕೆ ಮುಗಿಯಿತು. ನಂತರ ಒಂದು ಗಂಟೆ ವಿರಾಮ ಅನಂತರ 6 ಗಂಟೆಗೆ ತಹಸೀಲ್ದಾರರ ಉಪಸ್ಥಿತಿಯಲ್ಲಿ ಮತ ಪೆಟ್ಟಿಗೆ ತೆರೆಯಲಾಯಿತು.

ಎಚ್. ಪಂಪಯ್ಯಶೆಟ್ಟಿ ಭಾರೀ ಅಂತರದಿಂದ ಗೆದ್ದಿರುವ ಸುದ್ದಿ ಬರುತ್ತಲೇ ಇವರ ಪ್ರತಿಸ್ಪರ್ಧಿಯಾಗಿದ್ದ ಬಿ. ಶೇಖರಪ್ಪ ಸೇರಿದಂತೆ ಆವರಣದಲ್ಲಿ ನೆರೆದಿದ್ದ ಬಸವರಾಜಸ್ವಾಮಿ, ರಾಮಣ್ಣ ಹವಳೆ, ಗವಿಸಿದ್ದಪ್ಪ ಬಳ್ಳಾರಿ, ಕೆ.ಎಂ. ಪುರದ, ಗುರುರಾಜ ಕುಲಕರ್ಣಿ, ಎಸ್.ಜಿ. ಸ್ವಾಮಿ, ಇಂದುಪುರ ಮಲ್ಲನಗೌಡ, ಸಕ್ರಪ್ಪ, ಮ್ಯಾದಾರ, ಗಿರಿಧರ, ಜಯಪ್ರಕಾಶ, ಕಟ್ಟಂ ಶ್ರೀನಿವಾಸ ಪರಸ್ಪರ ಆಲಂಗಿಸಿಕೊಂಡು ಶುಭಹಾರೈಸಿದರು.

ಸಾಧನೆ ಫಲ : ತಾವು ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಮಾಡಿರುವ ಸಾಧನೆಯನ್ನು ಗಮನಿಸಿ ನೀಡಿದ ಮತಗಳಿಂದ ತಮ್ಮ ಗೆಲುವು ಸಾಧ್ಯವಾಗಿದ್ದು ಸದಸ್ಯರ ನಿರೀಕ್ಷೆಗೆ ಮೀರಿ ಇನ್ನೂ ಹೆಚ್ಚಿನ ಕೆಲಸ ಮಾಡುವ ವಿಶ್ವಾಸವನ್ನು ಅಧ್ಯಕ್ಷರಾಗಿ ಪುನರಾಯ್ಕೆಗೊಂಡ ಪಂಪಯ್ಯಶೆಟ್ಟಿ ''ರಾಯಚೂರವಾಣಿ''ಗೆ ಹೇಳಿದರು.

ಟ್ಯಾಗೋರ ಶಿಕ್ಷಣ ಸಂಸ್ಥೆಯಲ್ಲಿ ಪಂಪಯ್ಯಶೆಟ್ಟಿ ಸೇವೆ ಮಾಡುತ್ತಿದ್ದಾರೆ.

26-1-97ರ ಪ್ರಜಾವಾಣಿ ಪತ್ರಿಕೆಯಲ್ಲಿ ಕಲಬುರ್ಗಿಯ ಕಲರವ ಕಾಲಂನಲ್ಲಿ ಪ್ರಕಟವಾದ ಸುದ್ದಿ

ರಾಯಚೂರಿನಲ್ಲಿ ಸಾಹಿತ್ಯ ಯಾತ್ರೆ-ಹೈ.ಕ.ದಲ್ಲಿ ಸಣ್ಣ ಕಥೆಗಾರರ ಪ್ರಾಬಲ್ಯ


ರಾಯಚೂರಿನಲ್ಲಿ ಸಾಹಿತ್ಯ ಯಾತ್ರೆ
ಹೈ.ಕ.ದಲ್ಲಿ ಸಣ್ಣ ಕಥೆಗಾರರ ಪ್ರಾಬಲ್ಯ

ರಾಯಚೂರು ಜಿಲ್ಲೆಯ ಕುಷ್ಟಗಿಯಲ್ಲಿ ದಿ. 22 ರಂದು ಒಂದು ವಿಶೇಷ ಸಾಹಿತ್ಯ ಚಟುವಟಿಕೆಯ ಉದ್ಘಾಟನೆಯಾಗಿದೆ. ರಾಯಚೂರು ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಪಂಪಯ್ಯಶೆಟ್ಟಿ ಒಂದು ವಿನೂತನ ಚಟುವಟಿಕೆ ಹಮ್ಮಿಕೊಂಡಿದ್ದಾರೆ. ಕ.ಸಾ.ಪ. ಜಿಲ್ಲಾ ಘಟಕಗಳು ಪ್ರಾರಂಭ ವಾಗಿ 25 ವರ್ಷಗಳನ್ನು ಪೂರೈಸಿದ ನೆನಪಿಗಾಗಿ ಜಿಲ್ಲೆಯ ನಾಲ್ಕು ಜನ ಹಿರಿಯ ಸಾಹಿತಿಗಳಾದ ಸಿದ್ಧಯ್ಯ ಪುರಾಣಿಕ್, ಶಾಂತರಸ, ದೇವೇಂದ್ರ ಕುಮಾರ ಹಕಾರಿ, ಜಯತೀರ್ಥ ರಾಜಪುರೋಹಿತ ಇವರ ಭಾವಚಿತ್ರಗಳುಳ್ಳ, ಕನ್ನಡ ಅಂಕಿಗಳನ್ನು ಬಳಸಿದ, ಒಂದು ಸುಂದರವಾದ ಕ್ಯಾಲೆಂಡರ ಬಿಡುಗಡೆ ಮಾಡಿದ್ದಾರೆ. ಜಿಲ್ಲಾ ಬರಹಗಾರರ ಒಂದು ಸಣ್ಣ ಕಥಾ

ಸಂಗ್ರಹವು ಕೊನೆಯ ದಿನ ಬಿಡುಗಡೆ ಆಗಲಿದೆ. ಜೊತೆಗೆ 25 ವರ್ಷಗಳಾದ ಸಂದರ್ಭದಲ್ಲಿ ಎಲ್ಲರೂ ಸುಮ್ಮನಿರುವಾಗ, ಪಂಪಯ್ಯಶೆಟ್ಟಿ ಜಿಲ್ಲಾ ಕ.ಸಾ.ಪ.ದ ಬೆಳ್ಳಿಹಬ್ಬ ಆಚರಣೆಗೆ ವ್ಯವಸ್ಥೆ ಮಾಡಿದ್ದಾರೆ. ಅದರ ಅಂಗವಾಗಿ 'ಸಾಹಿತ್ಯ ಯಾತ್ರೆ' ಕಾರ್ಯಕ್ರಮ.

ದಿ. 22 ರಿಂದ 28 ರವರೆಗೆ ಒಂದು ವಾರ ಕಾಲ 26 ಹಳ್ಳಿಗಳಲ್ಲಿ ಈ ಯಾತ್ರೆ ಸಂಚರಿಸುತ್ತದೆ. ಜಿಲ್ಲಾ ಬರಹಗಾರರ ಪುಸ್ತಕಗಳನ್ನು ಸಂಗ್ರಹಿಸಿ ಅವುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಮಾಡಿದ್ದಾರೆ. ರಾಯಚೂರು ಜಿಲ್ಲೆಯ ಇಟಗಿ ದೇವಸ್ಥಾನದ ಜೊತೆ, ಸಿದ್ಧಯ್ಯ ಪುರಾಣಿಕ, ಶಾಂತರಸ, ದೇವೇಂದ್ರ ಕುಮಾರ ಹಕಾರಿ, ರಾಜಪುರೋಹಿತ ಇವರ ಭಾವಚಿತ್ರಗಳುಳ್ಳ, ಕನ್ನಡ ಅಂಕಿಗಳನ್ನು ಬಳಸಿದ, ಒಂದು ಸುಂದರವಾದ ಕ್ಯಾಲೆಂಡರ್ ಬಿಡುಗಡೆ ಮಾಡಿದ್ದಾರೆ. ಜಿಲ್ಲಾ ಬರೆಹಗಾರರ ಒಂದು ಸಣ್ಣ ಕಥಾ ಸಂಗ್ರಹವು ಕೊನೆಯ ದಿನ ಬಿಡುಗಡೆ ಆಗಲಿದೆ. ಜೊತೆಗೆ 25 ಜನ ಹಿರಿಯರನ್ನು ಸನ್ಮಾನಿಸಲಾಗುವುದು.

ಬೆಳ್ಳಿಹಬ್ಬದ ನೆವದಲ್ಲಿ ಪಂಪಯ್ಯ ಶೆಟ್ಟಿ ಸ್ತುತ್ಯರ್ಹವಾದ ಕೆಲಸ ಹಮ್ಮಿಕೊಂಡಿದ್ದಾರೆ. ಇದರ ಉದ್ಘಾಟನೆಗೆ ಹಿರಿಯ ಸಾಹಿತಿ ಡಾ॥ ಹಂಪನಾ, ಡಾ. ಬಸವರಾಜ ಮಲಶೆಟ್ಟಿ ಬಂದು ಹಾರೈಸಿದ್ದಾರೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಕೆ. ಶರಣಪ್ಪ ಅವರು ಹೈ.ಕ.ದಲ್ಲಿ ಜಿಲ್ಲಾ ಘಟಕಗಳ ಇಂತಹ ಚಟುವಟಿಕೆಗಳನ್ನೂ ಪ್ರೋತ್ಸಾಹಿಸಲು, ಧನಸಹಾಯ ಒದಗಿಸಲು ಮುಂದೆ ಬಂದಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಕುಷ್ಟಗಿಯಂತಹ ಹಳ್ಳಿಯಲ್ಲಿ ತಾಸೆರಡು ತಾಸುಗಳಲ್ಲಿ 3,500 ರೂಗಳ ಪುಸ್ತಕಗಳು ಮಾರಾಟವಾಗಿವೆ. ಈ ಯಾತ್ರೆಯ ಫಲಿತಾಂಶ ಖಂಡಿತ ಉತ್ತಮವಾದುದಾಗಿರುತ್ತದೆ. ಇದೇ ಸಂದರ್ಭದಲ್ಲಿ ಕಲಾವಿದರಾದ ಹಿರೇಮಠ, ಬಾಪುಗೌಡ, ಲಾಡಸಾಬ ತಮ್ಮ ಕಲಾ ಕೃತಿಗಳ ಪ್ರದರ್ಶನವನ್ನು ಮಾಡಿ ಈ ಯಾತ್ರೆಗೆ ಶೋಭೆ ತಂದಿದ್ದರು.

ಪಂಪಯ್ಯಶೆಟ್ಟಿ ಎಂತಹ ಉತ್ಸಾಹಿ ಎಂದರೆ ಇಡೀ ಹೈ.ಕ.ದ ಸಣ್ಣ ಕಥೆಗಳ ಪ್ರಾತಿನಿಧಿಕ ಸಂಕಲನ 'ಬಿಸಿಲ ಹನಿಗಳು' ಎಂಬ ಪುಸ್ತಕವನ್ನು ಸುಮಾರು 45,000 ರೂ. ಖರ್ಚು ಮಾಡಿ ಪ್ರಕಟಿಸಿದ್ದಾರೆ. ಮತ್ತೆ ಹತ್ತಿಪ್ಪತ್ತು ಸಾವಿರ ಖರ್ಚು ಮಾಡಿ ಈಗ ಮತ್ತೊಂದು ಕಥಾ ಸಂಕಲನ ಬಿಡುಗಡೆ ಮಾಡುತ್ತಿದ್ದಾರೆ. ಕ್ಯಾಲೆಂಡರ್ ಮುದ್ರಿಸಿದ್ದಾರೆ. ದಿನಕ್ಕೆ 1200 ರೂ. ಬಾಡಿಗೆಗೆ ಒಂದು ವ್ಯಾನ್ ಪಡೆದು ಪುಸ್ತಕಗಳನ್ನು ತುಂಬಿಕೊಂಡು ಹಳ್ಳಿ ಹಳ್ಳಿ ಹೊರಟಿದ್ದಾರೆ. ಇದಕ್ಕೆಲ್ಲ ಹಣ ಹೇಗೆ ಮಾಡಿದಿರಿ ಎಂದರೆ ಕೆಲಸ ಮಾಡಿದರೆ ಜನ ಕೊಡುತ್ತಾರೆಂದು ತುಂಬಿದ ನಗೆ ಬೀರುತ್ತಾರೆ.

ರಾಯಚೂರ ಜಿಲ್ಲಾ ಕ.ಸಾ.ಪ. ಚಟುವಟಿಕೆ ರಾಜ್ಯ ಮಾದರಿಯಾಗಿದೆ.

❀

4-2-2001 ರಂದು ರಾಯಚೂರು ವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ
ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ 'ದಶಕದ ಹೆಜ್ಜೆಗಳು'

ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ತನ್ನ ದಶಕದ ನೆನಪುಗಳನ್ನು ಮೆಲಕು ಹಾಕುವುದರಲ್ಲಿ ಒಂದು ಬಗೆಯ ಅರ್ಥವಿದೆ. ಅದು ಜಿಲ್ಲೆಯ ಸಮಗ್ರ ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿದ ಅಪೂರ್ವ ಸೇವೆಯ ದ್ಯೋತಕವಾಗಿದೆ. ಒಂದು ಅರ್ಥದಲ್ಲಿ ಈ ದಶಕದ ಅವಧಿಯಲ್ಲಿ ಅಧ್ಯಕ್ಷರಾಗಿರುವ ಎಚ್. ಪಂಪಯ್ಯ ಶೆಟ್ಟಿಯವರ ಕರ್ತೃತ್ವ ಶಕ್ತಿಯ ಸಾಧನೆಯೂ ಆಗಿದೆಯೆಂದರೆ ಅತಿಶಯೋಕ್ತಿಯಾಗದು.

ಹಿಂದುಳಿದ ಹೈದರಾಬಾದ್-ಕರ್ನಾಟಕದಲ್ಲಿ ಉಳಿದ ಜಿಲ್ಲೆಗಳಿಗಿಂತ ರಾಯಚೂರು ಜಿಲ್ಲೆಯು ಕನ್ನಡ ಸಾಹಿತ್ಯ ರಚನೆಯಲ್ಲಿ ಸದಾ ಮುಂದಾಗಿದೆ. ನವೋದಯದ ರವಿಯ ಕಿರಣ ಮೊಟ್ಟ ಮೊದಲು ಈ ಜಿಲ್ಲೆಯಲ್ಲಿ ಮೂಡಿತೆಂದರೆ ಮಾತೆರಡಿಲ್ಲ. ಜಿಲ್ಲೆಯ ತತ್ತ್ವಪದಕಾರರು, ಪುರಾಣಿಕರು ಬಹು ಹಿಂದೆಯೇ ಇಲ್ಲಿ ಕನ್ನಡಭಾಷೆ ಮತ್ತು ಸಾಹಿತ್ಯವನ್ನು ಸಮೃದ್ಧಗೊಳಿಸಿದರು. ನವೋದಯ ಕಾಲದ ಕವಿ, ಸಾಹಿತಿಗಳು ವಿವಿಧ ಪ್ರಕಾರಗಳಲ್ಲಿ ಕೃತಿ ರಚಿಸಿ, ಜಿಲ್ಲೆಯ ಸಾಹಿತ್ಯ ಕೃಷಿಗೆ ಪ್ರೇರಣೆ ನೀಡಿದರಲ್ಲದೆ ಬರಹಗಾರರ ಬಳಗವನ್ನು ಸೃಜಿಸಿದರು. ಕನ್ನಡಪರ ಸಂಘ-ಸಂಸ್ಥೆಗಳು ಕನ್ನಡ ಸಾಹಿತ್ಯವನ್ನು ಸದಾ ಜಾಗೃತವಾಗಿರಿಸಿ, ವಾಚನಾಭಿರುಚಿಯನ್ನು ಜನತೆಯಲ್ಲಿ ತಂದುಕೊಟ್ಟವು.

ಜಿಲ್ಲೆಯಲ್ಲಿ ಸಾಹಿತ್ಯ ಚಟುವಟಿಕೆಗಳು : ರಾಯಚೂರಿನ ಕರ್ನಾಟಕ ಸಂಘವು ಜಿಲ್ಲೆಯಲ್ಲಿ ಕನ್ನಡ ಭಾಷೆ, ಸಾಹಿತ್ಯವನ್ನು ಜನ ಸಾಮಾನ್ಯರೆಡೆಗೆ ತಂದುಕೊಡುವಲ್ಲಿ ಪ್ರಮುಖ ಪಾತ್ರವಹಿಸಿತು. ಕರ್ನಾಟಕ ಏಕೀಕರಣಕ್ಕಿಂತ ಮೊದಲು ಸ್ಥಾಪನೆಗೊಂಡ ಈ ಸಂಘವು ಹಲವು ಕನ್ನಡಾಭಿಮಾನಿಗಳ, ಕನ್ನಡ ಕಟ್ಟಾಳುಗಳ ಸತತ ಪ್ರಯತ್ನದಿಂದ ಬೆಳೆದು ಇಂದು ದೊಡ್ಡ ಸಂಸ್ಥೆಯಾಗಿದೆ. ಬೆಂಗಳೂರಿನ ಸಾಹಿತ್ಯ ಪರಿಷತ್ ಮತ್ತು ಧಾರವಾಡದ ವಿದ್ಯಾವರ್ಧಕ ಸಂಘದ ಮಾದರಿಯಲ್ಲಿ ಕನ್ನಡ ಕಟ್ಟುವ ಕಾರ್ಯವನ್ನು ಈ ಸಂಘ ಮಾಡಿತೆಂದರೆ ಅಚ್ಚರಿಪಡಬೇಕಿಲ್ಲ. ಕನ್ನಡ ಕುಲ ಪುರೋಹಿತ ಆಲೂರ ವೆಂಕಟರಾಯರು, ಆಚಾರ್ಯ, ಬಿ.ಎಂ.ಶ್ರೀಕಂಠಯ್ಯನವರಂಥ ಮಹನೀಯರು ಕರ್ನಾಟಕ ಸಂಘದಲ್ಲಿ ತಮ್ಮ ಅಮೋಘ

ಭಾಷಣ ನೀಡಿ ಇಲ್ಲಿಯ ಜನತೆಯನ್ನು ಪುಳಕಗೊಳಿಸಿದ್ದಾರೆ. 20ನೆಯ ಶತಮಾನದ ಆರು ಮತ್ತು ಏಳನೆಯ ದಶಕಗಳಲ್ಲಿ ಕರ್ನಾಟಕದ ಸುಪ್ರಸಿದ್ಧ ಕವಿ, ವಾಗ್ಮಿ, ಸಾಹಿತಿ, ಕಲಾವಿದರು ಕರ್ನಾಟಕ ಸಂಘಕ್ಕೆ ಬಂದು ಹೋಗಿರುವುದು ಇದರ ಸಾಧನೆಯೇ ಸರಿ. ದಾ.ಗು. ಜೋಷಿಯಂಥ ಹಿರಿಯರು ಈ ಸಂಘದ ಬೆಳವಣಿಗೆಯ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಪಸರಿಸಲು ಸಾರೋದ್ಧಾರವಾಗಿ ನೆರವೇರಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ : ಕರ್ನಾಟಕ ಸಂಘವು ಈ ಜಿಲ್ಲೆಯ ಸಾಹಿತ್ಯಕ್ಕೆ ಮಾಡಿದ ಅನುಪಮ ಸೇವೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಮುಂದುವರೆಸಿ ಕೊಂಡು ಬಂದಿತು. ಅಂತೆಯೇ ಪರಿಷತ್ತಿನ ಕೆಲಸ ಕಾರ್ಯಗಳೊಂದಿಗೆ ಕರ್ನಾಟಕ ಸಂಘದ ನೆನಪು ಮೂಡುವುದು ಸಹಜವಾಗಿದೆ. ಪರಿಷತ್ ಈ ಜಿಲ್ಲೆಯ ಸಾಹಿತ್ಯಾಭಿವೃದ್ಧಿಗೆ ಸಂಘಟಿಸಿದ ಹಲವು ಮಹತ್ವದ ಕಾರ್ಯಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ.

1975ರಲ್ಲಿ ಪರಿಷತ್ತಿನ ಕೆಲಸಗಳು ಪ್ರಾರಂಭವಾದವು. ಅಂದಿನ ನಗರ ಸಭೆಯ ಅಧ್ಯಕ್ಷರಾಗಿದ್ದ ಆಂಜನೇಯಲು ಅವರು ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕನ್ನಡಾಭಿವೃದ್ಧಿಗೆ ಕವಿ ಸಾಹಿತಿಗಳೇ ಆಗಬೇಕಿಲ್ಲ; ಕನ್ನಡ ಕಟ್ಟುವವರಾದರೆ ಸಾಕು ಎಂಬ ಧೋರಣೆಯನ್ನು ತಾಳಿದ ಅಂದಿನ ಕನ್ನಡ ಸಾಹಿತ್ಯ ಪರಿಷತ್ ಸಾಹಿತಿಗಳಲ್ಲದವರನ್ನು ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಿಸಿತು. ಆಂಜಿನೇಯಲು ಇವರು ಹೇಳಿಕೊಳ್ಳುವಂಥ ಸಾಹಿತ್ಯ ಚಟುವಟಿಕೆಗಳನ್ನು ನಡೆಸಲಿಲ್ಲ ವೆಂಬುದೇನೋ ಸತ್ಯ. ಆದರೆ ಅವರು ಕವಿ, ಸಾಹಿತಿ, ಕಲಾವಿದರಿಗೆ ನಗರಸಭೆಯ ವತಿಯಿಂದ ಒಂದು ದೊಡ್ಡ ಯೋಜನೆಯನ್ನು ಹೊಂದಿದ್ದರು. ಅವರ ಆಕಸ್ಮಿಕ ನಿಧನದಿಂದ ಆ ಯೋಜನೆ ಯೋಜನೆಯಾಗಿಯೇ ಉಳಿದಿದ್ದು ದುರದೃಷ್ಟಕರ.

1978ರಲ್ಲಿ ಕವಿ ಶಾಂತರಸರು ಪರಿಷತ್ತಿನ ಅಧ್ಯಕ್ಷರಾದರು. ಮೂಲತಃ ಸಾಹಿತಿ, ಕೆಲಸದಲ್ಲಿ ಹೆಚ್ಚು ಗುಣಗಳನ್ನು ಹೊಂದಿದ ಶಾಂತರಸರಿಂದ ಕನ್ನಡ ಕಾರ್ಯಗಳಿಗೆ ಸುವರ್ಣಕ್ಕೆ ಸೌರಭ ಮಾಡಿದಂತಾಯಿತು. ಇವರ ಕಾಲಾವಧಿಯಲ್ಲಿ ವೈವಿಧ್ಯಮಯವಾದ ಸಾಹಿತ್ಯಿಕ ಕಾರ್ಯಕ್ರಮಗಳು ನೆರವೇರಿದವು ಪರಿಷತ್ತಿನ ಕಾರ್ಯಗಳು ತಾಲೂಕಾ ಮಟ್ಟದವರೆಗೆ ಹರಡಲು ಆರ್ಥಿಕ ನೆರವು ದೊರೆಯಿತು. ವಸಂತೋತ್ಸವ, ಕರ್ನಾಟಕ ರಾಜ್ಯೋತ್ಸವಗಳಂಥ ಕಾರ್ಯಕ್ರಮಗಳು ಜಿಲ್ಲೆಯಲ್ಲಿ ಯಶಸ್ವಿಯಾಗಿ ಜರುಗಿದವು. ಇವರು ಅಂತರಾಷ್ಟ್ರೀಯ ಮಕ್ಕಳ ದಿನಾಚರಣೆಯನ್ನು ನಡೆಸಿಕೊಟ್ಟಿದ್ದು ಒಂದು ದಾಖಲೆಯೆನಿಸಿದೆ. ಆಯ್ಕೆಗೊಂಡ ಜಿಲ್ಲೆಯ ನೂರಾರು ಮಕ್ಕಳನ್ನು ಬೆಂಗಳೂರಿಗೆ ಕರೆದೊಯ್ದು ಎರಡು ದಿನಗಳ ಪರ್ಯಂತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಅವಕಾಶ ಮಾಡಿಕೊಟ್ಟರಲ್ಲದೆ ಜಿಲ್ಲೆ ಅನೇಕ ಪ್ರಶಸ್ತಿಗಳನ್ನು ತಂದುಕೊಟ್ಟರು. ಇವರ ಪರಿಶ್ರಮ ಜಿಲ್ಲೆಯ ಸಾಹಿತಿಯ ಕಲಾವಿದರಿಗೆ ಆತ್ಮಾಭಿಮಾನವನ್ನು ತಂದುಕೊಟ್ಟಿತು. ಶಾಂತರಸರು ತಮ್ಮ ಕಾಲಾವಧಿಗಿಂತ ಮುಂಚೆ ಅಧ್ಯಕ್ಷ ಪದಕ್ಕೆ ತ್ಯಾಗಪತ್ರ

ನೀಡಿ ಸಾಹಿತ್ಯ ಚಟುವಟಿಕೆಗಳಿಗೆ ಸ್ವಸ್ತಿ ಹಾಡಿದ್ದು ಜಿಲ್ಲೆಯ ಸಾಹಿತ್ಯಾಭಿವೃದ್ಧಿಗೆ ಹಾನಿಯನ್ನುಂಟುಮಾಡಿತು.

ದಶಕದ ಸಾಧನೆ 1991 ರಿಂದ 2001 ರವರೆಗಿನ ಅವಧಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಸುವರ್ಣಕಾಲ. ಎಚ್. ಪಂಪಯ್ಯಶೆಟ್ಟಿ ಈ ದಶಕದ ಅಧ್ಯಕ್ಷರಾಗಿ ಸಮರ್ಥ ರೀತಿಯಿಂದ ಕಾರ್ಯಗೈದರು. ಆಂಜನೇಯಲು ಕಾಲದಲ್ಲಿ ಪರಿಷತ್ತಿನ ಕಾರ್ಯದರ್ಶಿಗಳಾಗಿ ನಿರ್ವಹಿಸಿದ ಸೇವಾನುಭವ, ವೈಯಕ್ತಿಕ ಕ್ರಿಯಾಶೀಲತೆ ಹಾಗೂ ನಾಡಿನ ಹಿರಿಯ-ಕಿರಿಯ ಸಾಹಿತಿ-ಕಲಾವಿದರೊಂದಿಗೆ ಇಟ್ಟುಕೊಂಡ ನಿಕಟ ಸಂಪರ್ಕದಿಂದಾಗಿ ಅವರ ವ್ಯಕ್ತಿತ್ವ ಬೆಳೆಯಿತು. ಅವರ ಬಹುಮುಖ ಕಾರ್ಯತತ್ಪರತೆಗಳು ಜಿಲ್ಲಾ ಸಾಹಿತ್ಯ ಅಭಿವೃದ್ಧಿಗೆ ಸಂಪೂರ್ಣ ಮೀಸಲಾಯಿತು. ಪಂಪಯ್ಯ ಶೆಟ್ಟಿಯವರು ಸಾಹಿತಿಗಳಲ್ಲದಿದ್ದರೂ, ಸಾಹಿತ್ಯಾಸಕ್ತರು, ಕವಿಜನ ಪ್ರೇಮಿಗಳಾಗಿದ್ದಾರೆ. ಸಂಕಲ್ಪಿತ ಕೆಲಸಗಳನ್ನು ಹೇಗೆ, ಯಾರಿಂದ ನೆರವೇರಿಸಿಕೊಳ್ಳಬೇಕೆಂಬ ಪರಿಜ್ಞಾನ, ತಂತ್ರಗಾರಿಕೆಯನ್ನು ತಿಳಿದವರಾಗಿದ್ದಾರೆ. ಹಮ್ಮಿಕೊಂಡ ಕಾರ್ಯಕ್ರಮ ಅಚ್ಚುಕಟ್ಟಾಗಿ ಅರ್ಥಪೂರ್ಣವಾಗಿ ನಡೆಸುವ ಕಾರ್ಯಕೌಶಲ ಅವರಲ್ಲಿದೆ. ಅಂತೆಯೇ ಒಂದು ದಶಕದಿಂದ ಅಧ್ಯಕ್ಷರಾಗಿ ಅವರನ್ನು ಜಿಲ್ಲೆಯ ಸಾಹಿತ್ಯಾಸಕ್ತರು ಮೆಚ್ಚಿಕೊಂಡು ಬಂದಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಎಚ್. ಪಂಪಯ್ಯಶೆಟ್ಟಿಯವರು ಕನ್ನಡ ಕೆಲಸಕ್ಕಾಗಿ ತಮ್ಮ ಬಾಹುಗಳ ಶಕ್ತಿಯನ್ನು ದ್ವಿಗುಣಗೊಳಿಸುತ್ತಾರೆ. ದಲಿತ, ಬಲಿತ, ಬಂಡಾಯ ಯಾವುದೇ ಸಾಹಿತ್ಯ ಪ್ರಕಾರಗಳಾಗಲಿ ಅವುಗಳೊಂದಿಗೆ ಸಂಪರ್ಕ ಬೆಳೆಸಿ ಸಭೆ, ಸಮಾರಂಭ, ಸಮಾವೇಶ, ಗೋಷ್ಠಿ ಸಂವಾದ, ಸವಾಲುಗಳಂಥ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಜಿಲ್ಲೆಯ ಜನತೆಗೆ ಮನದಟ್ಟುಮಾಡಿ ಕೊಟ್ಟಿದ್ದಾರೆ. ಇವರ ಕಾಲಾವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡ ಹತ್ತು ಹಲವಾರು ಯೋಜನೆಗಳು ನಮ್ಮ ಜಿಲ್ಲೆಗೆ ಸಂಪೂರ್ಣವಾಗಿ ಉಪಯೋಗವಾದವು.

ಹತ್ತು ಸಾವಿರ ಮೊತ್ತದ ದತ್ತಿ ಉಪನ್ಯಾಸಗಳು ಆರ್ಥಿಕ ನೆರವನ್ನುಂಟು ಮಾಡಿತು. ಇದರಿಂದ ಜಿಲ್ಲೆಯಾದ್ಯಂತ ಅನೇಕ ಉಪನ್ಯಾಸ ಕಾರ್ಯಕ್ರಮಗಳನ್ನು ಸಂಘಟಿಸಲಾಯಿತು. ಎಲ್ಲ ಯೋಜನೆಗಳನ್ನು ಸಮರ್ಪಕವಾಗಿ ಬೆಳೆಸಿಕೊಂಡು ರಾಯಚೂರು ಜಿಲ್ಲೆ ಖ್ಯಾತಿಯನ್ನು ಪಡೆಯಿತು. ಎಲ್ಲಾ ಜಿಲ್ಲೆಗಳು ವರ್ಷದಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ವರದಿಯೊಂದನ್ನು ಸಾಹಿತ್ಯ ಪರಿಷತ್ ಪ್ರತಿ ವರ್ಷದ ಕೊನೆಯಲ್ಲಿ ಪ್ರಕಟಿಸುತ್ತದೆ. ಅವುಗಳಲ್ಲಿ ರಾಯಚೂರು ಜಿಲ್ಲೆ ಪ್ರಥಮ ಸ್ಥಾನದಲ್ಲಿರುವುದು ಜಿಲ್ಲಾ ಸಾಹಿತ್ಯ ಪರಿಷತ್ತಿನ ಸಾಧನೆಗೆ ಹಿಡಿದ ಕನ್ನಡಿಯಾಗಿದೆ.

ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲಿ ಎಚ್. ಪಂಪಯ್ಯ ಶೆಟ್ಟಿಯವರು ಉಲ್ಲೇಖಾರ್ಹವಾದ ಹಲವು ಮಹತ್ವದ ಸಾಧನೆ ಗೈದಿರುವುದನ್ನು ಇಲ್ಲಿ ಸ್ಮರಿಸಲೇಬೇಕಾಗಿದೆ. ಕೊಪ್ಪಳದಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಏರ್ಪಡಿಸಿದ್ದು ಸಾಮಾನ್ಯ ಸಂಗತಿಯಲ್ಲ. ನಾಲ್ಕು ಜಿಲ್ಲಾ ಸಮ್ಮೇಳನಗಳು, ಮಹಿಳಾ ಸಮ್ಮೇಳನಗಳು, ಗಡಿನಾಡ ಸಮ್ಮೇಳನ ಮುಂತಾದವು

ಪ್ರಮುಖವಾಗಿವೆ. ಕೊಪ್ಪಳ ಸಮ್ಮೇಳನ ಮತ್ತು ಸಿಂಧನೂರು ಸಮ್ಮೇಳನಗಳಲ್ಲಿ ಹೊರತಂದ ಸ್ಮರಣ ಸಂಚಿಕೆಗಳು ಕನ್ನಡ ಸಾಹಿತ್ಯದ ಆಕರ ಗ್ರಂಥಗಳಾಗಿ ದಾಖಲೆ ಸ್ಥಾಪಿಸಿವೆ. ಜಿಲ್ಲಾ ರಂಗಮಂದಿರ ನಿರ್ಮಾಣ ಕಾರ್ಯದಲ್ಲಿ ಜಿಲ್ಲಾ ಸಾಹಿತ್ಯ ಪರಿಷತ್ ಪ್ರಮುಖ ಪಾತ್ರವನ್ನು ವಹಿಸಿದೆ. ಆದರೆ ಪರಿಷತ್ತಿಗೆ ತನ್ನದೇ ಆದ ಸಾಹಿತ್ಯ ಭವನವನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂಬ ಅಪವಾದ ಬಾರದೆ ಇರದು.

ಜಿಲ್ಲೆಯ ಬಂಡಾಯ ಸಾಹಿತ್ಯದೊಂದಿಗೆ ಹಲವು ಕಾರ್ಯಕ್ರಮಗಳು ಸಂಘಟಿಸಿ ಬಂಡಾಯ ಸಾಹಿತ್ಯವನ್ನು ಜನತೆಯ ಸಮೀಪಕ್ಕೆ ತಂದುಕೊಡುವಲ್ಲಿ ಪರಿಷತ್ ಸರ್ವ ಸಹಕಾರವನ್ನು ನೀಡಿತು. ಭಗತ್‌ರಾಜ್ ನಿಜಾಮಕರ್, ಜಂಬಣ್ಣ ಅಮರಚಿಂತ ಮೊದಲಾದವರು ಪರಿಷತ್ ಕಾರ್ಯಗಳಿಗೆ ಸಹಕಾರ ನೀಡುತ್ತಿದ್ದಾರೆ. ನಮ್ಮ ಜಿಲ್ಲೆಯ ಹಿರಿಯ ಸಾಹಿತಿಗಳೂ, ಅಭಿಮಾನಿಗಳೂ ಆಗಿರುವ ಡಾ॥ ದೇವೇಂದ್ರಕುಮಾರ ಹಕಾರಿಯವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ತಮ್ಮ ಅಮೂಲ್ಯ ಸಹಾಯ, ಸಹಕಾರಗಳನ್ನು ನೀಡುತ್ತ ಬಂದಿದ್ದಾರೆ.

ದಶಕದ ಹೆಜ್ಜೆಗಳು : ಈ ದಶಕದ ಅವಧಿಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿಗೆ ಎಚ್. ಪಂಪಯ್ಯ ಶೆಟ್ಟಿಯವರು ಸಮರ್ಥವಾಗಿ ಕಾರ್ಯನಿರ್ವಹಿಸಿ, ಅದಕ್ಕೆ ಸ್ಪಷ್ಟ ಸ್ವರೂಪವನ್ನು ತಂದುಕೊಟ್ಟಿದ್ದಾರೆ. ಇಲ್ಲಿಯವರೆಗೂ ಅವರು ಮೂಡಿಸಿದ ಹೆಜ್ಜೆಗಳು ದಿಟ್ಟ ಹೆಜ್ಜೆಗಳಾಗಿವೆ. ಅವು ಒಂದು ನಿರ್ದಿಷ್ಟ ಮಾರ್ಗವನ್ನು ಹೊಂದಿವೆ. ಇನ್ನು ಮುಂದೆ ಪಂಪಯ್ಯ ಶೆಟ್ಟಿಯವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸದಿದ್ದರೆ, ಮುಂಬರುವ ಅಧ್ಯಕ್ಷರು ಇಲ್ಲಿಯವರೆಗೂ ನಡೆದು ಬಂದ ಸಾಧನೆಯನ್ನು ಹಿಮ್ಮುಖಗೊಳಿಸದೆ ಅದನ್ನು ಪ್ರಗತಿಯತ್ತ ಸಾಗಿಸುವವರನ್ನು ಹುಡುಕುವ ಹೊಣೆ ಜಿಲ್ಲೆಯ ಸಾಹಿತ್ಯಾಸಕ್ತರ ಮೇಲಿದೆ.

– ಪ್ರೊ॥ ಶಾಶ್ವತಸ್ವಾಮಿ ಮುಕ್ಕುಂದಿಮಠ

8 ಜೂನ್ 2013 ವಿಜಯವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನ

ಮಾನ್ವಿ ತಾಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಗರ ಸಜ್ಜಾಗಿದೆ. ಜೀವನದುದ್ದಕ್ಕೂ ಸಾಹಿತ್ಯ ಕ್ಷೇತ್ರಕ್ಕೆ ಅವಿರತ ಸೇವೆ ಸಲ್ಲಿಸುತ್ತಾ ಬಂದಿರುವ ಎಚ್. ಪಂಪಯ್ಯಶೆಟ್ಟಿ ಸಮ್ಮೇಳನಾಧ್ಯಕ್ಷರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಸಂಘಟನೆಗಾಗಿ ಜಿಲ್ಲೆಯಾದ್ಯಂತ ತಿರುಗಾಡಿ ಕನ್ನಡ ಸೇವೆ ಸಲ್ಲಿಸಿದ ಪಂಪಯ್ಯ ಶೆಟ್ಟಿ ಕುರಿತ ಸಂಕ್ಷಿಪ್ತ ಪರಿಚಯ ಮತ್ತು ಸಂದರ್ಶನ ಇಲ್ಲಿದೆ.

ಇಂದು ಮಾನ್ವಿಯಲ್ಲಿ ಅಕ್ಷರ ಜಾತ್ರೆ

ತಾಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸಡಗರ - ಪಂಪಯ್ಯ ಶೆಟ್ಟಿ ಸಮ್ಮೇಳನ ಅಧ್ಯಕ್ಷ


ಇಂದು ಮಾನ್ವಿಯಲ್ಲಿ ಅಕ್ಷರ ಜಾತ್ರೆ

■ ತಾಲೂಕು 6ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಡಗರ ■ ಪಂಪಯ್ಯಶೆಟ್ಟಿ ಸಮ್ಮೇಳನ ಅಧ್ಯಕ್ಷ

ಸಾಹಿತಿ ಶುದ್ಧನಿರಲಿ

ಮಾನ್ವಿ : ತಾಲೂಕು ಆರನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವ ಎಚ್. ಪಂಪಯ್ಯಶೆಟ್ಟಿ ಮೂಲತಃ ಮಾನ್ವಿ ತಾಲೂಕಿನ ಉಮಳಿ ಹೊಸೂರಿನವರು, ಕನ್ನಡ ಸಾಹಿತ್ಯ ಹಾಗೂ ಪರಿಷತ್‌ನ ಕಾರ್ಯ ಚಟುವಟಿಕೆಯಲ್ಲಿ ಸದಾ ಕ್ರಿಯಾಶೀಲತೆ ಮೈಗೂಡಿಸಿಕೊಂಡವರು.

ಸೇವೆ : 1991 ರಲ್ಲಿ ಅರ್ಧ ಅವಧಿಗೆ ಮಾತ್ರ ಕಸಾಪ ಜಿಲ್ಲಾಧ್ಯಕ್ಷರಾಗಿದ್ದರು. 1992,

1995, 1998ರಲ್ಲಿ ನಡೆದ ಚುನಾವಣೆಗಳಲ್ಲಿ ಸತತ ಗೆಲುವು ಸಾಧಿಸಿ ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಸಾಹಿತ್ಯ ಸಂಘಟನೆಗೆ ಮತ್ತು ಸಾಹಿತ್ಯ ಬೆಳವಣಿಗೆಗೆ ಸೇವೆ ಸಲ್ಲಿಸಿದ ಕೀರ್ತಿ ಸಾಹಿತ್ಯ ಕ್ಷೇತ್ರದ ಕೃಷಿಕ ಎಚ್. ಪಂಪಯ್ಯಶೆಟ್ಟಿಗೆ ಸಲ್ಲುತ್ತದೆ. ಸುದೀರ್ಘ 10 ವರ್ಷದ ಅಧ್ಯಕ್ಷಾವಧಿಯಲ್ಲಿ ನಾಲ್ಕು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸಿ ಸಾಹಿತ್ಯ ಕ್ಷೇತ್ರದಲ್ಲಿಯೇ ಇತಿಹಾಸ ದಾಖಲಿಸಿದ್ದಾರೆ.

ಸಾಹಿತ್ಯ ಕ್ಷೇತ್ರದ ಕೃಷಿಕ : ಆರ್ಯವೈಶ್ಯ ಜನಾಂಗಕ್ಕೆ ಸಂವಹನ ವೇದಿಕೆ ಕೊರತೆ ಮನಗಂಡು ವೈಶ್ಯವಾರ್ತಾ ಮಾಸಪತ್ರಿಕೆ ಪ್ರಾರಂಭಿಸಿ ಸಂಪಾದಕರಾಗಿದ್ದರು. ತಮ್ಮ ಅರ್ಥಪೂರ್ಣ ಲೇಖನಗಳನ್ನು ವೈವಿಧ್ಯಮಯವಾಗಿ ಪ್ರಕಟಗೊಳಿಸಿ ಹತ್ತು ವರ್ಷಗಳಿಂದ ನಿರಂತರ ಪ್ರಸಾರವಾಗುವ ಪತ್ರಿಕೆಯನ್ನು ಕಟ್ಟಿ ಬೆಳೆಸಿದ್ದಾರೆ. ಅದರಿಂದ ಸಮಾಜಕ್ಕೆ ಉತ್ಕಟ ಲಾಭ ಕೊಟ್ಟು ಪ್ರಗತಿಪರ ಚಿಂತನೆಗಳನ್ನು ಪಸರಿಸಿದ್ದಾರೆ.

ಎಚ್. ಪಂಪಯ್ಯಶೆಟ್ಟರ ಗೌರವ ಸಂಪಾದಕತ್ವದಲ್ಲಿ 45 ಸಾವಿರ ರೂ. ವೆಚ್ಚದಲ್ಲಿ ಕಸಾಪ ಜಿಲ್ಲಾ ಘಟಕದ ವತಿಯಿಂದ ಬಿಸಿಲ ಹನಿಗಳು (ಕಥಾ ಸಂಕಲನ), ಒರೆಗಲ್ಲು (ಜಿಲ್ಲಾ ಯುವ ಬರೆಹಗಾರರ ಪ್ರಾತಿನಿಧಿಕ ಕಥಾ ಸಂಕಲನ), ಜಿಲ್ಲೆಯ ಅನುಭಾವಿ ಕವಿಗಳು ಮತ್ತು ನವರಂಗ ಕೃತಿಗಳ ಪ್ರಕಟಣೆ, ಕಥಾ-ಕವನ ಕೃತಿ ಪ್ರಕಟನೆ. ಬೆಳ್ಳಿಹಬ್ಬದ ನೆನಪಿಗೆ ಜಿಲ್ಲೆಯ ಹಿರಿಯ ಸಾಹಿತಿಗಳ ಭಾವಚಿತ್ರಗಳು ಹಾಗೂ ಇಟಗಿ ದೇವಾಲಯವಿರುವ ಕ್ಯಾಲೆಂಡರ್ ಪ್ರಕಟಣೆ ಮೊದಲಾದವುಗಳು ಈ ಅವಧಿಯ ನಾಡಿನ ಇಡೀ ಕಸಾಪ ಇತಿಹಾಸದಲ್ಲಿ ಮೈಲಿಗಲ್ಲುಗಳು.

ರಾಯಚೂರು ಜಿಲ್ಲಾ ಉತ್ಸವದ ಪುಸ್ತಕ ಪ್ರದರ್ಶನ ಸಮಿತಿ ಹಾಗೂ ವಿಚಾರ ಸಂಕಿರಣ ಉಪ ಸಮಿತಿ ಅಧ್ಯಕ್ಷರಾಗಿ, ಸ್ಮರಣ ಸಂಚಿಕೆ ಸಂಪಾದಕ ಮಂಡಳಿ ಸದಸ್ಯರಾಗಿ ಕಾರ್ಯ ನಿರ್ವಹಣೆ, ನಗರದಲ್ಲಿ ಶ್ರೀ ಕನ್ಯಕಾಪರಮೇಶ್ವರಿ ಪ್ರಾಥಮಿಕ ಶಾಲೆ ಸ್ಥಾಪನೆ, ಆರ್ಯ ವೈಶ್ಯ ಅಧಿಕಾರಿಗಳ ವೃತ್ತಿ ನಿರತರ ಸಂಘದ ಅಧ್ಯಕ್ಷರಾಗಿ ಸೇವೆ. ವಧು-ವರರ ಸಮಾವೇಶಗಳು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ಮುಂತಾದ ಜನಮೆಚ್ಚುಗೆ ಕಾರ್ಯಕ್ರಮಗಳನ್ನೂ ಇವರು ನಡೆಸಿಕೊಂಡು ಬಂದಿದ್ದಾರೆ.

ಎಚ್. ಪಂಪಯ್ಯಶೆಟ್ಟರು ಸಾಹಿತಿಗಳಲ್ಲದಿದ್ದರೂ ಕನ್ನಡ ಸಾಹಿತ್ಯ ಕಾರ್ಯ ಚಟುವಟಿಕೆಗಳು ನಿರಂತರವಾಗಿರಲು ಸಾಹಿತ್ಯ ಕ್ಷೇತ್ರದ ಪ್ರಗತಿಗೆ ಸಲ್ಲಿಸಿದ ಸೇವೆ ಗುರುತರವಾದದ್ದು. ಇಂತಹ ಮಹಾನ್ ಕನ್ನಡ ಪ್ರೇಮಿ ಮಾನ್ವಿ ತಾಲೂಕು ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಅವರ ಶ್ರಮಕ್ಕೆ ಸಂದಗೌರವ. ಅವರನ್ನು ವಿಜಯವಾಣಿ ಮಾತಿಗೆಳೆದಾಗ ಅವರು ತೋಡಿಕೊಂಡ ಮನದಾಳದ ಮಾತನ್ನು ಇಲ್ಲಿ ಯಥಾವತ್ತಾಗಿ ಕೊಡಲಾಗಿದೆ.

ಸಂದರ್ಶನ

▲ ತಮ್ಮ ದೃಷ್ಟಿಯಲ್ಲಿ ಪ್ರಸ್ತುತದ ಕನ್ನಡದ ಆತಂಕಗಳೇನು ?

ಪ್ರಸ್ತುತದ ದೊಡ್ಡ ಆತಂಕವೆಂದರೆ ಶಿಕ್ಷಣ ಮಾಧ್ಯಮದ ಹೊಡೆತ. ಸರ್ಕಾರವೇ ನಿಂತು ಆರ್‌ಟಿಇ ಕಾಯ್ದೆ ಮೂಲಕ ತಾನೇ ದುಡ್ಡುಕೊಟ್ಟು ಕನ್ನಡದ ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ನೂಕುತ್ತಿದೆ. ಇದೊಂದು ದುರಂತವೇ ಸರಿ.

▲ ಕನ್ನಡದ ಬೆಳವಣಿಗೆಗೆ ನಿಮ್ಮ ಸಲಹೆಗಳೇನು ?

ನಮ್ಮಲ್ಲಿ ಕನ್ನಡದ ಬಗೆಗೆ ಜ್ಞಾನ, ಅಭಿಮಾನ ಎರಡೂ ಬೇಕು. ಸರ್ಕಾರವೂ ಕ್ಯಾಬಿನೆಟ್ ದರ್ಜೆ ಸ್ಥಾನ-ಮಾನಗಳನ್ನು ಈ ಭಾಗದ ಜನರಿಗೆ ಕಲ್ಪಿಸಬೇಕು. ಕರ್ನಾಟಕದಲ್ಲಿ ಕನ್ನಡಿಗರಿಗೆ ಮಾತ್ರ ಉದ್ಯೋಗ ಅವಕಾಶ ಕಲ್ಪಿಸಬೇಕು.

▲ ಮಕ್ಕಳ ಸಂಖ್ಯೆ ಮುಂದಿಟ್ಟುಕೊಂಡು ಸರ್ಕಾರ ಕನ್ನಡ ಶಾಲೆಗಳನ್ನು ಗ್ರಾಮೀಣ ಭಾಗದಲ್ಲಿ ಮುಚ್ಚುತ್ತಿರುವುದು ಸರಿಯೆ ?

ಕನ್ನಡ ಶಾಲೆಗಳನ್ನು ಮಕ್ಕಳ ಸಂಖ್ಯೆ ಮುಂದಿಟ್ಟುಕೊಂಡು ಮುಚ್ಚುತ್ತಿರುವುದು ಮನೆಯೊಡೆಯನೇ ಮನೆಮುರಿಯುವ ಕೆಲಸ ಮಾಡಿದಂತಿದೆ.

▲ ಇದರ ಜೊತೆಗೆ ಏಕರೂಪದ ಶಿಕ್ಷಣ ನೀತಿ ಜಾರಿಗೆ ಬರುತ್ತಿದೆ (ಸಿಬಿಎಸ್‌ಸಿ) ಪರಿಣಾಮ ?

ಆ ಪಠ್ಯಕ್ರಮ ಬೋಧಿಸಲು ಸಾಮರ್ಥ್ಯವುಳ್ಳ ಶಿಕ್ಷಕರನ್ನು ಮೊದಲು ತಯಾರಿಸಬೇಕು. ಆ ಸಿದ್ಧತೆ ಇಲ್ಲದೆ ಜಾರಿಗೆ ತಂದರೆ ತೀವ್ರ ದುಷ್ಪರಿಣಾಮ ಬೀರುತ್ತದೆ. ಅಷ್ಟೇ ಅಲ್ಲದೆ ಕಲಿಕೆಯೂ ಗೊಂದಲದಲ್ಲಿ ಬೀಳುತ್ತದೆ.

▲ ನೀವು ಸಾಹಿತಿ ಎನ್ನುವುದಕ್ಕಿಂತಲೂ ಒಬ್ಬ ಸಂಘಟಕರಾಗಿಯೇ ಗುರುತಿಸಿಕೊಂಡಿದ್ದೀರಿ. ಇಂದಿನ ಸಂಘಟಕರಿಗೆ ನಿಮ್ಮ ಸಲಹೆಗಳೇನು ?

ಸಂಘಟನೆಗಳಿಗೆ ಸ್ಥಾನ-ಮಾನಗಳೇ ಪ್ರಧಾನವಾಗಿವೆ. ಬೆಂಗಳೂರಿನಂತಹ ನಗರಗಳಲ್ಲಿ ಇದು ಹಣ ಮಾಡುವ ದಂಧೆಯಾಗಿದೆ. ನಮ್ಮ ಭಾಗದಲ್ಲಿ ಸೇವಾ ಭಾವನೆ ಉಳಿದುಕೊಂಡಿದೆ.


▲ ಎಲ್ಲಿ ನೋಡಿದರೂ ಇಂದು ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಇಂತಹ ಸಂದರ್ಭದಲ್ಲಿ ಸಾಹಿತಿಗಳ, ಬರಹಗಾರರ ಜವಾಬ್ದಾರಿ ಏನು ?

ಬರೆಹಗಾರನಾದವನೂ ಜನರನ್ನು ಎಚ್ಚರಿಸುವ ಕೆಲಸ ಮಾಡಬೇಕು. ತನ್ನ ಬರೆಹದಂತೆ ತಾನೂ ಶುದ್ಧನಿರಬೇಕು.

– ಕೆ.ಇ. ನರಸಿಂಹ, ವರದಿಗಾರ

❀

22ನೇ ಜನವರಿ 2007ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ: ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ : ಒಂದು ಹಿನ್ನೋಟ



ರಾಯಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ: ಒಂದು ಹಿನ್ನೋಟ

- ಒಂದನೇ ಸಮ್ಮೇಳನ 1971: ಅಧ್ಯಕ್ಷ- ಡಾ. ಸಿದ್ದಯ್ಯ ಪುರಾಣಿಕ
- ಎರಡನೇ ಸಮ್ಮೇಳನ ಜ.30 ಹಾಗೂ 31, 1992, ಅಧ್ಯಕ್ಷ- ಶಾಂತರಸ, ಸ್ಥಳ- ರಾಯಚೂರು
- ಮೂರನೇ ಸಮ್ಮೇಳನ ಫೆ 26 ಹಾಗೂ 27, 1994, ಅಧ್ಯಕ್ಷ- ಡಾ. ದೇವೇಂದ್ರಕುಮಾರ ಹಕಾರಿ, ಸ್ಥಳ- ಸಿಂಧನೂರು
- ನಾಲ್ಕನೇ ಸಮ್ಮೇಳನ ಜ 30 ಹಾಗೂ 31, 1997 ಅಧ್ಯಕ್ಷ- ಜಂಬಣ್ಣ ಅಮರಚಿಂತ, ಸ್ಥಳ- ರಾಯಚೂರು
- ಐದನೇ ಸಮ್ಮೇಳನ ಫೆ 7 ಹಾಗೂ 8, 1999; ಅಧ್ಯಕ್ಷ- ಡಾ. ಬಸವಲಿಂಗ ಸೊಪ್ಪಿಮಠ, ಸ್ಥಳ-

6ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಡಾ. ಅಮರೇಶ ನುಗಡೋಣಿ

ಲಿಂಗಸುಗೂರು.

ಶೆಟ್ಟರ ಸಾಧನೆ: ಸಾಹಿತ್ಯ ಸಮ್ಮೇಳನಗಳ ಕುರಿತು ಹೇಳುವಾಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಎಚ್. ಪಂಪಯ್ಯ ಶೆಟ್ಟಿ ಅವರ ಬಗ್ಗೆ ಹೇಳಲೇಬೇಕು. ಜಿಲ್ಲಾ ಕಸಾಪ ಅಧ್ಯಕ್ಷರಾಗಿ 1992ರಲ್ಲಿ ಚುನಾಯಿತರಾದ ಅವರು ಹತ್ತು ವರ್ಷ ಕಾಲ ಅಧ್ಯಕ್ಷರಾಗಿದ್ದರು. ಮೊದಲ ಸಮ್ಮೇಳನ ಹೊರತುಪಡಿಸಿ ಉಳಿದ ನಾಲ್ಕೂ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಅವರ ಅವಧಿಯಲ್ಲಿಯೇ ನಡೆದಿವೆ. ಪಂಪಯ್ಯ ಶೆಟ್ಟರು ಅಧ್ಯಕ್ಷರಾಗಿದ್ದಾಗ ಅಂದಿನ ಅವಿಭಜಿತ ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿ 62ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹೈದರಾಬಾದ್ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕೃಷ್ಣಾ ಹಾಗೂ ಮಂತ್ರಾಲಯಗಳಲ್ಲಿ ಗಡಿನಾಡ ಸಾಹಿತ್ಯ ಸಮ್ಮೇಳನಗಳು, ಎರಡು ಬಾರಿ ಮಹಿಳಾ ಸಾಹಿತ್ಯ ಸಮ್ಮೇಳನ, ಜಿಲ್ಲಾ ಬರಹಗಾರರ ಸಮಾವೇಶಗಳು ನಡೆದಿವೆ

ಶೆಟ್ಟರ ಸಾಧನೆ

ಸಾಹಿತ್ಯ ಸಮ್ಮೇಳನಗಳ ಕುರಿತು ಹೇಳುವಾಗ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎಚ್. ಪಂಪಯಯ ಶೆಟ್ಟಿ ಅವರ ಬಗ್ಗೆ ಹೇಳಲೇಬೇಕು. ಜಿಲ್ಲಾ ಕಸಾಪ ಅಧ್ಯಕ್ಷರಾಗಿ 1992ರಲ್ಲಿ ಚುನಾಯಿತರಾದ ಅವರು ಹತ್ತು ವರ್ಷ ಕಾಲ ಅಧ್ಯಕ್ಷರಾಗಿದ್ದರು. ಮೊದಲ ಸಮ್ಮೇಳನ ಹೊರತುಪಡಿಸಿ ಉಳಿದ ನಾಲ್ಕೂ ಜಿಲ್ಲಾ ಸಾಹಿತ್ಯ ಸಮ್ಮೇಳನಗಳು ಅವರ ಅವಧಿ ಯಲ್ಲಿಯೇ ನಡೆಸಿವೆ. ಪಂಪಯ್ಯಶೆಟ್ಟರು ಅಧ್ಯಕ್ಷರಾಗಿದ್ದಾಗ ಅಂದಿನ ಅವಿಭಜಿತ ರಾಯಚೂರು ಜಿಲ್ಲೆಯ ಕೊಪ್ಪಳದಲ್ಲಿ 62ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಹೈದರಾಬಾದ್ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕೃಷ್ಣಾ ಹಾಗೂ ಮಂತ್ರಾಲಯಗಳಲ್ಲಿ ಗಡಿನಾಡ ಸಾಹಿತ್ಯ ಸಮ್ಮೇಳನಗಳು, ಎರಡು ಬಾರಿ ಮಹಿಳಾ ಸಾಹಿತ್ಯ ಸಮ್ಮೇಳನ, ಜಿಲ್ಲಾ ಬರಹಗಾರರ ಸಮಾವೇಶಗಳು ನಡೆದಿವೆ.

ಎಚ್. ಪಂಪಯ್ಯಶೆಟ್ಟಿ ಅಭಿನಂದನ ಸಮಿತಿ

ಗೌರವಾಧ್ಯಕ್ಷರು

ಸಿ.ಆರ್. ಜನಾರ್ದನ

ಅಧ್ಯಕ್ಷರು

ಬಿ. ಆರ್. ಅಶೋಕ್ ಕುಮಾರ್

ಕಾರ್ಯದರ್ಶಿಗಳು

ಕೆ.ಎಲ್. ನಟರಾಜ್

ವೈ.ಎ. ರಾಮಸ್ವಾಮಿ

ಕೋಶಾಧ್ಯಕ್ಷರು

ಎಸ್. ಕೃಷ್ಣಮೂರ್ತಿ

ಅಭಿನಂದನ ಗ್ರಂಥದ ಸಂಪಾದಕರು

ಕೆ. ರಾಜಕುಮಾರ್

ಸದಸ್ಯರು

ಗುರುಮೂರ್ತಿ ಪೆಂಡಕೂರು

ಟಿ.ಎ.ಪಿ. ನಾಗರಾಜ್

ಪ್ರೊ॥ ಟಿ.ವಿ. ಸುರೇಶ ಗುಪ್ತ

ಪ್ರೊ॥ ಮಹಾಬಲೇಶ್ವರ ಗುಪ್ತ

ಟಿ. ಶೀನಯ್ಯ ಶೆಟ್ಟಿ

ಎಂ. ವಿಠೋಬ ಶೆಟ್ಟಿ

ರಾಜೇಶ್ ಸುರಪುರ

ಭೂಪಾಳಂ ಸುನೀಲ್

ಸಿ.ಎನ್. ಮೋಹನ್‌ಕುಮಾರ್

ಟಿ.ಎಸ್. ನಾಗರಾಜ್

ಎಸ್.ಆರ್. ಕೃಷ್ಣಮೂರ್ತಿ

ಕಾಸುಲ ವೆಂಕಟಯ್ಯ

ವೆಂಕಟೇಶ್ ಹೊಸೂರು

ರಾಘವೇಂದ್ರ ಹೊಸೂರು

ಸತ್ಯಪ್ರಭಾ ವಸಂತಕುಮಾರ್

ಂಕ 15-05-2016ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆದ ಎಚ್. ಪಂಪಯ್ಯ ಶೆಟ್ಟಿ ಅವರ ಅಭಿನಂದನ ಸಮಾರಂಭದ ಆಯ್ದ ಛಾಯಾಚಿತ್ರಗಳು :



ಕಾರ್ಯಕ್ರಮದ ಉದ್ಘಾಟನೆ ಪಿ.ಜಿ.ಆರ್. ಸಿಂಧ್ಯ ಅವರಿಂದ. ಅಕ್ಕ-ಪಕ್ಕ:
ವೈ.ಎ. ರಾಮಸ್ವಾಮಿ, ಕೆ. ರಾಜಕುಮಾರ್, ಕರ್ನಾಟಕ ಆರ್ಯವೈಶ್ಯ ಮಹಾಸಭೆಯ ಅಧ್ಯಕ್ಷ
ರಾ.ಪ. ರವಿಶಂಕರ್, ಬಿ.ಆರ್. ಅಶೋಕ್‌ಕುಮಾರ್, ಶಾರದಾ ಪಂಪಯ್ಯಶೆಟ್ಟಿ, ಎಚ್. ಪಂಪಯ್ಯ ಶೆಟ್ಟಿ,
ಸಿ.ಆರ್. ಜನಾರ್ದನ್ ಮತ್ತು ಶೇಖರಗೌಡ ಮಾಲೀಪಾಟೀಲ



ಅಭಿನಂದನ ಸಮಿತಿಯ ಅಧ್ಯಕ್ಷ ಬಿ.ಆರ್. ಅಶೋಕ್‌ಕುಮಾರ್ ಅವರಿಂದ ಆಶಯ ಭಾಷಣ



ಉದ್ಘಾಟನಾ ಭಾಷಣ ಪಿ.ಜಿ.ಆರ್. ಸಿಂಧ್ಯ ಅವರಿಂದ



'ಅಕ್ಷರ ಬಾಗಿನ' ಅಭಿನಂದನ ಗ್ರಂಥದ ಬಿಡುಗಡೆ. ಕೃತಿಯ ಸಂಪಾದಕ ಕೆ. ರಾಜಕುಮಾರ್, ಬಿ.ಆರ್. ಅಶೋಕ್‌ಕುಮಾರ್, ರಾ.ಪ. ರವಿಶಂಕರ್, ಶಾರದಾ ಪಂಪಯ್ಯಶೆಟ್ಟಿ, ಎಚ್. ಪಂಪಯ್ಯ ಶೆಟ್ಟಿ, ಪಿ.ಜಿ.ಆರ್. ಸಿಂಧ್ಯ, ಹಿರಿಯ ಪತ್ರಕರ್ತ ಎಂ.ಕೆ. ಭಾಸ್ಕರ ರಾವ್, ಸಿ.ಆರ್. ಜನಾರ್ದನ್, ಶೇಖರಗೌಡ ಮಾಲೀಪಾಟೀ



ನಾಟ್ಯ ಸರಸ್ವತಿ ಸ್ಮರಣಿಕೆ ನೀಡಿ ಅಭಿನಂದಿಸುತ್ತಿರುವ ಪಿ.ಜಿ.ಆರ್. ಸಿಂಧ್ಯ



ಪಂಪಯ್ಯ ಶೆಟ್ಟಿ ದಂಪತಿಯೊಂದಿಗೆ ಅಭಿನಂದನ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು



ಕಾರ್ಯಕ್ರಮದ ಉದ್ಘಾಟನೆಗಾಗಿ ಆಗಮಿಸುತ್ತಿರುವ ಪಿ.ಜಿ.ಆರ್. ಸಿಂಧ್ಯ



"ತುಂತುಂತುಂತುಂ ತುಂತುಂತುಂತುಂ ತುಂಬಿ ಬಂದಿತ್ತಾ..." ತುಂಬಿದ ಸಭಾಂಗಣ



ವೇದಿಕೆ ಮೇಲೆ ಉಪಸ್ಥಿತರಿರುವ ಗಣ್ಯರು



ಯುವ ಗಾಯಕಿ ಶ್ರೇಯಾ ಹಳ್ಳಿಕೇರಿ ಅವರಿಗೆ ಶಾರದಾ ಪಂಪಯ್ಯ ಶೆಟ್ಟಿ ಅವರಿಂದ ಗೌರವಾರ್ಪಣೆ



ಪರಿವಾರದೊಂದಿಗೆ ಪಂಪಯ್ಯ ಶೆಟ್ಟಿ ದಂಪತಿ. ಅಳಿಯ ರಾಜೇಶ್ ಸುರಪುರ, ಮೊಮ್ಮಗ ರಿತ್ವಿಕ್, ಮಗಳು ಶಿವರಂ
ಮೊಮ್ಮಗಳು ರಿಷಿಕ, ಕಿರಿಯ ಪುತ್ರ ರಾಘವೇಂದ್ರ ಹೊಸೂರು ಮತ್ತು ಹಿರಿಯ ಪುತ್ರ ವೆಂಕಟೇಶ ಹೊಸೂರು



ಅಭಿನಂದನ ಕೃತಿಯ ಸಂಪಾದಕ ಕೆ. ರಾಜಕುಮಾರ್ ಅವರಿಗೆ ಗೌರವಾರ್ಪಣೆ



ಅಭಿನಂದನೆಗೆ ಪಾತ್ರರಾದ ಪಂಪಯ್ಯ ಶೆಟ್ಟರ ಧನ್ಯನುಡಿ



ಅಭಿನಂದನ ಸಮಿತಿಯ ಗೌರವಾಧ್ಯಕ್ಷ ಸಿ.ಆರ್. ಜನಾರ್ದನ್ ಅವರಿಂದ ಅಧ್ಯಕ್ಷೀಯ ಭಾಷಣ



ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ ಅವರಿಂದ ಪಂಪಯ್ಯ ಶೆಟ್ಟರಿಗೆ ಗೌರವಾರ್ಪಣೆ



ಬೋನವನುಂಬಲು ನೆರೆದ ಅತಿಥಿಗಣ

ಅಕ್ಷರ ಬಾಗಿನ

ಎಚ್. ಪಂಪಯ್ಯ ಶೆಟ್ಟಿ ನಮ್ಮ ಸಮಕಾಲೀನ ಬದುಕಿನ ಒಂದು ನಿಜ ಅಚ್ಚರಿ. ರಾಜಕಾರಣವಿರದ ನುಡಿಕಾರಣ ಅವರ ಹೆಚ್ಚುಗಾರಿಕೆ. ಅವರದು ಸಾಹಿತ್ಯ-ಸಂಸ್ಕೃತಿ-ಸಮುದಾಯದ ಏಳಿಗೆಗಾಗಿ ನಲವತ್ತು ವರ್ಷಗಳ ದಣಿವರಿಯದ ನಿರಂತರ ನಡಿಗೆ. ಅವರು ಅಕ್ಷೀಣ ಬಲರಲ್ಲ. ಆದರೆ ಅಳ್ಳೆದೆಯವರೂ ಅಲ್ಲ. ಈ ದಿಟ್ಟತನಕ್ಕೆ ಕಾರಣ ಅವರ ನೇರವಂತಿಕೆ ಮತ್ತು ನಿಸ್ಪೃಹತೆ. ಕಾರ್ಯಸಾಧನೆಗಾಗಿ ಅವರು ನೆಚ್ಚಿದ್ದು ಅನುಸಂಧಾನವನ್ನೇ ಹೊರತು ಸಂಘರ್ಷವನ್ನಲ್ಲ. ಸಂಯಮದ ಮೂಲಕ ಸಂಬಂಧದ ಹೊಸ ಸೇತು ಕಟ್ಟಿದವರು.

ಅವರದು ಸಮತೂಕದ ವ್ಯಕ್ತಿತ್ವ ವೇದಾಂತಿಯಂತೆ ಹೊನ್ನೆಲ್ಲ ಮಣ್ಣು ಎಂದು ಬದುಕನ್ನು ನೀರಸಗೊಳಿಸಿಕೊಂಡವರಲ್ಲ. ರಮ್ಯಕವಿಯಂತೆ ವಿಜೃಂಭಿಸಿದವರೂ ಅಲ್ಲ. ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿಕೊಂಡವರಲ್ಲ. ರುಚಿಗೆ ತಕ್ಕಷ್ಟು ಉಪ್ಪು ಎಂಬುದು ಇವರ ಸಿದ್ಧಾಂತ. ಖಾಸಗಿ ಬದುಕಿನಲ್ಲಿ ಧಾರಾಳತನ, ಸಾರ್ವಜನಿಕ ಬದುಕಿನಲ್ಲಿ ಮಿತವ್ಯಯ ಇವರ ಜೀವನಮಂತ್ರ. ಅವರ ಬದುಕು; ಚುಟುಕು ಮತ್ತು ಮಹಾಕಾವ್ಯದ ಅತಿ-ಮಿತಿಗಳ ನಡುವಿನ ಸಹಜಕಾವ್ಯ. ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು, ಆಡದೆ ಮಾಡಿತೋರಿಸಿ ರೂಢಿಯೊಳಗೆ ಉತ್ತಮನಾದವರು. ಹಾಗಾಗಿ ಅವರ ಬದುಕು ಬವಣೆಯ ಮೂಟೆಯಲ್ಲ, ಉತ್ಸಾಹದ ಊಟೆ.

ನಿಂತ ನೆಲ, ಹಿಡಿದ ಹುಡಿ ನಿಗಿನಿಗಿ ಕೆಂಡವಾದರೂ ಹೋದೆಡೆಯಲ್ಲೆಲ್ಲ ಕನ್ನಡವನ್ನು ಅರಳಿಸಿದವರು. ಅವರು ಯಾರಿಂದಲೂ ಪ್ರಭಾವಿತರಾದವರಲ್ಲ. ಅವರಿಗೆ ಅವರೇ ಮಾದರಿ, ಅವರಿಗೆ ಅವರೇ ಸಾಟಿ. ಅವರು ನಮ್ಮ ಸಾರ್ವಜನಿಕ ಬದುಕಿನ ಒಂದು ಸಾತ್ತ್ವಿಕ ಶಕ್ತಿ. ಹಾಗಾಗಿ ಅವರಿಗೆ ಈ ಅಕ್ಷರಾಭಿನಂದನ, ಅಕ್ಷರ ನೀರಾಜನ, ಅಕ್ಷರ ಬಾಗಿನ.

- ಕೆ. ರಾಜಕುಮಾರ್

ಎಚ್. ಪಂಪಯ್ಯ ಶೆಟ್ಟಿ ಅಭಿನಂದನ ಸಮಿತಿ

84, ಆರನೆಯ ಅಡ್ಡರಸ್ತೆ, ನಾಲ್ಕನೆಯ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560018